ಬಿಸಿಲ
ಜನವರಿ 1999 ರೂ. 10
■ ವಾಣಿಜ್ಯ ■ ವಿಕಾಸ ■ ಮಾಹಿತಿ ■ ಸಂಪರ್ಕ
ಮಾಸಪತ್ರಿಕೆ



ಈ ಸಂಚಿಕೆಯೊಂದಿಗೆ
ಉಚಿತ
ವರ್ಣರಂಜಿತಕ್ಯಾಲೆಂಡರ್
IAS ಅರ್ಜಿ ಫಾರ್ಮ್

ಇಂಟರ್ ನೆಟ್
ಸಂಪೂರ್ಣ ವಿವರ

ಹೆಣ್ಣು ಸಂತತಿ ವಿನಾಶದತ್ತ?

ರೂಪದರ್ಶಿ ಗೌತಮಿ

'ಮನೆ' ವಾರಪತ್ರಿಕೆಗೆ ಬರೆಯಿರಿ

'ಮನೆ' ಮಾರ್ಚ್‌ನಲ್ಲಿ ಬಿಡುಗಡೆ!

ಎರಡು ದೋಣಿಯ ಪಯಣ

ಉದ್ಯೋಗಸ್ಥ ಮಹಿಳೆಯರೇ ಗಮನಿಸಿ.

ನೀವು ಯಾವುದೇ ಉದ್ಯೋಗದಲ್ಲಿರಲಿ, ಅದು ನಿಮಗೆ ತೃಪ್ತಿ ಕೊಡುತ್ತಿದೆಯೇ? ಮನೆ, ಮಕ್ಕಳು, ಗಂಡ ಮತ್ತು ಉದ್ಯೋಗ ಎಲ್ಲವನ್ನೂ ಹೇಗೆ ಸಂಭಾಳಿಸುತ್ತಿದ್ದೀರಿ? ಖುಷಿಯಿದೆಯೇ? ವ್ಯಥೆಯಿದೆಯೇ? ಒತ್ತಡವಿದೆಯೇ? ಏನಿದ್ದರೂ ನಿಮ್ಮ ಅನಿಸಿಕೆಗಳನ್ನು ನಮಗೆ ಬರೆದು ಕಳಿಸಿ. ನಿಮ್ಮ ಬರಹ ಅರ್ಧಪುಟ ಮೀರಬಾರದು. ನಿಮ್ಮದೊಂದು ಫೋಟೋ ಕಳಿಸಿ.

ನಾನೂ ಅಮ್ಮನಾದೆ!

ಗಂಡಂದಿರೇ ಇಲ್ಲಿ ನೋಡಿ.

ನಿಮ್ಮ ಹೆಂಡತಿ ಉದ್ಯೋಗಸ್ಥೆ. ಆರ್ಥಿಕವಾಗಿ ನಿಮ್ಮ ಜೊತೆಗೆ ಕೈಗೂಡಿಸಿದ್ದಾರೆ. ಆದರೆ ಸಾಮಾಜಿಕವಾಗಿ ನೀವೆಷ್ಟು ನಿಮ್ಮ ಹೆಂಡತಿಯ ಕೆಲಸಕ್ಕೆ ಸಹಕಾರಿಯಾಗಿದ್ದೀರಿ? ನಿಮ್ಮ ಮಕ್ಕಳಿಗೆ ನೀವೂ 'ಅಮ್ಮ'ನ ಪಾತ್ರ ವಹಿಸಿದ್ದೀರಾ? ಅರ್ಧಪುಟದಲ್ಲಿ ನಮಗೆ ಬರೆದು ತಿಳಿಸಿ. ನಿಮ್ಮದೊಂದು ಫೋಟೋ ಕಳಿಸಿ.

ನನ್ನ ಪ್ರಪಂಚ

ಮಕ್ಕಳೇ ನೀವೂ ಬರೆಯಿರಿ.

ಶಾಲೆಯಲ್ಲಿ ಮಿಸ್ ಕಾಟ, ಮನೆಯಲ್ಲಿ ಅಮ್ಮ, ಅಪ್ಪನ ಕಾಟ. ಎಲ್ಲರದೂ ಒಂದೇ ಹಾಡು. ಓದುಓದುಓದು! ಇದನ್ನು ಬಿಟ್ಟು ನಿಮಗೇನು ಮಾಡಬೇಕೆನಿಸುತ್ತದೆ? ನಮಗೆ ಬರೆದು ತಿಳಿಸಿ. ಜತೆಗೆ ನಿಮ್ಮ ಭಾವಚಿತ್ರ ಕಳಿಸಿ.

ಸಂಜೆಗಣ್ಣಿನ ನೋಟ

ಮಕ್ಕಳು ಕಲಿತು, ತಮ್ಮ ಬದುಕನ್ನು ದೂರ ದೂರ ರೂಪಿಸಿಕೊಂಡಾಯಿತು. ಕರ್ತವ್ಯಗಳೆಲ್ಲ ಮುಗಿಸಿಯಾಯಿತು! ಈಗ ನಿಮ್ಮ ಬದುಕು ಹೇಗಿದೆ? ನಿರಾಳವಾಗಿದೆಯೇ ಕಾಯಿಲೆಗಳು ಕಾಡುತ್ತಿದೆಯೇ, ಮಕ್ಕಳು ದೂರಾದರೆಂಬ ನೋವಿದೆಯೇ ಅಥವಾ ಎಲ್ಲವನ್ನೂ ನುಂಗಿ, ಮಾಗಿದ ಮನಸ್ಸು, ಅನುಭವಗಳ ಹಿನ್ನೆಲೆಯಲ್ಲಿ 'ರಾಮಾಕೃಷ್ಣಾಂತ' ಬದುಕಲು ಸಾಧ್ಯವಿದೆಯೇ? ನಮಗೆ ಬರೆದು ತಿಳಿಸಿ. ನಿಮ್ಮ ಭಾವಚಿತ್ರ ಕಳಿಸಲು ಮರೆಯಬೇಡಿ.

ಕಥೆ, ಕಾದಂಬರಿ, ಕವನ ಲೇಖನಗಳಿಗೆ ಆಹ್ವಾನ

ಕನ್ನಡಿಗರ ಮನೆ ಮನಗಳಿಗೆ ಭಾರಿ ಪ್ರಮಾಣದಲ್ಲಿ ದಾಳಿ ಇಡಲಿರುವ ಮನೆ ವಾರಪತ್ರಿಕೆ ನಿಮ್ಮದು. ಈ ಪತ್ರಿಕೆಯಲ್ಲಿ ಏನೇನು ಇರಬೇಕೆಂದು ಬಯಸುತ್ತಿರೋ ಅದೆಲ್ಲವನ್ನೂ ಬರೆದು ಕಳಿಸಿ. 'ಮನೆ'ಗೆ ಬರೆಯುವವರು ಉದ್ದಾಮ ಸಾಹಿತಿಗಳೇ ಆಗಿರಬೇಕೆಂದಿಲ್ಲ. ಸಾಮಾನ್ಯ ಓದುಗರಿಗೇ ಇಲ್ಲಿ ಅಧಿಕ ಅವಕಾಶ. ಆದರೆ ಕಡಿಮೆ ಗುಣಮಟ್ಟದ ಬರಹಗಳಿಗೆ ಪ್ರೋತ್ಸಾಹ ಸಿಗಲಾರದು. ನೀವು ನಿಮ್ಮ ಊರು, ಜನ, ರಾಜಕೀಯ, ಉಡುಗೆ, ಅಡುಗೆ, ಮಕ್ಕಳು ಹೀಗೆ ಯಾವ ವಿಷಯದ ಬಗೆಗಾದರೂ ಚುಟುಕಾಗಿ ಬರೆಯಬಹುದು. ನೆನಪಿಡಿ! ಹಸ್ತಪ್ರತಿಯಲ್ಲಿ ಅರ್ಧಪುಟಕ್ಕಿಂತ ಹೆಚ್ಚಾಗಿರುವ ಬರಹಗಳು ಖಂಡಿತಾ ಪ್ರಕಟವಾಗುವುದಿಲ್ಲ. ಕಥೆಗಳು ಹಸ್ತಪ್ರತಿಯಲ್ಲಿ ಒಂದು ಪುಟ ಮೀರಕೂಡದು. ಧಾರಾವಾಹಿಯಾಗಿ ಪ್ರಕಟವಾಗುವ ಕಾದಂಬರಿಗಳು ಹಸ್ತಪ್ರತಿಯಲ್ಲಿ 30 ಪುಟಗಳ ಮಿತಿಯಲ್ಲಿರಬೇಕು. ನಿಮ್ಮ ಬರಹಗಳೊಂದಿಗೆ ಸ್ಟಾಂಪ್ ಹಚ್ಚಿದ ಸ್ವವಿಳಾಸದ ಲಕೋಟೆ ಕಳಿಸಿಕೊಡಿ. ಅಸ್ವೀಕೃತ ಬರಹಗಳನ್ನು ಕಾಯ್ದಿರಿಸುವ ವ್ಯವಸ್ಥೆಯಿಲ್ಲ. ಸ್ವೀಕೃತ ಬರಹಗಳು ಸಮಯಾನುಸಾರ ಪ್ರಕಟಗೊಳ್ಳುತ್ತವೆ. ಅನಗತ್ಯ ಪತ್ರ ವ್ಯವಹಾರ ಬೇಡ.

ಸ್ಪರ್ಧೆ! ಸ್ಪರ್ಧೆ! ಸ್ಪರ್ಧೆ!

ಮಿನಿಕಥೆ : ಹಸ್ತಪ್ರತಿಯಲ್ಲಿ ಒಂದು ಪುಟ ಮೀರಕೂಡದು. ಭಾಷೆ, ವಸ್ತು, ಶೈಲಿ ಚುರುಕಾಗಿರಬೇಕು.

ಹನಿಗವನ : ಕಡಿಮೆ ಪದಗಳಲ್ಲಿ ಓದುಗರಿಗೆ ಕಚಗುಳಿ ಇಡುವ ಹನಿಗವನಗಳನ್ನು ಮಾತ್ರ ಸ್ಪರ್ಧೆಗೆ ಕಳಿಸಿ.

ಕಾರ್ಟೂನ್: ಅಡಿಟಿಪ್ಪಣಿಗಿಂತ ರೇಖೆಗಳಿಗೇ ಹೆಚ್ಚು ಒತ್ತು ನೀಡಿದ ಕಾರ್ಟೂನ್‌ಗಳು ಅಪೇಕ್ಷಣೀಯ.

ಸೂಚನೆ

ವಿಜೇತರಿಗೆ ಪ್ರಶಸ್ತಿಪತ್ರ ಹಾಗೂ ಬಹುಮಾನ ಕಳಿಸಲಾಗುವುದು.
'ಮನೆ' ವಾರ ಪತ್ರಿಕೆಯ ಮೊದಲ ಸಂಚಿಕೆಯಲ್ಲಿ ಫಲಿತಾಂಶ.
ನಿಮ್ಮ ಪ್ರವೇಶಪತ್ರಗಳು ನಮಗೆ ತಲುಪಲು ಅಂತಿಮ ದಿನಾಂಕ: 30.1.1999.

ವಿಳಾಸ: ಸಂಪಾದಕರು, 'ಮನೆ' ವಾರಪತ್ರಿಕೆ, ಅಂಕುರ ಪ್ರಕಾಶನ, ಅಂಚೆಪೆಟ್ಟಿಗೆ: 7951, ಬಸವೇಶ್ವರನಗರ, ಬೆಂಗಳೂರು - 560 079.

ಬದುಕು

ಜನೆವರಿ 1999 ಸಂಪುಟ 2 ಸಂಚಿಕೆ 7

ಸಂಪಾದಕ
ಚಂದ್ರಕಾಂತ ವಡ್ಡು

ಉಪ ಸಂಪಾದಕರು
ಎ.ಎಂ.ಸುರೇಶ್, ರವಿಶಂಕರ್

ನಿರ್ವಹಣೆ
ಸಿ.ಪಿ. ಸುರೇಶ್

ಪ್ರಸಾರ
ಹೆಚ್.ಎಂ.ಪಿ. ಆರಾಧ್ಯ

ಅಕ್ಷರ ಜೋಡಣೆ
ನರೇಂದ್ರ ಪಾಟೀಲ, ಕೋಕಿಲ

ಮುಖಪುಟ ವಿನ್ಯಾಸ
ಅಂಕುರ

ವರ್ಣಪಾರದರ್ಶಿಕೆ
ಕೆ.ಜಿ.ಕುಮಾರ್

ವಿಳಾಸ
ಬಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951
ಬಸವೇಶ್ವರ ನಗರ, ಬೆಂಗಳೂರು- 560 079
ದೂರವಾಣಿ : 3307810

Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Pager : 9622 738638 Printed at M.N.S.Enterprises, Bhattar ahalli, Old Madras Road, Bangalore -560 049 Editor : Chandrakanta Vaddu

ಡೊಂಕು ಬಾಲ

ಕೆಲವರು ಇರುತ್ತಾರೆ. ಅವರಿಗೆ ಚಂದ್ರನನ್ನು ತೋರಿಸಿದರೆ ಬೆಳುದಿಂಗಳು ಅನುಭವಕ್ಕೆ ಬರುವುದಿಲ್ಲ; ಚಂದ್ರನ ಮೇಲಿನ ಕಪ್ಪು ಕಲೆ ಕಾಣಿಸುತ್ತದೆ. ಸಾಧನೆಗೈದವರ ಬಗ್ಗೆ ಪ್ರಸ್ತಾಪಿಸಿದರೆ ಅವರ ಹುಳುಕುಗಳನ್ನು ಎತ್ತಿ ತೋರಿಸುತ್ತಾರೆ. 'ಹೀಗೆ' ಮಾಡಬಹುದು ಎಂದು ಸಲಹೆ ಕೊಟ್ಟರೆ 'ಹಾಗಾದರೆ?' ಎಂದು ಅನುಮಾನಪಡುತ್ತಾರೆ. ಇಂತಹವರಿಗೆ ಇರುವುದೆಲ್ಲದರ ಬಗ್ಗೆ ತಿರಸ್ಕಾರ, ಇತರರನ್ನು ಕುರಿತು ಬಲವಾದ ಅಪನಂಬಿಕೆ; ತಾವು ಮಾಡಲಾರರು, ಬೇರೆಯವರು ಮಾಡಿದ್ದನ್ನು ಸಹಿಸಲಾರರು. ಇಂತಹ ಸಿನಿಕ ಮಹಾಶಯರು ಆಗಾಗ ಸಿಗುತ್ತಿರುತ್ತಾರೆ. ಇವರ ಬಗ್ಗೆ ಎಚ್ಚರದಿಂದಿದ್ದು ನಯವಾಗಿ ದೂರ ದೂಡದಿದ್ದರೆ ನಮ್ಮ ಕ್ರಿಯಾಶೀಲತೆಗೇ ಮುಳುವಾಗುವುದು ಖಚಿತ.

ನಾವು 'ಬದುಕು' ಪ್ರಾರಂಭಿಸಿದಾಗ 'ಇವರ ಕತೆ' ಮುಗಿಯಿತು ಎಂದು ಅನುಮಾನಿಸಿದವರು, ಆಶಿಸಿದವರು ಬಹಳ ಜನ. ಇವರ ಜತೆ ಗುರುತಿಸಿಕೊಂಡರೆ ಹೇಗೋ ಏನೋ ಎಂದು ಅನೇಕರು ಆಡದೆಯೇ ಅಂತರ ಕಾಯ್ದುಕೊಂಡರು. ಈಗ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. 'ಬದುಕು' ಯಶಸ್ವಿಯಾಗಿ ಜನಮನ್ನಣೆ ಗಳಿಸಿರುವಾಗ ನಮ್ಮ ಪತ್ರಿಕೆಗೆ ಬರೆಯಲು, ಬೆರೆಯಲು ಸಹಜವಾಗಿಯೇ ಮುಂದೆ ಬರುತ್ತಿದ್ದಾರೆ. ಆದಾಗ್ಯೂ 'ಕಟ್ಟಾ ಸಿನಕ'ರು ನಮ್ಮ ಯಶಸ್ಸನ್ನು ಪೂರ್ತಿ ಅರ್ಥೈಸಿದ್ದಾರೆಂದು ಭಾವಿಸಲಾಗದು. ಇರಲಿ, ಡೊಂಕು ಬಾಲ ಸರಿಪಡಿಸುವ ಉಸಾಬರಿ ನಮಗೇಕೆ?

'ಬದುಕು' ಬಳಗ ತನ್ನ ಬದ್ಧತೆ, ಶ್ರದ್ಧೆ, ಕ್ರಿಯಾಶೀಲತೆಯಿಂದ ಪತ್ರಿಕೋದ್ಯಮದ ಎರಡನೇ ಮಜಲಿಗೇರಲು ಸಿದ್ಧಗೊಳ್ಳುತ್ತಿದೆ. ಮಾರ್ಚ್‌ನಲ್ಲಿ ಕನ್ನಡಿಗರ ಮನೆಮನೆಗೆ ನಡೆದು ಬರಲಿರುವ 'ಮನೆ' ವಾರಪತ್ರಿಕೆಯು ಪತ್ರಿಕೋದ್ಯಮದ ವಿನೂತನ ಪ್ರಯೋಗವೆಂಬುದರಲ್ಲಿ ಅನುಮಾನವಿಲ್ಲ. ಇದಕ್ಕೆ ಅದರ ಮಾರಾಟ ಬೆಲೆ, ಮಾನಸಿಕ ನೆಲೆಗಳೇ ಸಾಕ್ಷಿ. ಯಾವುದೇ ಒಂದು ಪತ್ರಿಕೆ ಯಾವನೋ ಒಬ್ಬ ವ್ಯಕ್ತಿಯಿಂದ ನಡೆಯುತ್ತದೆ ಎಂಬ ನಂಬಿಕೆಗೆ ನಾವು ಬದ್ಧ ವಿರೋಧಿ. ಪತ್ರಿಕೆ ರೂಪುಗೊಳ್ಳುವ ಕ್ರಿಯೆಯ ಹಿನ್ನೆಲೆಯಲ್ಲಿ ಒಂದು ತಂಡದ ಶ್ರಮವಿರುತ್ತದೆ. ಜತೆಗೆ ನಿಮ್ಮಂತಹ ಸಹೃದಯಿ ಓದುಗರೂ ಪ್ರಮುಖ ಪಾತ್ರವಹಿಸುತ್ತಾರೆ. ನಿಮ್ಮಲ್ಲಿ ಅನೇಕರು ಅನ್ನಿಸಿದ್ದನ್ನೆಲ್ಲಾ ಪತ್ರಿಕೆಗೆ ಬರೆದು ಕಳಿಸದಿರಬಹುದು. ಆದರೆ ಪತ್ರಿಕೆಯನ್ನು ಮಾರುಕಟ್ಟೆಯಲ್ಲಿ ಕೊಳ್ಳುವ ಮೂಲಕ, ಕೊಳ್ಳದಿರುವ ಮೂಲಕ ನೀವು ಪತ್ರಿಕೆಯ ಅಂತಃಸತ್ವಕ್ಕೆ ಕಾರಣರಾಗುತ್ತೀರಿ.

ಓದುಗರ ಇಂಥ ಸ್ಪಂದನ ಗುಣದಿಂದ ಸ್ಫೂರ್ತಿ ಪಡೆದಿರುವ ನಾವು ಹೊಸ ವರ್ಷದಲ್ಲಿ 'ಮನೆ' ಬಿಡುಗಡೆ ನಂತರ ಇನ್ನೂ ಮೂರು ವಿಶಿಷ್ಟ ಪತ್ರಿಕೆಗಳನ್ನು ನಿಮ್ಮ ಮಡಿಲಿಗಿಡಲು ನಿರ್ಧರಿಸಿದ್ದೇವೆ. ಸ್ವೀಕರಿಸುವಿರೆಂಬ ತುಂಬು ನಂಬುಗೆ ನಮ್ಮದು.

-ಸಂಪಾದಕ

ಸರಸ ವಾರ್ತೆ

ಹಸುಳೆಗಳು ಮಾರಾಟಕ್ಕಿವೆಯಂತೆ ಕೊಳ್ಳುವಿರೇನು? ಹಾಗಾದರೆ ನೀವು ಭೇಟಿ ನೀಡಬೇಕಾದ್ದು ವಿಯೆಟ್ನಾಂನ ಭೂಗತ ಮಾರುಕಟ್ಟೆಗಳಿಗೆ. ಅಲ್ಲಿ ಪ್ರತಿದಿನ ನಾಲ್ಕರಿಂದ ಏಳುಮಂದಿ ಗರ್ಭಿಣಿಯರು ತಮ್ಮ ಮಕ್ಕಳನ್ನು ಮಾರುತ್ತಾರಂತೆ. ಆಯಾಯ ಮಕ್ಕಳ ಲಿಂಗ, ಅಧಿಕೃತ ಜನ್ಮಪತ್ರದ ಆಧಾರದ ಮೇಲೆ ಬೆಲೆ ನಿಗದಿಯಾಗುತ್ತೆ. ಮೂವತ್ತು ಲಕ್ಷದಿಂದ 1.5 ಕೋಟಿವರೆಗೂ ಮಕ್ಕಳಿಗೆ ಬೆಲೆ. ಹಾಗಾದರೆ ರಾಜರಾಣಿಯರ ಮಕ್ಕಳಿರಬಹುದು ಎಂಬುದು ನಿಮ್ಮ ಊಹೆ ಅಲ್ವೇ. ಇದ್ದರೂ ಇರಬಹುದು. ನಮ್ಮಲ್ಲೇನಾದ್ರೂ ಈ ರೀತಿ ಪ್ರಾರಂಭವಾದ್ರೆ ಹಣದ ಆಸೆಯ ಕೆಲವರಿಗೆ ಜವಾಬ್ದಾರಿ ಜಾಸ್ತಿ. ಯಾಕೆಂದರೆ ಹೊರೋದು ಹೆರೋದು ಅಷ್ಟೇ ಇರೋರಿಗೆ ಇನ್ಮೇಲೆ ಮಾರೋ ಜವಾಬ್ದಾರೀನೂ ಬರುತ್ತಲ್ಲ ಅದ್ಕೆ.

❍

ಕೋತಿ ಮುಂಡೇದೆ ಅಂತಾ ಮಕ್ಕಳಿಗೆ ಬೈಯೋ ಅಮ್ಮಂದಿರನ್ನು ನೋಡಿದ್ದೀರಲ್ಲ. ಆದರೆ ಆ ಕೋತಿಯಿಂದನೇ ಮಹಿಳೆ ಯೊಬ್ಬಳಿಗೆ ಜಾಗತಿಕ ಪ್ರಚಾರ ಸಿಕ್ತು ಅಂದ್ರೆ ಆಶ್ಚರ್ಯ ತಾನೇ. ವಾಯುವ್ಯ ಕಾಂಬೋಡಿ ಯಾದ ರೀಕ್ ಎಂಬ ಮಹಿಳೆ ಹಂದಿಯೊಂದು ಸಾಕಿದ್ದಳಂತೆ. ಇತ್ತೀಚೆಗೆ ಆ ಹಂದಿ 9 ಹಂದಿ ಮರಿಗಳ ಜೊತೆ ಒಂದು ಕುದುರೆ ಹಾಗೂ ಕೋತಿ ಮರಿಗೆ ಜನ್ಮ ನೀಡಬೇಕೆ? ಪರಮಾಶ್ಚರ್ಯ. ಎಲ್ಲಾ ಮರಿಗಳು ಸತ್ತವು ಅನ್ನೋದು ಬೇರೆ ಮಾತು. ಹಂದಿ ಮರಿಯ ಹೆಣಗಳನ್ನು ಹೂಳಿ ಈಕೆ ಕುದುರೆ, ಕೋತಿ ಮರಿಯ ಶವಗಳನ್ನು ಶೋಕೇಸ್‌ನಲ್ಲಿ Showಗೆ, ಅಂದ್ರೆ ಪ್ರದರ್ಶನಕ್ಕೆ ಇಟ್ಟಳು. ಜನವೋ ಜನ, ನೂಕು ನುಗ್ಗಲು. ಕೆಲವು ಜನರು ಅಲ್ಲಿ ನಿಂತು ಪ್ರಾರ್ಥನೆ ಮಾಡ್ತಾರಂತೆ. ಇನ್ನು ಕೆಲವರು ಲಾಟರಿಪ್ರಿಯರು ತಮ್ಮ ಟಿಕೆಟ್‌ಗಳನ್ನು ಆ ಮರಿಗಳ ಹೆಣಕ್ಕೂ ಇವಳ ಕೈಗೂ ಮುಟ್ಟಿಸ್ತಾರೆ. ಅದೃಷ್ಟ ಬರಲೀ ಅಂತ. ಎಂಥ ವಿಚಿತ್ರ ಅಲ್ವಾ, ಅದ್ಕೆ ಷರೀಫ್ ಸಾಹೇಬರು ಹೇಳಿದ್ದು, ಕುರಿಗಳು ನಾವು ಕುರಿಗಳು ಅಂಥಾ.

❍

ಹೆಣ್ಣು ಹೆತ್ತಿದ್ದು ತಪ್ಪು, ಗಂಡು ಹೆತ್ತಿದ್ದು ತಪ್ಪು ಅಂತಾ ಹೇಳೋ ತಂದೆ-ತಾಯಂದಿರನ್ನು ನೋಡಿರಬಹುದು. ಆದರೆ ಮಕ್ಕಳನ್ನು ಹೆತ್ತಿದ್ದೇ ತಪ್ಪು ಅನ್ನೋ ಮಂದಿಯನ್ನು ಕೇಳಿದ್ದೀರಾ? ಅದೂ ಅಲ್ಲದೆ ಗರ್ಭವತಿಯಾಗಿದ್ದ ಮಾತ್ರಕ್ಕೆ ಆಕೆಯ ಮೇಲೆ ಕೇಸು ಹಾಕಿಬಿಡೋದೆ. ನ್ಯೂ ಮೆಕ್ಸಿಕೋದಲ್ಲಿ ಇಂತಹ ಪ್ರಸಂಗ ನಡೆದಿರುವ ಬಗ್ಗೆ ವರದಿಯಾಗಿದೆ. ಪೀಟರ್ ಲ್ಯಾಲಿಸ್ ಮತ್ತು ಕೆಲ್ಲಿರಾ ಸ್ಮಿತ್ ಎಂಬುವರ ಪರಸ್ಪರ ಸ್ನೇಹ -ಪ್ರೀತಿ-ಪ್ರಣಯ-ಸರಸ-ಸಲ್ಲಾಪ- ಇದರ ಫಲ ಒಂದು ಮಗು. ಸರಿ, ಎರಡನೇ ಮಗು ಬೇಡವೆಂದು ಇಬ್ಬರಲ್ಲೂ ಒಪ್ಪಂದ. ಆದರೆ ಸ್ಮಿತ್ ಮತ್ತೆ ಈಗ ಗರ್ಭವತಿ. ಕ್ರೋಧಗೊಂಡ ಪೀಟರ್ ಕೋರ್ಟು ಮೆಟ್ಟಲೇರಿದ. ಸ್ಮಿತ್ ದುರುದ್ದೇಶದಿಂದ ಗರ್ಭನಿರೋಧಕ ಮಾತ್ರೆ ಗಳನ್ನು ತಿಂದಿಲ್ಲ ಅಂತಾ ಅವನ ವಾದ. ನಾನು ಮಾತ್ರೆ ತಿನ್ನುತ್ತಿದ್ದರೂ ಗರ್ಭವತಿಯಾದೆ, ನನ್ನ ತಪ್ಪಿಲ್ಲ ಅನ್ನೋದು ಸ್ಮಿತ್‌ಳ ಪ್ರತಿವಾದ. ಇದರಲ್ಲೂ ಎಷ್ಟು ಪ್ರಾಮಾಣಿಕರು ಅಂತೀರಿ ವಿದೇಶಿಯರು. ಬಹುಶಃ ಸ್ಮಿತ್ ತಿಂದಿದ್ದು ನಕಲಿ ಮಾತ್ರೆ ಇರಬೇಕೇನೋ! ಪರೀಕ್ಷಿಸುವುದೊಳ್ಳೆಯದು. ಇಲ್ಲದಿದ್ದರೆ ಭಯಪಡಬೇಕಾಗಿಲ್ಲ; ಇದ್ವೇ ಇದೆಯಲ್ಲ. ಅಬಾರ್ಶನ್-ಕತ್ತರಿ- ಆಸ್ಪತ್ರೆ..........

❍



ಈ ಚಿತ್ರ ನೋಡಿದ ಕೂಡಲೇ ಇದೆಂತಾ ಹುಚ್ಚು ಕುಣಿತ ಅಂತಾ ಹೇಳ್ತೀರಾ? ಹಾಗೆ ಹೇಳ್ಬೇಡಿ. ಇದು ಹುಚ್ಚು ಕುಣಿತ ಅಲ್ಲ. ಹುಚ್ಚೆಬ್ಬಿಸುವ ಕುಣಿತ. ರಷ್ಯನ್ ನೃತ್ಯಗಾರ್ತಿ ಯರು, ಕೊಲಂಬೋದಲ್ಲಿನ ರಾತ್ರಿ ಕ್ಲಬ್ಬೊಂದರ ಆರಂಭೋತ್ಸವದಲ್ಲಿ ಅತಿಥಿ ಗಳಿಗೆ ತಮ್ಮ ತನುವಿನ ಶೃಂಗಾರದೌತಣವನ್ನು ಬಡಿಸುತ್ತಿರೋದು. ಈ ಹೋಟೆಲ್ 1997ರಲ್ಲಿ ಬಾಂಬ್ ಸಿಡಿದು ಚೂರು ಚೂರಾಗಿತ್ತಂತೆ. ಹಾಗಾಗಿ ಈಗ ಈ ನೃತ್ಯ ಗಾರ್ತಿಯರು ಅತಿಥಿಗಳ ಹೃದಯವನ್ನು ಚೂರುಚೂರು ಮಾಡ್ತಿದ್ದಾರಂತೆ. ಮಾಡಲಿ ಬಿಡಿ ಚೂರಾದ ಹೃದಯವನ್ನು ಜೋಡಿಸೋದಕ್ಕೆ ಡ್ಯಾನ್ಸ್ ಮುಗಿಸಿದ್ಮೇಲೆ ಪಲ್ಲಂಗದ ತನಕ ನಡೆದುಕೊಂಡು ಬರ್ತಾರಲ್ಲ ಇದೇ ಚೆಲುವೆಯರು. ಇನ್ನೇನು ಬೇಕು ಅಲ್ವೇ.

■

ಒಳನೋಟ

ವಿದ್ಯೆ - ಉದ್ಯೋಗ

ಸ್ಥಿರ ಶೀರ್ಷಿಕೆಗಳು



'ಫೈರ್' ಚಲನಚಿತ್ರಕ್ಕೆ ಪೆಟ್ರೋಲ್ ಸುರಿದ ಶಿವಸೇನೆ! 18

'ಫೈರ್' ಚಿತ್ರದ ಪ್ರಮುಖ ಪಾತ್ರಗಳ ಹೆಸರನ್ನು 'ರಾಧಾ -ಸೀತಾ' ದಿಂದ 'ಶಬಾನಾ-ಸಾಯಿರಾ' ಎಂದು ಬದಲಿಸಿದಲ್ಲಿ ನನ್ನ ಆಕ್ಷೇಪಣೆನ್ನು ಹಿಂತೆಗೆದುಕೊಳ್ಳುತ್ತೇನೆ.



ರೂಪದರ್ಶಿ ಗೌತಮಿ 52



ಹೆಣ್ಣು ಸಂತತಿ ವಿನಾಶದತ್ತ? 8




ದೂರದರ್ಶನದ ದುಷ್ಟ ಮುಖ 26




1999ರ ವರ್ಲ್ಡ್ ಕಪ್ ದಕ್ಕೀತೆ? 67

ಈ ಸಂಚಿಕೆಯೊಂದಿಗೆ ಉಚಿತ
ಪ್ರತ್ಯೇಕ ಬಹುವರ್ಣದ ಕ್ಯಾಲೆಂಡರ್
ಐ.ಎ.ಎಸ್. ಅರ್ಜಿ ಫಾರ್ಮ್...ಪುಟ38



ಇಂಟರ್‌ನೆಟ್: ಮಾಹಿತಿಯ ಮಂತ್ರದಂಡ 12

ಟಪಾಲು



ನಿನ್ನೆಯ ಅನ್ನ!

-ಕೆ. ಎ. ಜಗದೇವಿ, ಸೊಲ್ಲಾಪುರ

ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಯು.ವಿ. ತಾರಿಣಿರಾವ್ ಅವರ ಹನಿಗವನಗಳು ಡಿಸೆಂಬರ್ ಸಂಚಿಕೆಯಲ್ಲೂ ಬಂದವು. ನಿನ್ನೆ ಮಾಡಿದ ಅನ್ನವನ್ನು ಇಂದು ಬಿಸಿ ಮಾಡಿ ನುಂಗಿದಂತೆ ಅನ್ನಿಸಿತು. ದಯವಿಟ್ಟು ಮುಂದೆ ಹೀಗಾಗದಂತೆ ನೋಡಿಕೊಳ್ಳಿರಿ.

[*ಅಚಾತುರ್ಯಕ್ಕೆ ಕ್ಷಮಿಸಿ. -ಸಂ.*]

ಅಮೂಲ್ಯ ಕಾಣಿಕೆ

- ಕೆ.ಎಂ. ಮಲ್ಲಿಕಾರ್ಜುನಯ್ಯ
ಅಲಬನೂರು

ಡಾ. ವಸುಂಧರಾ ಭೂಪತಿಯವರ 'ನಿಮ್ಮ ಊರಿಗೂ ಬಂದಿದೆ ಏಡ್ಸ್' ಲೇಖನವು ಸಕಾಲಿಕವಾಗಿತ್ತು. ಲೇಖನವು ವಿವರಣಾತ್ಮಕವಾದ ಸರಳವಾದ ನಿರೂಪಣೆಯಿಂದ ಮೂಡಿ ಬಂದಿದ್ದು, ಸಾಮಾನ್ಯ ವಾಚಕನಿಗೂ ಸರಳವಾಗಿ ಅರ್ಥವಾಗುವ ಜ್ಞಾನಭಂಡಾರವನ್ನು ಹೊಂದಿತ್ತು. ಪ್ರತಿಯೋರ್ವನು ಸಂಗ್ರಹಿಸಿಡಲೇಬೇಕಾದ ಅತ್ಯುತ್ತಮ ಲೇಖನವಾಗಿತ್ತು. ಹೊಸ ವರ್ಷದ ಪಾದಾರ್ಪಣೆಗೆ ಮೊದಲೇ ನೀಡಿದ ಅಮೂಲ್ಯ ಕಾಣಿಕೆಯಾಗಿತ್ತು. ರಾಜಕುಮಾರ್ ಎಂಬ ಎಚ್.ಐ.ವಿ. ಪೀಡಿತ ವ್ಯಕ್ತಿಯ ಜೀವನದ ಅನುಭವ ಓದಿ ಏಡ್ಸ್ ರೋಗಿಗೂ ಆಶಾಕಿರಣ ಮೂಡುತ್ತದೆ.

ಹೃದಯ ಪೂರ್ವಕ

- ಶಂಕರಗೌಡ ವೈ. ಪಾಟೀಲ, ಬಾದಾಮಿ.

ಏಡ್ಸ್ ಬಗೆಗಿನ ಲೇಖನವು ಸಂಪೂರ್ಣ ಮಾಹಿತಿಯನ್ನೊಳಗೊಂಡಿದ್ದು, ಜನಸಾಮಾನ್ಯರಿಗೆ ತಿಳಿಯುವಂತೆ ಮೂಡಿ ಬಂದಿದ್ದು ಗಮನಾರ್ಹವಾಗಿದೆ. 'ಮನೆ' ಮಾಸಪತ್ರಿಕೆಯನ್ನು, 'ಮನೆ' ವಾರಪತ್ರಿಕೆಯನ್ನಾಗಿ ಪರಿವರ್ತಿಸಿದ್ದು ಸಂತಸ ನೀಡಿದೆ. ಸುಮಾರು 1 ವರ್ಷದಿಂದ ಕಾಯುತ್ತಿರುವ ಓದುಗರಿಗೆ ಆದಷ್ಟು ಬೇಗನೇ ಸಿಗಲಿ. ಹೊಸ ಹೊಸ ವಿಷಯ ನೀಡುತ್ತಿರುವ 'ಬದುಕು' ಪತ್ರಿಕೆಗೆ 1999ರ ಹಾರ್ದಿಕ ಶುಭಾಶಯಗಳು. ಅದೇ ರೀತಿ 'ಮನೆ' ವಾರಪತ್ರಿಕೆಗೂ ಹೃದಯಪೂರ್ವಕ ಸ್ವಾಗತ.

ಚಂದಾದಾರನಾಗಬೇಕು

-ರಮೇಶ ಸಂ. ಮಂಟೂರ, ಮುಳವಾಡ

ನಾನು 'ಬದುಕು' ಚಂದಾದಾರನಾಗಬೇಕೆಂದಿದ್ದೇನೆ. ಚಂದಾ ವಿವರಗಳನ್ನೇಕೆ ಪ್ರಕಟಿಸುತ್ತಿಲ್ಲ?
[ಪ್ರತ್ಯೇಕ ಬಾಕ್ಸ್‌ನಲ್ಲಿ ಈ ವಿವರ ನೀಡಿದ್ದೇವೆ, ಗಮನಿಸಿ. -ಸಂ]

ಎಂ.ಎ.ಗೆ 21 ವರ್ಷ

-ಸುಜಲಾದೇವಿ ಡಿ., ಕುಂದೂರು

'ಮಾರ್ಗದರ್ಶಿ'ಯಲ್ಲಿ 25 ವರ್ಷವಾಗಿದ್ದರೆ ವಯಸ್ಸಿನ ಆಧಾರದ ಮೇಲೆ ಎಂ.ಎ. ಮಾಡಬಹುದು ಎಂದು ತಿಳಿಸಿದ್ದೀರಿ. ಆದರೆ ಮೈಸೂರು ವಿಶ್ವವಿದ್ಯಾಲಯದಲ್ಲಿ 21 ವರ್ಷವಾಗಿದ್ದರೆ ಸಾಕು; ಎಂ.ಎ. ಮಾಡಬಹುದು. ತುಂಬಾ ಜನಕ್ಕೆ ಅಣ್ಣಾಮಲೈ ವಿಶ್ವವಿದ್ಯಾಲಯದ ವಿಳಾಸ ಏಕೆ ಕೊಡುತ್ತೀರಿ? ಮೈಸೂರು ವಿಶ್ವವಿದ್ಯಾಲಯದಲ್ಲಿ ಅಂಚೆ ತೆರಪಿನ ಎಲ್ಲಾ ಕೋರ್ಸುಗಳನ್ನು ಮಾಡಬಹುದು.

ಔಚಿತ್ಯಪೂರ್ಣ

- ಉಮೇಶ ಚೌದರಿ, ಚಿಕ್ಕಮಾಗಿ

ಡಿಸೆಂಬರ್ ಸಂಚಿಕೆಯ ಎಲ್ಲಾ ಲೇಖನಗಳು ಔಚಿತ್ಯಪೂರ್ಣವಾಗಿವೆ. ವಯಸ್ಕರ ಅಂಕಣ ಕಿರಿಯರ ಮನಸ್ಸಿಗೆ ಕಿರಿಕಿರಿ ಉಂಟು ಮಾಡುತ್ತದೆ.

ಕೋರಿಕೆ

-ಬಾವಾಸಾಬ ವಂಟಿ, ಹುನಗುಂದ

'ಬದುಕು' ಮಾಸಿಕದಲ್ಲಿ ಎಲ್ಲಾ ಬಗೆಯ ವಿಷಯವಿರುವುದರಿಂದ ನಮಗೆ ಸಂತೋಷ ತಂದಿದೆ. ಕ್ರೀಡಾ ಪ್ರೇಮಿಗಳಾದ ನಮಗೆ ಎಲ್ಲಾ ಕ್ರೀಡೆಗಳ ಬಗ್ಗೆ ಮಾಹಿತಿ ನೀಡಬೇಕೆಂದು

'ಬದುಕು' ಚಂದಾ ವಿವರ

ಒಂದು ವರ್ಷಕ್ಕೆ : ರೂ. 120
ಐದು ವರ್ಷಕ್ಕೆ : ರೂ. 500

ಚಂದಾದಾರರಿಗೆ ಪ್ರತಿ ತಿಂಗಳು 'ಬದುಕು' ಅಂಚೆ ಮೂಲಕ ಮನೆ ಬಾಗಿಲಿಗೆ ತಲುಪುತ್ತದೆ. ಹಣವನ್ನು ಎಂ.ಓ.ಅಥವಾ 'ಬಿಸಿಲ ಬದುಕು' ಹೆಸರಿನಲ್ಲಿ ಡಿ.ಡಿ. ಮೂಲಕ ಕೆಳಗಿನ ವಿಳಾಸಕ್ಕೆ ಕಳಿಸಬಹುದು.

'ಬಿಸಿಲ ಬದುಕು' ಮಾಸಪತ್ರಿಕೆ, ಅಂಕುರ ಪ್ರಕಾಶನ
ಅಂಚೆ ಪೆಟ್ಟಿಗೆ : 7951. ಬಸವೇಶ್ವರ ನಗರ, ಬೆಂಗಳೂರು - 560 079.

ಕೋರುತ್ತೇವೆ.

ತಿಂಗಳಿಂದ ತಿಂಗಳಿಗೆ

- ಟಿ.ಎಚ್.ಎಂ. ಚಂದ್ರಶೇಖರ್, ಹೊಸಪೇಟೆ

'ಬದುಕು' ಮಾಸಪತ್ರಿಕೆ ತಿಂಗಳಿಂದ ತಿಂಗಳಿಗೆ ಉತ್ತಮವಾಗಿ ಮೂಡಿಬರುತ್ತಿದೆ. ಪ್ರಕಟವಾಗಿರುವ ಎಲ್ಲಾ ವಿಷಯ-ವಿಚಾರಗಳು ಸಂಗ್ರಹ ಯೋಗ್ಯವಾಗಿವೆ.

'ಬದುಕು' ಏಕಿಲ್ಲ?

- ಎಚ್. ಎರಿಸ್ವಾಮಿ, ಮೆಟ್ರಿ

ನಮ್ಮದು ಮೆಟ್ರಿ ಗ್ರಾಮ. ನಮ್ಮೂರಿಗೆ ಹತ್ತಿರದಲ್ಲಿ ಕಂಪ್ಲಿ ಎಂಬ ಪಟ್ಟಣವಿದೆ. ಆದರೆ ಅಲ್ಲಿ 'ಬದುಕು' ಇಲ್ಲ. ಏಕೆ? ನಾನು ಪ್ರತಿ ತಿಂಗಳು ಬಳ್ಳಾರಿಗೆ ಹೋಗಿ 'ಬದುಕು' ಕೊಂಡುಕೊಳ್ಳಬೇಕಾಗಿದೆ. ಇದರಿಂದ ನನಗೆ ತುಂಬಾ ಬೇಜಾರಾಗಿದೆ.

ರಾಜಕೀಯವಾಗಿ

-ವೆಂಕಟಭಟ್, ಎಡನೀರು

'ಬದುಕು' ಬಗ್ಗೆ ತಿಳಿದೆ. ರಾಜಕೀಯವಾಗಿ ಅತ್ಯುತ್ತಮ ಲೇಖನಗಳನ್ನು ಹೊತ್ತು ಬರಲಿ.

ಕೆ.ಎ.ಎಸ್. ಮಾರ್ಗದರ್ಶಿ

-ಎಂ. ಗೋವಿಂದರಾಜು, ತುಮಕೂರು

'ಬದುಕು' ಬಳಗದ 'ಕೆ.ಎ.ಎಸ್. ಮಾರ್ಗದರ್ಶಿ' ಓದಿ ಪೂರ್ವಭಾವಿ ಪರೀಕ್ಷೆಯಲ್ಲಿ ಯಶಸ್ವಿಯಾಗಿದ್ದೇನೆ. ಮುಖ್ಯ ಪರೀಕ್ಷೆಗೆ ನೀವು ಯಾವ ಪುಸ್ತಕ ಪ್ರಕಟಿಸಿದ್ದೀರಿ?

[ಕ್ಷಮಿಸಿ. ಈ ಬಾರಿ ಮುಖ್ಯ ಪರೀಕ್ಷೆಗೆ ಯಾವ ಪುಸ್ತಕವನ್ನೂ ಪ್ರಕಟಿಸಲು ಸಾಧ್ಯವಾಗಿಲ್ಲ

-ಸಂ]

ಏಡ್ಸ್: ತಿದ್ದುಪಡಿ

ಡಿಸೆಂಬರ್ ಸಂಚಿಕೆ 11ನೇ ಪುಟದ ಎರಡನೇ ಕಾಲಂ ಕೊನೆಯ ಪ್ಯಾರಾವನ್ನು ಹೀಗೆ ಓದಿಕೊಳ್ಳಬೇಕು: ರಕ್ತ ಪರೀಕ್ಷೆಯಿಂದ ಸೋಂಕು ತಗುಲುವುದಿಲ್ಲ. ಏಕೆಂದರೆ ರಕ್ತ ಪರೀಕ್ಷೆಯ ಉಪಕರಣಗಳನ್ನು ಸಂಸ್ಕರಿಸಿಯೇ (Sterile) ಉಪಯೋಗಿಸುವರು.

17ನೇ ಪುಟದ ಮೊದಲ ಪ್ಯಾರಾದ 4ನೇ ಅಂಶ 'ಮೈಮೇಲೆ ಗಾಂಡಿಗಳೇಳುವುದು' ಎಂದಿದೆ. ಇದು 'ಮೈ ಮೇಲೆ ಗಂಧೆ (ಹೈತಿಗೆ, ದದ್ದರಿಸುವಿಕೆ) ಏಳುವುದು' ಎಂದಾಗಬೇಕು. *-ಸಂ.*

ಕನಸು ಕಂಡಿರಲಿಲ್ಲ

- ಪಿ.ಎಚ್. ದಯಾನಂದ, ಹೊನ್ನಾವರ

'ಬಿಸಿಲ ಬದುಕು' ಮಾಸಪತ್ರಿಕೆಯು ಪ್ರತಿ ತಿಂಗಳು ಅತ್ಯುತ್ತಮವಾಗಿ ಮೂಡಿಬರುತ್ತಿದೆ. ಪ್ರತಿ ತಿಂಗಳು 29ನೇ ತಾರೀಖು ಯಾವಾಗ ಬರುತ್ತೆ ಎಂದು ನೋಡುತ್ತಿರುತ್ತೇನೆ. ಕಾರಣ ಬದುಕು ನೋಡದಿದ್ದರೆ ಮನಸ್ಸಿಗೆ ಏನೋ ಒಂದು ತರಹದ ಬೇಜಾರಾಗುತ್ತದೆ.

ಕೇವಲ ಒಂದು ವರ್ಷದಲ್ಲೇ ಪತ್ರಿಕೆಯು ಇಷ್ಟೆಲ್ಲಾ ಬೆಳವಣಿಗೆ ಹೊಂದುವುದು ಎಂದು ಕನಸು ಕಂಡಿರಲಿಲ್ಲ. ರಾಜಕೀಯ, ವಿಜ್ಞಾನ, ಸಂಪರ್ಕ, ಸಾಮಾಜಿಕ, ಸಾಂಸ್ಕೃತಿಕ ಮುಂತಾದ ವಿಷಯದಲ್ಲಿ ಪ್ರತಿ ತಿಂಗಳು ಉತ್ತಮವಾಗಿ ಮೂಡಿಬರುತ್ತಿದೆ. ಈಗಂತೂ ವರ್ಗೀಕೃತ ಮತ್ತು ವೈವಾಹಿಕ ಜಾಹೀರಾತು ಪ್ರಕಟಿಸುವ ಬದುಕಿಗೆ ನಾನು ಧನ್ಯ.

ನಿಜಕ್ಕೂ ಸುಂದರ

-ಕೆ. ವೆಂಕಣ್ಣಾಚಾರ್, ಚಿತ್ರದುರ್ಗ

ಸಂಚಿಕೆ ನಿಜಕ್ಕೂ ಸುಂದರ ಹಾಗೂ ಉಪಯುಕ್ತ. ಅದರ ಎಲ್ಲಾ ಲೇಖನಗಳೂ ವಾಚನಯೋಗ್ಯ ಎನಿಸಿತು. ನಿಮ್ಮ ಸಾಹಸ ಪ್ರವೃತ್ತಿಗೆ ಶರಣು.

ಅರ್ಥ - ಅಪಾರ್ಥ

ಕರ್ನಾಟಕ ರಾಜ್ಯ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಕೆ. ಜಯದೇವಪ್ಪ ಅವರು ನಾಳೆ ಬಳ್ಳಾರಿ ನಗರಕ್ಕೆ ಭೇಟಿ **ನೀಡಿದ್ದಾರೆ.**

[*ಸಂಜೆವಾಣಿ,* 8.12.98] -ಎಚ್.ಎಂ.ಎಸ್. ಬಸವರಾಜ್, ಬಳ್ಳಾರಿ.

ಹಿರಿಯ ನಟ ಸಿ. **ಅಶ್ವತ್ಥ್** ಅವರು ಕಲಾಸಾಗರ ಬಿರುದು ಪಡೆಯಲು ವೇದಿಕೆಗೆ ಬಂದಾಗ 'ಅಮೋಘ ಕಲಾವಿದ' ಎಂದು ವರ್ಣಿಸಿದ ರೀತಿ ವ್ಯಂಗ್ಯವಾಗಿ ಧ್ವನಿಸಿತು.

[*ಸುಧಾ,* 20.12.98] -ಶ್ರೀವತ್ಸ, ಬೆಂಗಳೂರು.

ಅಂತರರಾಷ್ಟ್ರೀಯ ವಿಮಾನಗಳು ಇಳಿಯಲು **ಆಕಾಶವಾಗುವಂಥ** ವಿಮಾನ ನಿಲ್ದಾಣ ಮಾಡಲು ಸಿದ್ಧವಿದ್ದರೆ ನಾಳೆಯಿಂದಲೇ ಕೆಲಸ ಶುರು ಮಾಡಿ....

[*ಕನ್ನಡ ಪ್ರಭ,* 4.12.98] -ಜಿ.ಎಸ್. ಸದಾಶಿವಪ್ಪ, ರಾಣೆಬೆನ್ನೂರು

ಆದಷ್ಟು ಬೇಗ ಕನ್ನಡ **ಆಪಳಿತ** ಭಾಷೆಯಾಗಿ ಘೋಷಿಸಲು ಒತ್ತಾಯ.

[*ಪ್ರಜಾವಾಣಿ,* 2.11.98] -ಸುಜಾತಾ ಯಲಿಗಾರ, ಬಾದಾಮಿ


ಮೂರು ದನಗಳ ಅಧಿಕೃತ ಭೇಟಿಗಾಗಿ ಪಾಕಿಸ್ತಾನಕ್ಕೆ ಆಗಮಿಸಿರುವ ಸವೂದೀ ಅರೇಬಿಯಾದ ಯುವರಾಜ...


[*ಕನ್ನಡಪ್ರಭ,* 28.10.98] -ಮಹಾಂತೇಶ ಮಂಗಳೂರು, ಕುಷ್ಟಗಿ
-ನೆಲ್ಲಿಕಟ್ಟೆ ಸಿದ್ದೇಶ್, ಹಿರೇಕಂದವಾಡಿ

....'ಲಂಕೇಶ್ ಪತ್ರಿಕೆ' ವಿರುದ್ಧ ಬೆಂಗಳೂರಿನ ಏಳನೇ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಹೂಡಿರುವ ಕ್ರಿಮಿನಲ್ ಮೊಕದ್ದಮೆಯಲ್ಲಿ **ಈ ದಿನ ಪತ್ರಿಕೆಯ** ವರದಿಗಾರರಾದ ರವೀಂದ್ರ ರೇಷ್ಮೆ, ಗಂಗಾಧರ ಕುಷ್ಟಗಿ ಮತ್ತು ಟಿ.ಕೆ. ತ್ಯಾಗರಾಜ್ ಜಾಮೀನಿನ ಮೇಲೆ ಬಿಡುಗಡೆ ಹೊಂದುವ ಮೂಲಕ ಪ್ರಕರಣವು ಪ್ರಾರಂಭಿಕ ಘಟ್ಟ ತಲುಪಿತು.

[*ಸಂಯುಕ್ತ ಕರ್ನಾಟಕ,* 24.12.98] -ಪಿ.ಸಿ.ಸೋಮಶೇಖರ, ಗುಲಬರ್ಗಾ

ಹೆಣ್ಣು ಸಂತತಿ ನಾಶವಾಗುತ್ತಿದೆಯೇ?





''ಬಾಳಿನ ಧಾರ್ಮಿಕತೆಯನ್ನು, ಪಾವಿತ್ರ್ಯವನ್ನು ರಕ್ಷಿಸುವ ರಕ್ಷಣಾಧಿಕಾರಿ ಹೆಣ್ಣು!

- ಮಹಾತ್ಮಾ ಗಾಂಧೀಜಿ

ಈ ಭೂಮಿಯ ಮೇಲೆ ಬಾಳಿ ಬದುಕಿದ ಎಲ್ಲ ಮಹಾನ್ ವ್ಯಕ್ತಿಗಳು, ಪಂಡಿತರು, ಕವಿ-ಕತೆಗಾರರು, ತತ್ವಜ್ಞಾನಿಗಳು, ಅಷ್ಟೇ ಅಲ್ಲ ಸಾಧು-ಸಂತರೂ ಹೆಣ್ಣನ್ನು ಒಂದಲ್ಲ ಒಂದು ರೀತಿ ಹೊಗಳಿದವರೇ; ಅಷ್ಟೇ ಅಲ್ಲ ಅವಳ ಮಹಾನತೆಯನ್ನು ತಮ್ಮ ಕೃತಿಗಳಲ್ಲಿ ಬಣ್ಣಿಸಿದ್ದಾರೆ. ''ಸ್ತ್ರೀಯರು ಪುರುಷರಿಗಿಂತಲೂ ಬುದ್ಧಿವಂತರು; ಏಕೆಂದರೆ ಅವರು ಕಲಿಯುವುದು ಕಡಿಮೆ ತಿಳಿದುಕೊಳ್ಳುವುದು ಹೆಚ್ಚು'' ಎಂದು ಜೇಮ್ಸ್ ಸ್ಟೀಫನ್ಸ್ ಅವಳ ಶ್ರೇಷ್ಠತೆಯನ್ನು ಸಾರಿದ್ದಾನೆ. ಎಲ್ಲರಿಗಿಂತ ಹೆಚ್ಚಾಗಿ ವಿವೇಕಾನಂದರು ಹೆಣ್ಣಿಗೆ ಅತ್ಯುನ್ನತ ಸ್ಥಾನವನ್ನು ನೀಡುತ್ತ ಹೀಗೆ ಹೇಳಿದ್ದಾರೆ: ''ಯಾವ ಸಮಾಜದಲ್ಲಿ ಹೆಣ್ಣು ಗೌರವಿಸಲ್ಪಡುತ್ತಾಳೆಯೋ, ಆ ಸಮಾಜ ಸಂಪದ್ಭರಿತವಾಗಿರುತ್ತದೆ.''

ಬಲ್ಲವರೆಲ್ಲ ಎಷ್ಟೇ ಹಾಡಿ-ಹೊಗಳಿದರೂ, ನಿಜ ಜೀವನದಲ್ಲಿ ಮಾತ್ರ ಅವರಿಗೆ ಅವಶ್ಯವಾದ ಯಾವ ಘನತೆ, ಗೌರವ, ಸುಖ, ಸಂತೋಷ, ಸಮಾನತೆ ದಕ್ಕಲೇ ಇಲ್ಲ. ನಮ್ಮ ದೇಶದಲ್ಲಂತೂ ಮಾನವ ಎಂದಿನಿಂದ ತನ್ನ ಅಲೆಮಾರಿ ಜೀವನವನ್ನು ಬಿಟ್ಟು ಒಂದು ಕಡೆ

■ ವೀರಮ್ಮ ಸಾವಿರಮಠ

ಈ ಶತಮಾನದ ಆರಂಭದಿಂದ ಇಲ್ಲಿಯವರೆಗಿನ ಅಂಕಿಅಂಶಗಳನ್ನು ಗಮನಿಸಿದರೆ ಸ್ತ್ರೀ ಸಂತತಿ ನಿರಂತರವಾಗಿ ಕ್ಷೀಣಿಸುತ್ತಿರುವುದು ಕಂಡುಬರುತ್ತದೆ. ಹೀಗಾಗಲು ಕಾರಣವೇನು? ಈ ಬೆಳವಣಿಗೆಯ ಪರಿಣಾಮವೇನು?

ನೆಲೆಸಲಾರಂಭಿಸಿದನೊ; ಕೂಡಿ ಬಾಳುವುದನ್ನು ಕಲಿತು ಸಮಾಜವನ್ನು ನಿರ್ಮಿಸಿದನೋ ಅಂದಿನಿಂದ ಇಲ್ಲಿಯವರೆಗೆ, ಏನೆಲ್ಲಾ ಬದಲಾವಣೆಗಳಾಗಿವೆ. ಮನುಷ್ಯ ಎಲ್ಲ ರಂಗಗಳಲ್ಲೂ ಅತ್ಯದ್ಭುತ ಪ್ರಗತಿ ಸಾಧಿಸಿದ್ದಾನೆ. ಆದರೆ ಹೆಣ್ಣಿನ ಸ್ಥಾನಮಾನಗಳಲ್ಲಿ ಮಾತ್ರ ಹೇಳಿಕೊಳ್ಳುವಂತಹ ಸುಧಾರಣೆ ಆಗಿಯೇ ಇಲ್ಲ ಎನ್ನಬಹುದು. ಎಲ್ಲಿಯೋ ಒಬ್ಬ ಕಲ್ಪನಾ ಚಾವ್ಲಾ, ಕಿರಣ್ ಬೇಡಿ ಅಂಥವರನ್ನು ಬಿಟ್ಟರೆ, ಉಳಿದೆಲ್ಲ ಹೆಣ್ಣುಮಕ್ಕಳು ನಾಲ್ಕು ಗೋಡೆಗಳ ಮಧ್ಯೆ ಅಡುಗೆ ಮಾಡುತ್ತ, ಮಕ್ಕಳನ್ನು ಜೋಪಾನ ಮಾಡುವುದರಲ್ಲಿಯೇ ಜೀವನ ಕಳೆಯುತ್ತಿದ್ದಾರೆ.

ಭಾರತ ಜನಸಂಖ್ಯಾ ದೃಷ್ಟಿಯಿಂದ ಜಗತ್ತಿನಲ್ಲಿಯೇ ಎರಡನೇ ಸ್ಥಾನದಲ್ಲಿದೆ. ಒಟ್ಟು ಜನಸಂಖ್ಯೆಯ 16%ರಷ್ಟು ಜನ ಭಾರತದಲ್ಲಿಯೇ ವಾಸಿಸುತ್ತಾರೆ. ಆದರೆ ನಮ್ಮ ದೇಶ 2.4%ರಷ್ಟು ಭೂಪ್ರದೇಶವನ್ನು ಹೊಂದಿದೆ! 1997ರಲ್ಲಿ ಭಾರತದ ಜನಸಂಖ್ಯೆ 960.2 ದಶಲಕ್ಷಗಳಷ್ಟಿತ್ತು. ಪ್ರತಿ ವರ್ಷ 1.6%ರಷ್ಟು ಜನಸಂಖ್ಯೆ ಭಾರತದಲ್ಲಿ ಏರುತ್ತಿದೆ. ಆದರೆ ಇದೇ ಪ್ರಮಾಣದಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಾಗುತ್ತಿಲ್ಲ. ಈ ಸಂಗತಿಯು ಕೆಳಗಿನ ಪಟ್ಟಿಯಿಂದ ಸ್ಪಷ್ಟವಾಗುತ್ತದೆ.

ಸ್ತ್ರೀಯರ ಪ್ರಮಾಣ 1901-1991 (ಪ್ರತಿ 1000 ಪುರುಷರಿಗೆ)

ವರ್ಷ	ಸ್ತ್ರೀಯರ ಪ್ರಮಾಣ
1901	972
1911	964
1921	955
1931	950
1941	945
1951	946
1961	941
1971	930
1981	934
1991	927

1901ರಲ್ಲಿ ಪ್ರತಿ ಸಾವಿರ ಗಂಡು ಮಕ್ಕಳಿಗೆ 972 ಮಹಿಳೆಯರಿದ್ದರೆ 1991ರಲ್ಲಿ ಅವರ ಸಂಖ್ಯೆ 927ಕ್ಕೆ ಇಳಿದಿದೆ! 1951 ಮತ್ತು 1981ರ ದಶಕಗಳನ್ನು ಬಿಟ್ಟರೆ ಉಳಿದ ಎಲ್ಲಾ ದಶಕಗಳಲ್ಲೂ ಹೆಣ್ಣಿನ ಸಂಖ್ಯೆ ಇಳಿಯುತ್ತಲೇ ಹೋಗಿರುವುದು ಆತಂಕ ಹುಟ್ಟಿಸುತ್ತದೆ. ರಾಜ್ಯವಾರು ಸ್ತ್ರೀಯರ ಪ್ರಮಾಣ ನೋಡಿದಾಗಲೂ ಸಹ ಈ ವ್ಯತ್ಯಾಸ ಎದ್ದು ಕಾಣುತ್ತದೆ. ಯಾವುದೇ ಒಂದು ಪ್ರದೇಶದಲ್ಲಿ 1000 ಪುರುಷರಿಗೆ ಕನಿಷ್ಠ 950 ಮಹಿಳೆಯರಿರಬೇಕು. ಆದರೆ ಅರುಣಾಚಲ ಪ್ರದೇಶ, ಹರಿಯಾಣ, ನಾಗಾಲ್ಯಾಂಡ್, ಪಂಜಾಬ್ ಮುಂತಾದ ರಾಜ್ಯಗಳಲ್ಲಿ ಮತ್ತು ಅಂಡಮಾನ್ ನಿಕೋಬಾರ್ ದ್ವೀಪಗಳು ಮತ್ತು ದೆಹಲಿಯಂಥ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸ್ತ್ರೀಯರ ಸಂಖ್ಯೆ 900ಕ್ಕಿಂತಲೂ ಕಡಿಮೆ! ಚಂಡೀಗಢದಲ್ಲಂತೂ ಅದು ಅತೀ ಕಡಿಮೆ ಎಂದರೆ 790ರಷ್ಟು ಸ್ತ್ರೀಯರಿದ್ದಾರೆ. ಯುರೋಪಿನ ಅನೇಕ ದೇಶಗಳಲ್ಲಿ ಪುರುಷರಿಗಿಂತ ಮಹಿಳೆಯರ ಪ್ರಮಾಣವೇ ಹೆಚ್ಚಾಗಿರುತ್ತದೆ! ಅಂತಹ ಸ್ಥಿತಿಯಿರುವುದು ನಮ್ಮ ದೇಶದ ಕೇರಳ ರಾಜ್ಯದಲ್ಲಿ ಮಾತ್ರ. ಅಲ್ಲಿ ಸಾವಿರ ಪುರುಷರಿಗೆ 1036 ಮಹಿಳೆಯರಿದ್ದಾರೆ.

ಕೇರಳ, ಜಮ್ಮು ಮತ್ತು ಕಾಶ್ಮೀರ ಮತ್ತು ಆಂಧ್ರ ಪ್ರದೇಶ ಮುಂತಾದ ಕೆಲವೇ ರಾಜ್ಯಗಳನ್ನು ಬಿಟ್ಟರೆ ಉಳಿದ ರಾಜ್ಯಗಳಲ್ಲಿ ಸ್ತ್ರೀಯರ ಪ್ರಮಾಣ ಕಡಿಮೆಯಾಗುತ್ತಲೇ ಇದೆ ಎಂಬುದನ್ನು ಮೇಲಿನ ಪಟ್ಟಿಯಿಂದ ತಿಳಿಯಬಹುದಲ್ಲವೇ? ಹೀಗೆ ಸ್ತ್ರೀಯರ ಸಂಖ್ಯೆ ಇಳಿಯುತ್ತಿರುವುದಕ್ಕೆ ಕಾರಣಗಳನ್ನು ಹುಡುಕುತ್ತ ಹೋದರೆ ನೂರೆಂಟು ಕಾರಣಗಳು ಸಿಗುತ್ತವೆ. ಅವು ಹೃದಾಯಾಘಾತವಾಗುವಷ್ಟು ಭಯಂಕರ ಆಗಿವೆ!

ಸ್ತ್ರೀಯರ ಸಂಖ್ಯೆ ಇಳಿಯುತ್ತಿರುವುದಕ್ಕೆ ಕಾರಣಗಳು

ಭ್ರೂಣ ಹತ್ಯೆ

ನಮ್ಮ ದೇಶದಲ್ಲಿ ವೇದಗಳ ಕಾಲದಿಂದಲೂ ಪುತ್ರ ಸಂತಾನವನ್ನೇ ಬಯಸುವುದು ಜನ





ಸಾಮಾನ್ಯರ ಮುಖ್ಯ ಬಯಕೆಗಳಲ್ಲಿ ಒಂದು. ಹಿಂದಿನ ಕಾಲದಲ್ಲಂತೂ ಭ್ರೂಣ ಪರೀಕ್ಷೆಯ ಜ್ಞಾನವಿಲ್ಲದ್ದರಿಂದ ಎಲ್ಲರೂ ಗಂಡುಮಗು ಜನಿಸುವವರೆಗೆ ಮಕ್ಕಳನ್ನು ಹೆರುತ್ತಲೇ ಇರುತ್ತಿದ್ದರು. ಆದರೆ ಈಗ ಬೇಡವಾದ ಹೆಣ್ಣು ಭ್ರೂಣವನ್ನು ನಿರ್ದಯವಾಗಿ ಹೊಸಕಿ ಹಾಕುತ್ತಿದ್ದಾರೆ. ತಾನು ಅನುಭವಿಸಿದ ನೋವನ್ನೇ ಮಗಳೂ ಅನುಭವಿಸುವುದು ಬೇಡವೆಂತಲೂ ಅಥವಾ ಗಂಡು ಮಗು ಹುಟ್ಟದಿದ್ದರೆ ತನ್ನ ಗಂಡನಿಗೆ ಇನ್ನೊಂದು ಮದುವೆ ಮಾಡುತ್ತಾರೆ ಎಂಬ ಸಂಕಟಕ್ಕೋ, ಇಂದು ಮಹಿಳೆ ತನಗಿಷ್ಟವಿಲ್ಲದಿದ್ದರೂ ಭ್ರೂಣ ಹತ್ಯೆಯಂತಹ ಪಾಪಕ್ಕೆ ತಯಾರಾಗಿದ್ದಾಳೆ. ಇದು ಕಾನೂನುಬಾಹಿರ ಆಗಿದ್ದಾಗಲೂ ಮುಂಬೈ ನಗರವೊಂದರಲ್ಲಿಯೇ ದಿನಕ್ಕೆ 100ಕ್ಕಿಂತಲೂ ಹೆಚ್ಚು ಭ್ರೂಣ ಹತ್ಯೆ ಮಾಡಲಾಗುತ್ತಿದೆ! ಇಂತಹ ಸ್ಥಿತಿಯಲ್ಲಿ ಸ್ತ್ರೀಯರ ಪ್ರಮಾಣ ಹೆಚ್ಚಾಗುವುದಾದರೂ ಹೇಗೆ?

ಬಡತನ

ಸರ್ಕಾರ ಏನೆಲ್ಲಾ ಪ್ರಯತ್ನ ಮಾಡಿದಾಗಲೂ ನಮ್ಮ ದೇಶದಲ್ಲಿ 30%ರಷ್ಟು ಜನ ಇನ್ನೂ ಬಡತನದ ರೇಖೆಯ ಕೆಳಗೇ ಇದ್ದಾರೆ. ಇಂತಹ ಬಡ ಕುಟುಂಬಗಳಲ್ಲೇನಾದರೂ ಹೆಣ್ಣು ಮಗು ಜನಿಸಿದರೆ ಅದರ ದೌರ್ಭಾಗ್ಯವೇ ಸರಿ. ಅದನ್ನು ಹೆತ್ತವಳೇ ಒಂದು ನಿಕೃಷ್ಟ ವಸ್ತುವಾಗುವುದರಿಂದ ತಾಯಿ, ಮಗು ಇಬ್ಬರಿಗೂ ಯಾರೂ ಆರೈಕೆ ಮಾಡುವುದಿಲ್ಲ. ಮಗು ಆಹಾರ, ಪೌಷ್ಟಿಕಾಂಶದ ಕೊರತೆಯಿಂದ ಬಹಳಷ್ಟು ಸಂದರ್ಭಗಳಲ್ಲಿ ಸಾವನ್ನಪ್ಪುತ್ತದೆ. ಹೆತ್ತವಳಿಗೂ ಅದೇ ಗತಿಯಾದರೆ ಆಶ್ಚರ್ಯವೇನಿಲ್ಲ.



ಅನಕ್ಷರತೆ

ಒಬ್ಬ ಪುರುಷನಿಗೆ ವಿದ್ಯೆ ಕಲಿಸಿದರೆ ಅದು ಅವನೊಬ್ಬನಿಗೇ, ಅದೇ ಒಬ್ಬ ಸ್ತ್ರೀಗೆ ವಿದ್ಯೆ ಕಲಿಸಿದರೆ ಅದು ಇಡೀ ಕುಟುಂಬಕ್ಕೆ ಕಲಿಸಿದಂತೆ! ಆದರೆ ಭಾರತದ ಯಾವುದೇ ರಾಜ್ಯ ತೆಗೆದು .ಕೊಂಡರೆ ಅನಕ್ಷರಸ್ಥರಲ್ಲಿ ಸ್ತ್ರೀಯರ ಪ್ರಮಾಣವೇ ಅಧಿಕವಾಗಿದೆ. ಕೇರಳ, ಗೋವಾ, ಮಿಜೋರಾಂ ಗಳಲ್ಲಿ ಮತ್ತು ದಾದ್ರಾ ಮತ್ತು ನಗರ ಹವೇಲಿ ಯೊಂದನ್ನು ಬಿಟ್ಟು ಉಳಿದ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಾಕ್ಷರತೆಯ ಪ್ರಮಾಣ 70% ಕ್ಕಿಂತಲೂ ಹೆಚ್ಚು. ಆದರೂ ಪುರುಷರಿಗೆ ಹೋಲಿ ಸಿದಲ್ಲಿ ಸ್ತ್ರೀ ಸಾಕ್ಷರತೆಯ ಪ್ರಮಾಣ ಬಹಳಷ್ಟು ಕಡಿಮೆಯಾಗಿದೆ.


ಅನಕ್ಷರತೆಯೇ ಒಂದು ದೊಡ್ಡ ಸಮಸ್ಯೆ. ಅದು ಸ್ತ್ರೀಗಂತೂ ಒಂದು ಘೋರ ಶಾಪ! ತನಗೆ ಉಂಟಾಗುವ ಅನ್ಯಾಯಗಳಿಂದ ರಕ್ಷಿಸಿಕೊಳ್ಳುವ ಶಕ್ತಿಯಿಲ್ಲದ ಅನಕ್ಷರಸ್ಥ ಮುಗ್ಧ ಹೆಣ್ಣು ತನ್ನ ಹೆಣ್ಣು ಮಕ್ಕಳನ್ನೂ ರಕ್ಷಿಸಲಾಗದೇ ಹೋಗುವುದರಿಂದ ಅವರ ಜೀವನವೇ ಒಂದು ಹಂತದಲ್ಲಿ ಕೊನೆಯಾಗುತ್ತದೆ.

ನಿರುದ್ಯೋಗ

'ಉದ್ಯೋಗಂ ಪುರುಷ ಲಕ್ಷಣಂ' ಎನ್ನುವ ಮಾತು ಅರ್ಥ ಕಳೆದುಕೊಂಡು ಬಹಳ ದಿನಗಳಾ ದವು. ಆತನಿಗಿಂತ ಒಂದು ಪಾಲು ಹೆಚ್ಚೇ ಉದ್ಯೋಗದ ಅವಶ್ಯಕತೆ ಮಹಿಳೆಗಿದೆ ಎನ್ನ ಬಹುದು. ಈ ಉದ್ಯೋಗದ ಭದ್ರತೆಯಿಲ್ಲದೇ ಬದುಕುವ ಸ್ತ್ರೀಯರು ತಮ್ಮೆಲ್ಲ ಇಚ್ಛೆಗಳನ್ನು ಬಲಿಗೊಟ್ಟು ಬೇರೆಯವರ ಅಧಿಕಾರದಲ್ಲಿಯೇ ನಲುಗಿ ಹೋಗಿರುತ್ತಾರೆ.

ಆಸ್ತಿಯ ಹಂಚಿಕೆಯಲ್ಲಿನ ಅಸಮಾನತೆ

ಕಾನೂನು ಆಸ್ತಿಯ ಹಂಚಿಕೆಯಲ್ಲಿ ಸ್ತ್ರೀ ಪುರುಷರ ನಡುವೆ ಯಾವುದೇ ಭೇದ ಭಾವವನ್ನು ಮಾಡದಿದ್ದರೂ ಸಹಿತ ಇದನ್ನು ಆಚರಣೆಯಲ್ಲಿ ಯಾರೂ ತರುವುದೇ ಇಲ್ಲ. ತವರು ಮನೆಯಲ್ಲಿ



ಯಾವುದೇ ಭದ್ರತೆಯಿಲ್ಲದೇ ಬೆಳೆಯುವ ಹೆಣ್ಣು ಗಂಡನ ಮನೆಯಲ್ಲೂ ಅದರ ಕೊರತೆಯಿಂದ ನರಳುತ್ತಾಳೆ. ಈ ಎಲ್ಲ ರಗಳೆಯಿಂದ ರೋಸಿ ಹೋದ ಸ್ತ್ರೀ ಒಂದೋ, ಎರಡೋ, ಗಂಡು ಮಕ್ಕಳು ಜನಿಸಿದರೆ ಸಾಕು, ಕುಟುಂಬ ನಿಯಂತ್ರಣಕ್ಕೆ ಒಪ್ಪಿ ಬಿಡುತ್ತಾಳೆ.

ಭಾರತೀಯ ಸಂಸ್ಕೃತಿ

ಋಗ್ವೇದ ಕಾಲದಲ್ಲಿ ಸ್ತ್ರೀ ಪುರುಷರ ನಡುವೆ ಸಮಾನತೆ ಇತ್ತು. ನಂತರ ಬರು-ಬರುತ್ತ ಸ್ತ್ರೀ, ಪುರುಷನ ದಾಸಿಯಾದಳು. ಆತನ ಮಕ್ಕಳನ್ನು ಹೆರುವ ಯಂತ್ರವಾದಳು. ಪ್ರಾಣಿ ಸಂಗ್ರಹಾಲ ಯದಲ್ಲಿ ಬಂಧಿಸಿಟ್ಟ ಪ್ರಾಣಿಯಾದಳು! ಅವಳು ಕೂತರೆ ತಪ್ಪು, ನಿಂತರೆ ತಪ್ಪು, ನಕ್ಕರೂ ತಪ್ಪು, ಯಾರೊಡನೆ ಮಾತನಾಡಿದರೂ ತಪ್ಪು ಎನ್ನುವ ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಸ್ತ್ರೀಯರ ಪ್ರಮಾಣ ಹೆಚ್ಚಾಗುವುದಾದರೂ ಹೇಗೆ?

ಸ್ತ್ರೀಯರ ಸಂಖ್ಯೆ ಕಡಿಮೆಯಾಗುವುದರಿಂದ ಉಂಟಾಗುವ ಪರಿಣಾಮಗಳು.

ರಾಜಸ್ಥಾನದಲ್ಲಿ ಪ್ರತಿ ಸಾವಿರ ಪುರುಷರಿಗೆ 919 ಸ್ತ್ರೀಯರಿದ್ದಾಗಲೂ ಸಹ ಅಲ್ಲಿ ಅವರ ಜೀವನೇ ಒಂದು ದೊಡ್ಡ ದುರಂತವಾಗಿದೆ. ಮದುವೆಗೆ ಹೆಣ್ಣು ಸಿಗುತ್ತಿಲ್ಲವಾದ್ದರಿಂದ ಗಂಡಿನ ಕಡೆಯವರು ಕೈಗೆ ಸಿಕ್ಕ ಹೆಣ್ಣುಗಳನ್ನು ಹಾರಿಸಿಕೊಂಡು ಹೋಗುತ್ತಾರೆ. ಅತ್ಯಾಚಾರವಂತೂ ಅಲ್ಲಿ ಸಾಮಾನ್ಯ ಸಂಗತಿಯಾಗಿದೆ. ಹೀಗೆ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಾ ಹೋದಲ್ಲಿ ಈ ವಿಷಗಾಳಿ ಎಲ್ಲ ರಾಜ್ಯಗಳಿಗೂ ಹಬ್ಬದೇ ಇದ್ದೀತೇ! ಹಾಗಾದರೆ ಅವಳು ಬದುಕುವುದೆಂತು? ಅವಳನ್ನು ರಕ್ಷಿಸುವವರು ಯಾರು?

ಮದುವೆಗೆ ಹೆಣ್ಣೇ ಸಿಗುತ್ತಿಲ್ಲ ಎಂದಾಗ ವರದಕ್ಷಿಣೆ ಪದ್ಧತಿಯೇ ಬದಲಾಗಿ ವಧುದಕ್ಷಿಣೆಯ ಪಿಡುಗು ಆರಂಭವಾಗುತ್ತದೆ. ಆಗ ಹೆಣ್ಣು ಶಬ್ದಶಃ ಗುಲಾಮಳೇ ಆಗಿಬಿಡುತ್ತಾಳೆ. ಮಕ್ಕಳನ್ನು ಹೆತ್ತು ಪೋಷಿಸಿ, ಪಾಲಿಸಿ, ಮಾನವ ಸಂತತಿಯನ್ನು ಮುಂದಿನ ಯುಗಕ್ಕೆ ಕೊಂಡೊಯ್ಯುವಂತಹ ಮಹಾನ್ ಕೆಲಸವನ್ನು ಮಾಡುವ ಹೆಣ್ಣೇ ಇಲ್ಲದಿದ್ದಲ್ಲಿ ಮನುಷ್ಯನಿಗೆ ಭವಿಷ್ಯವೆಂಬುದು ಇದೆಯೇ?

ಅತ್ಯಾಚಾರ, ಆತ್ಮಹತ್ಯೆ, ಕೊಲೆ

ಅತ್ಯಾಚಾರ ಪದ ಹುಟ್ಟಿರುವುದೇ ಹೆಣ್ಣಿಗಾಗಿ! ಯಾವುದೇ ಪರಿಸ್ಥಿತಿಯಲ್ಲಿ ಹೆಣ್ಣೊಂದು ಅತ್ಯಾ ಚಾರಕ್ಕೀಡಾದರೆ, ಅವಳಿಗೆ ಉಳಿಯುವ ದಾರಿ ಒಂದೇ - ಆತ್ಮಹತ್ಯೆ! ಸಹಿಸಲಾಗದ ಸಂಕಟ ಬಂದಲ್ಲಿ ಸ್ತ್ರೀ ತನ್ನ ಮಕ್ಕಳನ್ನೂ ಸಾವಿನ ಕೂಪಕ್ಕೆ ದೂಡಿ ತಾನೂ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇನ್ನು ವರದಕ್ಷಿಣೆಯ ಬೆಂಕಿಗೆ ಉರಿದು ಹೋಗುವ ಹೆಂಗಸರಿಗಂತೂ ಲೆಕ್ಕವೇ ಇಲ್ಲ.

ಸಾಂಕ್ರಾಮಿಕ ರೋಗಗಳು

ಸಾಮಾನ್ಯ ರೋಗಗಳಿಂದ ಸಾಯುವ ಮಹಿಳೆ ಯರೊಂದು ಕಡೆಯಾದರೆ, ಸಾಂಕ್ರಾಮಿಕ ರೋಗಗಳಿಂದ ಸಾಯುವ ಮಹಿಳೆಯರದ್ದೇ

ಒಂದು ದೊಡ್ಡ ಗೋಳು. ಗಂಡನಾದ ವ್ಯಕ್ತಿ ತನ್ನ ಪಾಪ ಕರ್ಮಗಳಿಂದ ಏಡ್ಸ್ ರೋಗವನ್ನು ಹಚ್ಚಿಕೊಂಡರೆ ಮುಗಿದೇ ಹೋಯಿತು. ಅದನ್ನು ಹೆಂಡತಿ, ಮಕ್ಕಳಿಗೂ ಆತ ದಾಟಿಸುವುದರಿಂದ ಅವರೂ ಆತನ ಜೊತೆ ಜೊತೆಗೆ ಈ ಲೋಕಕ್ಕೆ ವಿದಾಯ ಹೇಳುತ್ತಾರೆ.

ಈ ಮೇಲೆ ಹೇಳಿದ ಎಲ್ಲಾ ಅಂಶಗಳು ಹೆಣ್ಣು ಸಂತತಿ ನಾಶವಾಗುತ್ತಿದೆಯೆ ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ಕೊಡುತ್ತಿವೆ. ಹೀಗೆಯೇ ಸಂಖ್ಯೆ ಇಳಿಯುತ್ತಾ ಹೋದರೆ ಉಂಟಾಗುವ ಪರಿಣಾಮಗಳೇನು? ಹೆಣ್ಣು ಎನ್ನುವುದೇ ಅಪರೂಪವಾಗುವುದರಿಂದ ಅವಳಿಗೊಂದು ಮಹತ್ವದ ಸ್ಥಾನ ಸಿಗಬಹುದೇ? ಎಲ್ಲ ಆತಂಕ, ಅಸಮಾನತೆಗಳು ದೂರವಾಗಿ ಅವಳೂ ನೆಮ್ಮದಿಯಾಗಿ ಬದುಕುವ ದಿನಗಳು ಬರಬಹುದೇ?.. ಇಲ್ಲ! ಸದ್ಯದ ಪರಿಸ್ಥಿತಿಯನ್ನು ನೋಡಿದರೆ ಇಂಥದೊಂದು ಸುಂದರ ಪರಿಸರ ನಿರ್ಮಾಣವಾಗುವುದು ಸಾಧ್ಯವೇ ಇಲ್ಲ ಎನ್ನಿಸುತ್ತದೆ.

ಈ ಸಮಸ್ಯೆ ಇಷ್ಟು ಗಂಭೀರವಾಗಿರುವಾಗ ಅದನ್ನು ಸರಿಪಡಿಸಲು ಪ್ರತಿಯೊಬ್ಬರೂ ಪ್ರಯತ್ನ ಮಾಡಲೇಬೇಕಲ್ಲವೇ? ಕೆಲವು ದಿನಗಳ ಹಿಂದೆ ಮುಂಬೈಯಲ್ಲಿ ಅನೇಕ ಪ್ರಜ್ಞಾವಂತ ಮಹಿಳೆಯರು ಸೇರಿಕೊಂಡು ಭ್ರೂಣ ಹತ್ಯೆಯ ವಿರುದ್ಧ ಚಳವಳಿ ಮಾಡಿದ್ದರು. ಅದು ಕೆಲವೇ ಮಹಿಳೆಯರ ಗದ್ದಲವಾಗದೇ ರಾಷ್ಟ್ರಮಟ್ಟದ ಚಳವಳಿಯಾಗಬೇಕು. ಅದನ್ನು ವ್ಯವಸ್ಥಿತವಾಗಿ ನಡೆಸಬೇಕು. ಮದರ್ ಥೆರೆಸಾರವರ ಮಾತು ಇಲ್ಲಿ ನೆನಪಿಸಿಕೊಳ್ಳುವಂತೆ ಇದೆ. ''ಭ್ರೂಣ ಹತ್ಯೆ ಮಾಡಬೇಡಿರಿ, ಆ ಮಕ್ಕಳು ಬೇಡವಾಗಿದ್ದಲ್ಲಿ ನನಗೆ ಕೊಡಿ ನಾನು ಅವರನ್ನು ಸಾಕಿ ಸಲಹುತ್ತೇನೆ.''

ಸಾಮಾನ್ಯ ಜನರಷ್ಟೇ ಅಲ್ಲ, ಸರ್ಕಾರಗಳೂ ಸ್ತ್ರೀ ಸಾಕ್ಷರತೆ, ಸಮಾನತೆ ಎಂಬ ಶಬ್ದಗಳನ್ನು ಬರೀ ಕಡತಗಳಲ್ಲಿಡದೆ ಅವುಗಳ ಅನುಸ್ಠಾನಕ್ಕೆ ಪ್ರಯತ್ನಿಸಬೇಕು. ಅಲ್ಲದೆ ತಂದೆ ತಾಯಿಗಳು ತಮ್ಮ ಹೆಣ್ಣುಮಕ್ಕಳಿಗೂ, ಗಂಡುಮಕ್ಕಳಷ್ಟೇ ಸ್ವಾತಂತ್ರ್ಯ, ಸಮಾನತೆ, ಪ್ರೀತಿಯಿಂದ ಬೆಳೆಸಿ ಅವರು ತಮ್ಮ ಕಾಲ ಮೇಲೆ ತಾವು ನಿಲ್ಲುವಂಥ ಸ್ಥಿತಿ ನಿರ್ಮಿಸಬೇಕು. ಇವೆಲ್ಲಕ್ಕಿಂತ ಮುಖ್ಯವಾಗಿ ಮಹಿಳೆಯರು ತಾವು ಈ ಭೂಮಿಯ ಮೇಲೆ ಎಷ್ಟು ಮಹತ್ವದ ವ್ಯಕ್ತಿಗಳು ಎಂಬುದನ್ನು ಅರಿತು, ಸ್ವತಂತ್ರವಾಗಿ ಯೋಚಿಸುವ ಶಕ್ತಿಯನ್ನು ಬೆಳೆಸಿಕೊಂಡಲ್ಲಿ ತಮ್ಮ ಅಸ್ತಿತ್ವವನ್ನು ಭದ್ರವಾಗಿ ಮಾಡಿಕೊಂಡಲ್ಲಿ ಈ ಸಮಸ್ಯೆ ತನ್ನಿಂದ ತಾನೇ ಮಾಯವಾಗುತ್ತದೆ. ■






ರಾಜ್ಯವಾರು ಪುರುಷರ ಮತ್ತು ಸ್ತ್ರೀಯರ ಪ್ರಮಾಣ 1981-1991
(ಪ್ರತಿ 1000 ಪುರುಷರಿಗೆ ಸ್ತ್ರೀಯರ ಪ್ರಮಾಣ)

ರಾಜ್ಯಗಳು	1981	1991
ಆಂಧ್ರಪ್ರದೇಶ	900	972
ಅರುಣಾಚಲ ಪ್ರದೇಶ	870	859
ಅಸ್ಸಾಂ	976	923
ಬಿಹಾರ	946	911
ಗೋವಾ	981	967
ಗುಜರಾತ್	942	934
ಹರಿಯಾಣ	877	865
ಹಿಮಾಚಲ ಪ್ರದೇಶ	988	976
ಜಮ್ಮು ಮತ್ತು ಕಾಶ್ಮೀರ	899	923
ಕರ್ನಾಟಕ	963	960
ಕೇರಳ	1034	
1036		
ಮಧ್ಯಪ್ರದೇಶ	941	931
ಮಹಾರಾಷ್ಟ್ರ	938	934
ಮಣಿಪುರ	972	958
ಮೇಘಾಲಯ	955	955
ಮಿಜೋರಾಂ	936	921
ನಾಗಾಲ್ಯಾಂಡ್	867	886
ಒರಿಸ್ಸಾ	982	971
ಪಂಜಾಬ್	886	882
ರಾಜಸ್ಥಾನ	921	919
ಸಿಕ್ಕಿಂ	837	818
ತಮಿಳುನಾಡು	978	972
ತ್ರಿಪುರಾ	948	945
ಉತ್ತರ ಪ್ರದೇಶ	886	879
ಪಶ್ಚಿಮ ಬಂಗಾಳ	911	917

ಕೇಂದ್ರಾಡಳಿತ ಪ್ರದೇಶಗಳು

ಅಂಡಮಾನ್ ಮತ್ತು ನಿಕೋಬಾರ್	761	818
ಚಂಡೀಗಢ	770	790
ದಾದ್ರಾ ಮತ್ತು ನಗರ ಹವೇಲಿ	974	952
ಡಯು ಮತ್ತು ಡಾಮನ್	981	969
ದೆಹಲಿ	810	827
ಲಕ್ಷದ್ವೀಪ	975	943
ಪಾಂಡಿಚೇರಿ	985	979



ಮಾಹಿತಿಯ ಮಂತ್ರದಂಡ

ಇಂಟರ್‌ನೆಟ್

■ ವಸುಧೇಂದ್ರ ಸರಾಫ್

ನೆರವು : ಗೋಪಾಕೃಷ್ಣ ಶೆಟ್ಟಿ

ಮಾಹಿತಿ ನಿಮ್ಮ ಬೆರಳ ತುದಿಯಲ್ಲಿರಲಿ

-ಬಿಲ್ ಗೇಟ್ಸ್

ನಿಮ್ಮ ಹಳ್ಳಿಯ ಮನೆಯಲ್ಲಿ ಕುಳಿತು- ಅಮೆರಿಕದ ಯಾವುದೋ ಸೂಪರ್ ಮಾರ್ಕೆಟ್‌ನಲ್ಲಿ ಏನಾದರೂ ಖರೀದಿಸಬೇಕೆ? ಜಪಾನಿನ ಮೂಲೆಯಲ್ಲಿರುವ ನಿಮ್ಮ ಮಗನೊಡನೆ ಹರಟಬೇಕೆ? ಸ್ವಿಟ್ಜರ್‌ಲ್ಯಾಂಡಿನ ಯಾವುದೋ ಬ್ಯಾಂಕಿನಲ್ಲಿರುವ ನಿಮ್ಮ ಖಾತೆಯ ಬ್ಯಾಲೆನ್ಸ್ ನೋಡಬೇಕೆ? ಲಂಡನ್‌ನಿಂದ ಬರ್ಮಿಂಗ್‌ಹ್ಯಾಂಗ್ ಟಿಕೆಟ್ ಖರೀದಿಸಿ ನಿಮ್ಮ ಪ್ರಯಾಣವನ್ನು ಖಾತ್ರಿ ಮಾಡಿಕೊಳ್ಳಬೇಕೆ?- ಎಲ್ಲವೂ ಸಾಧ್ಯ. ನಂಬಿಕೆಯಾಗುವುದಿಲ್ಲವೆ? ಬನ್ನಿ, ಅಂತರ್‌ಜಾಲ (Internet) ಎನ್ನುವ ಮಹಾಸಾಗರದ ದಡದಲ್ಲಿ ನಿಂತು ಅದರ ತುಷಾರದ ಅನುಭವವನ್ನಾದರೂ ಪಡೆಯೋಣ.

ಇಂಟರ್‌ನೆಟ್ ಎಂದರೇನು?

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ 'ಮಾಹಿತಿ' (Information) ಅತ್ಯಂತ ಮುಖ್ಯವಾದ ಆಸ್ತಿ. ಬಿಸಿ ಬಿಸಿಯಾದ ಮಾಹಿತಿಯಿಲ್ಲದಿದ್ದರೆ ನಾವು ಯಾವುದೇ ವ್ಯವಹಾರವನ್ನು ಮಾಡಲಾರೆವು. ಇಂತಹ ಮಾಹಿತಿಯನ್ನು ಶೇಖರಿಸಿಟ್ಟುಕೊಳ್ಳಲು ಮತ್ತು ಹಾಗೆ ಶೇಖರಿಸಿದ ಮಾಹಿತಿಯನ್ನು ಬಳಸಿಕೊಳ್ಳಲು ಕಂಪ್ಯೂಟರ್‌ನ ಉಪಯೋಗ ಪ್ರಾರಂಭವಾಯಿತು. ಆದರೆ ಕೆಲವೇ ದಿನಗಳಲ್ಲಿ ನಮಗೆ ಬೇಕಾದ ಮಾಹಿತಿ ಹೆಚ್ಚುತ್ತಾ ಹೋಗಿ ಬಳಸುತ್ತಿರುವ ಕಂಪ್ಯೂಟರ್ ಕೂಡಾ ಸಾಲದಾಯಿತು. ಆಗ, ಬಳಸುತ್ತಿರುವ ಕಂಪ್ಯೂಟರ್‌ನ ಶಕ್ತಿಯನ್ನು ಹೆಚ್ಚಿಸುವ ಪ್ರಯತ್ನ ನಡೆಯಿತಾದರೂ ಸ್ವಲ್ಪ ದಿನದಲ್ಲಿ ಅದೂ ತನ್ನ ಪರಾಕಾಷ್ಠೆಯನ್ನು ಮುಟ್ಟಿಬಿಟ್ಟಿತು. ಆಗ ಯಾರೋ ಬುದ್ಧಿವಂತರು ಒಂದು ಹೊಸ ಉಪಾಯವನ್ನು ಕಂಡು ಹಿಡಿದುಬಿಟ್ಟರು. ನಿಮಗೆ ಅತ್ಯಂತ ಮುಖ್ಯವಾದ ಮಾಹಿತಿಯನ್ನು ಮಾತ್ರ ನಿಮ್ಮ ಕಂಪ್ಯೂಟರ್‌ನಲ್ಲಿ ಇಟ್ಟುಕೊಳ್ಳಿ, ಮಿಕ್ಕ ಬೇರೆ ಬೇರೆ ಮಾಹಿತಿಗಳನ್ನು ಬೇರೆಯವರು ತಮ್ಮ ಕಂಪ್ಯೂಟರ್‌ನಲ್ಲಿ ಇಟ್ಟುಕೊಂಡಿದ್ದರೆ ಅದನ್ನು ನಿಮ್ಮ ಕಂಪ್ಯೂಟರ್‌ನಿಂದಲೇ ಪಡೆದುಕೊಳ್ಳಿ, ಅದೇ ರೀತಿಯಾಗಿ ಅವರೂ ನಿಮ್ಮ ಕಂಪ್ಯೂಟರ್‌ನಿಂದ ಮಾಹಿತಿಯನ್ನು ತಮ್ಮ ಕಂಪ್ಯೂಟರ್ ಮೂಲಕವೇ ಪಡೆದುಕೊಳ್ಳಬಹುದು. ಹೀಗೆ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಲು ನಿಮ್ಮ ಮತ್ತು ಇತರರ ಕಂಪ್ಯೂಟರ್‌ಗಳ ಮಧ್ಯೆ ಒಂದು ಸಂಪರ್ಕವನ್ನು ಏರ್ಪಡಿಸಿದರಾಯಿತು. ಈ ರೀತಿಯಾಗಿ ಸಂಪರ್ಕದ ಜಾಲವನ್ನು (Network) ಪ್ರಾರಂಭಿಸಿದ ಮೇಲೆ ಜಗತ್ತಿನ ಬೇರೆ ಬೇರೆ ಕಡೆಯಿಂದ ಕಂಪ್ಯೂಟರ್‌ಗಳು ತಮ್ಮ ಮಾಹಿತಿಯೊಂದಿಗೆ ಇದಕ್ಕೆ ಸೇರಲಾರಂಭಿಸಿದವು. ಹನಿ ಹನಿ ಗೂಡಿ ಮಹಾಸಮುದ್ರವಾಯ್ತು! ಇದೇ ಅಂತರ್‌ಜಾಲ ಅಥವಾ ಇಂಟರ್‌ನೆಟ್.

ಇದನ್ನು ಹೇಗೆ ಬಳಸಿಕೊಳ್ಳುವುದು?

ಮುಖ್ಯವಾಗಿ ಎರಡು ವಿಧದಲ್ಲಿ ಈ ಅಂತರ್‌ಜಾಲವನ್ನು ಬಳಸಿಕೊಳ್ಳಬಹುದು.

1. ಈ ಜಾಲದಲ್ಲಿರುವ ಕಂಪ್ಯೂಟರ್‌ಗಳಿಂದ ನಮಗೆ ಬೇಕಾದ ಮಾಹಿತಿಯನ್ನು ಪಡೆದುಕೊಳ್ಳುವುದು.
2. ನಮ್ಮಲ್ಲಿರುವ ಮಾಹಿತಿಯನ್ನು ಇತರರೂ ಪಡೆಯುವಂತೆ ಈ ಜಾಲದಲ್ಲಿ ಸೇರಿಸಿಬಿಡುವುದು.

ಹಾಗಿದ್ದರೆ ಇದರಲ್ಲಿ ಯಾವ ತರಹದ ಮಾಹಿತಿಗಳು ಸಿಗುತ್ತವೆ? ಎಂಬ ಪ್ರಶ್ನೆಗೆ ಉತ್ತರಿಸುವುದು ಸ್ವಲ್ಪ ಕಷ್ಟ. ಇದರಲ್ಲಿ ಎಷ್ಟೆಲ್ಲಾ ಮಾಹಿತಿಗಳು ಅಡಗಿವೆಯೆಂಬುದು ಯಾರಿಗೂ ಗೊತ್ತಿಲ್ಲ. ಏಕೆಂದರೆ ಇದು ಯಾರ ಸ್ವಂತ ಸ್ವತ್ತೂ ಅಲ್ಲ. ಜಗತ್ತಿನ ಮೂಲೆ ಮೂಲೆಗಳಿಂದ ಜನರು ತಮ್ಮ ಕಂಪ್ಯೂಟರ್‌ಗಳನ್ನು ಈ ಜಾಲಕ್ಕೆ ಸೇರಿಸಿ ಎಂತೆಂತಹ ಮಾಹಿತಿಗಳನ್ನು ಸೇರಿಸಿ ಬಿಟ್ಟಿದ್ದಾರೋ ಆ ಭಗವಂತನಿಗೇ ಗೊತ್ತು. ವ್ಯಕ್ತಿ, ಸ್ಥಳ, ಸಾಹಿತ್ಯ, ಸಂಗೀತ, ಉದ್ದಿಮೆಗಳು, ಉತ್ಪನ್ನಗಳು, ವಿಜ್ಞಾನ, ತಂತ್ರಜ್ಞಾನ, ವಿಚಾರ, ಧರ್ಮ, ವಾಣಿಜ್ಯ... ಒಂದೆ, ಎರಡೆ? ಈ ಮಾಹಿತಿಗಳು ಲಿಖಿತ, ಚಿತ್ರ, ಚಲನಚಿತ್ರ, ಧ್ವನಿ.... ಹೀಗೆ ಯಾವುದೇ ರೂಪದಲ್ಲಿರಬಹುದು. ಅಂತರ್‌ಜಾಲವೊಂದು ಮಾಹಿತಿಯ ಮಂತ್ರದಂಡ. ನಿಮಗೆ ಏನು ಬೇಕೋ ಅದನ್ನು ಕೇಳಿದರಾಯ್ತು, ಸಿಕ್ಕೇ ಬಿಡುತ್ತದೆ. ನಿಮ್ಮ ಊರಿನ ವಿಷಯವೂ ಇದರಲ್ಲಿ ಇದ್ದರೂ ಇರಬಹುದು ಎಂದರೆ ಆಶ್ಚರ್ಯ ಪಡಬೇಡಿ.

ಯಾವ ಕಾರಣಕ್ಕಾಗಿ ಇದರಲ್ಲಿ ಮಾಹಿತಿಯನ್ನು ಸೇರಿಸುತ್ತಾರೆ? ಎಂಬ ಕುತೂಹಲ ಉಂಟಾಗುತ್ತದೆ. ಅದು ಜಾಹೀರಾತು, ವಾಣಿಜ್ಯ, ಸುದ್ದಿ, ವ್ಯವಹಾರ, ಆಸಕ್ತಿ, ಉದ್ಯೋಗ- ಹೀಗೆ ಯಾವುದೇ ಕಾರಣಕ್ಕಾದರೂ ಆಗಿರಬಹುದು. ಈ ಅಂತರ್‌ಜಾಲವನ್ನು ಉಪಯೋಗಿಸುವ ಜನರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇರುವುದರಿಂದ ಇದೊಂದು ಶಕ್ತಿಯುತವಾದ ಮಾಧ್ಯಮವಾಗಿದೆ. ಜೊತೆಗೆ ಈ ಮಾಧ್ಯಮದಲ್ಲಿ ಮಾಹಿತಿಯನ್ನು ಬಿತ್ತರಿಸಲು ಹೆಚ್ಚು ಹಣವೂ ಬೇಕಿಲ್ಲವಾದ್ದರಿಂದ (ಉಳಿದ ಮಾಧ್ಯಮಗಳಿಗೆ ಹೋಲಿಸಿದರೆ) ಅಂತರ್‌ಜಾಲ ಅತ್ಯಂತ ಹೆಚ್ಚು ಜನಪ್ರಿಯವಾಗುತ್ತಿದೆ.

ಇದರ ಲಾಭಗಳೇನು?

ಸಾಕಷ್ಟು ಕ್ಷೇತ್ರಗಳಲ್ಲಿ ಈ ಅಂತರ್‌ಜಾಲದ ಉಪಯೋಗವಾಗುತ್ತಿದೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನು ನಾವಿಲ್ಲಿ ನೋಡೋಣ.

ಜಾಹೀರಾತು

ಇಂದು ವಾಣಿಜ್ಯ ಕೇವಲ ಒಂದು ರಾಜ್ಯಕ್ಕೆ ಅಥವಾ ದೇಶಕ್ಕೆ ಮಾತ್ರ ಸೀಮಿತವಾಗಿಲ್ಲ. ಪ್ರತಿಯೊಂದು ಕಂಪನಿಯೂ ಪ್ರಪಂಚದ ಪ್ರತಿಯೊಂದು ಭಾಗದಲ್ಲೂ ತನ್ನ ಗ್ರಾಹಕರನ್ನು ಸೃಷ್ಟಿಸಿಕೊಳ್ಳಲು ಹವಣಿಸುತ್ತಿದೆ. ಇಂತಹ ಉದ್ದೇಶಕ್ಕೆ ಪೂರಕವಾಗಿ ಅಂತರ್‌ಜಾಲ ಶಕ್ತಿಯುತ ಮಾಧ್ಯಮವಾಗುತ್ತದೆ. ಏಕೆಂದರೆ ಪ್ರಪಂಚದ ಯಾವುದೇ ಭಾಗದಲ್ಲಿದ್ದರೂ ಅಂತರ್‌ಜಾಲಕ್ಕೆ ಕೊಕ್ಕೆ ಹಾಕಿ ಮಾಹಿತಿಯನ್ನು ಪಡೆಯಬಹುದಾಗಿದೆ. ನಿಮ್ಮ ಕಂಪನಿಯ ಬಗ್ಗೆ, ಉತ್ಪಾದನೆಗಳ ಬಗ್ಗೆ, ಗುಣಮಟ್ಟದ ಬಗ್ಗೆ, ನಿಮ್ಮ ಕೌಶಲ್ಯಗಳ ಬಗ್ಗೆ, ಸೇವಾ ಶಕ್ತಿಯ ಬಗ್ಗೆ ಮಾಹಿತಿಯನ್ನು ಅಚ್ಚುಕಟ್ಟಾಗಿ ತಯಾರಿಸಿ ಅದನ್ನು ಈ ಜಾಲದಲ್ಲಿ ಸೇರಿಸಿ ಬಿಟ್ಟರಾಯ್ತು. ಕೆಲವೊಂದು ಉತ್ತಮ ಮಾಹಿತಿಗಳುಳ್ಳ ಕಂಪ್ಯೂಟರ್‌ಗಳಿಗೆ ದಿನಕ್ಕೆ ಕೋಟಿಗಟ್ಟಲೆ ಜನ ಲಗ್ಗೆ ಇಡುತ್ತಾರೆ ಎಂದರೆ ಹುಬ್ಬೇರಿಸಬೇಡಿ.


ಈ ಜಾಹೀರಾತು ಬರೀ ಕಂಪನಿಗಳಿಗೆ ಮಾತ್ರ ಸೀಮಿತವಾಗಿಲ್ಲ. ನೀವು ಉದ್ಯೋಗವನ್ನು ಪಡೆಯಲು ನಿಮ್ಮ ಅರ್ಹತೆ ಮತ್ತು ಅನುಭವಗಳನ್ನು ಪ್ರಕಟಿಸಿಕೊಳ್ಳಬಹುದು. ಮದುವೆಯಾಗಲು ಜಾತಕ ವನ್ನು ಹಾಕಿಕೊಳ್ಳಬಹುದು, ಮನೆಯಲ್ಲಿರುವ ಗುಜರಿ ವಸ್ತುವಿನ ಮಾರಾಟದ ಬಗ್ಗೆ ತಿಳಿಸಬಹುದು, ನಿಮ್ಮ ಹವ್ಯಾಸದ ಬಗ್ಗೆ ತಿಳಿಸಿ ಗೆಳೆಯರನ್ನು ಪಡೆಯಬಹುದು - ಹೀಗೆ.

ನಿಮ್ಮ ಜಾಹೀರಾತು ಎಷ್ಟು ಆಕರ್ಷಣೀಯವಾಗಿರುತ್ತದೋ ಅಷ್ಟು ಗಿರಾಕಿಗಳನ್ನು ಗಿಟ್ಟಿಸಬಹುದು. ಅಂದರೆ ಹೆಚ್ಚು ಹೆಚ್ಚು ಜನ ನಿಮ್ಮ ಜಾಹೀರಾತನ್ನು ನೋಡುವಂತೆ ಮಾಡಬಹುದು.

ವಾಣಿಜ್ಯ

ವಾಣಿಜ್ಯದ ಕಾರ್ಯಕ್ಷೇತ್ರ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದರಿಂದ, ಅಂತರ್‌ಜಾಲ ವಾಣಿಜ್ಯಕ್ಕೆ ಹೇಳಿ ಮಾಡಿಸಿದಂತಹ ಉಪಕರಣವಾಗಿದೆ. ಬ್ಯಾಂಕಿನ ವ್ಯವಹಾರ, ಸೂಪರ್ ಮಾರ್ಕೆಟ್, ವಿಮಾ ವ್ಯವಹಾರ, ಶೇರು ಮಾರುಕಟ್ಟೆ, ರಿಯಲ್ ಎಸ್ಟೇಟ್-ಹೀಗೆ ಎಲ್ಲಾ ಬಗೆಯ ವಾಣಿಜ್ಯಗಳನ್ನು ಅಂತರ್‌ಜಾಲದ ಮೂಲಕ ಮಾಡಬಹುದು.

ಉದಾಹರಣೆಗೆ ಸೂಪರ್ ಮಾರ್ಕೆಟನ್ನೇ ತೆಗೆದುಕೊಳ್ಳಿ, ನೀವು ಅಂತರ್‌ಜಾಲದಲ್ಲಿ ಈ ಸೂಪರ್ ಮಾರ್ಕೆಟನ್ನು ಪ್ರವೇಶಿಸಿದಿರೆಂದುಕೊಳ್ಳಿ, ಆಗ ನಿಮ್ಮ ಕಂಪ್ಯೂಟರ್‌ನಲ್ಲಿ ಆ ಸೂಪರ್ ಮಾರ್ಕೆಟ್‌ನ ಚಿತ್ರ ಬಂದು ಬಿಡುತ್ತದೆ. ಇದು ಬರೀ ಜಡ ಚಿತ್ರವಲ್ಲ. ಇದರಲ್ಲಿ ನೀವು ನಿಮ್ಮ ಮೌಸ್(ಕಂಪ್ಯೂಟರ್ ಉಪಕರಣ) ಅನ್ನು ಉಪಯೋಗಿಸಿ ಆ ಸೂಪರ್ ಮಾರ್ಕೆಟ್‌ನಲ್ಲೆಲ್ಲಾ ಅಡ್ಡಾಡಬಹುದು. ಆ ಕ್ಷಣದಲ್ಲಿ ಆ ಸೂಪರ್ ಮಾರ್ಕೆಟ್‌ನಲ್ಲಿ ಯಾವ ಯಾವ ವಸ್ತುಗಳಿವೆಯೋ ಅವನ್ನೆಲ್ಲಾ ನಿಮ್ಮ ಕಂಪ್ಯೂಟರ್‌ನಲ್ಲಿ ಕಾಣಬಹುದು. ನಿಮಗೆ ಅಗತ್ಯವಿರುವ ವಸ್ತುಗಳನ್ನೆಲ್ಲಾ ಆಯ್ಕೆ ಮಾಡಿಕೊಂಡು ಅದನ್ನೊಂದು ಪುಟ್ಟಿಯಲ್ಲಿ ಹಾಕಿ ಕೊಳ್ಳಬಹುದು(ಆ ಪುಟ್ಟಿಯೂ ಕಂಪ್ಯೂಟರ್‌ನಲ್ಲಿಯೇ ಇರುತ್ತದೆ). ನಂತರ ನಿಮ್ಮ ವಿಳಾಸ ಮತ್ತು ಕ್ರೆಡಿಟ್ ಕಾರ್ಡ್ ಮಾಹಿತಿಯನ್ನು ಕಂಪ್ಯೂಟರ್ ಮೂಲಕವೇ ಆ ಸೂಪರ್ ಮಾರ್ಕೆಟ್‌ನವರಿಗೆ ತಿಳಿಸಿಬಿಟ್ಟರಾಯ್ತು. ಒಂದೆರಡು ಗಂಟೆಗಳಲ್ಲಿ ಅವನ್ನೆಲ್ಲಾ ಪ್ಯಾಕ್ ಮಾಡಿ ಸೂಪರ್ ಮಾರ್ಕೆಟ್‌ನವರು ನಿಮ್ಮ ಮನೆಗೆ ಕಳುಹಿಸಿಬಿಡುತ್ತಾರೆ. ಈ ರೀತಿಯ ವಾಣಿಜ್ಯದ ಮಾಹಿತಿಗಳು ಎಷ್ಟು ನಿಖರವಾಗಿರುತ್ತವೆಂದರೆ, ಮತ್ತೊಮ್ಮೆ ನಿಮ್ಮ ಕಂಪ್ಯೂಟರ್ ಮೂಲಕ ಆ ಸೂಪರ್ ಮಾರ್ಕೆಟ್‌ನ್ನು ಪ್ರವೇಶಿಸಿದರೆ, ನೀವೀಗಾಗಲೇ ಖರೀದಿಸಿರುವ ವಸ್ತುಗಳು ಅಲ್ಲಿ ಮಾಯವಾಗಿರುತ್ತವೆ! ಈ ರೀತಿಯ ವಾಣಿಜ್ಯದಿಂದ ಎಷ್ಟೊಂದು ಸಮಯದ ಉಳಿತಾಯವಾಗುತ್ತದೆಂದು ಊಹಿಸಬಲ್ಲಿರಲ್ಲವೆ? ಜೊತೆಗೆ ವಾಯು ಮಾಲಿನ್ಯದ ರಸ್ತೆಗಳಲ್ಲಿ ಚಲಿಸುವುದಾಗಲಿ, ಕಾಲು ನೋವು ಬರುವಂತೆ ಆ ಸೂಪರ್ ಮಾರ್ಕೆಟ್‌ನಲ್ಲಿ ಓಡಾಡುವುದಾಗಲಿ ಇಲ್ಲ. ಕಡೆಗೆ ಆ ಸೂಪರ್ ಮಾರ್ಕೆಟ್ ಊರಿನ ಯಾವ ಭಾಗದಲ್ಲಿದೆ ಎಂದೂ ನೀವು ತಿಳಿದುಕೊಂಡಿರಬೇಕಿಲ್ಲ.



ಇದೇ ರೀತಿಯಾಗಿ ಬೇರೆ ಬೇರೆ ವ್ಯವಹಾರಗಳನ್ನು ಈ ಅಂತರ್‌ಜಾಲದ ಮೂಲಕ ಮಾಡಬಹುದು. ಸಾಮಾನ್ಯವಾಗಿ ಅಂತರ್‌ಜಾಲದ ಈ ಎಲ್ಲಾ ವ್ಯವಹಾರಗಳಲ್ಲಿ ಹಣದ ವಿನಿಮಯ ಕ್ರೆಡಿಟ್ ಕಾರ್ಡ್‌ನ ಮೂಲಕವೇ ಆಗುತ್ತದೆ. ಆದರೆ ಭಾರತದಲ್ಲಿ ಇನ್ನೂ ಕ್ರೆಡಿಟ್ ಕಾರ್ಡ್‌ನ ಬಳಕೆ ಹೆಚ್ಚಿಲ್ಲವಾದ್ದರಿಂದ ಅಂತರ್‌ಜಾಲದಲ್ಲಿ ಭಾರತದ ವಾಣಿಜ್ಯ ಹೆಚ್ಚಾಗಿ ನಡೆಯುತ್ತಿಲ್ಲ.

ಎಲೆಕ್ಟ್ರಾನಿಕ್ ಅಂಚೆ (ಇ.ಮೇಲ್)

ಈ ಅಂತರ್‌ಜಾಲದಲ್ಲಿ ಸಾಕಷ್ಟು ಅಂಚೆ ಕಛೇರಿಗಳಿವೆ. ಇವು ಮತ್ತೇನೂ ಅಲ್ಲ, ಅಂಚೆ ಕಛೇರಿಯಂತೆ ಕಾರ್ಯ ನಿರ್ವಹಿಸುವ ಅಂತರ್‌ಜಾಲಕ್ಕೆ ಸೇರಿರುವ ಕಂಪ್ಯೂಟರ್‌ಗಳು ಅಷ್ಟೇ! ಈ ಅಂಚೆ ಕಛೇರಿಗೆ ಭೇಟಿ ಕೊಟ್ಟು ನಿಮ್ಮ ವಿಳಾಸವನ್ನು ಅವರಿಗೆ ತಿಳಿಸಬಹುದು. ಈವಿಳಾಸ ಸಾಮಾನ್ಯವಾಗಿ '(ನಿಮ್ಮ ಹೆಸರು) @ (ಕಂಪ್ಯೂಟರ್ ವಿಳಾಸ)' ದಂತೆ ಇರುತ್ತದೆ. ಈ ವಿಳಾಸವನ್ನು ಅಂತರ್‌ಜಾಲ ಉಪಯೋಗಿಸುವ ನಿಮ್ಮ ಸ್ನೇಹಿತರಿಗೆ ಕೊಟ್ಟರಾಯ್ತು. ಅವರು ಅದಕ್ಕೆ ಪತ್ರ ಹಾಕಿದರೆ ಅದು ನಿಮ್ಮ ವಿಳಾಸಕ್ಕೆ ಬಂದು ಸೇರುತ್ತದೆ. ಜಗತ್ತಿನ ಯಾವುದೇ ಮೂಲೆಯಿಂದಲಾದರೂ ಈ ಅಂತರ್‌ಜಾಲಕ್ಕೆ ಕೈ ಚಾಚಬಹುದಾದ್ದರಿಂದ, ನೀವು ಎಲ್ಲೇ ಇದ್ದರೂ ನಿಮಗೆ ಬಂದ ಎಲ್ಲಾ ಪತ್ರಗಳನ್ನು ಓದಬಹುದು! ಅದೇ ರೀತಿ ನೀವೂ ಇಂತಹ ಅಂಚೆ ಕಛೇರಿಗಳಲ್ಲಿ ವಿಳಾಸಗಳನ್ನು ಪಡೆದುಕೊಂಡಿರುವ ಇತರರಿಗೆ ಪತ್ರಗಳನ್ನು ಹಾಕಬಹುದು. ಈ ರೀತಿಯಿಂದ ಪತ್ರ ಬರೆದಾಗ, ಪೋಸ್ಟ್ ಮಾಡಿದ ಕ್ಷಣದಲ್ಲಿಯೇ ಪುಕ್ಕಟೆಯಾಗಿ ತಲುಪಿಬಿಡುತ್ತದೆ.

ಆದರೆ ಈ ರೀತಿಯಾಗಿ ಅಂಚೆ ಕಛೇರಿಯನ್ನು ಮಾಡಿ, ನಿಮಗೆ ಸೌಲಭ್ಯ ಒದಗಿಸುವುದರಿಂದ ಅದನ್ನು ನಿರ್ವಹಿಸುವ ಉದ್ದಿಮೆಗೆ ಆಗುವ

ಲಾಭವಾದರೂ ಏನು? ಎಂದು ಅನುಮಾನ ವಾಗುತ್ತದಲ್ಲವೆ, ಇರಿ. ಅದನ್ನೂ ಹೇಳುತ್ತೇನೆ.

ನೀವು ನಿಮಗೆ ಬಂದ ಪತ್ರಗಳನ್ನು ಓದುವಾಗ, ಆ ಸಾಲುಗಳ ಮಧ್ಯದಲ್ಲಿ, ಹಿಂದೆ-ಮುಂದೆ, ಅಕ್ಕ-ಪಕ್ಕ ಲೀಲಾಜಾಲವಾಗಿ ಜಾಹೀರಾತುಗಳನ್ನು ತುಂಬಿಸಿ ಬಿಡುತ್ತಾರೆ. ಇಂತಹ ಜಾಹೀರಾತು ನೀಡಿದ ಉದ್ದಿಮೆಯಿಂದ ಕೋಟಿ ಗಟ್ಟಲೆ ಹಣ ಕೀಳುತ್ತಾರೆ. ಎಷ್ಟೆಷ್ಟು ಜನ ಅಂಚೆ ಕಛೇರಿಯನ್ನು ಉಪಯೋಗಿಸುತ್ತಾ ಈ ರೀತಿಯ ಜಾಹೀರಾತುಗಳನ್ನು ನೋಡಿದ್ದಾರೆಂಬುದನ್ನು ಗಣನೆ ಮಾಡಬಹುದಾಗಿದೆ. ಹೆಚ್ಚು ಹೆಚ್ಚು ಜನ ನಿಮ್ಮ ಅಂಚೆ ಕಛೇರಿಗೆ ಭೇಟಿ ಕೊಡುತ್ತಾರೆಂದು ಖಚಿತವಾದರೆ, ಅಷ್ಟಷ್ಟು ಹೆಚ್ಚು ಜಾಹೀರಾತಿನ ಬೆಲೆಯನ್ನು ನೀವು ಹೆಚ್ಚಿಸಬಹುದು.

ಜಾಹೀರಾತಿನ ವ್ಯವಹಾರ ಏನೇ ಇರಲಿ, ಈ ಅಂಚೆ ಕಛೇರಿಗಳನ್ನು ಉಪಯೋಗಿಸುವುದರಿಂದ ನಮಗೆ ಸಾಕಷ್ಟು ಉಪಯೋಗಗಳಿವೆ ಎಂಬುದನ್ನು ಮಾತ್ರ ಅಲ್ಲಗಳೆಯುವಂತಿಲ್ಲ.

ಜ್ಞಾನ ಭಾಂಡಾರ


ಈ ಮುಂಚೆಯೇ ಹೇಳಿದಂತೆ ಅಂತರ್‌ಜಾಲದಲ್ಲಿ ಇರುವ ಮಾಹಿತಿ ಅಗಣಿತ. ಅದೊಂದು ಜ್ಞಾನದ ಭಾಂಡಾರ. ನಾವು ಅಂತರ್‌ಜಾಲವನ್ನು ಉಪಯೋಗಿಸಿಕೊಳ್ಳುವುದರಿಂದ ಆ ಜ್ಞಾನ ಭಾಂಡಾರವನ್ನು ಕೊಳ್ಳೆ ಹೊಡೆಯಬಹುದಾಗಿದೆ.

ಉದಾಹರಣೆಗೆ ನೀವೊಬ್ಬ ವಕೀಲರೆಂದಿಟ್ಟುಕೊಳ್ಳಿ. ನೀವು ತೆಗೆದುಕೊಂಡಿರುವ ಹೊಸ ಕೇಸೊಂದು ತುಂಬಾ ವಿಚಿತ್ರವಾಗಿದ್ದು ಅದನ್ನು ಹೇಗೆ ನಿರ್ವಹಿಸಬೇಕೆಂಬುದೇ ನಿಮಗೆ ತೋಚದಂತಾಗಿರಬಹುದು. ಆಗ ನೀವು ಸೀದಾ ಈ ಅಂತರ್‌ಜಾಲಕ್ಕೆ ಮೊರೆ ಹೋಗಿ, ನಿಮ್ಮ ಕೇಸಿನ ಮುಖ್ಯಾಂಶಗಳನ್ನು ತಿಳಿಸಿಬಿಟ್ಟರೆ ಆಯ್ತು. ಅಂತರ್‌ಜಾಲದಲ್ಲಿ ಇದಕ್ಕೆ ಸಂಬಂಧಿಸಿದಂತೆ ವಿವರಗಳೇನಾದರೂ ಇದ್ದರೆ (ಸಾಮಾನ್ಯವಾಗಿ ಇದ್ದೇ ಇರುತ್ತದೆ. ಬೇರೆ ಎಲ್ಲೋ ಇಂತಹ ಕೇಸನ್ನು ಎದುರಿಸಿದ ಸನ್ನಿವೇಶದ ಮಾಹಿತಿಯನ್ನು ಅಂತರ್ ಜಾಲದಲ್ಲಿ ಯಾರಾದರೂ ಸೇರಿಸಿಬಿಟ್ಟಿರುತ್ತಾರೆ), ಅದು ನಿಮಗೆ ಸಿಕ್ಕಿಬಿಡುತ್ತದೆ. ಆ ಮಾಹಿತಿಯನ್ನು ಉಪಯೋಗಿಸಿಕೊಂಡು ನೀವು ಕೇಸನ್ನು ಬಗೆಹರಿಸಿಕೊಳ್ಳಲು ಸಹಾಯವಾಗುವುದಿಲ್ಲವೆ?

ಇದೇ ರೀತಿ ಡಾಕ್ಟರರು, ಬರಹಗಾರರು, ಸಂಗೀತಗಾರರು, ಇಂಜಿನಿಯರುಗಳು, ಶ್ರೀ ಸಾಮಾನ್ಯರು- ಎಲ್ಲರೂ ಈ ಜ್ಞಾನ ಭಾಂಡಾರವನ್ನು ತಮ್ಮ ಕಾರ್ಯಕ್ಷೇತ್ರಕ್ಕೆ ಬೇಕಾಗುವಂತೆ ಉಪಯೋಗಿಸಿಕೊಳ್ಳಬಹುದಾಗಿದೆ. ಆದರೆ ಎಲ್ಲಾ ಮಾಹಿತಿಯೂ ಪುಕ್ಕಟ್ಟೆಯಾಗಿ ಸಿಗುವುದಿಲ್ಲ.


ಇಂಟರ್‌ನೆಟ್‌ಗೆ ಮೂರು ದಾರಿ

1 ದೂರವಾಣಿ ಮೂಲಕ




ಈಗಾಗಲೇ ಒಂದು ದೂರವಾಣಿ ಸಂಪರ್ಕ ಹಾಗೂ ಕಂಪ್ಯೂಟರ್ ಹೊಂದಿದವರಿಗೆ ಎಂ.ಟಿ.ಎನ್.ಎಲ್. ನವರು ಇಂಟರ್‌ನೆಟ್ ಪಡೆಯಲು ಸುಲಭ ಅವಕಾಶ ಕಲ್ಪಿಸಿದ್ದಾರೆ. ವಿ.ಎಸ್.ಎನ್.ಎಲ್.ನವರಿಗಿಂತ ಶೇ. 30 ರಷ್ಟು ಕಡಿಮೆ ದರದಲ್ಲಿ ಲಭ್ಯವಾಗಲಿರುವ ಈ ಸೌಲಭ್ಯ ಮಹಾನಗರಗಳಿಗೆ ಮಾತ್ರ ಸೀಮಿತ.

2 ಕೇಬಲ್ ಮೂಲಕ



ರೂ.45000 ಖರ್ಚು ಮಾಡಿ ಕಂಪ್ಯೂಟರ್ ಖರೀದಿಸುವ ಆರ್ಥಿಕ ಶಕ್ತಿ ನಿಮಗಿಲ್ಲವೇ? ಅದಕ್ಕಾಗಿ ಚಿಂತಿಸಬೇಕಾಗಿಲ್ಲ. ನಿಮ್ಮ ಮನೆಯಲ್ಲಿರುವ ಟಿ.ವಿ.ಯನ್ನೇ ಇಂಟರ್‌ನೆಟ್ ಸಂಪರ್ಕಕ್ಕಾಗಿ ಬಳಸಲು ಸಾಧ್ಯ. ಕೇಬಲ್ ಮೂಲಕ ಪಡೆಯುವ ಇಂಟರ್‌ನೆಟ್ ಸಂಪರ್ಕಕ್ಕೆ ಕೇವಲ ರೂ. 10000 ಖರ್ಚಾಗುತ್ತದೆ.

3 ಉಪಗ್ರಹ ಮೂಲಕ



ಹಣ ವ್ಯಯಿಸಲು ಅಭ್ಯಂತರವಿರದಿದ್ದರೆ ನೀವು ನೇರವಾಗಿ ಉಪಗ್ರಹ ಮೂಲಕವೇ ಇಂಟರ್‌ನೆಟ್ ಸೌಲಭ್ಯ ಪಡೆಯಬಹುದು. ಅದಕ್ಕಾಗಿ ಮಾನಿಟರ್‌ಗೆ ಜೋಡಿಸುವ ಡಿಶ್ ಆ್ಯಂಟೆನಾ ಖರೀದಿಸಬೇಕಾಗುತ್ತದೆ. ನಿಮ್ಮ ಜೇಬಿಗೆ ಬೀಳುವ ಹೊರೆ ರೂ. 100000 ಮಾತ್ರ! ಹಾಂ, ಈ ಸೌಕರ್ಯಕ್ಕಾಗಿ ಇನ್ನೂ ಕೆಲ ಕಾಲ ಕಾಯುವುದು ಅನಿವಾರ್ಯ.

ಕೆಲವೊಮ್ಮೆ ತುಂಬಾ ಮಹತ್ವದ ಮಾಹಿತಿಗಳನ್ನು ಹಣ ನೀಡಿ (ಕ್ರೆಡಿಟ್ ಕಾರ್ಡಿನ ಮೂಲಕ) ಪಡೆಯಬೇಕಾಗುತ್ತದೆ.

ಹರಟೆ, ಶಿಕ್ಷಣ, ಮನೋರಂಜನೆ

ಸಮಾನ ಆಸಕ್ತಿ ಉಳ್ಳವರು ಮಾತನಾಡಲು, ಹರಟೆ ಹೊಡೆಯಲು ವೇದಿಕೆಗಳಿರುತ್ತವೆ. ಎಷ್ಟೋ ವಿಶ್ವವಿದ್ಯಾಲಯಗಳು ತಮ್ಮ ಶಿಕ್ಷಣವನ್ನು ಈ ಅಂತರ್‌ಜಾಲದ ಮೂಲಕ ನೀಡುತ್ತವೆ. ಅದೇ ರೀತಿಯಲ್ಲಿ ಮನೋರಂಜನೆಗೂ ಸಾಕಷ್ಟು ಅವಕಾಶವಿದೆ.

ಈ ರೀತಿಯಾಗಿ ಅಂತರ್‌ಜಾಲದ ಲಾಭಗಳನ್ನು ಪಟ್ಟಿ ಮಾಡುತ್ತಲೇ ಹೋಗಬಹುದು. ಆದರೆ ಅಂತರ್‌ಜಾಲವೊಂದು ಮಾಹಿತಿಯ ಮಹಾಸಾಗರ ಮತ್ತು ಅದನ್ನು ಜಗತ್ತಿನ ಯಾವ ಮೂಲೆಯಿಂದಲಾದರೂ ಪಡೆದುಕೊಳ್ಳಬಹುದು ಎಂಬುದನ್ನು ಅರ್ಥ ಮಾಡಿಕೊಂಡರೆ ಸಾಕು. ಆಗ ನೀವೇ ಅದರಿಂದ ಆಗಬಹುದಾದ ಇನ್ನಷ್ಟು ಹೆಚ್ಚಿನ ಲಾಭಗಳನ್ನು ಹೇಳಬಲ್ಲಿರಿ.

ಸಂಪರ್ಕಿಸುವುದು ಹೇಗೆ?

ಮೂರು ಬಗೆಯಲ್ಲಿ ಈ ಅಂತರ್‌ಜಾಲವನ್ನು ಸಂಪರ್ಕಿಸಬಹುದಾಗಿದೆ.

ದೂರವಾಣಿಯ ಮುಖಾಂತರ

ಪ್ರಪಂಚದಾದ್ಯಂತ ತುಂಬಾ ಜನರು ತಮ್ಮ ಸ್ವಂತದ ಉಪಯೋಗಕ್ಕಾಗಿ ಈ ವಿಧಾನದಿಂದ ಅಂತರ್‌ಜಾಲವನ್ನು ಸಂಪರ್ಕಿಸುತ್ತಾರೆ. ಇದಕ್ಕೆ ಬೇಕಾಗುವ ವಸ್ತುಗಳ ವಿವರಣೆ ಹೀಗಿದೆ.

ಒಂದು ಕಂಪ್ಯೂಟರ್ (ಸುಮಾರು 25,000 ರಿಂದ 50,000ದವರೆಗೆ ದರವಿದೆ)

ಒಂದು ದೂರವಾಣಿ

ಒಂದು ಒಳ್ಳೆಯ ಮೋಡಂ(ಸುಮಾರು 2,000 ದಿಂದ 4,000ದವರೆಗೆ ದರವಿದೆ)

ಅಂತರ್‌ಜಾಲಕ್ಕೆ ಅನುಕೂಲಕರವಾದ ಒಂದು ಆಪರೇಟಿಂಗ್ ಸಿಸ್ಟಂ (ಸಾಮಾನ್ಯವಾಗಿ ವಿಂಡೋಸ್ 95 ಅನ್ನು ಹೆಚ್ಚು ಬಳಸಲಾಗುತ್ತದೆ) ಮತ್ತು ಅಂತರ್‌ಜಾಲವನ್ನು ಜಾಲಾಡಲು ಅನುಕೂಲವಾಗುವಂತಹ ಒಂದು ಲಘುವರ (software)-ಈ ಲಘುವರ ಸಾಮಾನ್ಯವಾಗಿ ಉಚಿತವಾಗಿಯೇ ಸಿಗುತ್ತದೆ. Internet Explorer ಮತ್ತು Netscape ಸಾಕಷ್ಟು ಪ್ರಚಲಿತವಾಗಿರುವ ಲಘುವರಗಳಾಗಿವೆ.

ಇಷ್ಟೇ ಅಲ್ಲದೆ, ವಿದ್ಯುತ್, ಕುರ್ಚಿ, ಮೇಜು, ಸ್ಟೆಬಿಲೈಜರ್ ಮುಂತಾದವು ಬೇಕಾಗುತ್ತವೆ.

ಜಗತ್ತಿನಲ್ಲಿ ಸಾಕಷ್ಟು ಕಂಪನಿಗಳು ನಮಗೆ ಅಂತರ್‌ಜಾಲದ ಸಂಪರ್ಕದ ಸೇವೆಯನ್ನು ನೀಡುತ್ತವೆ. ಇಂತಹ ಕಂಪನಿಗಳಿಗೆ ISP ಎಂದು ಕರೆಯುತ್ತಾರೆ. ಸದ್ಯ ಭಾರತದಲ್ಲಿ ವಿ.ಎಸ್.ಎನ್.ಎಲ್. ಮಾತ್ರ ಈ ಸೌಲಭ್ಯವನ್ನು ಒದಗಿಸುತ್ತಿದೆ. ಆದರೆ ಇತ್ತೀಚಿನ ಕೇಂದ್ರ ಸರ್ಕಾರದ ನಿರ್ಧಾರದಿಂದಾಗಿ ಖಾಸಗಿ ಕಂಪನಿಗಳೂ ಈ ಸೇವೆಯನ್ನು ಒದಗಿಸಬಹುದಾದ್ದರಿಂದ, ಕೆಲವೇ ದಿನಗಳಲ್ಲಿ ಸಾಕಷ್ಟು ISP ಗಳು ನಮ್ಮ ದೇಶದಲ್ಲೂ ತಲೆಯೆತ್ತುತ್ತವೆ.

ನಾವು ನಮ್ಮ ಕಂಪ್ಯೂಟರ್ ಮೂಲಕ ಈ ISP ಗಳಿಗೆ ದೂರವಾಣಿ ಕರೆಯನ್ನು ಮಾಡಬೇಕು. ಆಗ ಅವರು ನಿಮ್ಮ ಕಂಪ್ಯೂಟರ್‌ಗೆ ಅಂತರ್‌ಜಾಲದ ಸಂಪರ್ಕವನ್ನು ಕಲ್ಪಿಸುತ್ತಾರೆ. ಅವರಿಂದ ದೂರವಾಣಿ ತರಂಗಗಳಲ್ಲಿ ಬಂದ ಮಾಹಿತಿಯನ್ನು ಅರ್ಥಪೂರ್ಣವಾಗಿ ಪರಿವರ್ತಿಸುವ ಕೆಲಸವನ್ನು ನಿಮ್ಮ ಮೋಡಂ ಮಾಡುತ್ತದೆ. ನೀವು ನಿಮ್ಮ ಕಂಪ್ಯೂಟರ್‌ನಲ್ಲಿರುವ ವಿಶೇಷ ಲಘುವರದ ಮೂಲಕ ಅಂತರ್‌ಜಾಲವನ್ನು ನೋಡಬಹುದು. ಆದರೆ ನೀವು ಈ ಅಂತರ್‌ಜಾಲವನ್ನು ಉಪಯೋಗಿಸುತ್ತಿರುವವರೆಗೆ ನೀವು ದೂರವಾಣಿಯನ್ನು ಉಪಯೋಗಿಸುತ್ತಿದ್ದಂತೆಯೇ ಲೆಕ್ಕ. ಆದ್ದರಿಂದ ನಿಮ್ಮ ತಿಂಗಳ ದೂರವಾಣಿ ಬಿಲ್ಲಿನಲ್ಲಿ ಈ ಕರೆಗಳೂ ಸೇರಿಕೊಂಡಿರುತ್ತವೆ.

ಈ ರೀತಿಯ ಸೇವೆಯನ್ನು ಪಡೆಯಲು ನಾವು ISP ಗಳಿಗೆ ಹಣ ಕೊಡಬೇಕಾಗುತ್ತದೆ. ಈಗ ವಿ.ಎಸ್.ಎನ್.ಎಲ್. ನವರು ಒಂದು ವರ್ಷಕ್ಕೆ ಪಡೆಯುತ್ತಿರುವ ಹಣದ ವಿವರ ಈ ಕೆಳಗಿನಂತಿದೆ.

100 ತಾಸುಗಳವರೆಗೆ ಅಂತರ್‌ಜಾಲವನ್ನು ಉಪಯೋಗಿಸಿದರೆ - 3,000 ರೂಪಾಯಿ

250 ತಾಸುಗಳವರೆಗೆ ಅಂತರ್‌ಜಾಲವನ್ನು ಉಪಯೋಗಿಸದರೆ - 6,500 ರೂಪಾಯಿ

500 ತಾಸುಗಳವರೆಗೆ ಅಂತರ್‌ಜಾಲವನ್ನು ಉಪಯೋಗಿಸಿದರೆ - 10,000 ರೂಪಾಯಿ.

ನೀವು ಅಂತರ್‌ಜಾಲವನ್ನು 500 ತಾಸಿಗಿಂತಲೂ ಹೆಚ್ಚಿಗೆ ಉಪಯೋಗಿಸಿದರೆ ತಾಸಿಗೆ 30 ರೂಪಾಯಿಯಂತೆ ಹೆಚ್ಚಿಗೆ ಕೊಡಬೇಕಾಗುತ್ತದೆ.

ಇಷ್ಟೇ ಅಲ್ಲದೆ ಪ್ರಾರಂಭದಲ್ಲಿ ನೋಂದಾವಣೆಗೆ 500 ರೂಪಾಯಿಗಳನ್ನು ಕೊಡಬೇಕಾಗುತ್ತದೆ.

ಆದರೆ ಇನ್ನು ಮುಂದೆ ಖಾಸಗಿ ಕಂಪನಿಗಳು ಅಂತರ್‌ಜಾಲದ ಸೇವೆ ಒದಗಿಸುವುದರಿಂದ ಈ ಬೆಲೆಗಳು ಕಡಿಮೆಯಾಗಬಹುದೆಂಬ ನಿರೀಕ್ಷೆಯಿದೆ.

ಸಾಮಾನ್ಯವಾಗಿ ಈ ವಿ.ಎಸ್.ಎನ್.ಎಲ್. ಶಾಖೆಗಳು ನಗರಗಳಲ್ಲಿ ಮಾತ್ರವಿರುವುದರಿಂದ, ಇತರರು ಈ ಕಂಪನಿಗಳಿಂದ ಸೇವೆಯನ್ನು ಉಪಯೋಗಿಸಬೇಕೆಂದರೆ ಎಸ್.ಟಿ.ಡಿ. ಮಾಡಬೇಕಾಗುತ್ತದೆ. ಆದರೆ ಖಾಸಗೀಕರಣದಿಂದಾಗಿ ನಿಮ್ಮೂರಲ್ಲೂ ಇಂತಹ ISP ಗಳು ತಲೆ ಎತ್ತುವ ಕಾಲ ಹತ್ತಿರದಲ್ಲೇ ಇದೆ.

ಉಪಗ್ರಹಗಳ ಮೂಲಕ

ಇದು ಲಕ್ಷಾಂತರ ರೂಪಾಯಿಗಳ ಖರ್ಚಿನ ಬಾಬತ್ತು. ಇಲ್ಲಿ ದೂರವಾಣಿಯನ್ನು ಉಪಯೋಗಿಸದೆ, ಒಂದು ಡಿಶ್ ಅಂಟೆನಾವನ್ನು ಉಪಯೋಗಿಸಿ ನೇರವಾಗಿ ಉಪಗ್ರಹದ ಮೂಲಕ ISPಗಳನ್ನು ಸಂಪರ್ಕಿಸಬಹುದು. ಸಾಮಾನ್ಯವಾಗಿ ದೊಡ್ಡ ದೊಡ್ಡ ಕಂಪನಿಗಳು ಈ ವಿಧಾನವನ್ನು ಅನುಸರಿಸುತ್ತವೆ. ಇದರಲ್ಲಿ ಅಂತರ್‌ಜಾಲದಿಂದ ಮಾಹಿತಿಗಳನ್ನು ಹೆಚ್ಚು ತೀಕ್ಷ್ಣವಾಗಿ ಹುಡುಕಬಹುದು.

ಕೇಬಲ್ ಮೂಲಕ


ಇದಕ್ಕೆ ಕಂಪ್ಯೂಟರ್‌ನ ಬದಲಾಗಿ ನಿಮ್ಮ ಮನೆಯಲ್ಲಿಯೇ ಇರುವ ಟಿ.ವಿಯನ್ನು ಉಪಯೋಗಿಸಬಹುದು. ಕೀ ಬೋರ್ಡ್ ಮತ್ತು ಮೌಸ್ ಅನ್ನು ನಿಮ್ಮ ಟಿ.ವಿ. ಗೆ ಜೋಡಿಸಿ, ಅಂತರ್‌ಜಾಲವನ್ನು ಸಂಪರ್ಕಿಸಲು ಕೇಬಲ್ ಅನ್ನು ಹಾಕಿಕೊಂಡು, ಒಂದು ಮೋಡಂ ಹಾಗೂ ವಿಶೇಷ ಉಪಕರಣದಿಂದ ಅಂತರ್‌ಜಾಲವನ್ನು ಉಪಯೋಗಿಸುವ ಸಲುವಾಗಿ ನಿಮ್ಮ ಟಿ.ವಿ. ಯನ್ನು ಕಂಪ್ಯೂಟರ್ ಆಗಿ ಪರಿವರ್ತಿಸಬಹುದಾಗಿದೆ. ಆದರೆ ಈ ವಿಧಾನ ಭಾರತದಲ್ಲಿ ಇನ್ನೂ ಆಚರಣೆಗೆ ಬಂದಿಲ್ಲ. ಆದರೆ ಶೀಘ್ರದಲ್ಲಿಯೇ ಬರುವ ಸಾಧ್ಯತೆಗಳಿವೆ. ಇದಕ್ಕೆ ವರ್ಷಕ್ಕೆ 10,000ದಷ್ಟು ಹಣವನ್ನು ಕೊಡಬೇಕಾಗಬಹುದೆಂದು ನಿರೀಕ್ಷಿಸಲಾಗಿದೆ.

ಸೈಬರ್ ಕೆಫೆ

ಮೇಲಿನ ವಿಧಾನಗಳಲ್ಲಿ ಸಾಕಷ್ಟು ಬಂಡವಾಳವನ್ನು ಹೂಡಬೇಕಾಗುತ್ತದೆ. ಆದರೆ ಅಂತಹ ಬಂಡವಾಳ ಹೂಡಿಕೆ ನಿಮಗೆ ಇಷ್ಟವಿಲ್ಲದಿದ್ದರೆ ಬೇರೆ ಒಂದು ಮಾರ್ಗವೂ ಉಂಟು. ಇತ್ತೀಚೆಗೆ ನಗರದ ಗಲ್ಲಿ ಗಲ್ಲಿಗಳಲ್ಲಿ 'ದರ್ಶಿನಿ' ಹೋಟೆಲುಗಳಂತೆ ಈ ಸೈಬರ್ ಕೆಫೆಗಳು ತಲೆ ಎತ್ತಿವೆ. ಇಂತಹ ಸೈಬರ್ ಕೆಫೆಗಳು ನಿಮಗೆ ಅಂತರ್‌ಜಾಲವನ್ನು ಉಪಯೋಗಿಸುವ ಅನುಕೂಲವನ್ನು ಮಾಡಿಕೊಟ್ಟು, ಪ್ರತಿ ತಾಸಿಗೆ ಸುಮಾರು 30 ರೂಪಾಯಿಗಳಷ್ಟು ಹಣವನ್ನು ಕೇಳುತ್ತವೆ.

ಮಾಹಿತಿ ಹುಡುಕುವುದು ಹೇಗೆ?

ಅಂತರ್‌ಜಾಲದಲ್ಲಿ ಸಾಕಷ್ಟು ಮಾಹಿತಿಯಿರುವುದರಿಂದ ನಮಗೆ ಬೇಕಾದ ಮಾಹಿತಿಯನ್ನು ಕಡಿಮೆ ಸಮಯದಲ್ಲಿ ಹುಡುಕುವುದು ತುಂಬಾ ಕ್ಲಿಷ್ಟವಾದ ಕೆಲಸ. ಆದರೆ ಇದಕ್ಕೆಂದೇ ಸಾಕಷ್ಟು ಶೋಧಕ ಯಂತ್ರಗಳಿವೆ. ಹೆಚ್ಚು ಬಳಕೆಯಲ್ಲಿರುವ ಕೆಲವು ಶೋಧಕ ಯಂತ್ರಗಳೆಂದರೆ - yahoo,



infoseek, exite, ಮುಂತಾದವುಗಳು. ಈ ಯಂತ್ರಗಳನ್ನು ನಿಮ್ಮ ಕಂಪ್ಯೂಟರ್‌ನಲ್ಲಿರುವ ವಿಶೇಷ ಲಘುವರಗಳಿಂದ (Browsers) ಉಪಯೋಗಿಸಿಕೊಳ್ಳಬಹುದು. ಈ ಶೋಧಕ ಯಂತ್ರಕ್ಕೆ ನಿಮಗೆ ಬೇಕಾದ ಮಾಹಿತಿಯ ಕೆಲವು ಮುಖ್ಯ ಪದಗಳನ್ನು ಕೊಡಬೇಕು. ಉದಾಹರಣೆಗೆ ಖ್ಯಾತ ಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿಯವರ ಬಗ್ಗೆ ಮಾಹಿತಿ ಬೇಕೆಂದುಕೊಳ್ಳಿ, ಆಗ ಶೋಧಕ ಯಂತ್ರಕ್ಕೆ 'ಗಿರೀಶ್ ಕಾಸರವಳ್ಳಿ' ಮತ್ತು ಸಿನಿಮಾ ಎಂಬ ಪದಗಳನ್ನು ಕೊಟ್ಟು ಅಂತರ್‌ಜಾಲದಲ್ಲಿ ಹುಡುಕಲು ಹೇಳಬೇಕು. ಅದು ಈ ಎರಡೂ ಪದಗಳಿಗೆ ಹುಡುಕಾಡಿ, ಅದಕ್ಕೆ ಸರಿ ಹೊಂದುವ ಮಾಹಿತಿಯಿದ್ದರೆ ಅದನ್ನು ಕೆಲವೇ ಕ್ಷಣಗಳಲ್ಲಿ ನಿಮ್ಮ ಮುಂದೆ ತಂದಿಡುತ್ತದೆ! ಸರಿಯಾಗಿ ನಮಗೆ ಯಾವ ಮಾಹಿತಿ ಬೇಕು ಎಂಬ ಪೂರ್ವ ನಿರ್ಧಾರವಿಲ್ಲದೆ ಅಂತರ್‌ಜಾಲದ ಮುಂದೆ ಕುಳಿತುಕೊಂಡರೆ ಅದು ನಮ್ಮನ್ನು ಎಲ್ಲೆಲ್ಲಿಯೋ ಕರೆದುಕೊಂಡು ಹೋಗಿಬಿಡುತ್ತದೆ.

ನಾವೂ ಉಪಯೋಗಿಸಬಹುದೆ?

ಖಂಡಿತ. ಅದಕ್ಕೆ ಯಾವುದೇ ತರಹದ ವಿಶೇಷವಾದ ಬುದ್ಧಿವಂತಿಕೆಯೂ ಬೇಡ. ಸ್ವಲ್ಪ ಸಾಮಾನ್ಯ ಜ್ಞಾನವಿದ್ದರಾಯ್ತು. ಒಮ್ಮೆ ನಿಮ್ಮ ಹತ್ತಿರದ ಸೈಬರ್ ಕೆಫೆಗೆ ಭೇಟಿ ನೀಡಿ, ಅಲ್ಲಿರುವ ಯಾರಿಂದಲಾದರೂ ಸಹಾಯವನ್ನು ಪಡೆದುಕೊಳ್ಳಿ, ಅರ್ಧ ಗಂಟೆಯಲ್ಲಿ ನೀವೇ ಸ್ವತಃ ಅಂತರ್‌ಜಾಲವನ್ನು ಲೀಲಾಜಾಲವಾಗಿ ಉಪಯೋಗಿಸಲಾರಂಭಿಸುತ್ತೀರಿ.

ಮಾಹಿತಿ ಹಾಕುವುದು ಹೇಗೆ?

ಸಾಕಷ್ಟು ಕಂಪನಿಗಳು ನಿಮ್ಮ ಮಾಹಿತಿಯನ್ನು ಅಂತರ್‌ಜಾಲದಲ್ಲಿ ಸೇರಿಸಲು ತಮ್ಮ ಕಂಪ್ಯೂಟರ್‌ನಲ್ಲಿ ಪುಕ್ಕಟೆಯಾಗಿ ಸ್ಥಳ ನೀಡುತ್ತವೆ. ಅಂತಹ ಕೆಲವು ವಿಳಾಸಗಳನ್ನು ಇಲ್ಲಿ ಕೊಟ್ಟಿದೆ.

http:/www.geocities.com
http://www.tripod.com
http://www.toptown.com

ಆದರೆ ಈ ರೀತಿಯ ಮಾಹಿತಿಯನ್ನು ಅಂತರ್‌ಜಾಲ ಅರ್ಥ ಮಾಡಿಕೊಳ್ಳಬಲ್ಲ HTML ಎಂಬ ಭಾಷೆಯಲ್ಲಿ ಬರೆಯಬೇಕು. ಇದಕ್ಕೆ ಈ ಭಾಷೆಯ ಪರಿಚಯ ನಿಮಗೆ ಇರಬೇಕು. ಈ ಭಾಷೆಯನ್ನು ಸ್ವಲ್ಪ ಪರಿಶ್ರಮದೊಂದಿಗೆ ಸುಲಭವಾಗಿ ಕಲಿತುಕೊಳ್ಳಬಹುದು. ಆದರೆ ಅಂತರ್‌ಜಾಲದಲ್ಲಿಯೇ ಸುಲಭವಾಗಿ ನಿಮ್ಮ ಮಾಹಿತಿಯನ್ನು HTMLನಲ್ಲಿ ತಯಾರಿಸಲು ಸಹಾಯವಾಗುವಂತಹ ಉಪಕರಣಗಳಿವೆ.

ಈ ರೀತಿ ಮಾಹಿತಿಯನ್ನು ಅಂತರ್‌ಜಾಲದಲ್ಲಿ ಸೇರಿಸಿದ ನಂತರ, ಶೋಧಕ ಯಂತ್ರಗಳಲ್ಲಿ ನಿಮ್ಮ ಮಾಹಿತಿಯನ್ನು ನೋಂದಾಯಿಸಿಕೊಳ್ಳಬೇಕು. ಆಗ ಅಂತರ್‌ಜಾಲದಲ್ಲಿ ಯಾರಾದರೂ ನಿಮ್ಮ ಮಾಹಿತಿಯನ್ನು ನೋಡಬಹುದು.

ಮಾಹಿತಿಗಳು ಕನ್ನಡದಲ್ಲಿವೆಯೆ?

ಇವೆ. ಇತ್ತೀಚೆಗಷ್ಟೇ ಕನ್ನಡದಲ್ಲಿ ಕೆಲವು ಮಾಹಿತಿಗಳು ಅಂತರ್‌ಜಾಲದಲ್ಲಿ ಸೇರಿಕೊಂಡಿವೆ. ದಿನಪತ್ರಿಕೆಗಳಾದ ಪ್ರಜಾವಾಣಿ, ಉದಯವಾಣಿ ಮತ್ತು ಸಂಜೆವಾಣಿಗಳು ಈಗ ಅಂತರ್‌ಜಾಲದಲ್ಲಿವೆ. ಅದೇ ರೀತಿ ಕೆಲವು ಆಸಕ್ತರು ತಮ್ಮ ಸ್ವಂತ ಕನ್ನಡ ಪತ್ರಿಕೆಗಳನ್ನು ಅಂತರ್‌ಜಾಲದಲ್ಲಿ ಸೇರಿಸಿದ್ದಾರೆ. ಅವುಗಳಲ್ಲಿ ಕೆಲವು ವಿಳಾಸಗಳನ್ನು ಕೊಡುತ್ತಿದ್ದೇವೆ.

http://www.prajavani.com
http://www.sanjevani.com
http://i.am/srujana
http://www.indianlanguages.com/_Kannada

ಆದರೆ ಕನ್ನಡದಲ್ಲಿ ಮಾಹಿತಿಯನ್ನು ಸೇರಿಸಬಹುದಾದರೂ, ಅದನ್ನು ಕನ್ನಡದಲ್ಲಿಯೇ ಹುಡುಕಲು ಈಗಿರುವ ಶೋಧಕ ಯಂತ್ರಗಳಿಂದಾಗುವುದಿಲ್ಲ. ಬಹುಶಃ ಇನ್ನು ಮುಂದೆ ಅಂತರ್‌ಜಾಲದಲ್ಲಿ ಕನ್ನಡದ ಬಳಕೆ ಹೆಚ್ಚಾದಂತೆಲ್ಲಾ, ಇಂತಹ ಒಂದು ಶೋಧಕ ಯಂತ್ರದ ಲಘುವರ ಲಭ್ಯವಾಗುವ ಕಾಲ ದೂರವೇನಿಲ್ಲ.

ಬೇವು-ಬೆಲ್ಲ

ಇಲ್ಲಿಯವರೆಗೆ ಅಂತರ್‌ಜಾಲದ ಶಕ್ತಿ, ಅದರ ಲಾಭ, ನಿಖರತೆ ಮುಂತಾದ ಸಿಹಿ-ಸಿಹಿ ವಿಚಾರಗಳನ್ನು ತಿಳಿದುಕೊಂಡೆವಲ್ಲವೆ? ಆದರೆ ನಾಣ್ಯಕ್ಕೆ ಎರಡು ಮುಖಗಳಿವೆಯೆಂಬುದು ಇಲ್ಲಿಯೂ ಅನ್ವಯವಾಗುತ್ತದೆ. ಅಂತರ್‌ಜಾಲದಿಂದಾಗಬಹುದಾದ ಹಾನಿಗಳೂ ಅಷ್ಟೇ ರೋಚಕವಾಗಿವೆ.

ಈ ಅಂತರ್‌ಜಾಲ ಯಾವುದೋ ಒಬ್ಬ ವ್ಯಕ್ತಿ ಅಥವಾ ಸಂಸ್ಥೆಯ ಸ್ವತ್ತಲ್ಲ. ಯಾರು ಬೇಕಾದರೂ ಎಂತಹ ಮಾಹಿತಿಯನ್ನಾದರೂ ಸೇರಿಸಬಹುದು. ಆ ಮಾಹಿತಿ ಸಮಾಜಕ್ಕೆ ಯೋಗ್ಯವಾದದ್ದೇ ಅಥವಾ ಹಾನಿಕಾರಕವೆ ಎಂದು ಯಾರೂ ಪ್ರಶ್ನಿಸುವುದಿಲ್ಲ. ಅಂದರೆ ಸೆನ್ಸಾರ್ ಮಂಡಳಿ ಇಲ್ಲದ ಚಲನಚಿತ್ರಗಳನ್ನು ಬಿಡುಗಡೆ ಮಾಡಿದಂತೆ! ಈ ಕಾರಣದಿಂದಾಗಿ ಅಂತರ್‌ಜಾಲದಲ್ಲಿ ಸಾಕಷ್ಟು ಅಶ್ಲೀಲ ಮಾಹಿತಿಗಳು (ಚಿತ್ರ, ಚಲನಚಿತ್ರ, ಲೇಖನ, ಧ್ವನಿ-ಎಲ್ಲಾ ರೂಪದಲ್ಲಿಯೂ) ಸೇರಿಕೊಂಡಿವೆ. ನಿಮ್ಮ ಮನೆಗೇ ಈ ಅಂತರ್‌ಜಾಲ ಬಂತೆಂದುಕೊಳ್ಳಿ, ಆಗ ನಿಮ್ಮ ಮಕ್ಕಳೂ ಈ ಎಲ್ಲಾ ಅಶ್ಲೀಲ ಮಾಹಿತಿಯನ್ನು ನಿಮ್ಮ ಕಣ್ಣೆದುರಿನಲ್ಲೇ ನೋಡುವ ಪರಿಸ್ಥಿತಿ ಒದಗಿದರೂ ಒದಗಬಹುದು! ಈ ಅಂತರ್‌ಜಾಲಕ್ಕೆ ಜೋತುಬಿದ್ದು ತಮ್ಮ ವಿದ್ಯಾಭ್ಯಾಸವನ್ನು ಹಾಳು ಮಾಡಿಕೊಳ್ಳಬಹುದು.

ಈಗಾಗಲೇ ಜಗತ್ತಿನಲ್ಲಿ ಮಾನವ-ಮಾನವ ಸಂಬಂಧಗಳು ಕಡಿಮೆಯಾಗಿ, ಪ್ರೀತಿ-ಪ್ರೇಮ ಗಳು ನಶಿಸಿ ಹೋಗುತ್ತಿವೆ. ಅಂತಹದರಲ್ಲಿ ಅಂತರ್‌ಜಾಲದಂತಹ ಶಕ್ತಿಯನ್ನು ಅವನಿಗೆ ಕೊಟ್ಟುಬಿಟ್ಟರೆ, ಅವನು ತನ್ನ ಮನೆಯಿಂದಲೇ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದರಿಂದ, ಮಾನವ ಮಾನವ ಸಂಪರ್ಕ ಮತ್ತಷ್ಟು ಕಡಿಮೆಯಾಗುತ್ತದೆ. ಪ್ರೀತಿ ಪ್ರೇಮಗಳು ಕ್ರಮೇಣ ನಶಿಸಿ, ಕ್ರೌರ್ಯ ಹಿಂಸೆಗಳು ಹೆಚ್ಚಾಗಬಹುದು.

ಜಗತ್ತಿನಲ್ಲಿ ಪ್ರತಿಯೊಂದು ವಸ್ತುವಿಗೂ ಅದರ ಒಳ್ಳೆಯ ಮತ್ತು ಕೆಟ್ಟ ಗುಣಗಳು ಇದ್ದೇ ಇರುತ್ತವೆ. ಆದರೆ ಒಳ್ಳೆಯದನ್ನು ಮಾತ್ರ ಆಹ್ವಾನಿಸಿ, ಕೆಟ್ಟದ್ದನ್ನು ಹೊರ ಚೆಲ್ಲುವ ಹಾಲು ಕೊಳದ ಹಂಸದಂತೆ ನಾವಾದರೆ, ಅಂತರ್‌ಜಾಲದಂತಹ ಶಕ್ತಿಯನ್ನು ಹೆಚ್ಚು ಹೆಚ್ಚು ಮಾನವ ಕಲ್ಯಾಣಕ್ಕೆ ಉಪಯೋಗಿಸಿಕೊಳ್ಳಲು ಸಾಧ್ಯ. ■

ಕೊಬ್ಬರಿ ಬರ್ಫಿ

ಬೇಕಾಗುವ ಸಾಮಗ್ರಿಗಳು:

2 ತೆಂಗಿನಕಾಯಿ, 500 ಗ್ರಾಂ ಸಕ್ಕರೆ, ಅರ್ಧ ಲೋಟ ಹಾಲು, ಒಂದಿಷ್ಟು ತುಪ್ಪ, 2 ಎಲಕ್ಕಿ.

ಮಾಡುವ ವಿಧಾನ:

ಮೊದಲು ಕೊಬ್ಬರಿಯನ್ನು ತುರಿದುಕೊಳ್ಳಬೇಕು. ಸಕ್ಕರೆಯನ್ನು ಪಾಕ



ಮಾಡಲಿಕ್ಕೆ ಇಡಬೇಕು. ಪಾಕ ಬಂದ ಮೇಲೆ ತುರಿದ ಕೊಬ್ಬರಿಯನ್ನು ಹಾಕಿ ಕೈಯಾಡಿಸಿ. ಹಾಲು ತುಪ್ಪ ಹಾಕಿ ಕಲಿಸಿದ ನಂತರ ಅದನ್ನು ಒಂದು ಅಗಲವಾದ ತಟ್ಟೆಯಲ್ಲಿ ಹಾಕಿ ಆರಲಿಕ್ಕೆ ಬಿಡಿ. ಆರಿದ ನಂತರ ಕತ್ತರಿಸಿ ತೆಗೆಯಿರಿ. ಕೊಬ್ಬರಿ ಬರ್ಫಿ ರೆಡಿ. ತಿನ್ನಲು ರುಚಿಕರವಾಗಿರುತ್ತದೆ.

-ಎಸ್.ಕೊಟ್ರೇಶ್, ಜಿ.ಕೋಡಿಹಳ್ಳಿ

ಸಂಪಿಗೆ ಹೂ

ಬೇಕಾಗುವ ಸಾಮಗ್ರಿಗಳು:

ಮೈದಾಹಿಟ್ಟು 1/2 ಕೆ.ಜಿ, ಸಕ್ಕರೆ 1/2 ಕೆ.ಜಿ, ಡಾಲ್ಡ 2 ಟೀ ಚಮಚದಷ್ಟು, ಎಣ್ಣೆ, ಸೋಡಾ.

ಮಾಡುವ ವಿಧಾನ:



ಮೈದಾ ಹಿಟ್ಟಿನಲ್ಲಿ ಎರಡು ಚಮಚದಷ್ಟು ಡಾಲ್ಡ ಮತ್ತು ಸ್ವಲ್ಪ ಸೋಡಾ ಹಾಕಿ ಚೆನ್ನಾಗಿ ನಾದಬೇಕು. ನಾದಿದ ನಂತರ 10-15 ನಿಮಿಷದವರೆಗೆ ನೆನೆ ಇಡಬೇಕು. ನಂತರ ಚಿಕ್ಕ ಚಿಕ್ಕ ಪುರಿಗಳನ್ನಾಗಿ ಮಾಡಿ, ಚಾಕುವಿನಿಂದ ಪುರಿಗಳನ್ನು ಮಧ್ಯ ಮಧ್ಯವಾಗಿ ಕತ್ತರಿಸಿ ಸುತ್ತಿರಿ. ಸುತ್ತಿದ ನಂತರ ಎಣ್ಣೆಯಲ್ಲಿ ಕರಿಯಬೇಕು. ಬಿಸಿ ಬಿಸಿಯಾದ ಸಕ್ಕರೆ ಪಾಕದಲ್ಲಿ ಅದ್ದಿದ ನಂತರ ಸಂಪಿಗೆ ಹೂವಿನ ರುಚಿಯನ್ನು ಸವಿಯಿರಿ.

-ಶಿವಕಾಂತಮ್ಮ ಎಂ.ಪಟ್ಟೇದಾರ್, ಸಾಲವಾರ.

ಕುಕುಮರ್ ದೋಸೆ

ಬೇಕಾಗುವ ಸಾಮಗ್ರಿಗಳು:

1/2 ಕೆ.ಜಿ. ಅಕ್ಕಿ, 1 ಲೋಟ ಉದ್ದಿನ ಬೇಳೆ, 1/2 ಲೋಟ ಕಡ್ಲೆ ಬೇಳೆ, 1 ಚಮಚ ಮೆಂತ್ಯೆ ಕಾಳು, 1 ಚಮಚ ಜೀರಿಗೆ.

ಮಾಡುವ ವಿಧಾನ:

ಮೇಲೆ ಹೇಳಿದ ಎಲ್ಲವನ್ನೂ ಚೆನ್ನಾಗಿ ನೆನೆಸಬೇಕು. ಅಕ್ಕಿ ಎಲ್ಲ ನೆಂದ ಮೇಲೆ ರುಬ್ಬಬೇಕು. ನಂತರ 3 ಕಟ್ಟು ಮೆಂತ್ಯೆ ಸೊಪ್ಪು, 2 ಕ್ಯಾರೆಟ್ 2



ಆಲೂಗಡ್ಡೆ, 2 -3 ಟೊಮ್ಯಾಟೊ, 6 - 7 ಹಸಿಮೆಣಸು, ಸ್ವಲ್ಪ ಕೊತ್ತಂಬರಿ ಸೊಪ್ಪು, ಸ್ವಲ್ಪ ಕರಿಬೇವು ಸೊಪ್ಪು ಹಾಕಿ ದೊರಗ ದೊರಗ ರುಬ್ಬಿ ಹಿಟ್ಟಿಗೆ ಸೇರಿಸಿ. ಸ್ವಲ್ಪ ಉಪ್ಪು, ಸೋಡಾ ಹಾಕಿ ಕಲಸಿ. ದಪ್ಪಗೆ ದೋಸೆ ತಯಾರಿಸಿ ಮೇಲೆ ಸ್ವಲ್ಪ ಬೆಣ್ಣೆ ಹಾಕಿ. ಬಿಸಿ ಬಿಸಿ ದೋಸೆ ತಿನ್ನಿ.

-ಸವಿತಾ ಸುಬ್ರಹ್ಮಣ್ಯಂ, ಬೆಂಗಳೂರು.

ಗೋಲ್ಡನ್ ಜ್ಯೂಬಿಲಿ

ಬೇಕಾಗುವ ಸಾಮಗ್ರಿಗಳು:

3/4 ಪಾವು ಕಡ್ಲೆಹಿಟ್ಟು, 3/4 ಪಾವು ತುಪ್ಪ, 2 ಪಾವು ಸಕ್ಕರೆ, 1 ತೆಂಗಿನಕಾಯಿ, 25 ಗ್ರಾಂ ಬಾದಾಮಿ, ಗೋಡಂಬಿ, ದ್ರಾಕ್ಷಿ, ಕೇಸರಿ, ಏಲಕ್ಕಿ.

ಮಾಡುವ ವಿಧಾನ:

ಬಾದಾಮಿಯನ್ನು ಕುದಿಯುವ ನೀರಿನಲ್ಲಿ ಹಾಕಿ ಮುಚ್ಚಿಟ್ಟು 10 ನಿಮಿಷದ ನಂತರ ಸಿಪ್ಪೆ ತೆಗೆದು ಒರಳಿನಲ್ಲಿ ಹಾಕಿ ತರಿತರಿಯಾಗಿ ರುಬ್ಬಿ ತೆಗೆದಿಟ್ಟುಕೊಂಡು ನಂತರ ಕೊಬ್ಬರಿಯನ್ನು ರುಬ್ಬಿಕೊಳ್ಳಬೇಕು. ದ್ರಾಕ್ಷಿ



ಮತ್ತು ಗೋಡಂಬಿಯನ್ನು ತುಪ್ಪದಲ್ಲಿ ಹುರಿದು, ಏಲಕ್ಕಿಯನ್ನು ಪುಡಿ ಮಾಡಿಕೊಂಡು, ಕೇಸರಿಯನ್ನು ಹಾಲಿನಲ್ಲಿ ಅರೆದಿಟ್ಟುಕೊಳ್ಳಬೇಕು. ನಂತರ ತುಪ್ಪವನ್ನು ಬಾಣಲೆಯಲ್ಲಿ ಹಾಕಿ ಒಲೆಯ ಮೇಲಿಟ್ಟು ಬಿಸಿ ಆಗುವಾಗ ಕಡ್ಲೆಹಿಟ್ಟನ್ನು ಹಾಕಿ ಮಗಚುತ್ತಾ ಇದ್ದು ಕೆಂಪಗೆ ಹುರಿದು ಪರಿಮಳ ಬರುವಾಗ ಇಳಿಸಬೇಕು. ಇದು ನೀರಾಗಿ ಇರುತ್ತದೆ. ನಂತರ ಇನ್ನೊಂದು ಪಾತ್ರೆಯಲ್ಲಿ ಹಾಕಿಕೊಂಡು ಬಾಣಲೆಯಲ್ಲಿ ತೆಂಗಿನಕಾಯಿ ಹಾಲನ್ನು ಹಾಕಿ ಸಕ್ಕರೆ ಬೆರೆಸಿ ಒಲೆಯ ಮೇಲಿಟ್ಟು ಕುದಿಯುವಾಗ ಹುರಿದಿರುವ ಹಿಟ್ಟನ್ನು ಹಾಕಿ ಮಗಚಿ ಕುದಿಯಲು ಬಂದಾಗ ರುಬ್ಬಿದ ಬಾದಾಮಿಯನ್ನು ಹಾಕಿ ಮಗಚುತ್ತಾ ಇದ್ದು ಗಟ್ಟಿಯಾಗಿ ತಳ ಎದ್ದು ತುಪ್ಪ ಚಿಮ್ಮುವಾಗ ಕೇಸರಿ, ಏಲಕ್ಕಿ, ದ್ರಾಕ್ಷಿ, ಗೋಡಂಬಿ ಎಲ್ಲಾ ಹಾಕಿ ಮಗಚಿ ಇಳಿಸಿ ತಟ್ಟೆಗೆ ಹರಡಿ. ಸ್ವಲ್ಪ ಆರಿದ ನಂತರ ಚಾಕುವಿನಲ್ಲಿ ಕೊಯ್ದು ತುಂಡುಗಳಾಗಿ ಮಾಡಬೇಕು.

-ರಾಜು ರಾಚಪ್ಪ ಬೋಧಾ, ಕೊಪ್ಪಳ.

ಡಬಲ್ ಕಮೀಟ್

ಬೇಕಾಗುವ ಸಾಮಗ್ರಿಗಳು:




1 ಪೌಂಡ್ ಬ್ರೆಡ್ಡು, 300 ಗ್ರಾಂ ಸಕ್ಕರೆ, 500 ಎಂ.ಎಲ್. ಹಾಲು, 5 ಅಥವಾ 6 ಎಲಕ್ಕಿ, ಬ್ರೆಡ್ ಕರಿಯಲು ರಿಫೈಂಡ್ ಆಯಿಲ್ ಅಥವಾ ಡಾಲ್ಡ.

ಮಾಡುವ ವಿಧಾನ:

ಮೊದಲು ಬ್ರೆಡ್‌ನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ಮಾಡಿ, ನಂತರ ಜಾಮುನಿಗೆ ಮಾಡುವಂತೆ ಪಾಕ ಮಾಡಿರಿ. ಬ್ರೆಡ್‌ನ್ನು ರಿಫೈಂಡ್ ಆಯಿಲ್‌ನಲ್ಲಿ ಕರಿಯಿರಿ. ಕರಿದ ನಂತರ ಬ್ರೆಡ್ಡಿನ ಪೀಸುಗಳನ್ನು ಹಾಲಿನಲ್ಲಿ ಹಾಕಿ ಒಂದು ನಿಮಿಷದ ನಂತರ ಪಾಕದಲ್ಲಿ ಹಾಕಿರಿ. ಪಾಕಕ್ಕೆ ಏಲಕ್ಕಿ ಪುಡಿಯನ್ನು ಸೇರಿಸಿ.

ಈಗ ಬಾಯಿಯಲ್ಲಿ ನಿರೂರಿಸುವ ಡಬಲ್ ಕಮೀಟ್ ತಯಾರಾಯಿತು.

-ರುದ್ರಮ್ಮ ರಾಚಪ್ಪ ಬೋಧಾ, ಕೊಪ್ಪಳ.



ಒಂದು ಹೆಣ್ಣು ಇನ್ನೊಂದು ಹೆಣ್ಣನ್ನು ತೀವ್ರವಾಗಿ ಕಾಮಿಸುತ್ತಿರುವ ದೃಶ್ಯ ಪ್ರೇಕ್ಷಕರ ಸೊಂಟದಲ್ಲಿ ಮಿಂಚು ಹರಿಸಬೇಕಿತ್ತು. ಆದರೆ ಬಹುಪಾಲು ಜನ ಆ ದೃಶ್ಯವನ್ನು ಗಂಭೀರವಾಗೇ ನೋಡಿದರು.

ಆದರೆ ಆ ಚಿತ್ರದ ಪ್ರದರ್ಶನ ಬಹುದಿನ ನಡೆಯಲಿಲ್ಲ. ಚಿತ್ರಮಂದಿರ ತುಂಬಿ ಶೇ. 80ಕ್ಕೂ ಹೆಚ್ಚು ಹಣ ಸಂಗ್ರಹಿಸುತ್ತಿದ್ದ ಚಿತ್ರ ಬಲಾತ್ಕಾರದಿಂದ ನಿಂತಿತ್ತು. ಆ ಚಿತ್ರ 'ಫೈರ್'. ಮೇಲೆ ಹೇಳಿದ್ದು ಶಬಾನಾ ಆಜ್ಮಿ ಮತ್ತು ನಂದಿತಾ ದಾಸ್ ಜೋಡಿ ಸಲಿಂಗಕಾಮದಲ್ಲಿದ್ದ ದೃಶ್ಯ.

'ಫೈರ್' ಒಂದರ್ಥದಲ್ಲಿ ಪುರುಷರ ಸಾರ್ವಭೌಮತ್ವವನ್ನು ಪ್ರಶ್ನಿಸುವ, ಇಬ್ಬರು ಹೆಂಗಸರ ನಡುವಿನ ಪ್ರೇಮಚಿತ್ರ. ಮಕ್ಕಳಾಗುವ ಸಾಧ್ಯತೆಯಿಲ್ಲದ ರಾಧಾಳ ಮೇಲೆ ಆಧ್ಯಾತ್ಮಿಕ ಹುಚ್ಚಿನ ಗಂಡ ಬ್ರಹ್ಮಚರ್ಯವನ್ನು ಹೇರುತ್ತಾನೆ. ಸೀತಾಳನ್ನು ಮದುವೆಯಾದ ನಂತರವೂ ಅವಳ

'ಫೈರ್' ಚಲನಚಿತ್ರಕ್ಕೆ ಪೆಟ್ರೋಲ್ ಸುರಿದ ಶಿವಸೇನೆ!

ಸೀತಾಳ ಪ್ರೀತಿ, ನೆಚ್ಚುಗೆ ಮತ್ತು ದೇಹದ ಅಗತ್ಯವು ಕೊನೆಗೆ ರಾಧಾಗೆ ಗೊತ್ತಾಗುತ್ತದೆ. ಸಮಾಜ ಹೆಣ್ಣಿನ ಮೇಲೆ ವಿಧಿಸಿರುವ ಲೈಂಗಿಕ, ಸಾಂಪ್ರದಾಯಿಕ ಮತ್ತು ಕೌಟುಂಬಿಕ ಎಲ್ಲೆಗಳನ್ನು ಈ ಸಂಬಂಧ ಮೀರಿ ಬಿಡುತ್ತದೆ. ಅವರಿಬ್ಬರೂ ಹಾಸಿಗೆಯಲ್ಲಿದ್ದುದನ್ನು ರಾಧೆಯ ಗಂಡ ನೋಡುತ್ತಾನೆ.

■ ಮಾಧವ ಐತಾಳ್



ಗಂಡ ಇನ್ನೊಬ್ಬಾಕೆಯ ಸಂಬಂಧವನ್ನು ಕಡಿದು ಹಾಕಲು ಒಪ್ಪಿಲ್ಲ. ಈ ನಾಲ್ವರ ಮಧ್ಯೆ, ಮಾತನ್ನಾಡಲಾರದ ಆದರೆ ತನ್ನ ಗಂಟೆಯ ಮೂಲಕ ಎಲ್ಲವನ್ನೂ ನಿಯಂತ್ರಿಸುವ ಅತ್ತೆಯೊಬ್ಬಳಿದ್ದಾಳೆ. ರಾಧಾಳ ಜೊತೆಗಿನ ತನ್ನ ಸಂಬಂಧದ ಎಲ್ಲೆಯನ್ನು ವಿಸ್ತರಿಸಿಕೊಳ್ಳಲು ಸೀತಾ ಪ್ರಯತ್ನಿಸುತ್ತಲೇ ಇರುತ್ತಾಳೆ. ಸೀತಾಳ ಪ್ರೀತಿ, ನೆಚ್ಚುಗೆ ಮತ್ತು ದೇಹದ ಅಗತ್ಯವು ಕೊನೆಗೆ ರಾಧಾಗೆ ಗೊತ್ತಾಗುತ್ತದೆ. ಸಮಾಜ ಹೆಣ್ಣಿನ ಮೇಲೆ ವಿಧಿಸಿರುವ ಲೈಂಗಿಕ, ಸಾಂಪ್ರದಾಯಿಕ ಮತ್ತು ಕೌಟುಂಬಿಕ ಎಲ್ಲೆಗಳನ್ನು ಈ ಸಂಬಂಧ ಮೀರಿ

ಕೋರರು ಪೇರಿ ಕಿತ್ತರು. ಮಹಾರಾಷ್ಟ್ರದ ಮುಖ್ಯ ಮಂತ್ರಿ ಮನೋಹರ್ ಜೋಷಿ ದಾಂಧಲೆ ಕೋರರನ್ನು ಪ್ರೋತ್ಸಾಹಿಸಿದರು. ಬಾಳ ಠಾಕರೆ ತಾನು ಬೆಂಕಿಗೆ ಪೆಟ್ರೋಲ್ ಸುರಿದೆ ಎಂದರೆ, ಈ ಹಗರಣ ಕುರಿತು ಅತ್ಯಂತ ಮೂರ್ಖ ಹೇಳಿಕೆ ಬಂದದ್ದು ಸೆನ್ಸಾರ್ ಮಂಡಳಿ ಅಧ್ಯಕ್ಷೆ ಆಶಾ ಪರೇಖಳಿಂದ. ಆಕೆ 'ತಾನು ಚಲನಚಿತ್ರವನ್ನು ನೋಡಿಲ್ಲ' ಎಂದಳು. ಇದು ಅಬದ್ಧ. ಸೆನ್ಸಾರ್ ಮಂಡಳಿಯ ಮುಖ್ಯಸ್ಥೆ ಎಲ್ಲ ಚಿತ್ರಗಳನ್ನು ನೋಡುವುದು ಸಾಧ್ಯವಿಲ್ಲ. ಆದರೆ ಮಂಡಳಿಯ ನಿರ್ಧಾರವನ್ನು ಬೆಂಬಲಿಸಬೇಕು. ಚಲನಚಿತ್ರ

ಅದು ಉಲ್ಲಂಘಿಸುತ್ತದೆ, ಕುಟುಂಬವೆಂಬ ಸಾಮಾಜಿಕ ಘಟಕದ ಇರುವಿಕೆಗೆ ಅದು ಕುತ್ತು ತರುತ್ತದೆ ಹಾಗೂ ಸ್ತ್ರೀ ಲೈಂಗಿಕ ಕಾಮ ಇರುವುದರಿಂದ ಅದೊಂದು ಅಶ್ಲೀಲ ಚಿತ್ರ.

ಆದರೆ ಇದ್ಯಾವುದೂ ಚಿತ್ರದ ಮೇಲೆ ಶಿವಸೇನೆ ಗುರ್ರೆನ್ನಲು ಕಾರಣವಲ್ಲ. ಈ ಘಟನೆಗೆ ಗಂಭೀರ ರಾಜಕೀಯ ಮುಖವಿದೆ. ಪಾಕಿಸ್ತಾನ ಭಾರತ ಕ್ರಿಕೆಟ್ ಪಂದ್ಯಾವಳಿಯನ್ನು ನಡೆಯಗೊಡುವುದಿಲ್ಲ, ಭಾಜಪದೊಂದಿಗೆ ಸಂಪರ್ಕ ಕಡಿದುಕೊಳ್ಳುತ್ತೇವೆ ಎನ್ನುವ ಟೀಕೆಗೆ, ಪ್ರಧಾನಿಯನ್ನು ಬಹಿರಂಗವಾಗಿ ಹೀಗಳೆದದ್ದಕ್ಕಾಗಿ ಭಾಜಪ



ನಿರ್ದೇಶಕಿ ದೀಪಾ ಮೆಹ್ತಾ ಜತೆಗೆ ನಟಿಯಾದ ಶಬಾನಾ ಆಜ್ಮಿ, ನಂದಿತಾ ದಾಸ್

'ಲಿಹಾಫ್' ನಾಟಕದ ಒಂದು ದೃಶ್ಯ



ಬಿಡುತ್ತದೆ. ತಮ್ಮ ಸಂಬಂಧ ದೃಢವಾಗಲೆಂದು ಇಬ್ಬರೂ ವ್ರತವೊಂದನ್ನು ಕೂಡಾ ಮಾಡುತ್ತಾರೆ. ಅವರಿಬ್ಬರೂ ಹಾಸಿಗೆಯಲ್ಲಿದ್ದುದನ್ನು ರಾಧೆಯ ಗಂಡ ನೋಡುತ್ತಾನೆ. ಸೀತಾಳ ಬಗೆಗಿನ ಪ್ರೀತಿ ಹಾಗು ನಿಷ್ಠೆಯನ್ನು ಸಾಬೀತುಪಡಿಸಲು ರಾಧಾ ಅಗ್ನಿಪರೀಕ್ಷೆಗೆ ಒಳಗಾಗುತ್ತಾಳೆ.

'ಫೈರ್' ಚಿತ್ರ ಬಿಡುಗಡೆಯಾಗಿ 2 ವರ್ಷ ಕಳೆದು 14 ಪ್ರಶಸ್ತಿ ಬಂದಿವೆ. ಮೇನಲ್ಲಿ ಸೆನ್ಸಾರ್ ಮಂಡಳಿ ಅನುಮತಿ ನೀಡಿ, ನವೆಂಬರ್ 13 ರಂದು ಪ್ರದರ್ಶನ ಪ್ರಾರಂಭವಾಯ್ತು. ತೊಂದರೆ ಪ್ರಾರಂಭವಾದದ್ದು ನವೆಂಬರ್ 25ರಂದು. ಆ ದಿನ 'ಫೈರ್' ಅನ್ನು ನಿಷೇಧಿಸಬೇಕೆಂದು ಮುಂಬೈನ ಜೈನ್ ಸಮತಾ ವಾಹಿನಿಯ ಕೆಲವು ಸದಸ್ಯರು ಸಾಂಸ್ಕೃತಿಕ ವ್ಯವಹಾರಗಳ ಮಂತ್ರಿಗೆ ದೂರಿತ್ತರು. ಇಂಥ ಅವಕಾಶಕ್ಕಾಗಿ ಕಾಯುವ ಶಿವಸೇನೆ ವಿಷಯವನ್ನು ಕೈಗೆತ್ತಿಗೊಂಡಿತು. ಮುಂಬೈನಲ್ಲಿ ಶಾಸಕ ಮಿರ್ಲೇಕರ್ ಗುಂಪಿನ ತಂಡ ಸಿನೆಮಾಕ್ಸ್‌ಗೆ ನುಗ್ಗಿದರೆ, ದೆಹಲಿಯ ರೀಗಲ್‌ಗೆ ಶಿವಸೈನಿಕರು ನುಗ್ಗಿ ದಾಂಧಲೆ ನಡೆಸಿದರು. ಕಲ್ಕತ್ತಾದಲ್ಲಿ ಪ್ರೇಕ್ಷಕರು ತಿರುಗಿಬಿದ್ದಾಗ ಹಲ್ಲೆ

ಸದ್ಯಕ್ಕೆ ಮತ್ತೆ ಸೆನ್ಸಾರ್‌ಗೆ ಹೋಗಿದೆ. ಪ್ರದರ್ಶನ ಯೋಗ್ಯ ಎಂದು ಕೊಟ್ಟ ಅನುಮತಿಯನ್ನು ಹಿಂತೆಗೆದುಕೊಳ್ಳುವ ಇಲ್ಲದೇ ಭಾರೀ ಕತ್ತರಿ ಪ್ರಯೋಗದೊಡನೆ ಚಿತ್ರ ಮತ್ತೆ ಪ್ರದರ್ಶಿತಗೊಳ್ಳುವ ಸಾಧ್ಯತೆಗಳೇ ಹೆಚ್ಚಾಗಿವೆ. ಈಗ ಚಿತ್ರಕ್ಕೆ ಮರು ಅನುಮತಿ ಸಿಕ್ಕಿದ್ದರೂ, ಅನಧಿಕೃತ ನಿಷೇಧ ಜಾರಿಯಲ್ಲಿದೆ.

ಚಿತ್ರದ ವಿರುದ್ಧ ನಡೆದ ದಾಂಧಲೆ ವಿರುದ್ಧ ದಿಲೀಪ್ ಕುಮಾರ್, ದೀಪಾ ಮೆಹ್ತಾ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಿದರು. ನ್ಯಾಯಾಲಯ ಚಿತ್ರ ಪ್ರದರ್ಶನಕ್ಕೆ ಹಾಗು ದಿಲೀಪ್ ಕುಮಾರ್ ಮೊದಲಾದವರಿಗೆ ರಕ್ಷಣೆ ಕೊಡಬೇಕೆಂದು ಆದೇಶಿಸಿತು.

ರಾಜಕೀಯ ಆಯಾಮ

'ಫೈರ್'ನ ವಿರುದ್ಧ ಶಿವಸೈನಿಕರು ನೀಡುವ ಕಾರಣಗಳು: ಹಿಂದೂ ಮಹಿಳೆಯರನ್ನು ಕೆಟ್ಟ ರೀತಿ ಚಿತ್ರಿಸಲಾಗಿದೆ, ಹಿಂದೂಗಳು ಪೂಜಿಸುವ ದೇವತೆಗಳ ಹೆಸರನ್ನು ಚಿತ್ರದ ಸ್ತ್ರೀಪಾತ್ರಗಳಿಗೆ ಇಡಲಾಗಿದೆ, ಭಾರತದ ಸಾಂಸ್ಕೃತಿಕ ಮೌಲ್ಯಗಳನ್ನು

ತೀವ್ರವಾಗಿ ಪ್ರತಿಭಟಿಸಿತು. ಈ ಮಧ್ಯೆ 4 ರಾಜ್ಯಗಳಲ್ಲಿ ನಡೆದ ಚುನಾವಣೆಯಲ್ಲಿ ಭಾಜಪ ಮಣ್ಣು ತಿಂದಿತು. ಹಿಂದುತ್ವದಿಂದ ಹಿಂದೆ ಸರಿದಿದ್ದರಿಂದ, ವಂದೇ ಮಾತರಂ, ಸರಸ್ವತಿ ವಂದನೆ ವಿಷಯದಲ್ಲಿ ದೃಢ ನಿಲುವು ತೆಗೆದುಕೊಳ್ಳದ್ದರಿಂದ ಭಾಜಪ ಸೋತಿತೆಂದು ಠಾಕರೆ ಹೇಳಿದರು. ಆದರೆ ಭಾಜಪ ನಿಧಾನವಾಗಿ ಕಟ್ಟರ್ ಹಿಂದೂವಾದದಿಂದ ಜಾತ್ಯಾತೀತತೆ ಕಡೆಗೆ ಸರಿಯುತ್ತಿರುವುದು ಶಿವಸೇನೆಗೆ ಇರುಸುಮುರುಸಾಯ್ತು. ಕ್ರಿಕೆಟ್ ಪಂದ್ಯಾವಳಿ ವಿಷಯದಲ್ಲಿ ಪ್ರಧಾನಿಯಿಂದ, ಅಡ್ವಾನಿಯಿಂದ ಬಹಿರಂಗವಾಗಿ ಇಕ್ಕಿಸಿಕೊಂಡಿದ್ದ ಠಾಕರೆಗೆ ಸಿಕ್ಕಿದ್ದು ಫೈರ್. ತಾನೊಬ್ಬನೇ ಹಿಂದೂ ರಕ್ಷಕನೆಂದು ತೋರಿಸಿಕೊಳ್ಳಲು ಠಾಕರೆಗೊಂದು ಅವಕಾಶ ಸಿಕ್ಕಂತಾಯ್ತು.

ಸೇನೆ ಮುಂಬೈ ಹಾಗು ಮಹಾರಾಷ್ಟ್ರದಲ್ಲಿ ತನ್ನ ವರ್ಚಸ್ಸು ಕಳೆದುಕೊಳ್ಳುತ್ತಿದೆ. ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಅದಕ್ಕೆ ನಿರೀಕ್ಷಿಸಿದಷ್ಟು ಸ್ಥಾನ ಸಿಕ್ಕಲಿಲ್ಲ. ಅಷ್ಟೇ ಅಲ್ಲ ಪಕ್ಷೇತರ ಶಾಸಕರು ಬೆಂಬಲ ವಾಪಸ್ ತೆಗೆದುಕೊಂಡಲ್ಲಿ ಸರ್ಕಾರ ಎಂದಾದರೂ ಕುಸಿಯಬಹುದು. ಕಲ್ಯಾಣ್ ಸಿಂಗ್

'ವಂದೇಮಾತರಂ' ವಿಷಯದಲ್ಲಿ ಮಂತ್ರಿಯೊಬ್ಬರ ಬಲಿ ತೆಗೆದುಕೊಂಡರು. ಅಡ್ವಾನಿ ಡಿಸೆಂಬರ್ 6 ರ ಬಾಬರಿ ಮಸೀದಿ ನೆಲಸಮ ತಮ್ಮ ಪಕ್ಷಕ್ಕೆ ಮುಳುವಾಯ್ತು ಎಂದದ್ದು ಸೇನೆಗೆ ಅಪಥ್ಯವಾಯ್ತು. ಚರಿತ್ರೆಯಿಂದ ಪಾಠ ಕಲಿಯದ ಠಾಕರೆ 1999ರ ಚುನಾವಣೆಯಲ್ಲಿ ಹೊಸ ಕಾರ್ಡನ್ನಾಗಿ 'ಫೈರ್'ನ್ನು ಬಳಸಿಕೊಳ್ಳಲು ಹುನ್ನಾರ ನಡೆಸಿದಂತೆ ಕಾಣುತ್ತದೆ. ಬಾಬರಿ ಮಸೀದಿಯನ್ನು ಪುಡಿ ಮಾಡಿದ ಪ್ರಕರಣವನ್ನು ಚುನಾವಣೆಯಲ್ಲಿ ಬಳಸಿಕೊಂಡು ಶಿವಸೇನೆ ಒಮ್ಮೆ ಗೆದ್ದಿತ್ತು. ಆದರೆ ಪ್ರಸ್ತುತ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದರೆ, ಈ ಸಲ ಅದರ ಹೊಂಚು ವಿಫಲನಾಗುವುದು ಖಚಿತ.

ಕ್ರಿಮಿನಲ್ ಕ್ರಿಯೆ

ಶಿವಸೇನೆ ತನ್ನ ಹಲ್ಲೆಯನ್ನು ರಾಜಕೀಯ ಚಳವಳಿ ಎನ್ನುತ್ತದೆ. ಆದರೆ ನಾಗರಿಕ ಸಮಾಜದ ದೃಷ್ಟಿಯಲ್ಲಿ ಅದು ಗೂಂಡಾಗಿರಿ, ವಾಕ್

ಸ್ತ್ರೀ ಸಲಿಂಗ ಕಾಮ : ಏಕೆ? ಹೇಗೆ?

ಕಾಮಸಂಬಂಧ ಯಾವ ರೀತಿಯದ್ದೇ ಆಗಲಿ (ಹೆಣ್ಣು-ಹೆಣ್ಣು, ಗಂಡು-ಹೆಣ್ಣು, ಗಂಡು-ಗಂಡು) ಅದನ್ನು ಹತ್ತಿಕ್ಕಿದಲ್ಲಿ ಅದು ಅಸಹ್ಯಕರ ರೂಪಗಳನ್ನು ಪಡೆದುಕೊಂಡು ಸಮಾಜವನ್ನು ರೋಗಗ್ರಸ್ತವಾಗಿಸಿಬಿಡುತ್ತದೆ. ಲೈಂಗಿಕತೆ ಅನೇಕ ರೀತಿಗಳಲ್ಲಿ ಅಭಿವ್ಯಕ್ತಿಗೊಳ್ಳುವಂತದ್ದು. ಅದರಲ್ಲಿ ಲೆಸ್ಬಿಯನಿಸಂ ಕೂಡಾ ಒಂದು. ತಮ್ಮದೇ ಅಥವಾ ಬೇರೆ ಲಿಂಗಪ್ರಕಾರದೊಡನೆ ಲಿಂಗಪ್ರೇಮ ಸಹಜ ಪ್ರವೃತ್ತಿ. ನಮ್ಮ ಸಂಸ್ಕೃತಿಯಲ್ಲಿ ಅದು ವಿವಾದವೇ ಅಲ್ಲ, ಅದನ್ನು ಕಾನೂನು ಬಾಹಿರ ಎಂದವರು ಬ್ರಿಟಿಷರು.

ಭಾರತದ ಶಬ್ದಕೋಶದಲ್ಲಿ ಸ್ತ್ರೀಸಲಿಂಗ ಕಾಮಕ್ಕೆ ಪರ್ಯಾಯ ಪದವೇ ಇಲ್ಲ. ಸಲಿಂಗ ಕಾಮ ಕುರಿತ ಕಾನೂನುಗಳಲ್ಲಿ ಕೂಡಾ ಅದರ ಕುರಿತು ಸೂಚನೆ ಇಲ್ಲದಿರುವುದರಿಂದ ಅದು ಕಾನೂನು ಬಾಹಿರ ಅಥವಾ ಅದೃಶ್ಯವಾಗಿದೆ. ಸ್ತ್ರೀಸಲಿಂಗಕಾಮ ಭಾರತಕ್ಕೆ ಹೊಸದಲ್ಲ, ಆದರೆ ನಮ್ಮ ಚಿಂತನಾ ಧಾಟಿ ಶತಮಾನಗಳಷ್ಟು ಪುರಾತನವಾದ್ದರಿಂದ ಅದನ್ನು ಬಹಿರಂಗವಾಗಿ ಚರ್ಚಿಸುವುದಿಲ್ಲ, ಅವರಿಗೆ ತಮ್ಮನ್ನು ಸಮಾಜ ಬಹಿಷ್ಕರಿಸಬಹುದೆನ್ನುವ ಭಯ ಇದೆ, ಅದು ನಿಜ ಕೂಡಾ.

ಇಂದಿನ ಭಾರತೀಯ ಸಮಾಜ ಲೆಸ್ಬಿಯನಿಸಂ ಹೋಗಲಿ, ಯಾವುದೇ ರೀತಿಯ ಲೈಂಗಿಕ ಸಂಬಂಧಗಳನ್ನು ಅರ್ಥೈಸುವುದರಲ್ಲಿ ಸೋತಿದೆ. ಅಮೆರಿಕಾದಲ್ಲಿ ಲೆಸ್ಬಿಯನಿಸಂ ರಾಜಕೀಯ ಹಕ್ಕಿನ ವಿಷಯ, ಅದರೊಟ್ಟಿಗೆ ಅನೇಕ ಹಕ್ಕುಗಳು ತಳಕು ಹಾಕಿಕೊಂಡಿವೆ. ಹೆಣ್ಣುಗಳಿಬ್ಬರ ನಡುವಣ ಸಂಬಂಧ ಲೈಂಗಿಕ ಸಂಬಂಧವೇ ಆಗಿರಬೇಕೆಂದಿಲ್ಲ, ಒಂಟಿ ಹೆಂಗಸರಿಗೆ ಬೇರೆ ಹೆಂಗಸರ ಸಾಂಗತ್ಯದ ಅಗತ್ಯವಿದೆ. ಆಧುನಿಕ ಸಮಾಜ ಇದಕ್ಕೆ ಸಲಿಂಗಕಾಮ ಎಂದು ಹಣೆಪಟ್ಟಿ ಜಡಿದುಬಿಡುತ್ತದೆ.

ಭಾರತದಲ್ಲಿ ಗಂಡುಗಳ ಸಲಿಂಗಕಾಮ ಹಾಗೂ ವಿರುದ್ಧ ಲಿಂಗಗಳ ನಡುವಿನ ಸಂಬಂಧ ಬೇರೆ ಮುಖಗಳನ್ನುಳ್ಳದ್ದಾಗಿದ್ದು, ಗಂಡು ಹೆಣ್ಣಿನ ನಡುವಿನ ಸಂಬಂಧ ವಿಷಮಗೊಂಡಲ್ಲಿ ಹೆಣ್ಣು ಸಲಿಂಗ ಕಾಮಿಯಾಗುವ ಸಾಧ್ಯತೆ ಇದೆ. 1993ರಲ್ಲಿ ದೆಹಲಿಯ ಗೀತಾಬಾತ್ರಾ, ಪಟ್ಟಣಗಳಿಗೆ ವಲಸೆ ಬಂದ ಹೆಣ್ಣುಮಕ್ಕಳ ಬಗ್ಗೆ ನಡೆಸಿದ ಅಧ್ಯಯನದ ಪ್ರಕಾರ ಶೇ. 30 ರಷ್ಟು ಹೆಣ್ಣುಮಕ್ಕಳಿಗೆ ಲೆಸ್ಬಿಯನ್ ಅನುಭವವಿತ್ತು. ಉಳಿದವರಲ್ಲಿ ಬಹುಪಾಲು ಜನ (ವಿವಾಹಿತರೂ ಸೇರಿದಂತೆ) ಅಂತಹ ಸಂಬಂಧದ ಕನಸು ಕಂಡಿದ್ದರು, ಅಂತಹ ಅನುಭವಕ್ಕಾಗಿ ಆತುರಗೊಂಡಿದ್ದರು. ಲೈಂಗಿಕವಾಗಿ ಹಾಗೂ ಭಾವನಾತ್ಮಕವಾಗಿ ಆ ರೀತಿಯ ಸಂಬಂಧ ಹೆಚ್ಚು ತೃಪ್ತಿಕರ ಎನ್ನುವುದು ಬಹುಪಾಲು ಹೆಣ್ಣುಮಕ್ಕಳ ಅಭಿಪ್ರಾಯವಾಗಿತ್ತು.

ಹಿಂದೆ ಲೆಸ್ಬಿಯನಿಸಂಗೆ ಪಿತೃಪ್ರಧಾನ ಸಮಾಜದ ಒಪ್ಪಿಗೆ ಕೂಡಾ ಇತ್ತು. ಸಿಂಧಿ ಪೋಷಕರು ಮದುವೆಯಾದ ಹೆಣ್ಣುಮಕ್ಕಳೊಟ್ಟಿಗೆ ಸೇವಕಿಯರನ್ನು ಕಳಿಸಿಕೊಡುತ್ತಿದ್ದರು. ಇಂದಿಗೂ ಗುಜರಾತ್‌ನಲ್ಲಿರುವ ಅಬಿಸೀನಿಯಾದಿಂದ ಬಂದ ಗುಲಾಮಿ ಸಂತತಿಯವರು ಇದಕ್ಕೊಂದು ಉದಾಹರಣೆ.

ಕಾಳಿತಂತ್ರದಿಂದ ಹಿಡಿದು ರಾಧಾವಲ್ಲಭಿ, ರಾಧಾಕಾಳಿ ಸಂಪ್ರದಾಯದವರೆಗೆ, 2000 ವರ್ಷ ಹಿಂದಿನ ಜಮಿನಿಯಾ ಬ್ರಾಹ್ಮಣ/ ಅಸ್ಸಾಮಿನ ವೈಷ್ಣವರಿಗಿಂತ ಹಿಂದಿದ್ದ ಪುಸ್ತಕಗಳಲ್ಲಿ, ಭಾರತದ ಪುರಾಣ, ಜಾನಪದ ಗದ್ಯಗಳಲ್ಲಿ ಸಲಿಂಗ ಕಾಮದ ಉಲ್ಲೇಖವಿದೆ. ಮುಂಬೈನಲ್ಲಿ ಸ್ತ್ರೀಸಂಘ, ಸಂಘಿನಿ, ದೆಹಲಿಯಲ್ಲಿ ತರ್ಷಿ ಎಂಬ 3 ಲೆಸ್ಬಿಯನ್ ಲೈಫ್‌ಲೈನ್‌ಗಳಿವೆ. ಈ ಲೈಫ್‌ಲೈನ್ ಅನ್ನು ಸಂಪರ್ಕಿಸುವವರ 16-40 ವರ್ಷದವರೆಗಿನ ಬಹುಪಾಲು ಸಮಸ್ಯೆಗಳು-ತಮ್ಮ ಕಾಮಜೀವನ ಸಾಧಾರಣವಾದದ್ದೇ ಎನ್ನುವ ಆತಂಕ, ಒಂಟಿತನದ ಹತಾಶೆ, ಆತ್ಮಹತ್ಯಾ ಮನಃಸ್ಥಿತಿ, ಸ್ನೇಹರಾಹಿತ್ಯ, ತಮ್ಮ ಸಮಸ್ಯೆಯನ್ನು ಹೇಳಿಕೊಳ್ಳಲು ಸ್ನೇಹಿತರ/ ಸಮುದಾಯದ ಕೊರತೆ, ಮದುವೆಯಾಗಿ 'ಸರಿಯಾದ ದಾರಿ ಹಿಡಿ' ಎನ್ನುವ ಸಾಮಾಜಿಕ ಒತ್ತಡ.


ಸಮಕಾಲೀನ ಮಹಿಳೆಯರು ಲೆಸ್ಬಿಯನಿಸಂನಿಂದಾಗಿ ಪುರುಷರ ಅಸಹಿಷ್ಣುತೆಯನ್ನು ಎದುರಿಸುತ್ತಿರಲು ಕಾರಣ: ಪುರುಷರ ಅಸುರಕ್ಷಿತ ಮನೋಭಾವ. ಹೆಣ್ಣುಮಕ್ಕಳು ನಿಶ್ಚಲವಾದ ವೀರ್ಯ ಸಂಗ್ರಹಿಸಿಟ್ಟುಕೊಳ್ಳುವ ಬಟ್ಟಲುಗಳು ಎಂದುಕೊಂಡಿರುವ ಪುರುಷರಿಗೆ, ಹೆಂಗಸರ ತನು ಮನ ಧನ ಎಲ್ಲವೂ ಆಗಿದ್ದವರಿಗೆ, ಹೆಂಗಸರಿಗೆ ತಮ್ಮ ಅಗತ್ಯವಿಲ್ಲ ಎನ್ನುವ ಸ್ಥಿತಿ ಖಂಡಿತಾ ಗಾಬರಿ ಹುಟ್ಟಿಸುತ್ತದೆ. ತಮ್ಮ ಸಂತೋಷಕ್ಕಲ್ಲದೆ ಹೆಣ್ಣುಗಳಿಬ್ಬರು ಕಾಮಿಸುವ ದೃಶ್ಯ ಗಂಡಸರಿಗೆ ಗಾಬರಿಹುಟ್ಟಿಸುವಂತದ್ದು. ತಾವು ಆಯ್ದುಕೊಂಡಿರುವ ಬದುಕನ್ನು ಇವರು ಉಲ್ಲಂಘಿಸುತ್ತಿದ್ದಾರೆ ಎಂದು ಬೇರೆ ಹೆಂಗಸರು ಕೂಡಾ ಲೆಸ್ಬಿಯನ್‌ಗಳನ್ನು ವಿರೋಧಿಸುತ್ತಾರೆ.

ಹೆಣ್ಣುಗಳು ಲೆಸ್ಬಿಯನ್‌ಗಳಾಗುವುದು ಗಂಡಸರ ಕೊರತೆಯಿಂದಲ್ಲ, ಅದೊಂದು ಅತಿರೇಕ ಸ್ಥಿತಿ ಕೂಡಾ ಅಲ್ಲ. ಲೆಸ್ಬಿಯನಿಸಂ ಎನ್ನುವುದು ಹಾಸಿಗೆಯಲ್ಲಿ ಮಲಗಿ ಎದ್ದು ಬಟ್ಟೆ ಕೊಡವಿಕೊಂಡು ಹೊರಟ ನಂತರ ಮುಗಿದುಬಿಡುವಂತದ್ದಲ್ಲ. ಅದೊಂದು ವಾಸ್ತವ ಸ್ಥಿತಿ. ಅದು ಹಿಂದೆ ಇತ್ತು, ಇಂದು ಇದೆ, ನಾಳೆಯೂ ಇರುತ್ತದೆ.

'ಫೈರ್' ವಿರುದ್ಧದ ದಾಂಧಲೆಯನ್ನು ವಿರೋಧಿಸಿ ನಡೆದ ಪ್ರದರ್ಶನದಲ್ಲಿ ಲೆಸ್ಬಿಯನ್‌ಗಳು ಭಾಗವಹಿಸಿದ್ದಾರೆ. ಕಂಪ್ಯೂಟರ್‌ನ ವೆಬ್ ಸೈಟ್‌ಗಳಿಗೆ ಮಾತ್ರ ಸೀಮಿತವಾಗಿದ್ದ, ಬ್ಯೂಟಿ ಪಾರ್ಲರ್‌ಗಳ ಸೊಂಟದಿಂದ ಕೆಳಗೂ ಇಳಿಯುವ ಪೆಡಿಕ್ಯೂರ್‌ಗಳಿಗೆ ಮಾತ್ರ ಸೀಮಿತವಾಗಿದ್ದ, ಭಾರತೀಯ ಲೆಸ್ಬಿಯನಿಸಂ ಈಗ ರಸ್ತೆಗೆ ಇಳಿದಿದೆ. ಇದನ್ನು ನಿರಾಕರಿಸಲು ಸಾಧ್ಯವಿಲ್ಲ!

ಸ್ವಾತಂತ್ರ್ಯವನ್ನು ಹಾಗು ಕಾನೂನನ್ನು ಗೌರವಿಸುವ ಭಾರತೀಯನ ವಿರುದ್ಧ ನಡೆದ ಚಿತಾವಣೆ. 'ಫೈರ್' ವಿರುದ್ಧ ಶಿವಸೇನೆ ಎತ್ತಿರುವ ಪ್ರಶ್ನೆಗಳು ಹಾಸ್ಯಾಸ್ಪದವಾಗಿವೆ. ಅಷ್ಟೇ ಅಲ್ಲ ಅದರ ನಾಯಕರೆನಿಸಿಕೊಂಡಿರುವವರು ದಾಂಧಲೆಗೆ ನೀಡಿರುವ ಪ್ರತಿಕ್ರಿಯೆಗಳು ಪ್ರಜ್ಞೆಗೇ ಸವಾಲು ಎಸೆಯುವಂತಿವೆ.

ನಾಟಕಕಾರರಾದ ವಿಜಯ್ ತೆಂಡೂಲ್ಕರ್ ಹೇಳಿದಂತೆ ಶಿವಸೇನೆ ಭಯಹುಟ್ಟಿಸಿ ಬಾಯಿಯನ್ನು ಮುಚ್ಚಿಸುವ ಕೆಲಸವನ್ನು ಕಳೆದ 25 ವರ್ಷಗಳಿಂದ ಮಾಡುತ್ತಿದೆ. 'ಫೈರ್' ಕುರಿತು ಶಿವಸೇನೆ ಲೈಂಗಿಕತೆ ಅಥವಾ ನೈತಿಕತೆಯ ಪ್ರಶ್ನೆ ಎತ್ತಿಲ್ಲ. ಬದಲಿಗೆ ಗಂಡಸರನ್ನು ತಿರಸ್ಕರಿಸಿ, ಸ್ತ್ರೀಯರು ತಮಗಿಷ್ಟವಾದವರನ್ನು ಆಯ್ದುಕೊಳ್ಳುವ ಹಕ್ಕನ್ನು ಅದು ಪ್ರಶ್ನಿಸುತ್ತಿದೆ. ಒಂದು ವೇಳೆ ನೈತಿಕತೆ ಅದರ ಮುಖ್ಯ ಕಾಳಜಿಯಾಗಿದ್ದಲ್ಲಿ, ಶಿವಸೈನಿಕರು ವರ್ಷದಲ್ಲಿ 365 ದಿನವೂ ರಸ್ತೆಯಲ್ಲಿರಬೇಕಾಗುತ್ತಿತ್ತು. ಅಷ್ಟು ಕೆಟ್ಟದಾಗಿರುತ್ತವೆ ಹಿಂದಿ, ಮರಾಠಿ ಚಿತ್ರಗಳು; ದಾದಾ ಕೊಂಡ್ಕೆ, ಗೋವಿಂದ-ಕರಿಷ್ಮಾ ಕಪೂರ್-ರವೀನಾ ಟಂಡನ್ ಚಿತ್ರದ ದೃಶ್ಯಗಳು. ಮರಾಠಿ ಪ್ರೇಕ್ಷಕರಿಗೆ 'ಲೆಸ್ಬಿಯನ್ ಪ್ರೇಮ' ಕುರಿತ ಪ್ರಸಂಗಗಳು ಹೊಸದೇನಲ್ಲ. 1980 ರಲ್ಲಿ ಬಂದ ವಿಜಯ್ ತೆಂಡೂಲ್ಕರ್ ನಾಟಕ 'ಮಿತ್ರಾ ಚಿ ಗೋಷ್ಟ್', ಲೆಸ್ಬಿಯನ್ ಪ್ರೇಮವನ್ನಾಧರಿಸಿದ್ದು. ಅದರಲ್ಲಿ ವಿವಾದಾತ್ಮಕ ನಾಟಕ 'ಮೆ ನಾಥೂರಾಂ ಬೋಲ್ತಾಯ್'ನ ನಿರ್ದೇಶಕ ವಿನಯ್ ಅಪ್ಟೆ ಮುಖ್ಯ ಪಾತ್ರ ವಹಿಸಿದ್ದರು. ತೆಂಡೂಲ್ಕರ್ ಅವರ ಬೇರೆ ಎರಡು ನಾಟಕಗಳನ್ನು ವಿರೋಧಿಸಿದ್ದ ಶಿವಸೇನೆ 'ಮಿತ್ರಾ'ವನ್ನು ವಿರೋಧಿಸಲಿಲ್ಲ. ಸಲಿಂಗಕಾಮ ಒಂದು ಇಷ್ಯೂ ಆಗುವ ಮೊದಲೇ ಇಸ್ಮತ್ ಚುಗ್ತಾಯ್ ಬರೆದಿದ್ದ 'ಲಿಹಾಫ್' ಕತೆ ಕುರಿತು ವಿವಾದ ಎದ್ದಾಗ (1938) ಲೇಖಕ ತನಗೆ ಕಂಡ ಸತ್ಯವನ್ನು ಬರೆದು ಪ್ರಕಟಿಸುವ ಹಕ್ಕನ್ನು ನ್ಯಾಯಾಲಯ ಎತ್ತಿ ಹಿಡಿದಿತ್ತು. ಆ ಕಥೆ ಇಂಗ್ಲಿಷಿಗೂ ಅನುವಾದಗೊಂಡು, 'ಕ್ಲಾಸಿಕ್' ಎನ್ನಿಸಿತು. ಕಮಲ್ ಆಮ್ರೋಹಿಯ ರಜಿಯಾ ಸುಲ್ತಾನ್‌ನಲ್ಲಿ ಹೇಮಾಮಾಲಿನಿ ಪರ್ವೀನ್ ಬಾಬಿ ಜೋಡಿ ಉದ್ರೇಕ ಹುಟ್ಟಿಸುವ ರೀತಿ ಚಿತ್ರಿಸಿದ ಹಾಡೊಂದಿದೆ. ದಂಪತಿಗಳಾಗಿ ಬಾಳಿದ ಇಬ್ಬರು ಹೆಂಗಸರ ಕಥೆ 'ತೀಜನ್ ಬೀಜನ್' 1980ರ ಮೊದಲ ವರ್ಷಗಳಲ್ಲಿ ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟಿತ್ತು. 1995ರಲ್ಲಿ ಪ್ರಕಟವಾದ ಅಜಿತ್‌ಕೌರ್ ಅವರ ಕಥಾಸಂಗ್ರಹದಲ್ಲಿ ಇಬ್ಬರು ಹಾಸ್ಟೆಲ್‌ವಾಸಿ ಹೆಣ್ಣುಗಳ ನಡುವಿನ ಕಾಮದೃಶ್ಯದ ಚಿತ್ರಣವಿದೆ. ಜೇನುಕಮಾನಿಯ 'ಜಂಗ್ಲೀಗರ್ಲ್' ಕಥಾಸಂಗ್ರಹದಲ್ಲಿ ಉನ್ನತ ವರ್ಗಕ್ಕೆ ಸೇರಿದ ಮಹಿಳೆ ಹಾಗು ಬ್ಯೂಟಿಷಿಯನ್ ನಡುವಿನ ಕಾಮ ಸಂಬಂಧಿ ಕಥೆ ಇದೆ. ಗೀತಿ ಥಡಾನಿಯ 'ಸಖಿಯಾನಿ' ಒಂದು ಲೆಸ್ಬಿಯನ್ ಆತ್ಮ ಚರಿತ್ರೆ.



ಬಾಳಾ ಠಾಕರೆ ಉವಾಚ

"'ಫೈರ್' ಚಿತ್ರದ ಪ್ರಮುಖ ಪಾತ್ರಗಳ ಹೆಸರನ್ನು 'ರಾಧಾ-ಸೀತಾ' ದಿಂದ 'ಶಬಾನಾ-ಸಾಯಿರಾ' ಎಂದು ಬದಲಿಸಿದಲ್ಲಿ ನನ್ನ ಆಕ್ಷೇಪಣೆನ್ನು ಹಿಂತೆಗೆದುಕೊಳ್ಳುತ್ತೇನೆ.

ಒಂದು ಹಿಂದೂ ಪರಿವಾರದ ಅಸ್ವಾಭಾವಿಕ ಮನೋ ದೌರ್ಬಲ್ಯವನ್ನೇ ಚಿತ್ರದುದ್ದಕ್ಕೂ ಪ್ರದರ್ಶಿಸುವ ಅಗತ್ಯವೇನಿತ್ತು?"

ಎಂ.ಎಫ್.ಹುಸೇನ್ ಮನೆಯಲ್ಲಿ ನಡೆದ ದಾಂಧಲೆ, ಮಣಿರತ್ನಂ ಚಿತ್ರ 'ಬಾಂಬೆ' ವಿರುದ್ಧ ನಡೆದ ಅಬ್ಬರ, ದಿಲೀಪ್ ಕುಮಾರ್ ಮನೆ ಮುಂದೆ ಶಿವಸೈನಿಕರು ನಡೆಸಿದ ಅರೆಬೆತ್ತಲೆ ಪ್ರದರ್ಶನ ಇವೆಲ್ಲ ಠಾಕರೆ ಕಬ್ಬಿಣದ ಹಸ್ತ ಬಳಸಿ ವಿಚಾರ ಭೇದವನ್ನು ಹತ್ತಿಕ್ಕುತ್ತಿರುವುದರ ಸೂಚನೆಯಾಗಿದೆ. ಡಿಸೆಂಬರ್ 14 ರಂದು ಶಿವಸೇನೆಯ ಸಂಸದ ಸಂಜಯ್ ನಿರುಪಮ್ 'ದಿಲೀಪ್ ಕುಮಾರ್ ಒಬ್ಬ ಪಾಕಿಸ್ತಾನಿ' ಎಂದ. ಇದಕ್ಕೆ ಆತ ನೀಡಿದ ಕಾರಣ ದಿಲೀಪ್ ಪಾಕಿಸ್ತಾನ ನೀಡಿದ ನಿಷಾನ್ ಎ ಪಾಕಿಸ್ತಾನ್ ಸ್ವೀಕರಿಸಿದ್ದಾರೆ. ಮುರಾರ್ಜಿ ದೇಸಾಯಿ ಕೂಡಾ ಆ ಪ್ರಶಸ್ತಿಯನ್ನು ಪಡೆದಿದ್ದರು. ಅವರನ್ನು ಸಂಜಯ್ ಪಾಕಿಸ್ತಾನಿ ಎನ್ನುತ್ತಾರಾ?

ಶಿವಸೇನೆಯ ಗೂಂಡಾಗಳದು ಹಿಟ್ಲರನ ಪಡೆಯಲ್ಲದಿರಬಹುದು, ಆದರೆ ಬಾಳ ಠಾಕರೆಗೆ ಸಂಸ್ಕೃತಿಯ ಪ್ರತಿರೋಧ ಶಕ್ತಿಯ ಬಗ್ಗೆ ಅರಿವಿದೆ ಹಾಗೂ ಸಾಂಸ್ಕೃತಿಕ ಶೂನ್ಯವಿದ್ದಾಗ ಮಾತ್ರ ದ್ವೇಷದ ರಾಜಕೀಯ ಸಾಧ್ಯ ಎನ್ನುವುದು ಅರಿವಿದೆ. ಸಾಂಸ್ಕೃತಿಕ ಅನಕ್ಷರತೆ ಇರುವಾಗ ಇನ್ನೊಂದು ಸಂಸ್ಕೃತಿಯ (ಧರ್ಮದ) ವಿರುದ್ಧ ಜನರನ್ನು ಉದ್ರೇಕಿಸುವುದು ಸುಲಭ. 'ನಮ್ಮ ಸಂಸ್ಕೃತಿ ಅಪಾಯದಲ್ಲಿದೆ' ಎಂದು ಕೂಗು ಹಾಕುವುದರ ಮೂಲಕ ಫ್ಯಾಸಿಸ್ಟರು ಹಾಗು ಕ್ರಾಂತಿಕಾರಿಗಳು ಇಬ್ಬರೂ ತಮ್ಮ ವಿಚಾರವನ್ನು ಹಬ್ಬಿಸಲು ಸಂಸ್ಕೃತಿಯನ್ನು ಬಳಸಿಕೊಂಡಿದ್ದಾರೆ. ಸಮಾಜದ ನಿರ್ಮಾಣದಲ್ಲಿ ಸಂಸ್ಕೃತಿಯ ಪಾತ್ರ ದೊಡ್ಡದು. ಇದರಿಂದಾಗಿಯೇ ಹಿಟ್ಲರನ ವಾರ್ತಾ ಸಚಿವ ಗೊಬೆಲ್ಸ್ ಹೇಳುತ್ತಿದ್ದ: 'ಪ್ರತಿ ಸಲ ಸಂಸ್ಕೃತಿ ಎನ್ನುವ ಪದ ಕೇಳಿದಾಗಲೂ, ನನ್ನ ಕೈ ಪಿಸ್ತೂಲಿನ ಕಡೆ ಹೋಗುತ್ತದೆ!'

'ಫೈರ್' ಚಿತ್ರದಲ್ಲಿ ಸಾಂಪ್ರದಾಯಿಕ ಸ್ತ್ರೀಯರು ತೋರಿಸಿದ ಆಸಕ್ತಿ, ತಮ್ಮದೇ ವ್ಯಕ್ತಿತ್ವ ರೂಪಿಸುವಲ್ಲಿ ಅವರ ಹೋರಾಟದ ಬಗ್ಗೆ ಮೆಚ್ಚುಗೆ ತೋರಿಸಿದ್ದು, ತಮಗೆ ಆಯ್ಕೆಯ ಸ್ವಾತಂತ್ರ್ಯವಿದೆ ಎಂಬ ಅರಿವು ಶಿವಸೇನೆಗೆ



ಅಪಾಯಕಾರಿಯೆನಿಸಿದ್ದು ಸಹಜ. ಚಲನಚಿತ್ರ ತನ್ನಿಂತಾನೇ ವಿಫಲವಾಗುತ್ತದೆ ಎಂದುಕೊಂಡಿದ್ದ ಶಿವಸೇನೆಗೆ ಅದೊಂದು ಮಹಿಳಾ ವೇದಿಕೆಯಾಗಿದ್ದು ಭಯ ಹುಟ್ಟಿಸಿತು. ದೀಪಾ ಮಹ್ತಾ ಪ್ರತಿಭಟಿಸುತ್ತಿದ್ದ ಹೆಣ್ಣುಮಕ್ಕಳನ್ನು 'ನೀವು ಚಲನಚಿತ್ರ ನೋಡಿದ್ದೀರಾ' ಎಂದು ಕೇಳಿದ್ದಕ್ಕೆ ಅವರು ಹೇಳಿದ್ದು 'ಇಲ್ಲ. ಆದರೆ ಅದು ನಮ್ಮ ಸಂಸ್ಕೃತಿಗೆ ವಿರುದ್ಧವಾದುದು'. ಗೂಂಡಾಗಿರಿ ಕಾನೂನಿಗೆ ವಿರೋಧವಲ್ಲವೇ ಎಂದದ್ದಕ್ಕೆ ಬಂದ ಉತ್ತರ 'ನಾವೇ ಕಾನೂನು!' ಸೀತಾಳ ಹೆಸರನ್ನು ನೀತಾ ಎಂದು ಬದಲಾಯಿಸಲು ಸೆನ್ಸಾರ್ ಸೂಚಿಸಿದಾಗಲೇ ಮುಂದಿನ ಸುಳಿವು ಸಿಕ್ಕಿತು. ಬಿಡಿ ಎಣಿಕೆಯ ಗೂಂಡಾಗಳು ಇಡೀ ಸಮಾಜವನ್ನು ಹೇಗೆ ಹೆದರಿಸಿ ಇಟ್ಟುಕೊಂಡಿದ್ದಾರೆ ಎನ್ನುವುದಕ್ಕೆ ಇದೊಂದು ಉದಾಹರಣೆ.

'ಕಲೆ, ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಸಲಿಂಗಕಾಮವನ್ನು ತೋರಿಸಿ ಮುಗ್ಧರನ್ನು ದಾರಿ ತಪ್ಪಿಸಬಾರದು. ನಾಳೆ ಸಲಿಂಗಕಾಮ ಇದರಿಂದಾಗಿ ಸಾರ್ವತ್ರಿಕವಾಗಬಹುದು. ಅದು ಸಾಮಾಜಿಕ ಏಡ್ಸ್‌ನಂತೆ. ಸರ್ಕಾರವನ್ನು ನಾನು ಆಳುತ್ತಿರುವುದರಿಂದ, ನನ್ನ ಬಲವನ್ನು ನಾನೇಕೆ ನಿಯಂತ್ರಿಸಿಕೊಳ್ಳಬೇಕು? ಠಾಕ್ರೆ ಜನರಿಗೆ ಒಳ್ಳೆಯದನ್ನು ಮಾಡುತ್ತಿದ್ದಾನೆ, ಪತ್ರಿಕೆಗಳು ಅದನ್ನು ತಪ್ಪಾಗಿ ವರದಿ ಮಾಡುತ್ತಿವೆ' ಎನ್ನುತ್ತಾರೆ ಬಾಳ ಠಾಕರೆ. ಭಾರತದ ಸಂಸ್ಕೃತಿ ರಕ್ಷಣೆಯ ಮಾತನ್ನಾಡುವ ಇದೇ ಗುಂಪಿನ ಮಾಜಿ ಸಂಸದ ಕ್ರಿಶ್ಚಿಯನ್ ನನ್‌ಗಳ ಮೇಲೆ ನಡೆಸಿದ ಅತ್ಯಾಚಾರವನ್ನು ಸಮರ್ಥಿಸುತ್ತಾ ಹೇಳಿದ್ದು: ''ಭಾರತದ ಕ್ರಿಶ್ಚಿಯನ್ನರು ಮೂಲಭೂತವಾಗಿ ಹಿಂದೂಗಳು. ಮತಾಂತರ ಹೊಂದಿದ ನಂತರ ಅವರು ರಾಮನನ್ನು ಪೂಜಿಸುವುದನ್ನು ನಿಲ್ಲಿಸಿದ್ದರಿಂದ ಅವರು ಭಾರತೀಯರು ಎಂಬ ಹಕ್ಕನ್ನು ಕಳೆದುಕೊಂಡಿದ್ದಾರೆ''. ವೇಶ್ಯಾವೃತ್ತಿಗೆ ಹೆಣ್ಣುಮಕ್ಕಳನ್ನು ಮಾರುವುದು, ಕೆಳಜಾತಿಯವರಿಗೆ ಬುದ್ಧಿ ಕಲಿಸಲು ಅವರ ಹೆಣ್ಣುಮಕ್ಕಳನ್ನು ಬೆತ್ತಲೆ ಮೆರವಣಿಗೆ ನಡೆಸುವುದು, ಹುಡುಗಿಯೊಬ್ಬಳ ಮೇಲೆ ಜೀಪ್ ಹರಿಸಿ ಆಕೆಯನ್ನು ಕೊಲ್ಲುವುದು, ಬೇರೆ ಧರ್ಮೀಯರ ಮಾರಣಹೋಮ -ಇದರಲ್ಲಿ ಯಾವುದು ಭಾರತೀಯ ಸಂಸ್ಕೃತಿ? ಇವೆಲ್ಲಕ್ಕಿಂತ ಹೆಚ್ಚು ಸಂಸ್ಕೃತಿಗೆ ಆಘಾತ ಇಬ್ಬರು ಹೆಣ್ಣು ಮಕ್ಕಳು ಕಾಮಿಸುವುದರಿಂದ ಆಗುತ್ತದಾ?

ಶಿವಸೇನೆಯ ಇನ್ನೊಂದು ಗುರಿ ಶಬಾನಾ ಆಜ್ಮಿ. ರಾಜ್ಯ ಸಭೆಯ ಸದಸ್ಯಳಾದ ಆಕೆ ಪೂರ್ಣಾವಧಿ ರಾಜಕಾರಣಕ್ಕೆ ಇಳಿಯುವುದು ಖಚಿತವಾಗಿದೆ. ಬೇರೆ ಮುಸ್ಲಿಂ ನಾಯಕರಂತೆ ಆಕೆಯ ಜಾತ್ಯಾತೀತೆಯನ್ನಾಗಲೀ, ಭಾರತೀಯತೆಯನ್ನಾಗಲೀ ಪ್ರಶ್ನಿಸುವುದು ಅಸಾಧ್ಯ. ಆಕೆಯ ತಂದೆ ಕಮ್ಯುನಿಸ್ಟ್ ಹಾಗೂ ಕವಿ. ಆಕೆ ಮುಂಬೈನಲ್ಲಿ ರಾಜಕೀಯವಾಗಿ ಬೆಳೆಯುತ್ತಿರುವುದು ಸೇನೆಗೆ ತಲೆ ನೋವಾಗಿದೆ. ಅದನ್ನು ಪ್ರಾರಂಭದಲ್ಲೇ ಚಿವುಟಿ ಹಾಕಲು ಸೇನೆ ಪ್ರಯತ್ನಿಸುತ್ತಿದೆ.

'ಮಿ ನಾಥೂರಾಂ' ನಾಟಕವನ್ನು ವಿರೋಧಿಸಿದವರು 'ಫೈರ್' ಅನ್ನು ಬೆಂಬಲಿಸುತ್ತಿದ್ದಾರೆ. ಜನರ ಒತ್ತಾಯದಿಂದ ಚಿತ್ರವನ್ನು ಮತ್ತೆ ಸೆನ್ಸಾರ್‌ಗೆ ಕಳುಹಿಸಬೇಕಾಯ್ತು ಎನ್ನುವ ಪ್ರಮೋದ್ ಮಹಾಜನ್ ಮಾತು ಮೂರ್ಖತನದ್ದು. ಗೋಡ್ಸೆ ಕುರಿತ ನಾಟಕವನ್ನು ವಿರೋಧಿಸಿದವರು ಸಾರ್ವಜನಿಕರ ಆಸ್ತಿಪಾಸ್ತಿಗೆ ಹಾನಿಯುಂಟುಮಾಡಲಿಲ್ಲ ಎನ್ನುವುದನ್ನು ಮಹಾಜನ್ ಜಾಣತನದಿಂದ ಮರೆತಿದ್ದಾರೆ. ಗೋಡ್ಸೆ ನಾಟಕದ ಉದಾಹರಣೆ ನೀಡಿದ ಮಹಾಜನ್ ಹಿಂದುತ್ವವಾದಿಗಳಿಗೆ ಪ್ರಿಯರಾದರು. 'ಜನರ ಒತ್ತಾಯ' ಎನ್ನುವುದು ಸುಳ್ಳು ನೆಪ. ಬಿಡಿ ಎಣಿಕೆಯ ಗೂಂಡಾಗಳು ಎಲ್ಲ ಸಾರ್ವಜನಿಕರನ್ನು ಪ್ರತಿನಿಧಿಸುವಂತಾದದ್ದು ಎಂದಿನಿಂದ!

ಸ್ವಾತಂತ್ರ್ಯ ಮತ್ತು ಆಯ್ಕೆ

ಶಿವಸೇನೆ ನಡೆಸಿದ ಹಲ್ಲೆಯು ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ತತ್ವಗಳ ವಿರುದ್ಧ ಮಾತ್ರವಲ್ಲ, ಭಾರತೀಯ ಸೌಜನ್ಯದ ವಿರುದ್ಧ ನಡೆಸಿದ ಹಲ್ಲೆಯಾಗಿದ್ದು ಅದನ್ನು ರಾಜಕೀಯ ಸಾಂಸ್ಕೃತಿಕ ನೆಲೆಯಲ್ಲೇ ಎದುರಿಸಬೇಕು. ಚಿತ್ರದಲ್ಲಿ ಲೆಸ್ಬಿಯನಿಸಂ ಕುರಿತ ಒಳಪ್ರವಾಹವೊಂದು ಇದೆ ನಿಜ, ಸೇನೆ ಅದನ್ನು ಬೀದಿಗೆ ತಂದು ನಿಲ್ಲಿಸಿದೆ. ಸಲಿಂಗ ಕಾಮ ಕುರಿತು ಪ್ರಾಚೀನ ಬರಹಗಳಿವೆ, ದೇವಾಲಯದ ಶಿಲ್ಪಗಳಿವೆ. ಆದರೆ ಜನ ಸಲಿಂಗ ಕಾಮವನ್ನು ಸಹಿಷ್ಣುತೆಯಿಂದಲೇ ತಿರಸ್ಕರಿಸಿದ್ದಾರೆ. ಅದು ಮದುವೆಗೆ ಪರ್ಯಾಯವಾಗಿದ್ದರೂ, ಸಮಾಜ ಅದನ್ನು ಮನ್ನಿಸಿರಲಿಲ್ಲ.

ಮಹೇಶ್‌ಭಟ್ ಹೇಳಿದಂತೆ 'ಸಾಂಸ್ಕೃತಿಕ ತುರ್ತುಪರಿಸ್ಥಿತಿ' ಯೊಂದು ಜಾರಿಯಲ್ಲಿದೆ. ಸೃಜನಶೀಲರು ಸಾಮೂಹಿಕವಾಗಿ ಅಂಗೀಕೃತವಾದ ನೈತಿಕತೆ ಹಾಗೂ ಶಿಷ್ಟತೆಯನ್ನು ಮನ್ನಿಸಬೇಕೆಂಬ ದೃಷ್ಟಿಕೋನ ಹೆಚ್ಚು ಗರಿಗಟ್ಟಿಕೊಳ್ಳುತ್ತಿದೆ. ಕಲಾವಿದರು ಬೇರೆಯವರ ನಂಬಿಕೆಗಳನ್ನು ಹೀಗಳೆಯಲು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಳಸಬಾರದು ಎಂಬುದು ಸರಿ. ಸೀತೆಯನ್ನು, ಪ್ರವಾದಿ ಮಹಮ್ಮದರನ್ನು ಗೌರವಿಸುವವರು ತುಂಬಾ ಸಂಖ್ಯೆಯಲ್ಲಿರುವುದರಿಂದ ಅವರ ಭಾವನೆಯನ್ನು ಗೌರವಿಸಲೇಬೇಕು. ಇದನ್ನೇ ತುಂಬಾ ಎಳೆದರೆ ಯಾರನ್ನು ಕುರಿತು ಬರೆಯುವುದೂ ಕಷ್ಟವಾಗಿ ಬಿಡುತ್ತದೆ. ಕೊನೆಗೆ ಮಾಧುರಿ ದೀಕ್ಷಿತ್, ಸಚಿನ್ ತೆಂಡೂಲ್ಕರ್ ಬಗ್ಗೆ ಕೂಡಾ.

'ಸಾಮೂಹಿಕ ಪ್ರಜ್ಞೆ' ಯಂತಹ ತತ್ವಗಳು ಗುರಿ ಶುದ್ಧವಿರುವ ನಾಗರಿಕ ವಾತಾವರಣದಲ್ಲಿ ಹಾಗೂ ವಿವಾದಾತ್ಮಕ ವಿಷಯಗಳ ಬಗ್ಗೆ ತಾರ್ಕಿಕ ವಿಮರ್ಶೆ, ಸಂವಾದ, ಕೂತುಕೊಳ್ಳುವಿಕೆ ಸಾಧ್ಯವಿದ್ದಲ್ಲಿ ಮಾತ್ರ ಅರ್ಥಪಡೆದುಕೊಳ್ಳುತ್ತವೆ. ಗುರಿ ಸಂದೇಹಾಸ್ಪದವಾಗಿರುವ, ವಿಚಾರಭೇದವನ್ನು ಬಲಪ್ರಯೋಗಿಸಿ ಹತ್ತಿಕುವ ವಿಷಮಯ ವಾತಾವರಣದಲ್ಲಿ ಅಂತಹ ತತ್ವಗಳಿಗೆ ಯಾವುದೇ ಅರ್ಥವಿಲ್ಲ. ಇದಲ್ಲದೆ ಸಮಾಜದ ಒಳಿತನ್ನು ನಿರ್ಧರಿಸುವವರು ಯಾರು ಎನ್ನುವ ಬಹುಮುಖ್ಯ ಪ್ರಶ್ನೆ ಕೂಡಾ ಇಲ್ಲಿ ಏಳುತ್ತದೆ. ಲಾಠಿ ಝಳಪಿಸುವ ಗೂಂಡಾಗಳು, ಮತಭ್ರಾಂತರು ಸಮೂಹ ಪ್ರಜ್ಞೆಗಳಾದರೆ, ಸೃಜನಶೀಲತೆ ಸ್ವಾತಂತ್ರ್ಯಗಳು ಮಣ್ಣು ತಿನ್ನುತ್ತವೆ.

'ಫೈರ್' ಮರುಪ್ರದರ್ಶನ ಮುಂಬೈ ದೆಹಲಿಯಲ್ಲಿ ಪೊಲೀಸ್ ರಕ್ಷಣೆಯಲ್ಲಿ ಪ್ರಾರಂಭವಾಗಿದೆ. ಆದರೆ ಚಿತ್ರಮಂದಿರಗಳ ಮುಂದೆ ಶಿವಸೈನಿಕರು ಪ್ರದರ್ಶನಕ್ಕೆ ತಡೆಯೊಡ್ಡಿದ್ದಾರೆ. ವಿವಾದಗಳು ಒತ್ತಟ್ಟಿಗಿರಲಿ, ನೀವು ಚಿತ್ರವನ್ನು ನೋಡಲೇಬೇಕು, ಅದರಿಂದ ಹೆಣ್ಣನ್ನು ನೋಡುವ ನಿಮ್ಮ ದೃಷ್ಟಿಯೇ ಬದಲಾಗಿಬಿಡುತ್ತದೆ. ■

ಕ್ವಿಜ್-18ರ ಬಹುಮಾನ ವಿಜೇತರು

ವೈ.ಸುಬ್ರಹ್ಮಣ್ಯ ಹೊಳ್ಳ
c/o ಮೋಹನದಾಸ ಶೆಣೈ
ಕಾರಂತ ಕಾಂಪ್ಲೆಕ್ಸ್
ಕುಂದಾಪುರ - 576 201 (ದ.ಕ.)

ಸುಲೋಚನ ಚಿನ್ನಳ್ಳಿ
ಎಸ್.ಎಸ್.ಬಿ.ಇ.ಎಮ್. ಸ್ಕೂಲ್
ಕಾರಟಗಿ - 583229

ಎಂ.ಪರಮೇಶ್ವರ
ಮದ್ದೀಹಳ್ಳಿ
ಹಲಗಲದ್ದಿ (ಅಂಚೆ)
ಹಿರಿಯೂರು (ತಾ)
ಚಿತ್ರದುರ್ಗ ಜಿಲ್ಲೆ - 577 546

ಸಂತೋಷ 'ಮೋ' ರಾಹಿಂಜ
c/o ಮೋಹನರಾವ ರಾಹಿಂಜ
ಸೈದಾಪುರ ಮರಾಠ ಗಲ್ಲಿ
ಧಾರವಾಡ - 580 008

ಗೋವಿಂದಪ್ಪ ಲಕ್ಷ್ಮಣ ಬಿ.ಪಾಟೀಲ
ಬೆಳಗಲಿ ವಿದ್ಯಾವರ್ಧಕ ಪ್ರೌಢಶಾಲೆ
ಬೆಳಗಲಿ,
ತಾ: ಮುಧೋಳ
ಜಿ: ಬಾಗಲಕೋಟೆ - 587113

ಈ ಐದು ಜನ ಬಹುಮಾನ ವಿಜೇತರಿಗೆ ತಲಾ 100 ರೂ. ಮೌಲ್ಯದ ಪುಸ್ತಕಗಳನ್ನು ಬಹುಮಾನವಾಗಿ ನೀಡಲಾಗುವುದು.

ಕ್ವಿಜ್ - 18ರ ಸರಿಯುತ್ತರ

1. ಎಂ.ಎಸ್.ನರಸಿಂಹಮೂರ್ತಿ
2. 6ನೇ ಭಾರತೀಯರು
3. ಯಾಸರ್ ಅರಾಫತ್
4. ಕೆ.ಎನ್.ಹರಿಕುಮಾರ್
5. ಬ್ಯಾಂಕಿಂಗ್ ಸೇವಾ ನೇಮಕಾತಿ ಮಂಡಳಿ

ಸೂಚನೆಗಳು

- ಕೆಳಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯಾ ಪ್ರಶ್ನೆಯ ಕೆಳಗೆ ನೀಡಲಾದ ಸ್ಥಳದಲ್ಲಿ ಬರೆಯಿರಿ.
- ಒಬ್ಬರು ಎಷ್ಟು ಪ್ರವೇಶ ಪತ್ರಗಳನ್ನಾದರೂ ಕಳಿಸಬಹುದು. ಮುದ್ರಿತ ಕೂಪನ್ನನ್ನೇ ಬಳಸಬೇಕು. ಜೆರಾಕ್ಸ್ ಪ್ರತಿ ಪರಿಗಣಿಸುವುದಿಲ್ಲ.
- ಸರಿಯುತ್ತರಗಳ ಪ್ರವೇಶ ಪತ್ರಗಳನ್ನೆಲ್ಲಾ ಸೇರಿಸಿ ಲಾಟರಿ ಮೂಲಕ ಬಹುಮಾನಗಳನ್ನು ನಿರ್ಧರಿಸಲಾಗುವುದು. ಐದು ಜನ ಬಹುಮಾನ ವಿಜೇತರಿಗೆ ತಲಾ 100 ರೂ. ಮೌಲ್ಯದ ಪುಸ್ತಕಗಳನ್ನು ಬಹುಮಾನವಾಗಿ ನೀಡಲಾಗುವುದು.
- ಪ್ರವೇಶ ಪತ್ರ ತಲುಪಲು ಅಂತಿಮ ದಿನಾಂಕ **15 - 1 - 1999**

ವಿಜೇತರಿಗೆ 500 ರೂ. ಬಹುಮಾನ

ಪ್ರವೇಶ ಪತ್ರ

ಕ್ವಿಜ್ - 19

ಹೆಸರು...

ವಿಳಾಸ...

....

....

ಪಿನ್ ಕೋಡ್.......................... ದೂರವಾಣಿ..........................

1. 'ಮನೆ' ವಾರ ಪತ್ರಿಕೆ ಯಾವ ತಿಂಗಳಲ್ಲಿ ಬಿಡುಗಡೆಯಾಗುತ್ತದೆ?

   ....

2. ಡಿಸೆಂಬರ್ 20ರಂದು ಬೆಂಗಳೂರಿನಲ್ಲಿ ನಿಧನರಾದ ಖ್ಯಾತ ಜ್ಯೋತಿಷ್ಯ ಶಾಸ್ತ್ರಜ್ಞ ಯಾರು?

   ....

3. 1998ರ ಏಷ್ಯನ್ ಕ್ರೀಡಾಕೂಟ ನಡೆದದ್ದು ಎಲ್ಲಿ?

   ....

4. ಇರಾಕ್ ಅಧ್ಯಕ್ಷರ ಹೆಸರೇನು?

   ....

5. 1998ರ 'ಪಂಪ' ಪ್ರಶಸ್ತಿ ಪಡೆದವರಾರು?

   ....

ಪ್ರವೇಶ ಪತ್ರವನ್ನು 15. 1.99ರೊಳಗೆ ಕಳುಹಿಸಬೇಕಾದ ವಿಳಾಸ :
ಸಂಪಾದಕರು, **ಬಿಸಿಲ ಬದುಕು**, ಅಂಚೆ ಪೆಟ್ಟಿಗೆ 7951,
ಬಸವೇಶ್ವರನಗರ, ಬೆಂಗಳೂರು-79.

ಪರಮನ ಪರದೇಶ ಯಾತ್ರೆ

ಭಾನುವಾರ, ಯಾವ ತರಲೆ ತಾಪತ್ರಯ ವಿಲ್ಲದ ದಿನ, ಹಾಯಾಗಿ ನಿದ್ರಿಸಬಹುದೆಂದು ಎಣಿಸಿದ್ದೆ.

'ರ್‍ರೀ ಎದ್ದೇಳ್ರಿ ಮೇಲೆ, ಯಾವ ಜನ್ಮದ ಕರ್ಮಾನೋ, ನಿಮ್ಮನ್ನ ಕಟ್ಕೊಂಡಿದೀನಿ' ಜಯಳ ಸಿಡುಕುಮಾತು. ಬೆಳಿಗ್ಗೆ ಏನಾಯ್ತು ಇವ್ಳಿಗೆ?

ಮೆಲ್ಲಗೆ, ಆಮೆಯಂತೆ ಹೊದಿಕೆಯಿಂದ ತಲೆ ಈಚೆ ತೆಗೆದೆ. ಎದುರಿಗೇ ನಿಂತಿದ್ದಾಳೆ. ಬಲಗೈಯಲ್ಲಿ ಪೇಪರು, ಅಲ್ಲಿ ಕಾಫಿ ಬಟ್ಟಲು ಇರಬೇಕಿತ್ತು ಶಿವನೆ! ಇದೇನಪ್ಪಾ ಎನಿಸಿತು.

'ಏಳ್ರೀ ಮೇಲೆ, ಯಾರ್‍ಯಾರೋ ಏನೇನೋ ಆಗ್ತಿದಾರೆ, ನೀವು ಮಾತ್ರ ಇನ್ನೂ ಮದ್ವೆಯಾದಾಗ ಇದ್ರಲ್ಲಾ ಅಲ್ಲೇ ಇದ್ದೀರಿ' ಸೊರ, ಸೊರ ಮಾಡುತ್ತಾ ಹೊದಿಕೆ ಎಳೆದು ಬಿಸಾಡಿದಳು.

ಏನಾಯ್ತು? ಭಾರತವೇನಾದ್ರೂ ಏಕಾಏಕಿ ರಾಮ ರಾಜ್ಯವಾಯ್ತೆ? ಯಾವ ಮಹನೀಯ ಭಾರತದಲ್ಲಿ ಭ್ರಷ್ಟಾಚಾರ ನಿಲ್ಲಿಸಿದ? ಅಥವಾ ನಮ್ಮನೆ ಹೆಬ್ಬೆಟ್ಟು, ಕೆಲಸದ, ಶ್ರೀಮತಿ ಗಂಗಮ್ಮ ನಮ್ಮ ದೇಶದ ಪ್ರಧಾನಿಯಾದಳೋ? ಎಲ್ಲಾ ಯೋಚನೆಗಳೂ, ಏಕಾಏಕಿ ಬಂತು.

'ಆಮೇಲೆ ನಿಧಾನವಾಗಿ ಓದ್ತೀನಿ ಬಿಡೆ'.

'ಅದ್ಕೆ ನೀವು ಹಿಂಗಾಗಿರೋದು. ಇಲ್ಲಿ ನೋಡ್ರೀ' ಒಂದು ಕಡೆ ಪೇಪರಿಗೆ ಕೈತೋರಿ ಮತ್ತೊಂದು ಕೈಯಿಂದ ಮೂತಿ ತಿವಿದಳು.

"Bon Vougage' ಕಾಲಂ, ಅಂದ್ರೆ ವಿದೇಶ ಪ್ರಯಾಣ.

ಸುಂದರವಾಗಿ ನಗುತ್ತಿದ್ದ ಪರಮನ ಫೋಟೋ, ನಿದ್ದೆಗಣ್ಣು ಪೂರ್ತಿಹಾರಿತು.

ಪರಮ, ನಮ್ಮ ಪರಮ, ನನ್ನ ಖಾಸಾ ಸ್ನೇಹಿತ ಪರಮ, ಹೊರಟಿದ್ದ ವಿದೇಶಕ್ಕೆ ಅವನಿಗೆ ಶುಭ ಹಾರೈಕೆ, ಆತ್ಮೀಯರು ಮತ್ತು ಸ್ನೇಹಿತರಿಂದ.

'ಸಾಧ್ಯವೇಯಿಲ್ಲ. ಇದ್ರಲ್ಲಿ ಏನೋ ಕಿತಾಪತಿಯಿದೆ'.

'ನಿಮ್ಗೆ ಆ ಯೋಗ್ಯತೆಯಿಲ್ಲಾಂದ್ರೆ, ಬೇರೇ ವ್ರಿಗೂ ಇಲ್ವಾ? ಸುಮ್ನೆ ಹೊಟ್ಟೆಕಿಚ್ಚು ಪಡ್ಬೇಡಿ'. ಬರೀ ಅವನ ಫೋಟೋವೇ ಇಷ್ಟು ರಾದ್ಧಾಂತ ಮಾಡಿದೆಯಲ್ಲಾ?'

ಇನ್ನು ಅವನೇ ಖುದ್ದಾಗಿ ಬಂದ್ರೆ? ನಿಧಾನವಾಗಿ ಓದಿದೆ.

'Mr. Paramesh is leaving Bangalore today to visit U.K. D.K. and B.K. wishing him all success. Relatives and friends'.

ನನ್ನ ಅನುಮಾನ ನಿಜವಾಗ಼್ೂ ಪ್ರಾರಂಭವಾದದ್ದೇ ಇಲ್ಲಿ ಯು.ಕೆ. ಗೊತ್ತು ಅಂದ್ರೆ ಯುನೈಟೆಡ್ ಕಿಂಗ್ ಡಂ... ಅದೇ ಇಂಗ್ಲೆಂಡು. ಆದರೆ ಡಿ.ಕೆ. ಬಿ.ಕೆ.ಗಳು ಯಾವುದು? ಅದೂ ಅತಿ ಸಣ್ಣ ಅಕ್ಷರದಲ್ಲಿ ಹಾಕಿದ್ದಾರೆ.

'ಚೋಟು, ಈ ಡಿ.ಕೆ. ಬಿ.ಕೆ. ಅಂದ್ರೆ ಯಾವ ದೇಶಾನೋ?' ಕೇಳಿದೆ.

'ನಂಗೇನು ಗೊತ್ತು? ನಾನು ಸೈನ್ಸ್ ಸ್ಟೂಡೆಂಟು, ಬೇಕಿದ್ರೆ ನಿನ್ನ ಮಗಳನ್ನು ಕೇಳು' ನನ್ನ ಮೇಲೆ ಕೋಪವಿತ್ತು, ಅವನು ಬೇಡಾಂದ್ರೂ ಸೈನ್ಸಿಗೇ ತಳ್ಳಿದ್ದೆ. ನನ್ನ ಮುದ್ದು ಮಗಳು ಬಂಗಾರಿ, ಅವಳ ತಲೆ ಕೆಡಬಾರ್ದಲ್ಲ- ಆರ್ಟ್ಸಿಗೆ ಹಾಕಿದ್ದೆ.

'ಅಯ್ಯೋ, ಪಪ್ಪಾ ನಿಂಗೆ ಅಷ್ಟೂ ಗೊತ್ತಾಗಲ್ವ' ತಾನೇ ಬುದ್ಧಿವಂತೆಯೆಂದು ಕತ್ತುಕೊಂಕಿಸಿದಳು. 'ಡಿ.ಕೆ. -ಅಂದ್ರೆ ದುಬೈ, ಕೊರಿಯಾ'.

'ಅದ್ಸರಿ ಬಿ.ಕೆ.ಅಂದ್ರೆ?' ತಲೆ ಕೆರೆದೆ.

'ಅದು ಬ್ರೆಜಿಲ್, ಕೆನಡಾ ಇರ್ಬೇಕು'.

'ಪಾಪಿ, ನನ್ನ ಬಿಟ್ಟು ಬ್ರೆಜಿಲ್‌ನಲ್ಲಿ ಸಾಂಬಾ ಡ್ಯಾನ್ಸ್‌ಗೆ ಹೋಗ್ತಾನೆ'.

'ಆಹಾ ಈ ಮೂತಿಗೆ ಅದೊಂದು ಕೇಡು, ಈ ವಯಸ್ಸಲ್ಲಿ ಬ್ರೆಜಿಲ್ ಸಾಂಬಾ ಡ್ಯಾನ್ಸ್‌ಬೇಕಾ?' ಜಯಳ ಕೊಂಕಿಗೆ ಸಿದ್ಧನಾಗಿರಲಿಲ್ಲ.

ನನ್ನ ಮೆದುಳಿನ ಹಿಂಭಾಗವೋ, ಮುಂಭಾಗವೋ?. ಅಂತೂ ಒಂದು ಭಾಗ, ಪರಮನನ್ನು ನಂಬಬೇಡವೆಂದು ಎಚ್ಚರಿಸುತ್ತಿತ್ತು. ಆದರೆ ಉಳಿದೆಲ್ಲಾ ಭಾಗ, 'ಪೇಪರಿನಲ್ಲಿ ಬಂದಿರೋದನ್ನೂ ನಂಬಲ್ವ? ನಿನಗಂತೂ ಯೋಗ್ಯತೆ ಇಲ್ಲ. ಬೇರೇವ್ರ ಬಗ್ಗೆ ಅನುಮಾನ ಪಡೋದು ನೋಡು' ಎನ್ನುತ್ತಿದ್ದವು. ಆದರೆ ಮೆದುಳಿನ ಮುಖ್ಯಭಾಗವೇ ನಂಬಬೇಡ, ನಂಬಬೇಡ ಎಂದು ಕಿರುಚಿತ್ತು.

ಅಷ್ಟೊತ್ತಿಗಾಗಲೇ ಜಯ ಫೋನ್ ಮಾಡಿದ್ದಳು- ಪರಮನಿಗೆ. ಶುಭ ಹಾರೈಸಿದ್ದಾಯ್ತು. ಪರದೇಶದಿಂದ ತನಗೆ ಏನೇನು ಬೇಕು, ಎಂಬುದನ್ನೆಲ್ಲಾ ನಿಧಾನವಾಗಿ ಒಂದೊಂದೇ ಹೇಳಿ, ಅವನ ಒಳ್ಳೆತನದ ಗುಣಗಾನ ಮಾಡಿ, ಪೂಸಿ ಹೊಡೆದಿದ್ದಳು.

'ಹಣ ಬೇಕಾದ್ರೆ ಈಗ಼್್ಲೇ ಕಳಿಸ್ತೀನಿ, ಇವರ್‍ಹತ್ರ'.

'ಅದೆಲ್ಲಾ ಏನೂ ಬೇಡಾ ಅತ್ಗೆ, ನಂಗ್ನೆಲಿ ಏನೇನಾಗುತ್ತೋ ತರ್‍ತೀನಿ, ಆಮೇಲೆ ಬೇಕಾದ್ರೆ ಹಣ ಕೊಡಿ'.

ಸಧ್ಯ, ಇವರಿಬ್ಬರೂ ಸೇರಿ ನನ್ನ ಮುಂಡಾಯಿಸಲಿಲ್ಲವಲ್ಲ, ಎಂಬುದೇ ಸಮಾಧಾನ.

ಮುಂದೆ ಹದಿನೈದಿಪ್ಪತ್ತು ದಿನ, ಪ್ರತಿ ದಿನ ಪರಮ ಎಲ್ಲೆಲ್ಲಿರಬಹುದು ಎಂದು ಊಹಿಸುತ್ತಿದ್ದೆ. ಬ್ರೆಜಿಲ್‌ನ ಸಾಂಬಾ ಡ್ಯಾನ್ಸನ್ನು ನೋಡದೇ, ಕಲ್ಪಿಸಿಕೊಂಡು ಪುಳಕಗೊಂಡೆ.

ಒಂದು ದಿನ, ಆಫೀಸಿನ ಅಡ್ರೆಸ್ಸಿಗೇ ಪರಮನ ಕಾಗದ.

'ಕೂಡಲೇ ಬಂದು ನೋಡುವುದು, ಯಾರಿಗೂ ಇದರ ಬಗ್ಗೆ ಸುದ್ದಿ ಕೊಡಬೇಡ ಅತ್ಗೆ, ಮಕ್ಕಳಿಗೂ ಸಹ, ಇಲ್ಲದಿದ್ರೆ ಮುಂದಿನ್ವಾರ ನಿನ್ನ ಫೋಟೋ Obituary ಕಾಲಂನಲ್ಲಿ ಗ್ಯಾರಂಟಿ' ಎಂಬ ಒಕ್ಕಣೆ, ಒಬಿಚುಯರಿ ಕಾಲಂ ಅಂದ್ರೆ ಚಿರಸ್ಮರಣೆ ಕಾಲಂ ಸ್ವಾಮಿ!

ಅವನು ಕೊಟ್ಟ ವಿಳಾಸ ಹುಡುಕಿದ, ಭಾರತದ್ದೇ, ಅದೂ ಕರ್ನಾಟಕದ್ದೇ ಅಂದ್ರೆ ಇವನ ವಿದೇಶ ಪ್ರಯಾಣ? ಇಷ್ಟು ದಿನ ಎಲ್ಲಿದ್ದ? ತಲೆ ಗೊಬ್ಬರದ ಗುಂಡಿಯಂತಾಯ್ತು. ಯಾರಿಗೂ ಅನುಮಾನ ಬರದಂತೆ ವಿಚಾರಿಸಿದೆ. ಅದು ಧರ್ಮಸ್ಥಳ ಕುಕ್ಕೆ ಸುಬ್ರಮಣ್ಯನ ನಡುವಿನ ಒಂದೂರು, ಆಫೀಸಿನ ಟೂರೆಂದು ಹೊರಟೆ. ಮರುದಿನ ಅಲ್ಲಿಗೆ ತಲುಪಿದೆ.

'ಬಾರೋ ಗುರುವೇ?' ಪರಮನ ಸ್ವಾಗತ.

'ಚಂಡಾಲ, ವಿದೇಶಕ್ಕೆ ಹೋಗ್ತೀನಂತ; ಇಲ್ಲಿದ್ಯಾ'.

'ಯಾವೋನು ಗುರು ಹಾಗೆ ಹೇಳಿದ್ದು?'

'ಮತ್ತೆ ಪೇಪರ್‍ನಲ್ಲಿ ಯು.ಕೆ, ಡಿ.ಕೆ, ಬಿ.ಕೆ

ಪ್ರವಾಸಾಂತ ಹಾಕ್ಸಿದ್ದಿಯಲ್ಲಾ'.

'ಅವೆಲ್ಲಾ ಪರದೇಶಾಂತ ತಿಳ್ಕೊಂಡ್ರೆ, ನಾನೇನ್ಮಾಡ್ಲಿ ಗುರು. ಅದು- ಯು.ಕೆ. ಅಂದ್ರೆ ಉತ್ತರ ಕನ್ನಡ, ಡಿ.ಕೆ. ದಕ್ಷಿಣ ಕನ್ನಡ, ಬಿ.ಕೆ ಬಾಂಬೆ ಕರ್ನಾಟಕಾಂತ ಪ್ರಕಟಸೋಕ್ಕೆ ಜಾಸ್ತಿ ದುಡ್ಡು ಕೇಳಿದ್ರು, ಅದ್ಕೆ ಷಾರ್ಟ್ ಫಾರಂ ಮಾಡ್ದೆ'.

ನಾನು ಪೂರ್ತಿ ಸುಸ್ತಾದೆ. ಪರಮನಿಗೂ ತುಂಬಾ ದಿನದ ಆಸೆಯಿತ್ತು. ಅವನ ಫೋಟೋ ಪೇಪರಲ್ಲಿ ಬರಲಿಯೆಂದು.

'ಆದ್ರೆ ಬೋನ್‌ವಾಯೇಜ್ ಕಾಲಂನಲ್ಲಿ ಯಾಕೆ ಬಂತು?'

'ನಂಗೇನು ಗೊತ್ತು ಗುರೂ, ಜಾಗ ಎಲ್ಲೂ ಇರ್ಲಿಲ್ವೇನೋ, ಅದ್ಕೆ ಆ ಕಾಲಂಗೇ ಅಡ್ಜಸ್ಟ್ ಮಾಡವ್ರೆ ಪೇಪರ್‍ನೋರು. ನೀವು ತಪ್ಪು ತಿಳ್ಕೊಂಡ್ರೆ, ನಾನೇನ್ಮಾಡ್ಲಿ?' ಕಿಸಕ್ಕನೇ ನಕ್ಕ.

'ಆದ್ರೆ ಒಂದ್ಮಾತು ನಿಜಾ ಗುರು, ಇದರಿಂದ ನನ್ನ ಸಾಲ ಪೂರ್ತಿ ತೀರೋಯ್ತು'

'ಅಂದ್ರೆ' ತಲೆ ಬುಡ ಅರ್ಥವಾಗದೇ ಕೇಳಿದೆ.

'ನಾನು ನಿಜವಾಗ್ಲೂ ಫಾರಿನ್‌ಗೇ ಹೋಗ್ತೀನೀಂತ ತಪ್ಪು ತಿಳ್ಕೊಂಡ್ರು. ಅದ್ನೇ ನಾನು ಕ್ಯಾಷ್ ಮಾಡ್ದೆ, ಅದೂ ಇದೂ ತೊಗೋಬಾಂತ ಬೇಜಾನ್ ಜನ ದುಡ್ಡು ಕೊಟ್ರು. ಸಾಲ ತೀರೋಯ್ತು. ನೀನು ನನ್ನ ದೋಸ್ತಿಯಲ್ವ? ಅದ್ಕೆ ನಿಂಗೆ ಮೋಸ ಮಾಡ್ಬಾರ್ದೂಂತ ಹಣ ಕೇಳಿಸ್ಲಿಲ್ಲ' ಕಿಂಚಿತ್ತಾದ್ರೂ ನಿಯತ್ತಿತ್ತು ಚಾಂಡಾಲನ ಬಳಿ.

'ಮತ್ತೆ ಅವ್ರಿಗೆಲ್ಲಾ ಏನೇನು ಕೊಡ್ತಿ?'

'ಅದಾ ಗುರೂ, ಇಲ್ನೋಡು' ತೋರಿಸಿದ.

'ಗೋಣೀ ಚೀಲದಲ್ಲಿ ತುಂಬಿದ ರೇಡಿಯೋ, ಕ್ಯಾಮರಾ, ಟೇಪ್ ರೆಕಾರ್ಡರ್, ಎಲೆಕ್ಟ್ರಾನಿಕ್ಸ್ ಗೂಡ್ಸುಗಳು. ಎಲ್ಲಾ ಲೋಕಲ್ ಮೇಡೇ, ಗೋವಾ ಬೀಚಿನಲ್ಲಿ ಕೊಂಡದ್ದು, ಮೇಲೆ ಮಾತ್ರ ಮೋನೋಗ್ರಾಂ.'

'ಕೆಟ್ಟರೆ? ಯಾರು ಗ್ಯಾರಂಟಿ ಕೊಡ್ತಾರೆ.' ಈತರಾ ತಂದ ಫಾರಿನ್ ಗೂಡ್ಸಿಗೆ ಪರಮ ಬದುಕಿದ್ದ.

'ಈಗ್ಯಾಕೆ ನನ್ನ ಕರ್ದಿದ್ದು? ಇನ್ನು ನನಗೇನಿದೆಯೋ? ಕೇಳಿದೆ.


'ಮಂಗ್ಳೂರಿಂದ - ಬೆಂಗ್ಳೂರ್‍ಗೆ, ಎರಡು ಪ್ಲೇನ್ ಟಿಕೇಟಿದೆ ಗುರೂ, ನೀನೂ ನನ್ನ ಜೊತೆ ಬಂದ್ರೆ, ನೀನೇ ಬಂದು ಬಾಂಬೇನಲ್ಲಿ ರಿಸೀವ್ ಮಾಡ್ದೇಂತ ಹೇಳ್ಬಹುದು. ನೀನು ಹೇಳಿದ್ರೆ ಆಯ್ತು, ನಂಬ್ತಾರೆ'.

ನನ್ನನ್ನು ಹೇಗೆ ಉಪಯೋಗಿಸಿಕೊಂಡ, ನೋಡಿದ್ರಾ!

ಚಿರಸ್ಮರಣೆ ಕಾಲಂ ಭಯ- ಬಾಯಿ ಮುಚ್ಚಿ ಅವನ ಹಿಂದೆ ಬಂದೆ.

ನಾವಿಬ್ರೂ ಬಂದ ಮೇಲೆ ಪರಮನ ಗಿರಾಕಿಗಳೆಲ್ಲಾ ನಂಬಿದರೆಂದು ಕಾಣುತ್ತದೆ. ಯಾರ್ಯಾರಿಗೆ ಏನೇನು ವಸ್ತುಗಳನ್ನು ಕೊಟ್ಟನೋ? ದೇವರಿಗೆ ಗೊತ್ತು.

'ಅತ್ಗೆ, ನಿಮಗಾಗಿ ಇದು'



ಒಂದು ಕೈ ಚೀಲದ ತುಂಬಾ ತಂದದ್ದನ್ನು ಹರಡಿದ:

ಒಂದು ಸಾವಿರ ಹಲಸಿನ ಹಪ್ಪಳ, ಉಡುಪಿಯಲ್ಲಿ ತೆಗೆದದ್ದು. ಅದು ನೇರವಾಗಿ ಮೇಡ್ ಇನ್ ಬ್ರೆಜಿಲ್ಲಾಯ್ತು.

ಮತ್ತೇನೂ ತರಲಿಲ್ಲವೆಂದು ಜಯಳಿಗೆ ಬೇಜಾರಾದ್ರೂ, ಇಲ್ಲಿಯವರೆಗೂ ಯಾರೂ ತರದ - ಬ್ರೆಜಿಲ್ ಹಪ್ಪಳ ತಂದಿದ್ದ.

'ಯಾಕೆ, ಇವ್ರೇನಾದ್ರೂ ಕಿತಾಪತಿ ಮಾಡಿದ್ರಾ?'

ಜಯ ವಿಚಾರಣೆ, ಪರಮನಿಗೆ ನಾನು ಕಾಸು ಕೊಡುವುದಿಲ್ಲವೆಂದು, ಅವನು ತಮಗೇನೂ ತರಲಿಲ್ಲವೆಂದು ಭಾವಿಸಿದಳು.

'ಹಾಗಲ್ಲ ಅತ್ಗೆ, ತಂದದ್ದನ್ನೆಲ್ಲಾ ಎಲ್ರೂ ಹಂಚ್ಕೊಂಬಿಟ್ರು. ಇದನ್ನಾದ್ರೂ ನಿಮ್ಗೆ ಕೊಡೋಣಾಂತ, ಮುಚ್ಚಿಟ್ಟು ತಂದೆ, ಬ್ರೆಜಿಲ್‌ನಲ್ಲಿ ಇದು ಸಿಗೋದೇ ಕಷ್ಟ. ಅದ್ಕೆ ನಿಮಗೆ ತಂದೆ, ಮುಂದಿನ ಸರ್ತಿ ಹೋದಾಗ ಏನು ಬೇಕೋ ಹೇಳಿ' ಪರಮ ಮೂಗಿಗೆ ತುಪ್ಪ ಹಚ್ಚಿದ. ಮಧ್ಯೆ ನಗು ತಡೆಯದೆ ಮಾತಾಡಲು ಹೋದೆ.

'ಚಿರಸ್ಮರಣೆ ಒಬಿಚುಯರಿ ಕಾಲಂ' ಎಚ್ಚರಿಸಿದ ಪರಮ.

ಅಪರೂಪದ ಬ್ರೆಜಿಲ್ ಹಪ್ಪಳವೆಂದು ಜಯ ಎಲ್ಲವನ್ನೂ ಮುಚ್ಚಿಟ್ಟು, ಒಂದೆರಡನ್ನು ಮಾತ್ರ ರುಚಿಗೆ ಕರೆದಳು.

'ಇದ್ಯಾಕೋ ಹಲಸಿನ ಹಣ್ಣಿನ ವಾಸ್ನೆ ಹೊಡ್ತತ್ತೆ' ಎಂದ ಚೋಟು. ಬ್ರೆಜಿಲ್ನಾಗೂ ಹಲಸಿನ ಹಣ್ಣು ಹಣ್ಣಲ್ವೆ? ಪರಮನ ಸಮಜಾಯಿಸಿ.

'ಮುಂದಿನ ಸರ್ತಿ ಫಾರಿನ್ಗೆ ಹೋಗೋ ಮುಂಚೆ ಹೇಳಿ ಪರಮೇಶ್ ನಾನೇ ಹಣಾನ ಮೊದ್ಲು ಕೊಡ್ತೀನಿ' ಜಯಳ ಮಾತು.

'ಪರಮನ ಮುಂದಿನ ಫಾರಿನ್ ಟೂರ್ ಕೆ.ಜಿ. ಆರ್.ಜಿ. ದೇಶಗಳಿಗೆ ಅಲ್ವೇನೋ?' ಆಕಾಶ ನೋಡುತ್ತಾ ನಗು ತಡೆಯಲಾರದೆ ಹೇಳಿದ.

'ಹೌದೌದು' ಗುರೂ ಘಾತಕ, ತಲೆಯಾಡಿಸಿದ್ದ.

'ಆದೂ ಸಾಲ ಜಾಸ್ತಿಯಾದ್ರೆ ಮಾತ್ರ' ಮೆಲ್ಲಗೆ ಗೊಣಗಿದ್ದ.

'ಹಾಗಂದ್ರೆ ಯಾವ ದೇಶ' ಜಯ ಕೇಳಿದಳು.

'ಮತ್ತೆ, ಇವೆಲ್ಲಾ ಹೊಸ್ದಾಗಿ ಆಗಿರೋ ದೇಶಗಳಿರ್ಬೇಕು' ಬಂಗಾರಿ ಉವಾಚ.

ಬರ್ತೀನಿ ಅತ್ಗೆ' ಎದ್ದ ಪರಮ, ನನ್ನನ್ನು ಎಳೆದುಕೊಂಡೇ ಹೊರಬಂದ.

'ಅವೆಲ್ಲಾ ಯಾವ್ಯಾವ ದೇಶ ಗುರೂ'

'ನಮ್ಮ ಫಾರಿನ್ ರಿಟರ್ನ್ಸ್ ಅಲ್ಲಯ್ಯಾ, ಕರ್ನಾಟಕ ರಿಟರ್ನ್ಸ್‌ಗೆ ಅಷ್ಟೂ ತಿಳಿಯಲ್ವ? ಕೆ.ಜಿ, ಆರ್.ಜಿ, ಅಂದ್ರೆ ಕಾಶಿ, ಗಯ, ರಾಮೇಶ್ವರ ಗೋಕರ್ಣ.'

'ಓ ಓ...' ನಕ್ಕ ಪರಮ.

ಪರಮ ತಂದ ಫಾರಿನ್ ವಸ್ತುಗಳೂ, ಅದನ್ನು ತೆಗೆದುಕೊಂಡವರನ್ನು ನೋಡಿ ನಗುತ್ತಿರುವ ದೃಶ್ಯ ಕಣ್ಣ ಮುಂದೆ ಬಂತು. ನಾನೂ ನಕ್ಕೆ.

■ ಡಾ. ಎಚ್.ಎಸ್. ವೆಂಕಟೇಶ್



ದೂರದರ್ಶನದ ಸಮೀಪ ಪ್ರಭಾವ!


■ ಗ.ರಾ. ಅರವಿಂದ ಸಿಗದಾಳ್


ಕೆಲವು ವರ್ಷಗಳ ಹಿಂದೆ ನೆಂಟರು, ಸ್ನೇಹಿತರು ಮನೆಗೆ ಬಂದರೆ ಅವರೊಂದಿಗೆ ನಡೆದುಕೊಳ್ಳುವ ರೀತಿಯೇ ಬೇರೆಯಾಗಿರುತ್ತಿತ್ತು. ಉಭಯ ಕುಶಲೋಪಯೊಂದಿಗೆ ಪ್ರಾರಂಭಗೊಂಡು ಸಮಸ್ತ ವಿಚಾರಗಳ ಬಗ್ಗೆ ಮಾತುಕತೆ ನಡೆಯುತ್ತಿತ್ತು. ಬಂದವರ ಮನೆಯ ಮೆಟ್ಟಿಲ ಕಲ್ಲಿನಿಂದ ಹಿಡಿದು ಸಂಬಂಧಗಳ ಬಗ್ಗೆ, ನಡೆದ ಘಟನೆಗಳ ಬಗ್ಗೆ ಕಷ್ಟ-ಸುಖ, ನೋವು-ನಲಿವು ಹೀಗೆ ಎಲ್ಲ ವಿಚಾರಗಳ ಬಗ್ಗೆ ಗಂಟೆಗಟ್ಟಲೆ ಮಾತು ಮಾತು ಮಾತು. ಈ ಮಾತಿನ ವಿನಿಮಯದಲ್ಲೇ ಪ್ರೀತಿಯ ಸಂವಹನ ಉಂಟಾಗುತ್ತಿತ್ತು. ಆತ್ಮೀಯತೆ ಬೆಳೆಯುತ್ತಿತ್ತು. ಸಂಬಂಧಗಳು ಮತ್ತಷ್ಟು ಗಾಢವಾಗುತ್ತಿದ್ದವು. ಮನೆಗೆ ನೆಂಟರು, ಸ್ನೇಹಿತರು ಬಂದರೂ ಸಂಭ್ರಮ. ನೆಂಟರ, ಸ್ನೇಹಿತರ ಮನೆಗೆ ಹೋಗುವುದೆಂದರೂ ಸಂಭ್ರಮ.

ಆದರೀಗ?

ಕಾರಣವಿಲ್ಲದೆ ಯಾರೂ ನಮ್ಮ ಮನೆಗೆ ಬರುವುದಿಲ್ಲ. ನಾವು ಅವರ ಮನೆಗೆ ಹೋಗುವುದಕ್ಕೂ ಕಾರಣಗಳು ಬೇಕು. ಮದುವೆ, ಮುಂಜಿ, ಗೃಹಪ್ರವೇಶ ಮುಂತಾದ ಕಾರಣಗಳಿದ್ದಾಗ ಮಾತ್ರ ಸಂಬಂಧಗಳು ಸ್ನೇಹಗಳು ನೆನಪಾಗುತ್ತವೆ. ಅದೂ ಒಂದು ರೀತಿಯ ಯಾಂತ್ರಿಕ ಕ್ರಿಯೆ, ಕರ್ತವ್ಯ ಎನ್ನುವ ರೀತಿಯಲ್ಲಿ. ಸ್ನೇಹ, ವಿಶ್ವಾಸ, ಪ್ರೀತಿ, ಆತ್ಮೀಯತೆ ಎಲ್ಲವೂ ಕ್ಷೀಣಿಸುತ್ತಿವೆಯೇನೋ ಎನ್ನುವಂತಹ ವಾತಾವರಣ ನಿರ್ಮಾಣವಾಗುತ್ತಿದೆ.

ಸ್ನೇಹಿತರು, ಹತ್ತಿರದ ಸಂಬಂಧಿಗಳು ಎಂಬ ಆತ್ಮೀಯತೆಯಿಂದ ಬಹಳ ದಿನಗಳ ನಂತರ ಭೇಟಿಕೊಟ್ಟರೆ ಈಗಿನ ಅಲ್ಲಿಯ ವಾತಾವರಣವೇ ಬೇರೆ. ಮುಖದ ಮೇಲೊಂದು ಕೃತಕ ನಗು, ಬೇಕೊ ಬೇಡವೋ' ಎನ್ನುವಂತಹ ಒಂದೆರಡು ಮಾತುಗಳು ಅಷ್ಟೇ. ನಂತರ ನಾವೂ ಅವರಂತೆ





ರಿಮೋಟ್ ಹಿಡಿದು ದೂರದರ್ಶನವನ್ನು ಕಂಟ್ರೋಲ್ ಮಾಡುತ್ತಿದ್ದೇವೆ ಎಂಬ ಭ್ರಮೆಯಲ್ಲಿದ್ದೇವೆ ನಾವು. ವಾಸ್ತವವಾಗಿ ಮೂವತ್ತೈದು ಛಾನಲ್‌ಗಳ ಈ ದೂರದರ್ಶನವೇ ನಮ್ಮನ್ನು ಕಂಟ್ರೋಲ್ ಮಾಡುತ್ತಿದೆ.

ಅವರ ಮನೆಯ ಆ ದೂರದರ್ಶನಕ್ಕೆ ಮುಖ ಮಾಡಿ ನೋಡುತ್ತಾ ಕುಳಿತುಕೊಳ್ಳಬೇಕು. ಒಂದು ವೇಳೆ ಮಧ್ಯದಲ್ಲಿ ಮಾತುಗಳನ್ನಾಡಿದರೂ ಅದು ದೂರದರ್ಶನದಲ್ಲಿ ಅದ್ಭುತವಾಗಿ ಕುಣಿಯುತ್ತಿರುವ ನಟಿಯ ಬಗ್ಗೆ, ಇಲ್ಲವೆ, ಲಲ್ಲು ಹುಲ್ಲು ತಿಂದ ವಿಚಾರ ಅಥವಾ ನೆರೆಯ ರಾಜ್ಯದ ನಟಿಯೊಬ್ಬಳು ಪ್ರಧಾನಿಯನ್ನು ಹತೋಟಿ ಮಾಡುತ್ತಿರುವ ರಸವತ್ತಾದ ವಿಚಾರಗಳ ಬಗ್ಗೆಯೇ ಇರುತ್ತದೆ. ಅದೇನಾದರು ಕ್ರಿಕೆಟ್ ಸೀಜ್ಹನ್ ಆಗಿದ್ದಲ್ಲಿ ಬೇರೆ ವಿಚಾರಗಳಿಗೆ ಅಲ್ಲಿ ಸ್ಥಾನವೇ ಇರುವುದಿಲ್ಲ. ಇತ್ತೀಚೆಗೆ ಈ ಕ್ರಿಕೆಟ್‌ಗೆ ಸೀಜ್ಹನ್ ಎನ್ನುವುದು ಮಾಯವಾಗಿ ವರ್ಷದಲ್ಲಿ 300 ಕ್ಕೂ ಹೆಚ್ಚು ದಿನಗಳು ಕ್ರಿಕೆಟ್ ಬರುತ್ತಲೇ ಇರುತ್ತದೆ. ತೆಂಡೂಲ್ಕರ್, ಅಜರುದ್ದೀನ್ ಬಗ್ಗೆ ಮಾತಾಡುವಷ್ಟು ನಿಮ್ಮ ಬಗ್ಗೆಯಾಗಲಿ, ನಿಮ್ಮ ಕುಟುಂಬದ ಬಗ್ಗೆಯಾಗಲಿ ಮಾತನಾಡುವುದಿಲ್ಲ. ಕ್ರಿಕೆಟ್ ತಾರೆಗಳನ್ನು, ನಟರನ್ನು ಪ್ರೀತಿಸುವಷ್ಟು ಬಂಧು ಬಳಗದವರನ್ನು ಸ್ನೇಹಿತರನ್ನು ಪ್ರೀತಿಸುವುದಿಲ್ಲ. ಒಂದು ವೇಳೆ ಕ್ರಿಕೆಟ್ ನಿಮ್ಮ ಆಸಕ್ತಿಯ ವಿಚಾರ ಅಲ್ಲದೆ ಹೋದರೆ ಆ ನಿಮ್ಮ ನೆಂಟರ ಮನೆಯಲ್ಲಿ ಹತ್ತು ನಿಮಿಷವೂ ಇರಲಾರಿರಿ.

ಸಂಬಂಧಗಳು ಕ್ಷೀಣಿಸುತ್ತಿವೆ, ಸ್ನೇಹ ಶಿಥಿಲಗೊಳ್ಳುತ್ತಿದೆ. ಆತ್ಮೀಯತೆ, ಪ್ರೀತಿ, ವಿಶ್ವಾಸ ಎಲ್ಲವೂ ಹಾಳಾಗುತ್ತಿರುವುದು ದೂರದರ್ಶನವೆಂಬ ಮಾಂತ್ರಿಕ ನಮ್ಮ ಮನೆಗಳ ಅನಿವಾರ್ಯ ಸದಸ್ಯನಾಗಿರುವುದರಿಂದ ಮತ್ತು ನಾವು ವಿವೇಚನೆಯನ್ನು ಕಳೆದುಕೊಂಡು ಸಂಪೂರ್ಣವಾಗಿ ಈ ಮೂರ್ಖ ಪೆಟ್ಟಿಗೆಗೆ ದಾಸರಾಗಿರುವುದರಿಂದ.

ರಿಮೋಟ್ ಹಿಡಿದು ದೂರದರ್ಶನವನ್ನು ಕಂಟ್ರೋಲ್ ಮಾಡುತ್ತಿದ್ದೇವೆ ಎಂಬ ಭ್ರಮೆಯಲ್ಲಿದ್ದೇವೆ ನಾವು. ವಾಸ್ತವವಾಗಿ ಮೂವತ್ತೈದು ಛಾನಲ್‌ಗಳ ಈ ದೂರದರ್ಶನವೇ ನಮ್ಮನ್ನು ಕಂಟ್ರೋಲ್ ಮಾಡುತ್ತಿದೆ. ನಮ್ಮ ಬದುಕಿನ ರೀತಿಯನ್ನೇ ಬದಲಿಸುತ್ತಿದೆ. ನಮ್ಮ ಮಾನವೀಯ ಗುಣಗಳ ಮೇಲೆ ನಿಧಾನವಾಗಿ ಪ್ರಹಾರ ಮಾಡುತ್ತಿದೆ. ನಮ್ಮ ಯೋಚನೆ, ಚಿಂತನೆ, ವೈಚಾರಿಕತೆ, ಬೌದ್ಧಿಕ ಪ್ರತಿಭೆ ಎಲ್ಲವನ್ನು ಹಾಳು ಮಾಡುತ್ತಿರುವ ಈ ದೂರದರ್ಶನದ ಬಗ್ಗೆ ಸ್ವಲ್ಪ ಚಿಂತನೆ ಮಾಡಿ. ಈ ಮೂರ್ಖ ಪೆಟ್ಟಿಗೆಯಿಂದ ದೂರ ಸರಿಯಬೇಕಾದ ಅನಿವಾರ್ಯತೆ ಈಗ ಉಂಟಾಗಿದೆ.

ಮೊದಲನೆಯದಾಗಿ, ನಾವು ದೂರದರ್ಶನ ಛಾನಲ್‌ಗಳಿಂದ ಕಲಿತಿರುವುದೇನು? ಎಂದು ಯೋಚಿಸಬೇಕು. ದೂರದರ್ಶನದ ಬಗ್ಗೆ ಮರು ಚಿಂತನೆ ಮಾಡಲು ಇದೊಂದೇ ಪ್ರಶ್ನೆ ಸಾಕು. ನಿತ್ಯ ಪ್ರಸಾರವಾಗುವ ಸಿನಿಮಾ ನೋಡಿ ನಾವು ಏನನ್ನು ಕಲಿತಿದ್ದೇವೆ? ಸಂಬಂಧಗಳ ಬಗ್ಗೆ ಸುಂದರ ಪಾತ್ರಗಳನ್ನು ಸಂಭಾಷಣೆಗಳನ್ನು ಹೆಣೆದು ಪ್ರಸಾರಿಸುವ ಧಾರಾವಾಹಿಗಳಿಂದ ನಾವೇನು ಪಡೆದಿದ್ದೇವೆ? ಸಿನಿಮಾಗಳ, ಧಾರಾವಾಹಿಗಳ ಸದ್ಗುಣಗಳನ್ನು ನಾವೆಷ್ಟು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದೇವೆ? ಸದಾ ಜಗಳ ಕಾಯುವ ಅತ್ತೆ ಸೊಸೆಯರು ಟಿ.ವಿ ಧಾರಾವಾಹಿ ನೋಡಿ ಬದಲಾದ ಉದಾಹರಣೆ ಎಲ್ಲಿಯಾದರೂ ಇದೆಯಾ? ಸಿನಿಮಾ ನೋಡಿ ಅಣ್ಣ ತಮ್ಮಂದಿರು ರಾಜಿಯಾಗಿದ್ದಿದೆಯಾ? 'ನಾನು ಡಿ.ಡಿ. ಟು ನೋಡಬೇಕು. ನಾನು ಸ್ಟಾರ್ ಮೂವಿ ನೋಡಬೇಕು' ಎಂದು ಕಚ್ಚಾಡಿದ ಘಟನೆಗಳಿರಬಹುದೇ ಹೊರತು ದೂರದರ್ಶನ ನೋಡಿ ಸಂಬಂಧಗಳು ಉತ್ತಮಗೊಂಡ ಘಟನೆಗಳು ಇರಲಿಕ್ಕಿಲ್ಲ.

ಇನ್ನು ಶೈಕ್ಷಣಿಕ ವಿಚಾರಗಳಿಗೆ ಬಂದರೆ, ಈ ದೂರದರ್ಶನದಿಂದ ನಾವೆಷ್ಟು ಬುದ್ಧಿಯನ್ನು ಬೆಳೆಸಿಕೊಂಡಿದ್ದೇವೆ? ನಮ್ಮ ಹೆಚ್ಚಿನ ಪ್ರಾಶಸ್ತ್ಯ ಮನರಂಜನೆಯೇ ಹೊರತು ಬೌದ್ಧಿಕ ಬೆಳೆವಣಿಗೆ ಅಲ್ಲ. ಎಲ್ಲೋ ವಾರಕ್ಕೆ ಅರ್ಧ ಗಂಟೆ ರಸಪ್ರಶ್ನೆ ಕಾರ್ಯಕ್ರಮ ಪ್ರಸಾರ ಮಾಡಿದರೆ ಅದು ಶೈಕ್ಷಣಿಕ ಕಾರ್ಯಕ್ರಮವಾದೀತೆ?

'ಡಿಸ್ಕವರಿ', 'ನ್ಯಾಷನಲ್ ಜಿಯಾಗ್ರಫಿ' ಯಂತಹ ಚಾನಲ್‌ಗಳಿದ್ದರೂ ಅವುಗಳನ್ನು ನೋಡುವವರ ಸಂಖ್ಯೆ ಎಷ್ಟಿದೆ? ಬಹುಶಃ ಬೇರೆ ಛಾನಲ್‌ಗಳ ಕಾರ್ಯಕ್ರಮ ಸ್ಥಗಿತಗೊಂಡರೆ ಅನಿವಾರ್ಯವಾಗಿ ಈ ಛಾನಲ್‌ಗಳನ್ನು ನೋಡಬಹುದೇನೊ! ದೂರದರ್ಶನದ ಯಾವ ಛಾನಲ್‌ನ ಯಾವ ಕಾರ್ಯಕ್ರಮ ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಸಹಕಾರಿಯಾಗಿದೆ? ಮಕ್ಕಳ ಮನಸ್ಸಿನಲ್ಲಿ ಮತ್ತಷ್ಟು ಗೊಂದಲ ಸೃಷ್ಟಿಸಿರುವ ಈ ಛಾನಲ್‌ಗಳು ಕೆಲವೊಮ್ಮೆ ಪೋಷಕರನ್ನು ಇಕ್ಕಟ್ಟಿಗೆ ಸಿಲುಕಿಸುತ್ತವೆ. ಟಿ.ವಿ.ಯಲ್ಲಿ ಕುಣಿಯುವ ಟೂತ್ ಬ್ರಷ್‌ಗಾಗಿ, ತೆಂಡೂಲ್ಕರ್ ಬೂಸ್ಟ್‌ಗಾಗಿ, ಐಸ್ ಕ್ರೀಂಗಾಗಿ ಪೀಡಿಸುವ ಮಕ್ಕಳಿಗೆ ಈ ದೂರದರ್ಶನ ಒಂದು ಜಾಹೀರಾತು ಪ್ರಚೋದಕ ಅಷ್ಟೆ. ಮದ್ಯದ ಜಾಹೀರಾತನ್ನು ಕಂಡು ಒಂದು ಮಗು ಪ್ರಶ್ನಿಸುತ್ತದೆ. ಅಪ್ಪಾ ಹಾಗೆ ಅಂದರೇನು? ಎಂದು. ಹದಿನೈದನೇ ವಯಸ್ಸಿಗೆ ಆ ಮಗು ಕಾಫಿ, ಟೀ ಬದಲಿಗೆ 'ಮದ್ಯ' ಕುಡಿಯಲು ಶುರು ಮಾಡಿದರೆ ಆಶ್ಚರ್ಯವಿಲ್ಲ.

ಅತ್ಯಾಚಾರದ ದೃಶ್ಯ ನೋಡಿ ಇನ್ನೊಂದು ಮಗು ಪ್ರಶ್ನಿಸುತ್ತದೆ. 'ಅಮ್ಮಾ ಅವನ್ಯಾಕೆ ಅವಳ ಸೀರೆ ಬಿಚ್ಚಿ ಪಪ್ಪಿ ಕೊಡೋಕೆ ಹೋಗ್ತಿದ್ದಾನೆ?' ಈ ಪ್ರಶ್ನೆಗಳಿಗೆಲ್ಲ ಉತ್ತರಿಸುವವರ್‍ಯಾರು? ಮಾದಕ



ಪ್ರೀತಿಯಿಂದ ತೊಡೆ ಏರುವ ಮಗುವಿಗಿಂತ ಎದುರಿಗಿರುವ ಟಿ.ವಿ. ಪೆಟ್ಟಿಗೆಯೇ ಹೆಚ್ಚು ಆಕರ್ಷಕ. ಆಪ್ಯಾಯಮಾನ.

ವಸ್ತುಗಳ ಜಾಹೀರಾತುಗಳಿಂದ ಅಶ್ಲೀಲವಾಗಿ ನರ್ತಿಸುವ ಸಿನಿಮಾ ನಟಿಯರಿಂದ ಬೆಳೆಯುವ ಮಕ್ಕಳ ಮೇಲೆ ಎಂತಹ ಪ್ರಭಾವ ಬೀರಬಹುದು? ನಿತ್ಯ ಇಂತಹ ವಿಚಾರಗಳನ್ನು ನೋಡುತ್ತ ಬೆಳೆಯುವ ಮಕ್ಕಳ ಭವಿಷ್ಯ ಹೇಗಿರಬಹುದು? ಕಣ್ಣುಮುಚ್ಚಿ ಕುಳಿತ ಸರ್ಕಾರ, ಜಾಹೀರಾತುದಾರರು, ಪ್ರಸಾರಿಸುವ ಛಾನಲ್‌ಗಳು ಮಾತ್ರ ಅಪರಾಧಿಗಳಲ್ಲ, ಪೋಷಕರೂ ಕೂಡ ಇಲ್ಲಿ ಹೊಣೆಗಾರರು.

ಇದು ಬರಿ ಮಕ್ಕಳ ಮೇಲೆ ಮಾತ್ರ ಪ್ರಭಾವ ಬೀರುವ ವಿಚಾರವಲ್ಲ, ಇಡೀ ಯುವ ಜನಾಂಗವನ್ನೇ ತಪ್ಪುದಾರಿಗೆಳೆಯುತ್ತಿರುವ ಈ ದೂರದರ್ಶನ ಛಾನಲ್‌ಗಳಿಂದ ಸಮಾಜವೇ ಕಲುಷಿತಗೊಳ್ಳುತ್ತಿದೆ. 'ಉಲ್ಲಾಸಕರ ಜೀವನಕ್ಕೆ .... ಕುಡಿಯಿರಿ 'Share the magic from wills' ಎಂದು ದಿನಕ್ಕೆ ನೂರಾರು ಬಾರಿ ಪ್ರಸಾರಮಾಡುವ ಈ ಛಾನಲ್‌ಗಳಿಂದ ಯಾವ ಸಮಾಜ ಉದ್ಧಾರವಾದೀತು.

ಯಾವ ಮುಗ್ಧ ಮಕ್ಕಳ ಬಾಯಲ್ಲಿ 'ಭಾರಿಸು ಕನ್ನಡ ಡಿಂಡಿಮವಾ', 'ಸಾರೇ ಜಹಾಂಸೆ ಅಚ್ಛಾ', 'ತಟ್ಟು ಚಪ್ಪಾಳೆ ಪುಟ್ಟ ಮಗು' ಎಂಬ ಹಾಡುಗಳು ಉಲಿಯಬೇಕಿತ್ತೋ ಅಂತಹ ತುಟಿಗಳಲ್ಲಿ 'ಆತೀ ಕ್ಯಾ ಖಂಡಾಲ', 'ಕಮಾನು ಡಾರ್ಲಿಂಗ್ ಅಯ್ಯೋ ಅಯ್ಯೋ' ಹಾಡುಗಳು ಗುನುಗುನಿಸುವ ಸಂಸ್ಕೃತಿ ನಿರ್ಮಾಣವಾಗಿದ್ದರೆ ಅದು ನಮ್ಮ ದೂರದರ್ಶನದ ಛಾನಲ್‌ಗಳ ಕೊಡುಗೆ!

ಜೈ ಹನುಮಾನ್ ಧಾರಾವಾಹಿ ಪ್ರಸಾರವಾಗುವ ಒಂದು ಗಂಟೆಯಲ್ಲಿ ಅರ್ಧ ಗಂಟೆಯನ್ನು ಜಾಹೀರಾತುಗಳೇ ಕಬಳಿಸುತ್ತವೆ. ಸಿನಿಮಾದ ನಡುವೆಯಂತೂ ಪ್ರಸಾರವಾಗುವ ಜಾಹೀರಾತುಗಳಿಗೆ ಮಿತಿ ಎನ್ನುವುದೇ ಇಲ್ಲ. ಸುದ್ದಿ ಪ್ರಸಾರಕ್ಕೂ ಪ್ರಾಯೋಜಕರು ಬೇಕು. ಜಾಹೀರಾತುಗಳಿಗಾಗಿ ಕಾರ್ಯಕ್ರಮವೋ, ಕಾರ್ಯಕ್ರಮಗಳಿಗಾಗಿ ಜಾಹೀರಾತೋ ಆ ಹನುಮಂತನೇ ಹೇಳಬೇಕು. ಸಿನಿಮಾ ಹಾಲ್‌ನಲ್ಲಿ ಒಂದು ನಿಮಿಷ ವಿದ್ಯುಚ್ಛಕ್ತಿ ಅಭಾವ ಉಂಟಾದರೂ ಕಿರುಚಾಡುವ ನಾವು ಮನೆಯಲ್ಲಿ ಹದಿನೈದು ನಿಮಿಷದ ಕಾರ್ಯಕ್ರಮದಲ್ಲಿ ಎಂಟು ನಿಮಿಷ ಜಾಹೀರಾತು ಬಂದರೂ ಸಹಿಸಿಕೊಂಡು ನೋಡುತ್ತೇವೆ. ಪ್ರತಿಭಟನೆಯ ಮನೋಭಾವವೇ ನಮ್ಮಲ್ಲಿಲ್ಲವಾಗುತ್ತಿದೆ. ದೂರದರ್ಶನ ವೀಕ್ಷಣೆ ಅಷ್ಟೊಂದು ಅನಿವಾರ್ಯವೆ?

ಹೌದು, ನಿತ್ಯ ಕೆಲಸ ಮಾಡುವವರಿಗೆ ಮನರಂಜನೆ ಅನಿವಾರ್ಯ. ಆದರೆ ಅರೆಬೆತ್ತಲೆ ನೃತ್ಯವೇ ಮನರಂಜನೆ ಎಂದುಕೊಳ್ಳುವುದಾದರೆ ನಾವು ಮಾನಸಿಕವಾಗಿ ಅಸ್ವಸ್ಥರಾಗಿದ್ದೇವೆ ಎಂದು ಅರ್ಥ. ಅಶ್ಲೀಲ ಕಾರ್ಯಕ್ರಮ ಭಿತ್ತರಿಸುವ ಛಾನಲ್‌ಗಳನ್ನು ನೋಡುವುದು ನಿತ್ಯದ ಮನರಂಜನೆ ಎಂದಾದರೆ ಒಬ್ಬ ಕುಡುಕನಿಗಿಂತ, ಒಬ್ಬ ಮಾದಕ ವ್ಯಸನಿಗಿಂತ ನಾವು ಭಿನ್ನರಲ್ಲ. ಯಾವುದೇ ನಿಯಮವಿಲ್ಲದ WWF ಕುಸ್ತಿ ನೋಡಿ ಖುಷಿ ಪಡುವವರಿಗೆ ಬೇರೆ 'ಕಿಕ್' ಏಕೆ ಬೇಕು? ಮನರಂಜನೆಯ ಹೆಸರಿನಲ್ಲಿ ನಾವು ನಮಗರಿವಿಲ್ಲದೆಯೇ ಮನಸ್ಸನ್ನು ಹಾಳು ಮಾಡಿಕೊಳ್ಳುತ್ತಿದ್ದೇವೆ.

ವಿಜ್ಞಾನ ಬೆಳೆದಂತೆ ನಮ್ಮ ದೈಹಿಕ ಶ್ರಮ ಮಾನಸಿಕ ಶ್ರಮಗಳನ್ನು ಕಡಿಮೆಗೊಳಿಸಿಕೊಂಡಿದ್ದೇವೆ. ರುಬ್ಬುವ ಯಂತ್ರ, ಬಟ್ಟೆ ಒಗೆಯುವ ಯಂತ್ರಗಳು ಮನೆಯ ಒಳಗೆ ಬಂದ ಮೇಲೆ ಸಾಕಷ್ಟು ಸಮಯವೂ ಉಳಿತಾಯವಾಗುತ್ತಿದೆ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಪ್ರಯಾಣಿಸಲು ಗಂಟೆಗಳೇ ಬೇಕಾಗುತ್ತಿತ್ತು. ಆದರೆ ಇಂದು ಕೆಲವು ನಿಮಿಷಗಳು ಸಾಕು. ಹೀಗೆಲ್ಲಾ ಉಳಿಸಿದ ಸಮಯವನ್ನು ಯಾವುದೇ ಉಪಯೋಗವಿಲ್ಲದ ದೂರದರ್ಶನ ವೀಕ್ಷಣೆಗೆ ಬಳಸುತ್ತಿದ್ದೇವೆ.

> ಅಶ್ಲೀಲ ಕಾರ್ಯಕ್ರಮ ಭಿತ್ತರಿಸುವ ಛಾನಲ್‌ಗಳನ್ನು ನೋಡುವುದು ನಿತ್ಯದ ಮನರಂಜನೆ ಎಂದಾದರೆ ಒಬ್ಬ ಕುಡುಕನಿಗಿಂತ, ಒಬ್ಬ ಮಾದಕ ವ್ಯಸನಿಗಿಂತ ನಾವು ಭಿನ್ನರಲ್ಲ.

ಕೆಲವು ಮನೆಗಳಲ್ಲಿ ಸಂಜೆ 6ಕ್ಕೆ ಪ್ರಾರಂಭವಾಗುವ ದೂರದರ್ಶನ ರಾತ್ರಿ 12 ಗಂಟೆಯವರೆಗೆ ಉರಿಯುತ್ತಲೇ ಇರುತ್ತದೆ. ಪ್ರಸಾರವಾದ ಸಿನಿಮಾ ಮತ್ತೆ ಮತ್ತೆ ಪ್ರಸಾರವಾದರೂ ಪುನಃ ದೂರದರ್ಶನದ ಮುಂದೆ ಕುಳಿತು ನೋಡುವ ಜನರಿದ್ದಾರೆ. ಕ್ರಿಕೆಟ್ ಮ್ಯಾಚ್ ಇದ್ದರಂತೂ ಅದನ್ನು ನೋಡುವುದೇ ಒಂದು ದೊಡ್ಡ ದೇಶ ಸೇವೆ ಎನ್ನುವ ರೀತಿಯಲ್ಲಿ ಮೂರ್ಖ ಪೆಟ್ಟಿಗೆಯ ಸನಿಹದಿಂದ ಕದಲದೆ ನೋಡುವವರಿದ್ದಾರೆ. ಒಮ್ಮೆ ಪ್ರಶ್ನಿಸಿಕೊಳ್ಳೋಣ: ದಿನಕ್ಕೆ 5-6 ಗಂಟೆ ಸಮಯವನ್ನು ಈ ದೂರದರ್ಶನದ ಮೇಲೆ ನೋಡಿ ಗಳಿಸಿದ ಲಾಭವಾದರೂ ಏನು? ಉತ್ತರ ಬರೀ ಸೊನ್ನೆ!

ಕೆಲವೊಮ್ಮೆ ತಮಾಷೆ ಎನಿಸುತ್ತದೆ. ಬರುತ್ತಿರುವ 31 ಛಾನಲ್‌ಗಳೂ ಸಾಕಾಗದೆ 'ಏನ್ ಸ್ವಾಮಿ ಪಕ್ಕದ ಬಡಾವಣೆಯಲ್ಲಿ 33 ಛಾನಲ್‌ಗಳು ಬರುತ್ತಿವೆ' ಎಂದು ಕೇಬಲ್ ಆಪರೇಟರ್ ರೊಂದಿಗೆ ಜಗಳವಾಡುವವರಿದ್ದಾರೆ. ತೆಂಡೂಲ್ಕರ್ ಬ್ಯಾಟಿಂಗ್‌ನ ಮೇಲೆ ಕಣ್ಣಿಟ್ಟು ಕ್ರಿಕೆಟನ್ನು ತದೇಕರಾಗಿ ನೋಡುತ್ತಿರುವವರಿಗೆ ಸ್ವಂತ ಮಕ್ಕಳು ಹತ್ತಿರ ಬಂದರೆ ಕಿರಿಕಿರಿ ಉಂಟಾಗುತ್ತದೆ. ಪ್ರೀತಿಯಿಂದ ತೊಡೆ ಏರುವ ಆ ಮಗುವಿಗಿಂತ ಎದುರಿಗಿರುವ ಟ.ವಿ. ಪೆಟ್ಟಿಗೆಯೇ ಹೆಚ್ಚು ಆಕರ್ಷಕ, ಆಪ್ಯಾಯಮಾನ. ಅಲ್ಟ್ರಾಸೌಂಡ್‌ನಲ್ಲಿ ಭೋರ್ಗರೆವ ಶಬ್ದದ ನಡುವೆಯೇ ಮಕ್ಕಳಿಗೆ 'ಹೋಂ ವರ್ಕ್' ಮಾಡಿಸುವ ಪೋಷಕರೂ ಇದ್ದಾರೆ. ಇದು ಬರಿ ತಮಾಷೆಯ ವಿಷಯವಲ್ಲ.

ಓದುವ ಹವ್ಯಾಸದ ಮೇಲೂ ಈ ಮೂರ್ಖ ಪೆಟ್ಟಿಗೆ ಪ್ರಭಾವ ಬೀರುತ್ತಿದೆ. ಅಧ್ಯಯನ, ಚರ್ಚೆ, ಚಿಂತನೆ, ವೈಚಾರಿಕತೆ, ಸಾಂಸ್ಕೃತಿಕ ಚಟುವಟಿಕೆ ಎಲ್ಲವನ್ನು ಕೆಡಿಸಿ ತನ್ನತ್ತ ಸೆಳೆಯುವ ಮಾದಕ ದೂರದರ್ಶನ ಭಾಷಾಭಿಮಾನ ದೇಶಾಭಿಮಾನ ಸಂಸ್ಕೃತಿಗಳ ಮೇಲೂ ಪ್ರಭಾವ ಬೀರಿ ಹಾಳು ಮಾಡುತ್ತಿದೆ. ಸಾಹಿತಿ ಯು.ಆರ್. ಅನಂತಮೂರ್ತಿಯವರು ಹೇಳುವಂತೆ 'ದೂರದರ್ಶನದಲ್ಲಿ ಮಹಾಭಾರತ ಬಂದ ಮೇಲೆ ಕುಮಾರವ್ಯಾಸ, ಪಂಪ ಇವರನ್ನೆಲ್ಲ ಓದುವವರಿಲ್ಲವಾಗಿದೆ.' ಇದು ವಾಸ್ತವ. ಕಹಿ ಸತ್ಯ ಕೂಡ.

ಅತಿಯಾದರೆ ಅಮೃತವೂ ವಿಷ ಎನ್ನುವಂತೆ ಎಲ್ಲವೂ ಒಂದು ಅಳತೆಯ ಮಿತಿಯಲ್ಲಿದ್ದರೆ ಚೆನ್ನ. ಕೇವಲ ತಮ್ಮ ವಸ್ತುಗಳ ಮಾರಾಟಕ್ಕಾಗಿ ಜಾಹೀರಾತಿನ ಮಾಧ್ಯಮವನ್ನಾಗಿ ಈ ದೂರದರ್ಶನ ಛಾನಲ್‌ಗಳನ್ನು ಬಳಸಿಕೊಳ್ಳುತ್ತಿರುವ ವ್ಯಾಪಾರಿ ಮನೋಧರ್ಮದ ವಿರುದ್ಧವೂ ನಾವು ಎಚ್ಚೆತ್ತುಕೊಳ್ಳಬೇಕು. ಮಾಹಿತಿ ಸಂಗ್ರಹಕ್ಕಾಗಿ, ದಿನದ ಕೆಲವು ನಿಮಿಷಗಳ ಮನರಂಜನೆಗಾಗಿ ಈ ದೂರದರ್ಶನವನ್ನು ಉಪಯೋಗಿಸಿಕೊಳ್ಳೋಣ. ಈ ದೂರದರ್ಶನದ ವೀಕ್ಷಣೆಗೆ ನಾವೊಂದು ಮಿತಿಯನ್ನು ಹಾಕಿಕೊಳ್ಳದಿದ್ದರೆ ಪ್ರೀತಿ, ಸ್ನೇಹ, ಆತ್ಮೀಯತೆ, ವೈಚಾರಿಕತೆ, ಸಂಸ್ಕೃತಿ ಎಲ್ಲವನ್ನು ನಾವು ಕಳೆದುಕೊಳ್ಳಬೇಕಾಗುತ್ತದೆ.


ವಿಜ್ಞಾನದ ಆವಿಷ್ಕಾರಗಳನ್ನು ಉಪಯೋಗಿಸುವಾಗ ವಿವೇಕವಿಲ್ಲದಿದ್ದರೆ ವಿಜ್ಞಾನವೂ ನಿಧಾನವಾಗಿ ಕೊಲ್ಲುವ ವಿಷವಾದೀತು! ■

ನಾವು ಸರಿಯಾದ ಮಾರ್ಗದಲ್ಲಿ ನಡೆದಿದ್ದೇವೆಯೆ ಎಂದು ಪ್ರಶ್ನೆ ಕೇಳಿದರೆ ಇಲ್ಲವೆನ್ನಬಹುದು. ಆದರೆ ಎಲ್ಲಿ ತಪ್ಪಿದ್ದು ಎಂದರೆ ಉತ್ತರಿಸುವುದು ಕಷ್ಟ. 1947 ಆಗಸ್ಟ್ 12ನೇ ದಿನಾಂಕ ಬ್ರಿಟಿಷ್ ಪತ್ರಿಕೋದ್ಯಮಿ ನೌಕಾಲೆಯ ಗುಡಿಸಲೊಂದರ ಮುಂದೆ ಕೂರಲು ಕಷ್ಟವಾಗಿದ್ದರೂ ಕೂತಿದ್ದ. ಬಾಪೂಜಿಯ ಸಂದರ್ಶನಕ್ಕೆ ಅವನ ಸಂಪಾದಕನ ಆದೇಶವಿತ್ತು. ಅಂದು ಸಾಯಂಕಾಲ 4 ಗಂಟೆಗೆ ಬಾಪೂಜಿಗೆ ಅವನು ಕೇಳಿದ ಪ್ರಶ್ನೆ, 'ಭಾಪೂಜಿ ಇದೇ ದಿನಾಂಕ 15 ರಂದು ಸ್ವಾತಂತ್ರ್ಯ ಸಿಗಲಿದೆ. ಆ ಉತ್ಸವವನ್ನಾಚರಿಸುವ ಬಗೆ ಹೇಗೆ?' ಮುಖದಲ್ಲಿ ದುಃಖದ ಛಾಯೆ ಸುಳಿದಾಡುತ್ತಿದ್ದ ಬಾಪೂಜಿ, 'ಯಾವ ಉತ್ಸವ! ಯಾಕೆ ಆಚರಿಸಬೇಕು? ದೇಶದಲ್ಲಿ ವಿಶೇಷವಾಗಿ ಉತ್ತರದಲ್ಲೆಲ್ಲ ರಕ್ತದ ಓಕುಳಿ, ಕೋಮುಗಲಭೆ. ಮಕ್ಕಳು, ಮುದುಕರು, ಮಹಿಳೆಯರೆನ್ನದೆ, ಸಿಕ್ಕವರೆಲ್ಲರ ಹತ್ಯೆ. ಈ ಸ್ಥಿತಿಯಲ್ಲಿ ಸಂಭ್ರಮ?' ಕೇಳಿದರು. 'ದೆಹಲಿಯ ಸಭಾ ಭವನದಲ್ಲಿ ನೆಹರೂ ಅಧಿಕಾರ ಸ್ವೀಕಾರ, ಧ್ವಜಾರೋಹಣ, ಸಮಾರಂಭ....' ಎಂದು ಆ ಪತ್ರಿಕೋದ್ಯಮಿ ಕೇಳುತ್ತಿರುವಂತೆಯೆ ಬಾಪೂಜಿ ಅವನನ್ನು ತಡೆದು 'ಯಾವ ಸಮಾರಂಭದ ಅವಶ್ಯವಿಲ್ಲ' ಎಂದರು. 'ಹಾಗಾದರೆ ಜನರಿಗೆ ನಿಮ್ಮ ಸಂದೇಶವಾದರು ಏನು?' 'ಮೂರು ದಿನ ಉಪವಾಸ.' 'ಮತ್ತೆ'? 'ಮತ್ತೆ ಹೆಚ್ಚಿನ ಸಂದೇಶಕ್ಕಾಗಿ ನೆಹರೂ ಭೇಟಿಯಾಗಿ.' ಸಂದರ್ಶನ ಮುಗಿಯಿತು. ಗಾಂಧೀಜಿ ಒಳಗೆ ಹೋದರು.

'ದೇಶದ ವಿಭಜನೆ ನನ್ನ ಹೆಣದ ಮೇಲೆ' ಎಂದು ಗಾಂಧೀಜಿ ಸ್ವತಃ ಹೇಳಿದರೂ ಅವರ ಮಾತುಗಳು ಅವರ ಉತ್ತರಾಧಿಕಾರಿಗೆ ಕೇಳಿಸಲಿಲ್ಲವೆನ್ನುವಂತಾಗಿತ್ತು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಗಾಂಧೀಜಿಗೆ ಬೆಂಬಲವಿತ್ತವರು ಕೇವಲ ಮೂರು ಜನ: ಖಾನ್ ಅಬ್ದುಲ್ ಗಫರ್ ಖಾನ್, ಜಯಪ್ರಕಾಶ ನಾರಾಯಣ ಮತ್ತು ರಾಮ ಮನೋಹರ ಲೋಹಿಯಾ. ಗಾಂಧೀಜಿಯ ಕಣ್ಣುಕಿವಿಗಳೆನಿಸಿದ್ದ ನೆಹರು, ರಾಜಾಜಿ, ವಲ್ಲಭಭಾಯಿ, ಕೃಪಲಾನಿ ಮುಂತಾದವರ ವಾದ 'ಈಗಾಗಲೆ ವಯಸ್ಸಾದ ನಾವು ಎಷ್ಟು ದಿನ ಸೆರೆಮನೆಯಲ್ಲಿರುವುದು? ರಾಜ್ಯವಾಳುವುದು, ದೇಶಕಟ್ಟುವುದು ಯಾವಾಗ? ಕಾರಣ ವಿಭಜನೆಯಾಗಲಿ, ಕೋಮು ಸಮಸ್ಯೆಗೆ ಅದೊಂದೆ ಪರಿಹಾರ, ಅಂದೇ ಗಾಂಧೀಜಿ ದೆಹಲಿಯಿಂದ ನೌಕಾಲೆಯತ್ತ ಪಯಣ ಬೆಳೆಸಿದರು.

ಲಾರ್ಡ್ ಮೌಂಟ್‌ಬ್ಯಾಟನ್ ವೈಸರಾಯ್ ಆಗಿ ಅಧಿಕಾರ ವಹಿಸಿಕೊಂಡ ನಂತರ ನೆಹರೂ ಹಾಗು ಗಾಂಧೀಜಿ ನಡುವಿನ ಕಂದಕ ಹೆಚ್ಚಾಯಿತು. ಮೌಂಟ್ ಬ್ಯಾಟನ್-ನೆಹರೂ ಸಮೀಪ ಬಂದರು.

ಕಾಂಗ್ರೆಸಿಗರೆಲ್ಲರಿಗೂ ಆಘಾತವಾಗುವ ಮಾತೊಂದನ್ನು ಗಾಂಧೀಜಿ ಹೇಳಿದರು.




ಈ ಯುಗದಲ್ಲಿ 50 ವರ್ಷವೆಂದರೆ ಕಡಿಮೆ ಸಮಯವಲ್ಲ. ನಾಶವಾದ ಜಪಾನ್ 15-20 ವರ್ಷಗಳಲ್ಲಿ ಪ್ರಬಲರಾಷ್ಟ್ರವಾದರೆ 50 ವರ್ಷಗಳಲ್ಲಿ ಭಾರತದ ಸ್ಥಾನ...? ಅವನತಿಯಾಗುತ್ತಿರುವ ಭಾರತ ತಪ್ಪಿದ್ದೆಲ್ಲಿ? ಗಣರಾಜ್ಯೋತ್ಸವದಂದು ಸಿಂಹಾವಲೋಕನ ಮಾಡುವುದು ಅವಶ್ಯ!

‘ಸ್ವಾತಂತ್ರ್ಯ ಗಳಿಸುವ ಕಾಂಗ್ರೆಸ್ ಉದ್ದೇಶ ಸಫಲವಾಗಿದ್ದು, ಈಗ ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸಿರಿ. ಸಂಸದೀಯ ಪ್ರಜಾಪ್ರಭುತ್ವ ಸ್ಥಾಪನೆಗಾಗಿ ಬೇರೆ ಪಕ್ಷ ರಚಿಸಿಕೊಳ್ಳಿರಿ ಹಾಗು ಲೋಕ ಸೇವಕ ಸಂಘವೆನ್ನುವ ಸಂಘಟನೆಯನ್ನು ನಿಸ್ವಾರ್ಥ ಸೇವೆಗಾಗಿ ಕಟ್ಟಿ ಬೆಳೆಸಿರಿ.’ ಆದರೆ ಕಾಂಗ್ರೆಸ್ ವಿಸರ್ಜನೆಗೆ ಯಾರೂ ಒಪ್ಪಲಿಲ್ಲ. ಕಳೆದ 50 ವರ್ಷಗಳಲ್ಲಿ ಆ ಕಾಂಗ್ರೆಸ್ ಅನೇಕ ಸಲ ವಿಭಜನೆಯಾಗಿದೆ ಮತ್ತು ವಿಸರ್ಜನೆಯಾಗಿದೆ!

ಮಾನವ ಸ್ವಭಾವವನ್ನು ಬಲ್ಲ ಗಾಂಧೀಜಿಗೆ 1925ರಲ್ಲಿಯೇ ಕಾಂಗ್ರೆಸ್‌ಲ್ಲಿಯ ದುರ್ವಾಸನೆ ಬಡಿದಿತ್ತು. ಭ್ರಷ್ಟಾಚಾರ, ಅಶಿಸ್ತು ಬೆಳೆಸಿಕೊಂಡಿದ್ದ ಕಾಂಗ್ರೆಸ್ ಸ್ವಾರ್ಥಿಗಳಿಗೆ ತವರೂರಾಗತೊಡಗಿತ್ತು. ಕಾಂಗ್ರೆಸ್ ವಿಸರ್ಜನೆಗೆ ಒಪ್ಪಿರಿ ಎಂದು ಹೇಳಿದವರು ಜಯಪ್ರಕಾಶ ನಾರಾಯಣರೊಬ್ಬರೆ. ಎ.ಐ.ಸಿ.ಸಿ. ಗಾಂಧೀಜಿ ಸೂಚನೆಯನ್ನು ತಳ್ಳಿ ಹಾಕಿದ್ದಲ್ಲದೆ, ಗಾಂಧೀಜಿಯ ಗೈರು ಹಾಜರಿಯಲ್ಲಿ ಸ್ವಾತಂತ್ರ್ಯ ಸಮಾರಂಭವನ್ನು ವಿಜೃಂಭಣೆಯಿಂದ ಆಚರಿಸಿತು. ಗಾಂಧೀಜಿ ಉತ್ತರಾಧಿಕಾರಿ ಅಂದು ಗಾಂಧೀಜಿಯನ್ನೇ ಮರೆತರು. ಗೌತಮ ಬುದ್ಧನನ್ನೇ ಮರೆತು ಅವನ ತತ್ವಗಳನ್ನೆಲ್ಲ ಚೀನಾ, ಶ್ರೀಲಂಕಾ, ಜಪಾನ್‌ಗಳಿಗೆ ಓಡಿಸಿದ ಭಾರತ ಗಾಂಧೀಜಿಗೂ ಹಾಗೆಯೇ ಮಾಡಿತೆಂದರೂ ಸೂಕ್ತವಾದ ಮಾತೇ.

ಜರ್ಮನಿಯ ಪ್ರದರ್ಶನಾಲಯದಲ್ಲಿ ಗಾಂಧೀಜಿಯ ಗೌರವಾರ್ಥ ಚಿತ್ರಗಳನ್ನು ಕಾಯಂ ಪ್ರದರ್ಶನಕ್ಕಿಡಲಾಗಿದೆ. ಅಹಿಂಸೆಗೆ ಪ್ರಾಧಾನ್ಯ ನೀಡಲಾಗಿದೆ. ದ್ವಾರದಲ್ಲಿ ಐನ್‌ಸ್ಟೀನ್ ವಾಕ್ಯ ಬರೆಯಲಾಗಿದೆ: ಇಂತಹ ರಕ್ತ ಮಾಂಸ ತುಂಬಿದ ಒಬ್ಬ ಮನುಷ್ಯ ಈ ಭೂಮಿಯ ಮೇಲೆ ಓಡಾಡಿದ್ದನೆಂಬುದನ್ನು ಮುಂದಿನ ಜನಾಂಗ ನಂಬುವುದು ಕಷ್ಟ.



ಇದೇನ್ ಸಾರ್!... ಒಂತರಾ ನಮ್ಮೆ ಸರ್ಕಾರ, ಪಕ್ಷಗಳಂತೇ ಆಗಾಗ ‘ಬಿರುಕು’ ಸಾಮಾನ್ಯವಾಗಿಬಿಟ್ಟಿದೆ.....

ಸತ್ಯಾಗ್ರಹದಂತಹ ಬಲಿಷ್ಠ ಆಯುಧ ಮತ್ತೊಂದಿಲ್ಲ. ದಿ ಮಾರ್ಟಿನ್ ಲುಥರ್ ಕಿಂಗ್ ಸಲ್ಲಿಸಿರುವ ಗೌರವ ಹೀಗಿದೆ: ‘ವಿವಿಧ ದೇಶಗಳಿಗೆ ಪ್ರವಾಸಿಯಾಗಿ ಹೋಗುವ ನಾನು ಗಾಂಧೀಜಿಯ ದೇಶ ಭಾರತಕ್ಕೆ ಹೋಗುವಾಗ ಯಾತ್ರಾರ್ಥಿಯಾಗುತ್ತೇನೆ. ಅದು ಪವಿತ್ರದೇಶ, ಸಾಮಾಜಿಕ ಬದಲಾವಣೆಯನ್ನು ಅಹಿಂಸಾ ಮೂಲಕ ತಂದ ದೇಶ. ಅದೇ ತತ್ವವನ್ನು ದಕ್ಷಿಣ ಅಮೆರಿಕೆಯ ಮಾಂಟ್ಗೊಮೆರಿ, ಅಲ್ಬಾಮಾದಲ್ಲಿ ನಾವು ಉಪಯೋಗಿಸುತ್ತೇವೆ. ಅದು ಪರಿಣಾಮಕಾರಿಯಾಗಿದೆ.’

ಗಾಂಧೀಜಿಯನ್ನು ಅಕ್ಟೋಬರ್ 2 ಹಾಗು ಜನವರಿ 30 ರಂದು ಔಪಚಾರಿಕವಾಗಿ ಸ್ಮರಿಸುವ ನಾವು ಅವರನ್ನು, ಅವರ ತತ್ವ ಸಹಿತ ದೇಶ ಬಿಟ್ಟು ಹೊರಹಾಕಿದ್ದೇವೆ.

ಭ್ರಷ್ಟಾಚಾರ ತೊಡೆದು ಸರಳ ಜೀವನ ನಡೆಸುವ ಬಗ್ಗೆ ನಮ್ಮ ಸಾಧನ ಎಲ್ಲಿ! ಗಾಂಧೀಜಿಯ ಹೆಸರಿನಲ್ಲಿ, ಕಾಂಗ್ರೆಸ್ ಹೆಸರಿನಲ್ಲಿ ಹಣ ನುಂಗಿ ಹಾಕಿದ್ದ ನಾವು ಪಾನದಂಗಡಿ (ಸೆರೆ, ಸೇಂಧಿ, ವೈನ್,...) ಗಳಿಗೆ ಗಾಂಧೀಜಿಯ ಹೆಸರಿಡಲು ಹಿಂದೆ ಮುಂದೆ ನೋಡಿಲ್ಲ. ಭೂಗತ ಮಾಫಿಯಾದ ಸೂಚನೆಯಂತೆ ಸರಕಾರ ಕಾರ್ಯ ನಿರ್ವಹಿಸುವ ಕುರಿತು 1955ರಲ್ಲಿಯೇ ಜನ ನಂಬಿದ್ದರು. ನೆಹರೂರವರ ಮೂಗಿನಡಿ ನಡೆದ ಪ್ರತಾಪ ಸಿಂಗ್ ಕೈರಾನ್, ಕೃಷ್ಣಮೆನನ್‌ರ ಸ್ಕ್ಯಾಂಡಲ್ ಮರೆತಿದ್ದೇವೆ. ಮುಂಧ್ರಾ ಹಗರಣ ಮುಚ್ಚಿ ಹೋಗಿದೆ. ಯಾಕೆಂದರೆ ಒಂದರ ನಂತರ ಒಂದು ದೊಡ್ಡ ಹಗರಣ ಜನನವಾಗಿದ್ದುಂಟು. ಅಪರಾಧಿ ಸ್ಥಾನದಲ್ಲಿರಬೇಕಾದವರೇ ಶಾಸಕರಾಗಿದ್ದಾರೆ, ಸಚಿವರಾಗಿದ್ದಾರೆ. ಇದು ಕ್ರಮೇಣ ಬೆಳೆದು ಬಂದ ಹಾದಿ. 1956ರಲ್ಲಿಯ ರೈಲು ಅಪಘಾತಕ್ಕಾಗಿ ನೈತಿಕ ಹೊಣೆ ಹೊತ್ತು ಲಾಲ ಬಹದ್ದೂರ ಶಾಸ್ತ್ರಿ ಸಚಿವ ಪದಕ್ಕೆ ರಾಜೀನಾಮೆಯಿತ್ತರು. ಆದರೆ ಪಿ.ವಿ.ಎನ್. ಪ್ರಧಾನಿಯಾಗಿದ್ದಾಗ ಪುರುಷೋತ್ತಮ ಎಕ್ಸಪ್ರೆಸ್ ಅಪಘಾತದಲ್ಲಿ 500 ಜನ ಮರಣ ಹೊಂದಿದಾಗ ನೈತಿಕ ಹೊಣೆ ಯಾರದಿತ್ತು? 1998ರಲ್ಲಾದ (ಪಂಜಾಬ್) ರೈಲು ಅಪಘಾತದ ನೈತಿಕ ಹೊಣೆ ಯಾರದು? ಯಾರು ಯಾಕೆ ರಾಜೀನಾಮೆ ಸಲ್ಲಿಸಬೇಕು? ನೈತಿಕ ಹೊಣೆಗಾರಿಕೆ ಎಲ್ಲಿದೆ?

ಭ್ರಷ್ಟಾಚಾರದ ವಾಸನೆ ಸಹಿಸಲಾರದ ಆ ಗಾಂಧಿ (1925) ಎತ್ತ ಭ್ರಷ್ಟಾಚಾರ ಜಾಗತಿಕ ಸಂಗತಿ ಎಂದು ಹೇಳಿದ ಈ ಗಾಂಧಿ ಯಾವ ಕಡೆಗೆ? ಸುಮಾರು 50 ಸಾವಿರ ಕೋಟಿ ರೂಪಾಯಿ ವಿವಿಧ ಭ್ರಷ್ಟಾಚಾರದಡಿಯಲ್ಲಿ ಹಸ್ತಾಂತರಗೊಂಡಿದ್ದು, 1990ರ ಈಚೆಗೆ ಬಹು ರಾಷ್ಟ್ರೀಯ ಕಂಪನಿಗಳದೇ ಚೆಲ್ಲಾಟ. ರೈತರ ಆತ್ಮಹತ್ಯೆ ಯಾರಿಗೂ ಗೊತ್ತಿಲ್ಲ. 1947ರಲ್ಲಿ ಭಿಕ್ಷೆ ಬೇಡುತ್ತಿದ್ದ ಕಾಂಗ್ರೆಸಿಗರು 1963ರಲ್ಲಿ ಲಕ್ಷಾಧೀಶರಾಗಿದ್ದು ಹೇಗೆ ಎಂದು ಇಂದೂರ ಕಾಂಗ್ರೆಸ್ ಅಧಿವೇಶನದಲ್ಲಿ ಅಂದಿನ ಅಧ್ಯಕ್ಷ ಸಂಜೀವಯ್ಯನವರ ಪ್ರಶ್ನೆ ಉತ್ತರ ಕೇಳಬೇಡಿ.

ಸಂಸದೀಯ ಪ್ರಜಾಪ್ರಭುತ್ವ ಸ್ವೀಕರಿಸಿದ ನಾವು ಸಂವಿಧಾನ ತಜ್ಞ ಐವರ್ ಜೆನ್ನಿಂಗ್ಸ್‌ನ ಮಾತು ಮರೆತಿದ್ದೇವೆ. ಜೆನ್ನಿಂಗ್ಸ್ ‘ಸೀಝರನ ಹೆಂಡತಿ ಸಂಶಯಾತೀತಳಾಗಿರಬೇಕು. ಸಚಿವರು ಪ್ರಾಮಾಣಿಕವಾಗಿರಬೇಕು. ಭ್ರಷ್ಟತೆ ಅವರ ಸಮೀಪ ಬರಬಾರದು’ ಎಂದು ಹೇಳಿದ್ದ ಆದರೇನು? ನಾವು ಎಲ್ಲವನ್ನು ಮರೆತಿದ್ದೇವೆ. ಹುಲ್ಲನ್ನು ತಿನ್ನುತ್ತಿದ್ದೇವೆ. ಕ್ರಿಮಿನಾಶಕವನ್ನು ಕುಡಿದು ಜೀವಂತವಾಗಿದ್ದೇವೆ. ಕಲಬೆರಕೆ ಔಷಧ ಕುಡಿಸಿ ಜನರನ್ನು ಕೊಂದು ಫೈವ್ ಸ್ಟಾರ್ ಹೊಟೆಲ್ ಕಟ್ಟಿಸಿದ್ದೇವೆ. ನ್ಯಾಯಾಧೀಶರ ಮೇಲೆ ಸೇಡು ತೀರಿಸಿಕೊಂಡಿದ್ದೇವೆ.

ನಮಗೆ ಇತಿಹಾಸ ಪ್ರಜ್ಞೆ ಇಲ್ಲವೆನ್ನುವುದನ್ನು ಸತ್ಯಮಾಡಿದ್ದೇವೆ. ಪ್ರಾಚೀನ ಭವ್ಯ ನಾಗರಿಕತೆಗಳಾದ ರೋಮ್, ಗ್ರೀಸ್, ಬೆಬಿಲೋನಿಯಾ, ಸಿಂಧು ಇತ್ಯಾದಿಗಳ ನಾಶಕ್ಕೆ ಕಾರಣ ಮದ್ಯ ಮತ್ತು ಭ್ರಷ್ಟಾಚಾರವೆನ್ನುವುದು ಸ್ಪಷ್ಟವಾಗಿದ್ದರೂ ಅವುಗಳನ್ನು ತಳಕು ಹಾಕಿಕೊಂಡು ನಾವು ಸಾಗುತ್ತಿದ್ದೇವೆ. ಅವನತಿಯೆಡೆ ಯಶಸ್ವಿಯಾಗಿ ಮುನ್ನುಗುತ್ತಿದ್ದೇವೆ. ‘ದೇಶ ಹಾಳಾಗಲಿ, ನನಗೆ ಮಾತ್ರ ಅಧಿಕಾರ, ಸಂಪತ್ತು ಬರಲಿ’ ಇದು ಇಂದಿನ ತಾರಕ ಮಂತ್ರ. ಬುದ್ಧಿ ಇರುವ ಜೀವಿಗಳೆಲ್ಲಿದ್ದಾರೆ?


ಬುದ್ಧ, ಬಸವ, ಗಾಂಧಿಯಂತಹ ಜನ ಜನಿಸಿದ ಈ ನಾಡಿನಲ್ಲಿ ಅವರ ಆಚಾರ ವಿಚಾರ ತತ್ವಗಳನ್ನು ಮತ್ತೆ ಬರಮಾಡಿಕೊಳ್ಳೋಣ. ಅವುಗಳಿಗೆ ಯಾವ ಬಣ್ಣ ಬಳಿಯದೇ ಮೂಗಿನ ನೇರಕ್ಕೆ ನೋಡಿ ಸರಳ ಜೀವನ ಸಾಗಿಸಲು ಇರುವ ತೊಂದರೆ ಏನು? ಇವೆಲ್ಲವನ್ನು ಮರೆತದ್ದೆ ನಾವು ಮಾಡಿದ ತಪ್ಪು ಎನ್ನುವಿರಾ? ಈಗಲಾದರೂ ತಿದ್ದಿಕೊಳ್ಳಬಹುದಲ್ಲಾ! ಅಥವಾ ಇತಿಹಾಸದ ಪುನರಾವೃತ್ತಿಗೆ ಮಾರ್ಗ ಮಾಡಿ ಕೊಡುವಿರಾ?

■ ಪಶುಪತಿನಾಥಶಾಸ್ತ್ರಿ

ಸಂವೇದನೆ

■ ಎಂ. ಎಸ್. ಮೂರ್ತಿ

'ವಿನ್ಯಾಸ', ನಂ. 132, 1ನೇ ಮಹಡಿ, ಗಾಂಧಿ ಬಜಾರ್ ಸರ್ಕಲ್, ಬಸವನಗುಡಿ, ಬೆಂಗಳೂರು-4



ನೆನಪುಗಳ 'ಚಂದ್ರ'

ಬೆಂಗಳೂರಿನ ದೇಸಿ ವಾತಾವರಣ ನೋಡಲು, ಅನುಭವಿಸಲು ಸಿಗುವುದು ಪ್ರಮುಖವಾಗಿ ಮಲ್ಲೇಶ್ವರಂ ಮತ್ತು ಬಸವನಗುಡಿ ಬಡಾವಣೆಗಳಲ್ಲಿ; ಎರಡೂ ಸ್ಥಳಗಳು ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿವೆ. ಬೆಂಗಳೂರಿನ ಪಶ್ಚಿಮಕ್ಕೆ ಮಲ್ಲೇಶ್ವರಂ, ದಕ್ಷಿಣಕ್ಕೆ ಬಸವನಗುಡಿ ಬಡಾವಣೆಗಳು-ಬೆಂಗಳೂರಿನ ಹಳೆಯ ನೆನಪನ್ನು ಇಂದಿನವರೆಗೂ ಮತ್ತು ಹಿಂದಿನವರಿಗೂ ಉಳಿಸಿ ಆತ್ಮೀಯ ವಾತಾವರಣವನ್ನು ನೀಡುತ್ತಾ ಈವತ್ತಿನ ನವೀನ ಬಡಾವಣೆಗಳಿಗಿಂತಲೂ ಜೀವಂತವಾಗಿವೆ.

ಈ ಮಹಾನಗರದ ದಕ್ಷಿಣಕ್ಕಿರುವ ಬಸವನಗುಡಿಯ ಹೃದಯ ಭಾಗ 'ಗಾಂಧಿಬಜಾರ್'- ಈ ಪರಿಸರದೊಂದಿಗೆ ನನ್ನ ಸಂಬಂಧ ಸುಮಾರು ಎರಡು ದಶಕಗಳು. ಇಲ್ಲಿನ ಶ್ರೀ ಅ.ನ.ಸುಬ್ಬರಾಯರ ಕಲಾಮಂದಿರದಲ್ಲಿ ಡಿಪ್ಲೋಮಾ ಮಾಡುವಾಗ ಬೆಳಗಿನ ಹೊತ್ತು ಬಂದರೆ ಸಂಜೆ 8ಕ್ಕೆ ಕಲಾಮಂದಿರದಿಂದ ಹೊರಟು, ಗಾಂಧಿಬಜಾರ್‌ನಲ್ಲಿ ಸುತ್ತಾಡಿ, ಹಳೆಯ ಪುಸ್ತಕದ ಅಂಗಡಿಗೆ ಭೇಟಿಕೊಟ್ಟು, ಮನೆ ತಲುಪುತ್ತಿದ್ದುದು 9ಗಂಟೆಗೆ. ಅಂದಿನಿಂದಲೂ ನನ್ನ ಬದುಕಿನ ಹೆಚ್ಚಿನ ಸಮಯ ಗಾಂಧಿಬಜಾರ್‌ನಲ್ಲಿ ಕಳೆದಿದ್ದೇನೆ. ಆಗ ಗಾಂಧಿಬಜಾರ್ ಸರ್ಕಲ್‌ನ ಒಂದು ಭಾಗದಲ್ಲಿ ಒಂದು ಹಳೆಯ ಹೋಟೆಲ್ ಇತ್ತು. ಅದರ ಹೆಸರು 'ಮಿತ್ರಪ್ರಿಯ' ಎಂದಿದ್ದರೂ ಹಳಬರೆಲ್ಲ ಕರೆಯುತ್ತಿದ್ದುದು 'ಭಟ್ಟರ ಹೋಟೆಲ್' ಎಂದು. ಒಳ್ಳೆಯ ಖಾಲಿ ದೋಸೆಗೆ, ಕಾಫಿಗೆ ಪ್ರಸಿದ್ಧಿ. ಅದರ ಎದುರೇ ಹಳೆಯ ಕಾದಂಬರಿಗಳಲ್ಲೂ ದಾಖಲಿಸಿಕೊಂಡಿರುವ ಮಸಾಲೆ ದೋಸೆಯ ಪ್ರಸಿದ್ಧ ವಿದ್ಯಾರ್ಥಿ ಭವನ. ಈ ಎರಡು ಹೋಟೆಲ್‌ಗಳಲ್ಲಿ ಈಗ 'ಮಿತ್ರಪ್ರಿಯ' ಇಲ್ಲ, 'ವಿದ್ಯಾರ್ಥಿ ಭವನ' ಇದೆ. ಮಿತ್ರ ಪ್ರಿಯ ಹೋಟೆಲ್ ಮುಂಭಾಗದಲ್ಲಿ ಒಬ್ಬ ವಯಸ್ಸಾದ ವ್ಯಕ್ತಿ ವೃತ್ತಪತ್ರಿಕೆಗಳನ್ನು ಫುಟ್‌ಪಾತ್‌ನ ಮೇಲೆ ಇರಿಸಿಕೊಂಡು ಅನೇಕ ವರ್ಷಗಳಿಂದ ವ್ಯಾಪಾರ ಮಾಡುತ್ತಿದ್ದ. ನಾವೆಲ್ಲ ಸುಧಾ, ಇಲಸ್ಟ್ರೇಟೆಡ್ ವೀಕ್ಲಿ ಕೊಳ್ಳುತ್ತಿದ್ದುದು ಆತನಲ್ಲೇ. ಆತ ನಮ್ಮೊಂದಿಗೆ ಮಾತನಾಡುತ್ತಾ ಅನೇಕ ಹಳೆಯ ವಿಚಾರಗಳನ್ನು ಮೆಲುಕು ಹಾಕುತ್ತಿದ್ದ. ಆತನ ಹೆಸರು ಚಂದ್ರಶೇಖರ್; ನಾವೆಲ್ಲ ಆತನನ್ನು 'ಚಂದ್ರು' ಎಂದು ಕರೆಯುತ್ತಿದ್ದೆವು. 'ಮಿತ್ರ ಪ್ರಿಯ' ಹೋಟೆಲ್, ಪೇಪರ್ ಮಾರುವ 'ಚಂದ್ರು' ಮತ್ತು ಅಲ್ಲಿ ದೋಸೆ, ಕಾಫಿಗಾಗಿ ಬಂದು, ಹರಟುತ್ತಾ ಹೊರಗೆ ನಿಂತು ಸಿಗರೇಟು ಸೇದಿ, ಪೇಪರ್ ಓದಿ ದಿನ ಕಳೆಯುತ್ತಿದ್ದ ಸಾಹಿತಿಗಳು, ನಾಟಕಕಾರರು, ಕಲಾವಿದರು, ಸಂಗೀತಕಾರರು, ಇವರೆಲ್ಲರೂ ಈ ಗಾಂಧಿಬಜಾರ್ ವೃತ್ತವನ್ನು ಸಾಂಸ್ಕೃತಿಕವಾಗಿ ಬೆಳೆಸಿದ್ದರು. ನನಗೆ ನೆನಪಿರುವುದು ಚಳಿಗಾಲದಲ್ಲೂ ನಿಧಾನವಾಗಿ ನಡೆದು ಗಾಂಧಿಬಜಾರ್ ಸರ್ಕಲ್ ದಾಟಿ ಬಸವನಗುಡಿ ಕ್ಲಬ್‌ಗೆ ಬರುತ್ತಿದ್ದ ಮಾಸ್ತಿ; ರಸ್ತೆಯ ಜನಜಂಗುಳಿಯಲ್ಲೊಬ್ಬರಾಗಿ ನಡೆಯುತ್ತಿದ್ದರು. ಜನರು ಕೂಡ ಅವರನ್ನು ತಮ್ಮಲ್ಲೊಬ್ಬರಾಗಿ ಕಾಣುತ್ತಿದ್ದರು. ಆಗಾಗ ಸಿಗರೇಟು ಸೇದುತ್ತಾ ಕಾಣುತ್ತಿದ್ದ ಅಡಿಗರು, ಬಿ.ವಿ.ಕಾರಂತರು ನಂತರ ಇವರ ಪರಂಪರೆಯ ಶಿಷ್ಯರು ಇತರ ಅನೇಕರು ಗಾಂಧಿಬಜಾರ್‌ನಲ್ಲಿ ನಮಗೆ ಕಾಣಿಸುತ್ತಿದ್ದರು. ಇವರೆಲ್ಲರನ್ನೂ ನಮ್ಮ 'ಚಂದ್ರು' ತನ್ನ ಎಲ್ಲ ಗಿರಾಕಿಗಳಂತೆ ನೋಡಿದ್ದ. ನಾವು ಆ ಬಗ್ಗೆ ಮಾತು ತೆಗೆದರೆ ತನ್ನ ಗಡ್ಡ ನೇವರಿಸುತ್ತಲೋ, ಕತ್ತಿನಲ್ಲಿದ್ದ ಮಫ್ಲರ್‌ನ್ನು ಮತ್ತೆ ಸುತ್ತುತ್ತಲೋ "ಹಿಂದೆ, ಇಲ್ಲಿ

ಎಂತೆಂತಹವರೊ ನನ್ನ ಹತ್ರ ಪೇಪರ್ ತಗೊಂಡಿದ್ದಾರೆ ಗೊತ್ತಾ ಸಾರ್'' ಎನ್ನುತ್ತಾ ಕೈಲಾಸಂರೊಂದಿಗೆ ಬರುತ್ತಿದ್ದ ಕಿರಿಯ ವೈಯನ್‌ಕೆಯನ್ನು, ಜಿ.ಸದಾಶಿವಯ್ಯ ರೊಂದಿಗೆ ಬರುತ್ತಿದ್ದ ಚಿ.ಉದಯಶಂಕರ್‌ರನ್ನೂ, ಮೈಸೂರು ಅನಂತಸ್ವಾಮಿ ತಮ್ಮ ಗುರುಗಳಾದ ಕಾಳಿಂಗರಾವ್‌ರೊಂದಿಗೆ ಬಂದುದು, ನವರತ್ನರಾಮರಾಯರು, ಡಿ.ವಿ.ಗುಂಡಪ್ಪ, ಅ.ನ.ಕೃ. ಇನ್ನೂ ಅನೇಕ ಗತವೈಭವದ ಘಟಾನುಘಟಿಗಳು ಅಲ್ಲಿ ನಿಂತು, ಕುಳಿತು ಏನೇನೊ ವಿಷಯಗಳನ್ನು ಕುರಿತು ಮಾತನಾಡಿದ್ದರೋ ಎಂತೆಂತಹ ತರ್ಕಗಳು ನಡೆದಿವೆಯೋ ಎಲ್ಲವನ್ನೂ ಅರ್ಥವಾಗದಿದ್ದರೂ ಸೂಕ್ಷ್ಮವಾಗಿ ಗ್ರಹಿಸಿ ತನ್ನ ಮನಃಪಟಲದ ಮೇಲೆ ದಾಖಲಿಸಿಕೊಂಡಿದ್ದ ಚಂದ್ರು. ಅಲ್ಲಿಂದ ಸುಮಾರು 15 ವರ್ಷಗಳು ನನ್ನ ಆಫೀಸಿಗೆ ಪೇಪರನ್ನು ಅನಿಯಮಿತವಾಗಿ ಹಾಕುತ್ತಿದ್ದ. ಅನೇಕ ಬಾರಿ ನಾನು ಸಿಟ್ಟು ಮಾಡಿದ್ದೆ. ಹಣವನ್ನು ನಿಯಮಿತವಾಗಿ ಪಡೆದದ್ದಲ್ಲದೆ ತನ್ನ ಅನೇಕ ಸಮಸ್ಯೆಗಳನ್ನು ಹೇಳಿಕೊಂಡು ಆಗಾಗ ಹಣ ಪಡೆಯುತ್ತಿದ್ದ. ನಾನೂ ಕೊಡುತ್ತಿದ್ದೆ. ಅದೆಲ್ಲವೂ ಜೂಜಿಗೆ ಹೋಗುತ್ತಿತ್ತೆಂದು ತಿಳಿದ ಮೇಲೆ ನಿಲ್ಲಿಸಿದ್ದೆ. ಈಚೆಗೆ ಒಂದೆರಡು ವರ್ಷಗಳ ಹಿಂದೆ ಪೇಪರನ್ನು ನನ್ನ ಆಫೀಸಿಗೆ ಹಾಕಲು ಆಗುವುದಿಲ್ಲವೆಂದು ಇನ್ನೊಬ್ಬರನ್ನು ಪರಿಚಯಿಸಿದ ಚಂದ್ರು ಗಾಂಧಿಬಜಾರ್‌ನ ಹಣ್ಣಿನ ಅಂಗಡಿಯ ಬಳಿ ದಿನವೂ ಸಿಗುತ್ತಿದ್ದ. ಒಮ್ಮೊಮ್ಮೆ ಕಾಯಿಲೆಯಿಂದ ಬಳಲಿರುತ್ತಿದ್ದ. ಬೇರೆ ಯಾವ ದುರಭ್ಯಾಸವೂ ಇಲ್ಲದ ಈ ವ್ಯಕ್ತಿ ತುಂಬಾ ಕೊಳಕಾಗಿರುತ್ತಿದ್ದ. ತುಂಬಾ ವರ್ಷಗಳ ಹಿಂದೆ ಇರಬೇಕು ಆತನನ್ನು ಕೂರಿಸಿ ಒಂದೆರಡು ಸ್ಕೇಚ್‌ಗಳನ್ನು ಮಾಡಿದ್ದೆ. ಅದನ್ನು ನೋಡಿ ಎಲ್ಲರಂತೆ ನನಗೆ ಕೊಡಿ ಎನ್ನಲಿಲ್ಲ. ಚೆನ್ನಾಗಿದೆ ಸಾರ್ ಇದನ್ನು ಯಾರಾದರೂ ತಗೊಂಡರೆ ಆ ಹಣ ನನಗೆ ಕೊಡಬೇಕು ಎಂದಿದ್ದ. ನನಗೆ ಪೇಪರ್ ಕೊಡುತ್ತಿರದಿದ್ದರೂ ಕೂಡ ಕಾಫಿಗೆ ಹಣ ಕೊಡಿ ಎನ್ನುತ್ತಿದ್ದ. ಒಂದು ದಿನ ಎಂದಿನಂತೆ ಹಣ್ಣಿನ ಅಂಗಡಿಯ ಹತ್ತಿರ ನಿಂತಿದ್ದ ಚಂದ್ರು ಮಾಮೂಲಿನಂತೆ ಹಣ ಕೇಳಿದ. ಜೂಜಾಡುವುದಾದರೆ ಇಲ್ಲ ಎಂದುದಕ್ಕೆ ''ಕಾಫಿಗೆ ಸಾರ್, ಸುಮ್ಮನೆ ಕೊಡಿ'' ಎಂದು ಅಧಿಕಾರಯುತವಾಗಿ ಕೇಳಿ ಸ್ವಲ್ಪ ಹಣ ಪಡೆದು ಮಾರನೆಯ ದಿನ ಇಲ್ಲವಾಗಿದ್ದ. ಈಗಿರುವ ಮಾಡರ್ನ್ ಹೋಟೆಲಿನಲ್ಲಿ ''ಪೇಪರ್ ಚಂದ್ರು'' ಸತ್ತ ಸುದ್ದಿ ಎಲ್ಲರಿಗೂ ಪ್ರಚಾರವಾಗಿತ್ತು. ಎಲ್ಲರೂ ಚಂದಾ ಹಣ ಎತ್ತಿ ನೀಡಿದ್ದರೆಂದು ತಿಳಿಯಿತು. ಚಂದ್ರು ಉರುಫ್ ಚಂದ್ರಶೇಖರ್ ಪೇಪರ್ ಮಾರುತ್ತಿದ್ದ 'ಮಿತ್ರಪ್ರಿಯ' ಹೋಟೆಲ್ ಮಾಯವಾಗಿದೆ. ಆತ ಅಲ್ಲಿ ನಿಂತು ನನ್ನೊಂದಿಗೆ ಗತಿಸಿದ ಸಾಹಿತಿ, ಕಲಾವಿದರ ನೆನಪನ್ನು ಮಾಡುತ್ತಿದ್ದ ನೆನಪು ಇನ್ನೂ ಇದೆ. ಆದರೆ ಆತ ಮಾತ್ರ ಇಲ್ಲ.

ಈಗ-ಗಾಂಧಿಬಜಾರ್ ಸರ್ಕಲ್‌ಗೆ ಸ್ವಲ್ಪ ಮುಂಚೆ ಒಂದು ಹೋಟೇಲ್ ಇದೆ. ಹೆಸರು ಮಾಡರ್ನ್ ಹೋಟೆಲ್. ಆಗಲೂ ಅದು ಇತ್ತಾದರೂ ಅಂತಹ ವರ್ಚಸ್ಸು ಇರಲಿಲ್ಲ. ಈಗ ಸುತ್ತಮುತ್ತ ಅನೇಕ ಕೆಫೆಗಳು, ಶ್ರೀಗಳು, ವಿಚಿತ್ರವಾಗಿ ಪ್ರಾರಂಭವಾಗಿವೆ. ಆದರೆ ಆ ದಿನಗಳನ್ನು ನೆನಪು ಮಾಡಲೋ ಎಂಬಂತೆ ಇಂದಿಗೂ ಅಂತಹುದೇ ವಾತಾವರಣದ ಒಂದು ಹಳೆಯ ಹೋಟೆಲ್ ಇದು. ಮಿತ್ರಪ್ರಿಯ ನಂತರ ಸುಮಾರು 17-18 ವರ್ಷವಾದರೂ ಇಲ್ಲಿನ ಕಾಫಿ ಸವಿಯನ್ನು ಅನುಭವಿಸಿದ್ದೇನೆ ಮತ್ತು ಅನುಭವಿಸುತ್ತಿದ್ದೇನೆ. ಈಗಲೂ ಅಲ್ಲಿ ನಮ್ಮ ಪೇಪರ್ ಚಂದ್ರುವಿನ ಹೆಸರಿನವರೇ ಆದ 'ಚಂದ್ರ' ಎನ್ನುವ ಹುಡುಗ ಕಾಫಿ ತಯಾರಿಸುವ 'ಹದ' ಒಂದು ದೊಡ್ಡ ಕಲೆ ಎಂದೇ ನನ್ನ ಅಭಿಪ್ರಾಯ. ಇವನು ಬೆಳಿಗ್ಗೆ ಮತ್ತು ಸಂಜೆ ನೀಡುವ ಬಿಸಿ ಬಿಸಿಯಾದ ಕಾಫಿಗೆ ಸಕ್ಕರೆ ಹೆಚ್ಚಾಗದ, ಕಡಿಮೆಯಾಗದ ಹದ ಅವನೊಬ್ಬನಿಗೇ ಗೊತ್ತು. ಅಂತಹ ಕುಶಲತೆ ಅವನದು. ಈ ಡಿಸೆಂಬರ್ ಚಳಿಗಾಲದ ಬೆಳಗಿನ ಹೊತ್ತು ಆತ ತಂದಿಡುವ ಕಾಫಿ ಪರಿಮಳ, ಸ್ವಾದದ ಮುಂದೆ ನನ್ನ ಕಲೆ ಸೋತು ಹೋಗುತ್ತದೆ. ಅದೂ ಒಂದು ಸೃಜನ ಶೀಲ ಗುಣ ಅಲ್ಲವೇ? ■



ವಯಸ್ಕರಿಗಾಗಿ

■ ಡಾ. ವಸುಂಧರಾ ಭೂಪತಿ

ಏಡ್ಸ್ ಲೇಖನ ಓದಿದ ಮೇಲೆ...!

ನಾನು ನಿಮ್ಮ ಪತ್ರಿಕೆಯ ಖಾಯಂ ಓದುಗ ಅಲ್ಲದಿದ್ದರೂ ಒಂದೆರಡು ಸಲ ಖರೀದಿಸಿದೆ. ಮೊನ್ನೆ ಡಿಸೆಂಬರ್ ಸಂಚಿಕೆಯಲ್ಲಿ 'ಏಡ್ಸ್' ಲೇಖನ ಓದಿದ ನಂತರ ಅನುಮಾನಗೊಂಡು ರಕ್ತ ಪರೀಕ್ಷೆ ಮಾಡಿಸಿದಾಗ ಎಚ್.ಐ.ವಿ. ಪೊಸಿಟಿವ್ ಬಂದಿದೆ. ಇದು ತಿಳಿದು ಆತ್ಮಹತ್ಯೆಗೆ ಪ್ರಯತ್ನಿಸಿ ವಿಫಲನಾದೆ. ನಾನು ಒಬ್ಬನೇ ಮಗ. 1999ಕ್ಕೆ 26 ವರ್ಷ ತುಂಬುತ್ತದೆ. ನನ್ನ ಆಯಸ್ಸು ಇನ್ನು ಕೇವಲ 3 ವರ್ಷ ಅಂತ ನನಗೆ ಗೊತ್ತು. ಆದರೆ ನಮ್ಮ ಮನೆಯಲ್ಲಿ ನನ್ನ ಉದ್ಯೋಗಕ್ಕೆ, ಮದುವೆಗೆ ಸಿದ್ಧತೆ ನಡೆಸಿದ್ದಾರೆ. ಅಲ್ಲದೆ ನಮ್ಮ ಮನೆಯಲ್ಲಿ ನನ್ನ ರೋಗದ ಬಗ್ಗೆ ಗೊತ್ತಾದರೆ ಅಪ್ಪ ಅಮ್ಮ ಇಬ್ಬರೂ ಸಾಯುತ್ತಾರೆ. ನನಗೊಬ್ಬ ತಂಗಿ ಇದ್ದಾಳೆ. ಅವಳ ಮದುವೆ ನಿಶ್ಚಿತವಾಗುವುದಿದೆ. ಅವಳ ಒಳಿತಿಗಾಗಿ ನಾನು ಬದುಕಬೇಕಾಗಿದೆ. ಹಾಗೆಯೇ ಅಪ್ಪ ಅಮ್ಮರ ನೆಮ್ಮದಿಗಾಗಿ ನಾನು ಮದುವೆಯಾಗ ಬೇಕಾಗಿದೆ. ಆದ್ದರಿಂದ ನಾನು ಹೆಚ್ಚು ಕಾಲ ಬದುಕಲು ಯಾವುದಾದರೂ ಉಪಾಯ ಇದೆಯೇ? AZT ಮಾತ್ರೆ ತೆಗೆದುಕೊಳ್ಳುವ ಬಗ್ಗೆ ವಿವರ ತಿಳಿಸಿ. ನೀವು ಕೂಡಲೇ ಸಲಹೆ ನೀಡದಿದ್ದರೆ ಚಿಂತೆ, ಅಸಹಾಯಕತೆಗಳು ನನ್ನನ್ನು ಸಾವಿಗೆ ದೂಡುತ್ತವೆ.

-ಹೆಸರು, ಊರು ಬೇಡ.


ಸಲಹೆ

ನಿಮಗೆ ಎಚ್.ಐ.ವಿ. ಪೊಸಿಟಿವ್ ಬಂದ ನಂತರ ಮೂರು ವರ್ಷಗಳಲ್ಲಿ ಸಾಯುತ್ತಾರೆಂದು ಯಾರು ಹೇಳಿದರು? ಆತ್ಮಹತ್ಯೆಯ ಬಗ್ಗೆ ಯೋಚಿಸಬೇಡಿ. ಎಚ್.ಐ.ವಿ. ಪೊಸಿಟಿವ್ ಬಂದ ತಕ್ಷಣವೇ ಏಡ್ಸ್ ಬರುವುದಿಲ್ಲ. ನೀವು ಔಷಧಿಯನ್ನು ನಿಯಮಿತವಾಗಿ ಸೇವಿಸಿ. ಆರೋಗ್ಯಕರ ಜೀವನ ಶೈಲಿ ರೂಢಿಸಿಕೊಂಡರೆ ಹತ್ತರಿಂದ ಹದಿನೈದು (10-15) ವರ್ಷಗಳ ಕಾಲ ಬದುಕಬಹುದು. ಅಷ್ಟೊತ್ತಿಗೆ ಏಡ್ಸ್‌ಗೆ ಚಿಕಿತ್ಸೆ ಕಂಡು ಹಿಡಿದರೆ ಚಿಕಿತ್ಸೆಯನ್ನು ತೆಗೆದುಕೊಳ್ಳಬಹುದು. ಜೀವನ ತುಂಬಾ ಅಮೂಲ್ಯ. ಅದನ್ನು ಕೈಯಾರೆ ಹಾಳು ಮಾಡಿಕೊಳ್ಳಬೇಡಿ. ಆದರೆ ದಯವಿಟ್ಟು ಮದುವೆಯಾಗಬೇಡಿ. ಮದುವೆಯಾದರೆ ಒಂದು ಹೆಣ್ಣಿನ ಬದುಕನ್ನು ನಾಶ ಮಾಡಿದಂತಾಗುತ್ತದೆ. ಮನೆಯಲ್ಲಿ ನಿಮ್ಮ ಅಪ್ಪ, ಅಮ್ಮನಿಗೆ ಈ ವಿಷಯ ತಿಳಿಸುವುದು ಒಳ್ಳೆಯದು. ಮೊದಲು ಕೋಪಿಸಿಕೊಂಡರೂ ನಂತರ ಅವರು ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ನೀವು ಬೆಂಗಳೂರಿನಲ್ಲಿರುವ ಸಂರಕ್ಷ ಸಂಸ್ಥೆಯನ್ನು ಸಂಪರ್ಕಿಸಿದರೆ ಅವರು ನಿಮಗೆ ಆರೋಗ್ಯಪೂರ್ಣವಾಗಿ ಬದುಕುವುದು ಹೇಗೆಂಬುದರ ಬಗ್ಗೆ ಹಾಗೂ ಬೇರೆಯವರಿಗೆ ಹರಡದಂತೆ ತಡೆಯುವುದು ಹೇಗೆಂಬುದರ ಬಗ್ಗೆ ಸರಿಯಾದ ತಿಳುವಳಿಕೆ ನೀಡುವುದಲ್ಲದೆ ನಿಮ್ಮ ಹೆಸರು, ವಿಳಾಸವನ್ನು ಗೌಪ್ಯವಾಗಿಡುತ್ತಾರೆ. AZT ಮಾತ್ರೆಯನ್ನು ಅಲ್ಲಿ ಉಚಿತವಾಗಿ ನೀಡುತ್ತಾರೆ. ಸಂರಕ್ಷ ಸಂಸ್ಥೆಯ ವಿಳಾಸವನ್ನು ಡಿಸೆಂಬರ್ ತಿಂಗಳ ಸಂಚಿಕೆಯಲ್ಲಿ ನೀಡಲಾಗಿದೆ.

ಹೆಂಡತಿಗೂ ಏಡ್ಸ್ ಬರಬಹುದೇ?

28 ವರ್ಷದ ನನಗೆ ವಿವಾಹವಾಗಿದೆ. ರಕ್ತ ಪರೀಕ್ಷೆಯಿಂದ ಎಚ್.ಐ.ವಿ. ಇರುವುದು ಗೊತ್ತಾಗಿದೆ. ಆದರೆ ಇದು ನನ್ನ ಹೆಂಡತಿಗೆ ಇಲ್ಲ.

ವಯಸ್ಕರ
ಸಂದೇಹ ಸಲಹೆ



ನನ್ನ ಹೆಂಡತಿ ನನ್ನ ಜನಾಂಗವನ್ನು ಬಾಯಿಯಲ್ಲಿ ಚೀಪಲು ಹೆಚ್ಚು ಇಷ್ಟಪಡುತ್ತಾಳೆ. ನಿರೋಧ್ ಹಾಕಿದಾಗ ಚೀಪಲು ನಿರಾಕರಿಸುತ್ತಾಳೆ. ಆಕೆಗೆ ನನಗೆ ಎಚ್.ಐ.ವಿ. ಇರುವುದು ಗೊತ್ತಿಲ್ಲ. ಇದರಿಂದ ಆಕೆಗೂ ರೋಗ ತಗುಲಬಹುದೇ? ನನ್ನ ವೀರ್ಯ ಆಕೆಯ ಮೈಕೈಗೆ ತಾಗಿದರೆ ಎಚ್.ಐ.ವಿ. ಬರುತ್ತದೆಯೇ? ನಾನು ಹೆಚ್ಚು ಕಾಲ ಬದುಕಲು ಬಯಸುವೆ. ವೈದ್ಯಕೀಯ ಔಷಧೋಪಚಾರಗಳ ಬಗ್ಗೆ ತಿಳಿಸಿರಿ.

-ಬಿ.ಜಿ., ಊರು ಬೇಡ.

ಸಲಹೆ

ನೀವು ಹೆಂಡತಿಗೆ ವಿಷಯ ತಿಳಿಸದೇ ತಪ್ಪು ಮಾಡಿರುವಿರಿ. ವೀರ್ಯ ಮೈ ಕೈಗೆ ತಾಗುವುದರಿಂದ ಸೋಂಕು ಉಂಟಾಗುವುದಿಲ್ಲ. ಆದರೆ ಮುಖ ಮೈಥುನದಿಂದ ಈ ವೈರಸ್‌ನ ಸೋಂಕು ಖಂಡಿತ ತಗಲುತ್ತದೆ. ನೀವು ನಿರೋಧ್ ಬಳಸಿಯೇ ಮೈಥುನದಲ್ಲಿ ಪಾಲ್ಗೊಳ್ಳಬೇಕು. ನೀವು ಜಾಗರೂಕತೆಯಿಂದ ಜೀವನ ನಡೆಸಬೇಕು. ನೀವು ಬೆಂಗಳೂರಿನ ಸಂರಕ್ಷ ಸಂಸ್ಥೆಯನ್ನು ಸಂಪರ್ಕಿಸಿದರೆ ಅಲ್ಲಿ ಉಚಿತ ಸಲಹೆ, ಮಾರ್ಗದರ್ಶನ ಹಾಗೂ ಔಷಧಿ ಎಲ್ಲವೂ ದೊರೆಯುತ್ತದೆ. ನಿಮ್ಮ ಹೆಂಡತಿಗೆ ಈಗಲೇ ವಿಷಯ ತಿಳಿಸಿ. ಇನ್ನೊಮ್ಮೆ ಅವರ ರಕ್ತ ಪರೀಕ್ಷೆ ಮಾಡಿಸಿ ಎಚ್.ಐ.ವಿ. ಸೋಂಕಿನ ಬಗ್ಗೆ ಖಚಿತ ಪಡಿಸಿಕೊಳ್ಳಿ, ಆಕಸ್ಮಾತ್ ಸೋಂಕು ಇರದಿದ್ದಲ್ಲಿ ಅವರಿಗೆ ಹರಡದಂತೆ ನೋಡಿಕೊಳ್ಳಬೇಕಾದುದು ನಿಮ್ಮ ಕರ್ತವ್ಯ.

ಮನೆಯಲ್ಲಿ ಗೊತ್ತಾದರೆ ಸಾವು ಖಚಿತ

ನಾನು ಮದುವೆಯಾಗದ ಯುವಕ. ಡಿಸೆಂಬರ್ ಒಂದರಂದು ಕುಡಿದ ಅಮಲಿನಲ್ಲಿ ಒಬ್ಬ ಗಂಡು ಸೂಳೆಯೊಡನೆ ಮುಖ-ಗುದ ಮೈಥುನ ಮಾಡಿಬಿಟ್ಟೆ. ಮರುದಿನ ನಾನು ಕೆಸರಿನಲ್ಲಿ ಕಾಲಿಟ್ಟಿದ್ದು ಅರಿವಿಗೆ ಬರಲಿಲ್ಲ. 4-5 ದಿನಗಳ ನಂತರ ಈ ಬಗ್ಗೆ ಯೋಚಿಸಿ ರಕ್ತ ಪರೀಕ್ಷೆ ಮಾಡಿಸಿದೆ. ಎಚ್.ಐ.ವಿ. ಪೊಸಿಟಿವ್ ಎಂದು ಗೊತ್ತಾಗಿದೆ. ಒಂದು ತಾಲೂಕು ಪ್ರದೇಶದಲ್ಲಿ ELISA ಮಾಡಿಸಿದ್ದೇನೆ. ನಾನು ಜೀವಂತ ಇರಬೇಕಾದರೆ ನನಗೆ ಎಚ್.ಐ.ವಿ. ಇರಬಾರದು. ಇದಕ್ಕೆ ತಕ್ಕ ಚಿಕಿತ್ಸೆ ತಿಳಿಸಿ. ಒಂದು ವೇಳೆ ಖಾಯಿಲೆ ವಾಸಿಯಾಗದಿದ್ದರೆ ನನ್ನ ಸುತ್ತಲಿನವರಿಗೆ, ಬಳಗದವರಿಗೆ ಗೊತ್ತಾಗುವ ಮುಂಚೆ ನಾನು ಸಾಯಬಯಸುತ್ತೇನೆ. ನಾನು ಆಸ್ಪತ್ರೆಗೆ ಸೇರಿದರೆ ರೋಗದ ಗುಟ್ಟು ರಟ್ಟಾಗುತ್ತದೆ. ಆದ್ದರಿಂದ ಮಾತ್ರೆ, ಇಂಜೆಕ್ಷನ್ ಬಗ್ಗೆ ತಿಳಿಸಿ. ನಿಮ್ಮ ಸಲಹೆಯನ್ನು ಕಟ್ಟು ನಿಟ್ಟಾಗಿ ಪಾಲಿಸುತ್ತೇನೆಂದು ಪ್ರತಿಜ್ಞೆ ಮಾಡಿ ಹೇಳುತ್ತೇನೆ. ನಿಮ್ಮ ಕಾಲಿಗೆ ಬಿದ್ದು ಬೇಡಿಕೊಳ್ಳುತ್ತೇನೆ. ದಯವಿಟ್ಟು ಸಲಹೆ ನೀಡಿ.

-ಎಚ್.ಐ.ವಿ. ರೋಗಿ, ಊರು ಬೇಡ.

ಸಲಹೆ

ನಿಮಗೆ ಮೊದಲೇ ಎಚ್.ಐ.ವಿ. ಸೋಂಕು ತಗುಲಿರಬಹುದು. ಏಕೆಂದರೆ ಮೈಥುನ ಮಾಡಿದ

ಕಳೆದ ಸಂಚಿಕೆಯಲ್ಲಿ ನಾವು ಪ್ರಕಟಿಸಿದ 'ಏಡ್ಸ್' ಕುರಿತ ಪರಿಪೂರ್ಣ ಲೇಖನ ಓದುಗರ ಮೇಲೆ ನಿರೀಕ್ಷೆಗೂ ಮೀರಿ ಪರಿಣಾಮ ಬೀರಿದೆ. ನಮ್ಮ ಕಚೇರಿಗೆ ಸಲಹೆ ಕೋರಿ ಹರಿದು ಬರುತ್ತಿರುವ ಏಡ್ಸ್ ಸೋಂಕಿಗೆ ಗುರಿಯಾದವರ ಪತ್ರಗಳು ದಿಗ್ಭ್ರಮೆ ಹುಟ್ಟಿಸುತ್ತಿವೆ. ಓದುಗರು ವ್ಯಕ್ತ ಪಡಿಸುತ್ತಿರುವ ಸ್ವಾನುಭವ, ಆತಂಕ, ತಲ್ಲಣಗಳಿಂದ ಸಾಬೀತಾಗುವ ಸತ್ಯವೆಂದರೆ ನಮ್ಮ ರಾಜ್ಯದಲ್ಲಿ ಏಡ್ಸ್ ರೋಗ ಕೇವಲ ಕಳವಳಕಾರಿಯಾಗಿ ಹರಡಿಲ್ಲ; ಬೆಚ್ಚಿಬೀಳುವಷ್ಟು ಬೃಹದಾಕಾರವಾಗಿ ಬೆಳೆದು ನಿಂತಿದೆ!

ನಮ್ಮ ಕಚೇರಿಗೆ ಬಂದ ರಾಶಿ ಪತ್ರಗಳಲ್ಲಿ ಕೆಲವನ್ನು ಆಯ್ದು ವೈದ್ಯರ ಸಲಹೆಯೊಂದಿಗೆ ಪ್ರಕಟಿಸುತ್ತಿದ್ದೇವೆ. ಇದರಿಂದ ಸಂಬಂಧಿಸಿದವರಿಗೆ ಸಮಾಧಾನವೂ, ಉಳಿದವರಿಗೆ ಎಚ್ಚರಿಕೆಯ ಸಂಕೇತವೂ ದೊರೆಯುವುದೆಂದು ಆಶಿಸುತ್ತೇವೆ.

-ಸಂಪಾದಕ

3-5 ದಿನದಲ್ಲಿ ಖಂಡಿತ ರಕ್ತಪರೀಕ್ಷೆಯಿಂದ ತಿಳಿದು ಬರುವುದಿಲ್ಲ. ಸೋಂಕು ಉಂಟಾದ 4 ರಿಂದ 6 ವಾರಗಳ ಬಳಿಕವೇ ಸೋಂಕು ತಗುಲಿರುವುದು ರಕ್ತ ಪರೀಕ್ಷೆಯಲ್ಲಿ ಕಂಡು ಬರುತ್ತದೆ. ಈಗಾಗಲೇ ತಿಳಿಸಿರುವಂತೆ ಏಡ್ಸ್‌ಗೆ ಪರಿಣಾಮಕಾರಿ ಚಿಕಿತ್ಸೆ ಇಲ್ಲ. ನೀವು Westernblot ರಕ್ತಪರೀಕ್ಷೆ ಮಾಡಿಸಿ ಎಚ್.ಐ.ವಿ.ಯ ಇರುವಿಕೆಯ ಬಗ್ಗೆ ಖಚಿತ ಪಡಿಸಿಕೊಳ್ಳಿ. ನಂತರ ವೈದ್ಯರನ್ನು ಕಂಡು ಸಲಹೆ ಪಡೆದು ಔಷಧಿ ಚಿಕಿತ್ಸೆ ಯೊಡನೆ ಆರೋಗ್ಯಕರ ಜೀವನ ಶೈಲಿ ರೂಢಿಸಿಕೊಂಡರೆ ಎಲ್ಲರಂತೆ ನೀವೂ ಬದುಕಬಹುದು. ಸಾಯುವ ಯೋಚನೆ ಬಿಟ್ಟು ಬಿಡಿ. ಬೆಂಗಳೂರಿನ ಸಂರಕ್ಷ ಅಥವಾ ಫ್ರೀಡಂ ಫೌಂಡೇಶನ್ ಸಂಸ್ಥೆಯನ್ನು ಸಂಪರ್ಕಿಸಿ ಸಲಹೆ, ಔಷಧಿ ಪಡೆಯಿರಿ. ಅವರು ನಿಮ್ಮ ಹೆಸರು, ವಿಳಾಸವನ್ನು ಗೌಪ್ಯವಾಗಿಡುತ್ತಾರೆ. ಸೋಂಕನ್ನು ನೀವು ಬೇರೆಯವರಿಗೆ ಹರಡದಂತೆ ನೋಡಿಕೊಳ್ಳಬೇಕಾದುದು ನಿಮ್ಮ ಆದ್ಯ ಕರ್ತವ್ಯ.

ಮಾಮನಿಂದ ರೇಪ್!

ನಾನೀಗ 9 ನೇ ತರಗತಿಯಲ್ಲಿ ಓದುತ್ತಿದ್ದೇನೆ. ವಯಸ್ಸು 15 ವರ್ಷ. ನಾನು ಋತುಮತಿಯಾಗುವುದಕ್ಕಿಂತ ಮುಂಚೆ ಮಾಮನವರಿಂದ ರೇಪ್‌ಗೆ ಒಳಗಾಗಿದ್ದೇನೆ. ಆಗ ನಾನು 9-10 ವರ್ಷದವಳಿದ್ದೆ. ಆಗ ನನ್ನ ಹೊಟ್ಟೆ ತೆಳ್ಳಗೆ ಇತ್ತು. ಈಗ ನನ್ನ ಹೊಟ್ಟೆ ಊದಿಕೊಂಡಿದೆ. ಊಟದ ನಂತರ ವಾಂತಿ ಆಗುತ್ತದೆ. ನಾನು ಗರ್ಭವತಿಯಾಗಿರಬಹುದೇ ಎಂಬ ಅನುಮಾನ ಬಂದಿದೆ. ರೇಪ್ ಮಾಡಿದ ಮಾಮನಿಗೆ ಮದುವೆಯಾಗಿ 2 ಮಕ್ಕಳ ತಂದೆಯಾಗಿದ್ದಾರೆ. ಅಂದರೆ ಗರ್ಭ ಧರಿಸಲು ಕಾರಣವಾಗುವ ವೀರ್ಯಾಣುಗಳು ಅವರಲ್ಲಿ ಇವೆ ಎಂದಾಯಿತು. ನನ್ನೊಳಗೆ ಸೇರಿರುವ ಅವರ ವೀರ್ಯಾಣುಗಳು ಇನ್ನೂ ಜೀವಂತವಾಗಿರಬಹುದೇ? ಈ ಬಗ್ಗೆ ನನಗೆ ತಿಳಿವಳಿಕೆ ಬಂದಿದ್ದು ನಮ್ಮ ಅಪ್ಪನ ಊರಿಗೆ ಹಿಂದಿರುಗಿದ ಮೇಲೆ. ನಮ್ಮ ಶಾಲೆಯಲ್ಲಿ ಹುಡುಗಿಯರು ಇಂಥ ವಿಷಯಗಳನ್ನು ಮಾತನಾಡುತ್ತಿರುತ್ತಾರೆ. ನನ್ನ ಗೆಳತಿಯೊಬ್ಬಳು 'ಬಿಸಿಲ ಬದುಕು' ಪ್ರತಿ ಕೊಟ್ಟು ನಿಮಗೆ ಬರೆಯಲು ಹೇಳಿದ್ದರಿಂದ ಈ ಪತ್ರ ಬರೆಯುತ್ತಿದ್ದೇನೆ.

-ಹುಡುಗಿ, ಊರುಬೇಡ.

ಸಲಹೆ

ನೀವು ಅನಾವಶ್ಯಕವಾಗಿ ಗಾಬರಿಯಾಗಿದ್ದೀರಿ. 9-10 ವರ್ಷದ ಹುಡುಗಿಯನ್ನು ರೇಪ್ ಮಾಡಿದ್ದು ಅತ್ಯಂತ ಅಮಾನವೀಯ ಕೃತ್ಯ. ಆಗ ನೀವು ರೇಪ್‌ಗೆ ಒಳಗಾಗಿದ್ದರೂ ಇನ್ನೂ ಋತುಮತಿಯಾಗಿರಲಿಲ್ಲವಾದ್ದರಿಂದ ಅಲ್ಲದೇ, ಇಷ್ಟು ವರ್ಷಗಳ ನಂತರ ಗರ್ಭ ಧರಿಸುವುದು ಅಸಾಧ್ಯದ ಮಾತು. ನಿಮಗೆ ವಾಂತಿಯಾಗುತ್ತಿರುವುದೂ, ಹೊಟ್ಟೆ ಊದಿಕೊಂಡಿರುವುದು ಬೇರೆ ಕಾರಣಗಳಿಂದ ಇರಬಹುದು. ಅದಕ್ಕೆ ನೀವು ನಿಮ್ಮ ಕುಟುಂಬ ವೈದ್ಯರನ್ನು ಕಂಡು ಚಿಕಿತ್ಸೆ ಪಡೆಯಿರಿ.

ಕಾರಣ ಏನು?

ನನಗೆ 20 ವರ್ಷ. ಬಿ.ಎ ಓದುತ್ತಿರುವೆ. ಕಾಲೇಜಿನಲ್ಲಿ ಎಲ್ಲರೂ ನನ್ನನ್ನು ಹೀಯಾಳಿಸುತ್ತಾರೆ. ಕಾರಣ ನಾನು ತುಂಬಾ ತೆಳ್ಳಗಿದ್ದೇನೆ. ನಾನು ವಾರಕ್ಕೆ 5-6 ಬಾರಿ ಹಸ್ತಮೈಥುನ ಮಾಡಿಕೊಳ್ಳುತ್ತಿದ್ದೇನೆ. ದಿನಕ್ಕೆ 8 ರಿಂದ 9 ಸಿಗರೇಟು ಸೇದುತ್ತೇನೆ. ಇದರಲ್ಲಿ ನಾನು ತೆಳ್ಳಗಾಗಲು ಕಾರಣ ಯಾವುದು? ದಪ್ಪಗಾಗಲು ಏನು ಮಾಡಬೇಕು.

-ಹೆಸರು ಬೇಡ, ಊರು ಬೇಡ

ಸಲಹೆ

ಈ ಮೊದಲೇ ತಿಳಿಸಿರುವಂತೆ ಹಸ್ತಮೈಥುನದಿಂದ ಯಾರೂ ತೆಳ್ಳಗಾಗುವುದು ಸಾಧ್ಯವಿಲ್ಲ. ನಿಮ್ಮ ವಯಸ್ಸಿನಲ್ಲಿ ಅದು ಸಹಜವಾದುದು. ಆದರೆ ಸಿಗರೇಟು ಸೇವನೆ ಮಾತ್ರ ಒಳ್ಳೆಯದಲ್ಲ. ಆದರಿಂದ ನಿಮಗೆ ಹಸಿವೆಯಾಗದೇ ಇರಬಹುದು. ಆದ್ದರಿಂದ ಇಂದಿನಿಂದಲೇ ಸಿಗರೇಟು ಸೇವನೆ ನಿಲ್ಲಿಸಿಬಿಡಿ. ಆಹಾರದಲ್ಲಿ ಯಥೇಚ್ಛವಾಗಿ ಹಾಲು, ಹಣ್ಣು, ತರಕಾರಿ, ಮೊಟ್ಟೆ ಸೇವಿಸಿ.

ವೇಶ್ಯಾಗೃಹಕ್ಕೆ ಹೋಗಿದ್ದೆ

ನಾನು ಒಂದು ದಿನ ಆಕಸ್ಮಿಕವಾಗಿ ವೇಶ್ಯಾಗೃಹಕ್ಕೆ ಹೋಗಿದ್ದೆ. ಈಗ ಏಡ್ಸ್ ಹೆದರಿಕೆ ಶುರುವಾಗಿದೆ. ಆದಕಾರಣ ಯಾವ ಡಾಕ್ಟರ್‌ರನ್ನು ಸಂಪರ್ಕಿಸಲಿ? ಡಾಕ್ಟರ್ ವಿಳಾಸ ತಿಳಿಸಿ.

-ಹೆಸರು ಬೇಡ, ಬಿಜಾಪುರ

ಸಲಹೆ

ನೀವು ಮೊದಲು ELISA ಹಾಗು WESTERN BLOT ರಕ್ತ ಪರೀಕ್ಷೆಯಿಂದ ಎಚ್.ಐ.ವಿ. ಇದೆಯೋ, ಇಲ್ಲವೋ, ಖಚಿತಪಡಿಸಿಕೊಳ್ಳಿ. ಇಲ್ಲದಿದ್ದರೆ ತಿಂಗಳಿಗೊಂದು ಬಾರಿ ರಕ್ತಪರೀಕ್ಷೆ ಪುನರಾವರ್ತಿಸಿ. ಆಕಸ್ಮಾತ್ ಸೋಂಕು ಉಂಟಾಗಿಲ್ಲದಿದ್ದರೆ ಇನ್ನು ಮುಂದೆ ಸೋಂಕು ಉಂಟಾಗದಂತೆ ಎಚ್ಚರವಹಿಸಿ. ಆದರೆ ಈಗಾಗಲೇ ವೈರಸ್ ಸೋಂಕು ತಗುಲಿದ್ದರೆ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ, ಸಲಹೆ ಪಡೆಯಿರಿ. ಎಲ್ಲ ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಏಡ್ಸ್ ರೋಗಿಗಳ ವಿಭಾಗ ಇದ್ದೇ ಇರುತ್ತದೆ. ಅಲ್ಲಿಯ ವೈದ್ಯರನ್ನು ಕಾಣಬಹುದು ಇಲ್ಲವೇ ಬೆಂಗಳೂರಿನಲ್ಲಿರುವ 'ಸಂರಕ್ಷ' ಮತ್ತು ಫ್ರೀಡಂ ಫೌಂಡೇಶನ್ ಸಂಸ್ಥೆಯನ್ನು ಸಂಪರ್ಕಿಸಿ ಸಲಹೆ ಪಡೆಯಿರಿ.

ನನಗೆ ಈಗ 27 ವರ್ಷ. ನನ್ನ ಶಿಶ್ನ ಕಿರು ಬೆರಳಿನಷ್ಟಿದೆ. ನನಗೆ ಈವರೆಗೆ ಶಿಶ್ನದಿಂದ ವೀರ್ಯ ಹೊರಬಂದಿಲ್ಲ. ಶಿಶ್ನ ಉದ್ರೇಕ ಗೊಳ್ಳುವುದೂ ಇಲ್ಲ. ಸ್ತ್ರೀಯರನ್ನು ಕಂಡರೆ ಮನಸ್ಸಿನಲ್ಲಿ ಮಾತ್ರ ಆಸೆ. ಆದರೆ ನನ್ನ ಶಿಶ್ನ ಮಾತ್ರ ಪ್ರಚೋದನೆಗೊಳ್ಳುವುದಿಲ್ಲ. ಆದ್ದರಿಂದ ನಾನು ಮದುವೆಯಾಗಬೇಕೇ? ಬೇಡವೋ? ಒಂದು ಹೆಣ್ಣನ್ನು ಮದುವೆಯಾಗಿ ಆಕೆಯ ಬಾಳನ್ನು ಹಾಳು ಮಾಡಲು ನನಗಿಷ್ಟವಿಲ್ಲ. ಹಾಗೆಯೇ ಸಮಾಜ ನನ್ನನ್ನು ಷಂಡ ಎಂದೂ ಕರೆಯಬಾರದು.

-ಹೆಸರು-ಊರುಬೇಡ.

ಸಲಹೆ

ನೀವು ಒಂದು ಬಾರಿ ಲೈಂಗಿಕ ರೋಗಗಳ ತಜ್ಞವೈದ್ಯರ ಬಳಿ (ಲೈಂಗಿಕ ರೋಗಗಳ ವಿಷಯದಲ್ಲಿ M.D. ಇಲ್ಲವೇ D.V.D ಮಾಡಿದವರು) ತೋರಿಸಿ ಪರೀಕ್ಷಿಸಿಕೊಳ್ಳಿ.

ಪತ್ನಿಯ ಎದೆ ಹಾಲು

ಪತ್ನಿಯ ಎದೆ ಹಾಲನ್ನು ಪತಿಯು (ಮಗುವಿಗೆ ಬಿಟ್ಟು) ಕುಡಿಯಬಹುದೇ? ಇದರಿಂದ ಪತಿ ಅಥವಾ ಪತ್ನಿಗೆ ಅಪಾಯ ಉಂಟೆ?

-ಹೆಸರುಬೇಡ, ಕುಂದಾಪುರ.

ಸಲಹೆ

ಕುಡಿಯಬಹುದು. ಇದರಿಂದ ಯಾರಿಗೂ ಯಾವುದೇ ಅಪಾಯ ಇಲ್ಲ.

ಹುಡುಗಿಗೆ ಕಣ್ಣು ಹೊಡೆದರೆ...

ನಾನು 22 ವರ್ಷದ ಅವಿವಾಹಿತ ಹುಡುಗ. ನಮ್ಮ ಮನೆ ಪಕ್ಕದ 19 ವರ್ಷದ ಹುಡುಗಿಯನ್ನು ಪ್ರೀತಿಸುತ್ತಿದ್ದೇನೆ. ಆವಳಿಗೆ ಕಣ್ಣು ಹೊಡೆದರೆ ತಲೆ ತಗ್ಗಿಸಿಕೊಂಡು ಹೋಗುತ್ತಾಳೆ. 'ಅಣ್ಣ' ಎಂದು ಕರೆಯುತ್ತಾಳೆ. ನಾನೀಗ ಏನು ಮಾಡಬೇಕು? ಪ್ರೇಮ ಪತ್ರ ಬರೆಯಲೇ?

-ಹೆಸರು, ಊರು ಬೇಡ

ಸಲಹೆ

ಆವಳು 'ಅಣ್ಣ' ಎಂದು ಕರೆದ ಮೇಲೂ ಪ್ರೇಮ ಪತ್ರ ಬರೆಯಲೇ ಎಂದು ಕೇಳಿದ್ದೀರಲ್ಲ. ಆವಳಿಗೆ ಇಷ್ಟವಿಲ್ಲವೆಂದು ಸೂಚ್ಯವಾಗಿ ತಿಳಿಸಿದ ಮೇಲೆ ಮತ್ತೇಕೆ ಮೂರ್ಖರಂತೆ ಆ ಬಗ್ಗೆ ಯೋಚಿಸುತ್ತೀರಿ?

ಮೊಡವೆ, ತಲೆಹೊಟ್ಟು

ನಾನು 21 ವರ್ಷದ ಬಿ.ಎ. ವಿದ್ಯಾರ್ಥಿ. ನನ್ನ ಮುಖದಲ್ಲಿ ಭಾರೀ ಗಾತ್ರದ ಮೊಡವೆಗಳಿವೆ. ಇವು ಬಹಳ ಕಾಲದಿಂದ ಹಾಗೇ ಇವೆ. ತಲೆಯಲ್ಲಿ ಭಾರೀ ಹೊಟ್ಟು. ಸೂಕ್ತ ಪರಿಹಾರ ಸೂಚಿಸಿ.

-ಮಹಾಂತೇಶ ರಾಜಗೋಳಿ, ಯರಡಾಲ

ಸಲಹೆ

ಮೊಡವೆಗಳಿಗೆ -ಮುಖಕ್ಕೆ ಯಾವುದೇ ಕ್ರೀಂ ಉಪಯೋಗಿಸಬೇಡಿ. ಮೊಡವೆಗಳನ್ನು ಉಗುರಿನಿಂದ ಜಿಗುಟಿಕೊಳ್ಳಬೇಡಿ. ದಿನಕ್ಕೆ ಮೂರು ನಾಲ್ಕು ಬಾರಿ ಬಿಸಿನೀರಿನಿಂದ ಮುಖ ತೊಳೆಯಿರಿ. ಮುಖ ತೊಳೆಯಲು ಕಡಲೆಹಿಟ್ಟು ಉಪಯೋಗಿಸಿ.

ತಲೆಹೊಟ್ಟಿಗೆ- ನಿಯಮಿತವಾಗಿ ತಲೆಗೆ ಎಣ್ಣೆಯನ್ನು ಹಚ್ಚಿಕೊಳ್ಳಿ, ವಾರಕ್ಕೆರಡು ಬಾರಿ ತಲೆಗೆ ಸ್ನಾನ ಮಾಡಿ. ವಾರಕ್ಕೊಂದು ದಿನ, ರಾತ್ರಿ ಹೊತ್ತು ಮೆಂತ್ಯವನ್ನು ನೀರಲ್ಲಿ ನೆನೆಸಿಟ್ಟು ಬೆಳಗ್ಗೆ ಅದನ್ನು ರುಬ್ಬಿ ತಲೆಗೆ ಹಚ್ಚಿಕೊಂಡು ಅರ್ಧ ಗಂಟೆ ಬಿಟ್ಟು ಸ್ನಾನ ಮಾಡಬೇಕು. ಬೇರೆಯವರು ಉಪಯೋಗಿಸಿದ ಬಾಚಣಿಗೆಯನ್ನು ಬಳಸಬೇಡಿ. ನಿಮ್ಮದೇ ಬೇರೆ ಇಟ್ಟುಕೊಳ್ಳಿ.

ಸಿನಿಮಾ ನಿರ್ದೇಶಕ ಆಗಬೇಕು

ನನಗೆ ಸಿನಿಮಾ ನಿರ್ದೇಶಕ ಆಗುವ ಆಸೆ. ಅದನ್ನು ಈಡೇರಿಸಿಕೊಳ್ಳುವುದು ಹೇಗೆ? ನಾನು ಕಥೆ ಬರೆಯಲು ಬಹಳ ಪ್ರಯತ್ನ ಪಡುತ್ತೇನೆ. ಆದರೆ ಅದನ್ನು ಬರೆಯುವ ಸ್ಟೆಪ್‌ಗಳು ತಿಳಿಯದಾಗಿದೆ. ಸ್ಟೆಪ್‌ಗಳು ತಿಳಿದರೆ ಕಥೆ ಬರೆಯುವುದು ನನಗೆ ಕಷ್ಟವೇನಲ್ಲ. ಯಾವುದಾದರೂ ಹಳೆಯ ಸಿನಿಮಾ ಕಥೆಯಿದ್ದರೆ ಕಳಿಸಿ ಕೊಡಿ. ಅದರ ಬಿಲ್ಲು ನಾನು ಕೊಡುತ್ತೇನೆ. ನಮ್ಮ ಊರಿನವರು, ನಮ್ಮ ಸಂಬಂಧಿಕರು ನನ್ನನ್ನು ಹುಚ್ಚ ಎನ್ನುತ್ತಾರೆ. ಆದ್ದರಿಂದ ನನ್ನ ಹೆಸರನ್ನು ಪ್ರಕಟಿಸಬೇಡಿ. ನನ್ನ ಜೀವನದ ಆಸೆ ಈಡೇರಿಸುವ ಬಗೆಯನ್ನು ತಿಳಿಸುವಿರೆಂದು ನಂಬಿದ್ದೇನೆ.

-ಹೆಸರುಬೇಡ, ಊರುಬೇಡ

ಸಲಹೆ

ಚಿತ್ರಕಥೆ, ಸಂಭಾಷಣೆ, ನಿರ್ದೇಶನ ಕಲಿಯಬೇಕೆಂಬ ಆಸೆ ಇದ್ದರೆ, ಅದನ್ನು ಕಲಿಸಲು ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್ ನಂತಹ ಕೆಲವು ಸಂಸ್ಥೆಗಳಿವೆ. ಅಲ್ಲಿಗೆ ಸೇರಿ ಕಲಿತುಕೊಳ್ಳಿ, ಇಲ್ಲದಿದ್ದರೆ ಸಿನಿಮಾ ನಿರ್ದೇಶಕರ ಬಳಿ ಸಹಾಯಕನಾಗಿ ಕೆಲಸ ನಿರ್ವಹಿಸಿ ಕಲಿತುಕೊಳ್ಳಿ.

ಹುಚ್ಚು ನಾಯಿ ಕಡಿತ

ನಾನು 24 ವರ್ಷದ ಯುವಕ. ನಮ್ಮ ಎಮ್ಮೆ ಕರುವಿಗೆ ಒಂದು ಹುಚ್ಚು ನಾಯಿ ಕಡಿದಿತ್ತು. ಅದು ನನಗೆ ಗೊತ್ತಿಲ್ಲದೆ ಕರುವಿಗೆ ಔಷಧಿ ಹಾಕಲು ಹೋದಾಗ ನನ್ನ ಕೈಗೆ ಅದರ ಜೊಲ್ಲು ಹತ್ತಿತ್ತು. ಜೊಲ್ಲು ಹತ್ತಿದ ಜಾಗದಲ್ಲಿ ಒಂದು ಸಣ್ಣ ಗಾಯ ಆಗಿತ್ತು. ತಕ್ಷಣ ಕೈ ತೊಳೆದೆನು. ಡಾಕ್ಟರ್ ಬಳಿ ಹೋಗುವಷ್ಟರಲ್ಲಿ 4 ದಿನ ಕಳೆದಿತ್ತು. ಒಂಬತ್ತು ARV ಇಂಜೆಕ್ಷನ್ ತೆಗೆದುಕೊಳ್ಳಲು ಸೂಚಿಸಿದರು. 3 ಇಂಜೆಕ್ಷನ್ ತೆಗೆದುಕೊಳ್ಳುವಷ್ಟರಲ್ಲಿ ಔಷಧಿ ಖಾಲಿಯಾಯ್ತು. ಮತ್ತೆ 15 ದಿನಗಳ ನಂತರ 11 ARV ತೆಗೆದುಕೊಂಡೆ. ಇದಾಗಿ ಈಗ 8 ತಿಂಗಳು ಕಳೆದಿವೆ. ನನಗೆ ಹೆದರಿಕೆ ಶುರುವಾಗಿದೆ. ಮನುಷ್ಯನ ದೇಹದಲ್ಲಿ ರ್‍ಯಾಬಿಸ್ ಇದೆ ಎಂದು ಹೇಗೆ ಖಚಿತಪಡಿಸಿಕೊಳ್ಳಬಹುದು? ರ್‍ಯಾಬಿಸ್‌ನ ಮುನ್ಸೂಚನೆ ಏನು? 10 ವರ್ಷಗಳವರೆಗೆ ಈ ವೈರಸ್ ಮನುಷ್ಯನ ದೇಹದಲ್ಲಿ ಇರುತ್ತದೆ ಎನ್ನುತ್ತಾರೆ. ನಿಜವೇ?

-ರವಿಕುಮಾರ, ಊರಿಲ್ಲ.

ಸಲಹೆ

ರೇಬಿಸ್ ರೋಗಾಣು ದೇಹ ಸೇರಿ ರೋಗಲಕ್ಷಣಗಳು ಕಾಣಿಸಿಕೊಳ್ಳಬೇಕಾದರೆ ಸುಮಾರು ಒಂದು ತಿಂಗಳಿನಿಂದ ಮೂರುತಿಂಗಳ ಅವಧಿ ಬೇಕು. ರೇಬಿಸ್‌ನ ಪ್ರಾರಂಭದ ಲಕ್ಷಣಗಳು ಸಾಮಾನ್ಯ ತೊಂದರೆಗಳಾಗಿರುತ್ತವೆ. ಗಾಯವಾದ ಜಾಗದಲ್ಲಿ ನೋವು ತುರಿಕೆ, ಚುಚ್ಚುವಿಕೆ ಇರುತ್ತದೆ. ಕೆಲವು ದಿನಗಳ ನಂತರ ಮೈ ಕೈ ನೋವು, ತಲೆ ನೋವು, ಹಸಿವೆಯಾಗದಿರುವುದು, ವಾಂತಿ, ಜ್ವರ ಇರುತ್ತದೆ. ಇನ್ನೂ ಕೆಲವು ದಿನಗಳ ನಂತರ ಗಂಟಲು ನೋವು ಕಂಡು ಬರುತ್ತದೆ. ಆಹಾರ ನುಂಗಲು ತೊಂದರೆಯಾಗುವುದು, ನೋವಿನಿಂದ ವ್ಯಕ್ತಿ ಕೂಗಿದರೆ ಅದು ನಾಯಿಯು ಕೂಗಿದಂತೆ ಕೇಳುವುದು. ನುಂಗುವ ಸ್ನಾಯುಗಳಲ್ಲಿ ಹಾಗು ಉಸಿರಾಟದ ಸ್ನಾಯುಗಳಲ್ಲಿ ಸೆಟೆತ ಉಂಟಾಗುವುದು. ಆದರೆ ನಾಯಿ ಕಚ್ಚಿದವರಿಗೆಲ್ಲ ರೇಬಿಸ್ ಬರುವುದಿಲ್ಲ. ಅಂದಾಜು ಪ್ರತಿ ಸಾವಿರಕ್ಕೊಬ್ಬರಿಗೆ ಇಲ್ಲವೇ ಇಬ್ಬರಿಗೆ ಬರಬಹುದು. ನೀವು ARV ತೆಗೆದುಕೊಂಡಿರುವುದರಿಂದ ಖಂಡಿತ ರೇಬಿಸ್ ಬರುವುದಿಲ್ಲ. ಆದರ ಬಗ್ಗೆ ಭಯ ಬಿಡಿ. ಹತ್ತು ವರ್ಷಗಳವರೆಗೆ ವೈರಸ್ ದೇಹದಲ್ಲಿ ಇರುವುದಾದರೂ ಅಲ್ಲಿಯವರೆಗೆ ಸೋಂಕಿಗೊಳಗಾದ ವ್ಯಕ್ತಿ ಬದುಕಿರಲು ಸಾಧ್ಯವಿಲ್ಲ.

ಯಾರನ್ನು ವರಿಸಲಿ?

ನನಗೀಗ 20 ವರ್ಷ. ನಾನು ಒಬ್ಬಳನ್ನು ಪ್ರೀತಿಸುತ್ತಿದ್ದೇನೆ. ಅವಳಿಗೆ 17 ವರ್ಷ. ಆದರೆ ಅವಳು ನನ್ನನ್ನು ಪ್ರೀತಿಸುವ ವಿಷಯ ನನಗೆ ಹೇಳಲಿಲ್ಲ. ನಾನು ಮದುವೆ ಆದರ ಅವಳನ್ನೇ ಅಂತ ನಿರ್ಧಾರ ಮಾಡಿದ್ದೆ. ಆದರೆ ನನ್ನ ಸಣ್ಣಮ್ಮ ಅತ್ತೆ ಒಂದು ಹುಡುಗಿಯನ್ನು ನೋಡಿ ಆವಳಿಗೆ ಮಾತು ಕೊಟ್ಟಿದ್ದಾರೆ. ನಾನೀಗ ಇವರಿಬ್ಬರಲ್ಲಿ ಯಾರನ್ನು ಮದುವೆ ಆಗಬೇಕು ಅಂತ ನೀವೇ ನನಗೆ ದಾರಿ ತೋರಿಸಬೇಕು. ಇದರಿಂದ ನನಗೆ ಮರುಜೀವ ಬಂದಂತಾಗುತ್ತದೆ.

-ದೇವರಾಜ, ಹೆಮ್ಮಾಡಿ

ಸಲಹೆ

ನೀವು ಒಬ್ಬ ಹುಡುಗಿಯನ್ನು ಪ್ರೀತಿಸುತ್ತಿರುವ ವಿಷಯ ಹಾಗು ಅವಳನ್ನೇ ಮದುವೆಯಾಗಬೇಕೆಂದಿರುವ ನಿಮ್ಮ ನಿರ್ಧಾರವನ್ನು ಅತ್ತೆಗೆ ತಿಳಿಸಿಬಿಡಿ. ಅವರು ಖಂಡಿತ ಒಪ್ಪುತ್ತಾರೆ. ಆದರೆ ನೀವು ಪ್ರೀತಿಸುತ್ತಿರುವ ಹುಡುಗಿಗೆ 18 ವರ್ಷ ತುಂಬಿದ ಮೇಲೆ ಮದುವೆಯಾಗಿ.

ಪ್ರಿಯಕರನೊಡನೆ ಮದುವೆ

ನಾನು 18 ವರ್ಷದವಳಾಗಿದ್ದು, ನಾನು ಮತ್ತು ನನ್ನ ಪ್ರಿಯತಮ ಒಬ್ಬರಿಗೊಬ್ಬರು ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದೇವೆ. ಅವರು ನನ್ನನ್ನು ಮದುವೆಯಾಗಲು ಸಿದ್ಧರಾಗಿದ್ದಾರೆ. ಆದರೆ, ನಮ್ಮಿಬ್ಬರ ಮದುವೆ ವಿಷಯ ನಮ್ಮ ತಂದೆ ತಾಯಿಯವರ ಹತ್ತಿರ ಮಾತಾಡಿದರೆ, ನನ್ನನ್ನು ಕೊಂದು ಹಾಕು

ತ್ತಾರೆ. ನನಗೆ ನಾನು ಪ್ರೀತಿಸಿದ ಹುಡುಗನ ಜೊತೆ ಶಾಸ್ತ್ರೋಕ್ತವಾಗಿ ಮದುವೆಯಾಗಬೇಕೆಂಬ ಆಸೆ. ನಮ್ಮ ತಂದೆ ತಾಯಿಯವರ ಮರ್ಯಾದೆ ಹೋಗಕೂಡದು, ನಾನು ಪ್ರೀತಿಸಿದ ಹುಡುಗನ ಜೊತೆ ನನ್ನ ಮದುವೆಯಾಗಬೇಕು.

ಇದಕ್ಕೆ ತಮ್ಮ ಸಲಹೆ ತಿಳಿಸದೆ ನಿರಾಶೆ ಮಾಡಬೇಡಿ, ಅಕ್ಕಾ...

- ತಮ್ಮ ಸ್ನೇಹಿತೆ, ಊರು ಬೇಡ.

ಸಲಹೆ

ನಿಮ್ಮ ತಂದೆ ತಾಯಿಯ ಬಳಿ ನಿಮ್ಮ ಪ್ರೀತಿಯ ಬಗ್ಗೆ ತಿಳಿಸಿ ಅವರನ್ನು ಒಪ್ಪಿಸಿ ಮದುವೆಯಾಗಿ. ಅವರು ಒಪ್ಪುವುದು ಅಸಾಧ್ಯವೆಂದಾದರೆ, ಅವರ ಮನಸ್ಸಿಗೆ ನೋವುಂಟು ಮಾಡುವುದು ಬೇಡ ಎನ್ನುವ ಹಾಗಿದ್ದರೆ ಪ್ರೀತಿಸಿದವನನ್ನು ಮರೆತುಬಿಡಿ. ಪ್ರೀತಿಸಿದವನನ್ನು ಮರೆಯಲಾಗುವುದಿಲ್ಲ ಎನ್ನುವುದಾದರೆ ರಿಜಿಸ್ಟರ್ಡ್ ಮದುವೆ ಮಾಡಿಕೊಂಡು ನಂತರ ತಂದೆ ತಾಯಿಯ ಆಶೀರ್ವಾದ ಪಡೆಯಿರಿ. ಯಾವುದಾದರೊಂದನ್ನು ನೀವೇ ನಿರ್ಧರಿಸಬೇಕು.

ಪ್ರೀತಿ ತಿಳಿಸುವುದು ಹೇಗೆ?

ನನಗೆ 20 ವರ್ಷ. ನಾನು ಸರ್ಕಾರಿ ನೌಕರಿಯಲ್ಲಿದ್ದೇನೆ. ನಾನು ಕೆಲಸಕ್ಕೆ ಸಿಟಿಗೆ (ಪಟ್ಟಣಕ್ಕೆ) ಬರಬೇಕಾದರೆ ಒಂದು ಹುಡುಗಿ (18 ವರ್ಷ) ಬಸ್ಸಿನಲ್ಲಿ ನನ್ನನ್ನು ನೋಡಿ ನಗುವುದು ಮತ್ತು ಮುಟ್ಟಿ ಮಾತನಾಡಿಸುತ್ತದೆ. ಅಲ್ಲದೆ, ನನ್ನ ಗೆಳೆಯರ ಜೊತೆಯಲ್ಲಿದ್ದರೂ ನನ್ನನ್ನು ಮಾತ್ರ ಕರೆದು ಮಾತನಾಡಿಸುತ್ತಾಳೆ. ನನ್ನ ಗೆಳೆಯರು ಅವಳು ನಿನ್ನನ್ನು ಪ್ರೀತಿಸುತ್ತಾಳೆ ಎನ್ನುತ್ತಾರೆ. ಆ ಹುಡುಗಿ ಎಂದರೆ ನನಗೂ ತುಂಬಾ ಇಷ್ಟವಿದೆ. ಆದರೆ ಅವಳಿಗೆ ನಾನು ಪ್ರೀತಿಸುತ್ತೇನೆ ಎಂದು ಹೇಳುವ ಪರಿ ಹೇಗೆ?

-ಹೆಸರು ಬೇಡ, ಇಂದಿರಾನಗರ.

ಸಲಹೆ

ಈ ವಯಸ್ಸಿನಲ್ಲಿ ಗಂಡು, ಹೆಣ್ಣಿನ ನಡುವೆ ಆಕರ್ಷಣೆ ಸಹಜವಾದುದು. ನಿಮಗೆ ಅವಳ ಅಭಿಪ್ರಾಯ ತಿಳಿದುಕೊಳ್ಳಬೇಕೆಂದಿದ್ದರೆ ಧೈರ್ಯವಾಗಿ ಅವಳೊಂದಿಗೆ ಮಾತಾಡಿ ನಿಮ್ಮ ಪ್ರೀತಿಯನ್ನು ವ್ಯಕ್ತಪಡಿಸಿ. ಅವಳಿಗೂ ಇಷ್ಟವಿದ್ದರೆ ಖಂಡಿತ ಪ್ರತಿಕ್ರಿಯೆ ತೋರಿಸುತ್ತಾಳೆ.


ಆತ್ಮಹತ್ಯೆಯೇ ದಾರಿ!

ನಾನು 22 ವರುಷದ ತರುಣ. ಅಂತಿಮ ಬಿ.ಎ. ವ್ಯಾಸಂಗಮಾಡುತ್ತಿದ್ದೇನೆ. ಸುಮಾರು 2 ವರ್ಷಗಳಿಂದ ನನಗೆ ಒಂದು ಸಮಸ್ಯೆ ಕಾಡುತ್ತಿದೆ. ನಾನು ನೋಡಲು ಸುಂದರವಾಗಿದ್ದೇನೆ. ಆದರೆ ನನ್ನ ಮುಖ ಮಾತ್ರ ಕಪ್ಪಾಗಿದೆ. ನಾನು 4-5 ಚರ್ಮ ಡಾಕ್ಟರ್ ಹತ್ತಿರ ತೋರಿಸಿದ್ದೆ. ನಾನಾ ರೀತಿಯ ಔಷಧಿ ಉಪಯೋಗಿಸಿದ್ದೇನೆ. ಮುಖ ಪೂರ್ತಿ ಕಪ್ಪಾಗಿಲ್ಲ. ತುಟಿಯ ಕೆಳಗೆ ಬಲಭಾಗದ ಕೆನ್ನೆಮಾತ್ರ ಕಪ್ಪು. ಇದನ್ನು ಬಂಗು ಅಂತ ಹೇಳ್ತಾರೆ. ನನಗಂತು ಜೀವನದಲ್ಲಿ ತುಂಬ ಜುಗುಪ್ಸೆಯಾಗಿದೆ. ಯಾರ ಎದುರಿಗೂ ಮುಖವೆತ್ತಿ ಮಾತನಾಡುವ ಹಾಗಿಲ್ಲ. ನನಗೆ ಪರಿಹಾರ ಸಿಗದಿದ್ದರೆ ಆತ್ಮಹತ್ಯೆ ಒಂದೇ ದಾರಿ. ಇದಕ್ಕೆ ಬಹಳ ಹಣ ಖರ್ಚು ಮಾಡಿದ್ದೇನೆ. ಕೇವಲ ಎರಡು ವರ್ಷದಿಂದ ಹೀಗಾಗಿದೆ. ನೀವು ದೇವರ ಸಮಾನ ಅಂತ ತಿಳಿದು ಈ ಕಾಗದ ಬರೆದಿದ್ದೇನೆ.

-ಹೆಸರು ಬೇಡ, ಚಿತ್ರದುರ್ಗ

ಸಲಹೆ

ಮುಖದಲ್ಲಿನ 'ಬಂಗು' ವಿಗೆ ಚಿಂತೆ ಮಾಡುವುದು ಸರಿಯಲ್ಲ. ಶ್ರೀಗಂಧದ ಚಕ್ಕೆ ಹಾಗೂ ಅರಿಶಿನ ಬೇರನ್ನು ತೇಯ್ದು ಕಪ್ಪಾಗಿರುವ ಭಾಗಕ್ಕೆ ಹಚ್ಚಿಕೊಳ್ಳಿ. ಇದನ್ನು ತಿಂಗಳುಗಟ್ಟಲೇ ಹಚ್ಚಿಕೊಳ್ಳಬೇಕು. ಈ ಲೇಪನದಿಂದ ಬಂಗು ಖಂಡಿತ ಹೋಗುತ್ತದೆ.



ಪರವಾಗಿಲ್ವೆ!..... ನಮ್ಮ ಸಚಿವರು ಯಾವುದೇ ಕ್ಷೇತ್ರವನ್ನೂ ಹಗರಣದಿಂದ ಕೈಬಿಟ್ಟಿಲ್ಲಾ...

ಮುಖದ ಸೌಂದರ್ಯ

ನಾನು 20 ವರ್ಷದ ಅವಿವಾಹಿತ ಯುವತಿ. ನನ್ನ ಸಮಸ್ಯೆಯೇನೆಂದರೆ ನನ್ನದು ಎಣ್ಣೆ ಚರ್ಮ, ಗೋಧಿ ಮೈ ಬಣ್ಣ. ನನ್ನ ಕೈಯ ಚರ್ಮ ನೆರಿಗೆ ನೆರಿಗೆಯ ಹಾಗೆ ಕಾಣುತ್ತದೆ. ಇದಕ್ಕೆ ಏನು ಮಾಡಬೇಕು? ನಾನು ಬಿಸಿಲಿಗೆ ಹೋಗುವಾಗ ಕೈ ಹಾಗೂ ಮುಖಕ್ಕೆ ಫೇರ್ ಅಂಡ್ ಲವ್ಲಿ ಕ್ರೀಮ್ ಹಾಕುತ್ತೇನೆ. ಕ್ರೀಮ್ ಹಾಕಿ ಒಂದು ಗಂಟೆಯ ತನಕ ಮುಖ ಬಿಳಿ ಇರುತ್ತದೆ. ಮತ್ತೆ ಎಣ್ಣೆಯ ತರಹ ಮುಖದಲ್ಲಿ ಕಾಣುತ್ತದೆ. ಸ್ಯಾಂಡಲ್ ಸೋಪ್ ಹಾಕಿ ಮುಖ ತೊಳೆಯುತ್ತೇನೆ. ಮುಖ ತೊಳೆಯುವಾಗ ತುಂಬಾ ಬಿಳಿ ಇರುತ್ತದೆ. 1/2 ಗಂಟೆಯ ನಂತರ ಎಣ್ಣೆಯ ತರಹ ಮುಖದಲ್ಲಿ ಕಾಣುತ್ತದೆ. ಇದಕ್ಕೆ ಪರಿಹಾರವಿದೆಯೆ? ನನ್ನ ಮುಖದಲ್ಲಿ ಸಾಸಿವೆ ಗಾತ್ರದ 6 ಕಪ್ಪು ಕಲೆ ಹಾಗೂ ಹಣೆಯಲ್ಲಿ ಸಣ್ಣ ಸಣ್ಣ ಬೆವರುಗುಳ್ಳೆಯ ತರಹದ್ದು ತುಂಬಾ ಇದೆ. ಮೊಡವೆಯೂ ತುಂಬಾ ಬರುತ್ತದೆ. ಇದಕ್ಕೆ ಪರಿಹಾರವಿದೆಯೆ?

-ಹೆಸರು ಬೇಡ, ಕುಂದಾಪುರ

ಸಲಹೆ

ಕೈಯ ಚರ್ಮದ ನೆರಿಗೆಗೆ: ಯಾವುದೇ ಕ್ರೀಂ ಉಪಯೋಗಿಸಬೇಡಿ. Vit. E ಎಣ್ಣೆಯನ್ನು ಹಚ್ಚಿ ಪ್ರತಿದಿನ ಸ್ನಾನಕ್ಕೆ ಮುಂಚೆ ಮಸಾಜ್ ಮಾಡಿಕೊಳ್ಳಿ. ಆಹಾರದಲ್ಲಿ ಸೊಪ್ಪು, ತರಕಾರಿ, ಹಣ್ಣು ಹೆಚ್ಚು ಸೇವಿಸಿ.

ಪ್ರತಿದಿನ ಮೂರು ನಾಲ್ಕು ಬಾರಿ ಬಿಸಿನೀರಿನಿಂದ ಮುಖ ತೊಳೆಯಿರಿ. ಮುಖ ತೊಳೆಯಲು ಸೋಪು ಉಪಯೋಗಿಸದೆ ಕಡಲೆ ಹಿಟ್ಟು ಬಳಸಿ. ಮುಖಕ್ಕೂ ಯಾವುದೇ ಕ್ರೀಂ ಬಳಸಬೇಡಿ. ಕಪ್ಪು ಕಲೆ ಹೋಗುವುದಕ್ಕೆ parolep ಪುಡಿಯನ್ನು ಮೊಸರಿನೊಂದಿಗೆ ಬೆರೆಸಿ ಹಚ್ಚಿಕೊಂಡು ಅರ್ಧ ಗಂಟೆಯ ನಂತರ ಮುಖ ತೊಳೆಯಿರಿ. ಈ ಪುಡಿ ಆಯುರ್ವೇದ ಔಷಧಿ ಅಂಗಡಿಯಲ್ಲಿ ದೊರೆಯುತ್ತದೆ.

ನಿಮ್ಮ ಸಮಸ್ಯೆಗಳನ್ನು ಈ ವಿಳಾಸಕ್ಕೆ ಕಳಿಸಿ :
ಸಂಪಾದಕರು, ಬಿಸಿಲ ಬದುಕು,
ಅಂಕುರ ಪ್ರಕಾಶನ ಅಂಚೆ ಪೆಟ್ಟಿಗೆ : 7951
ಬಸವೇಶ್ವರನಗರ, ಬೆಂಗಳೂರು - 560 079.

ಐ.ಎ.ಎಸ್.ಗೆ ಅರ್ಜಿ ಆಹ್ವಾನ

'**ನಾ**ಗರೀಕ ಸೇವೆಗಳ ಹುದ್ದೆ' -ಇದರ ಆಕರ್ಷಣೆ ಸಾಮಾನ್ಯವಾದದ್ದಲ್ಲ. ಇಂದು ದೇಶದ ಪ್ರತಿಯೊಬ್ಬ ಯುವಕ ಯುವತಿಯ ಕನಸಿನ ಹುದ್ದೆಗಳವು. ಐ.ಎ.ಎಸ್, ಐ.ಪಿ.ಎಸ್, ಐ.ಎಫ್.ಎಸ್. ಹುದ್ದೆಗಳ ಅಧಿಕಾರ ವ್ಯಾಪ್ತಿ, ಸಂಬಳದ ಆಕರ್ಷಣೆ ಸಾಮಾನ್ಯವಾದದ್ದಲ್ಲ. ಈ ಹುದ್ದೆಗಳಿಗಾಗಿ ಯುವ ಜನರು ಮುಗಿ ಬೀಳುತ್ತಾರೆ. ಪ್ರತೀ ವರ್ಷ ನಡೆಯುವ ಈ ಹುದ್ದೆಗಳ ಪರೀಕ್ಷೆಗಳಿಗಾಗಿ ಅರ್ಜಿಯನ್ನು ಕೇಂದ್ರ ಲೋಕಸೇವಾ ಆಯೋಗ ಆಹ್ವಾನಿಸಿದೆ. ಮೇ 30. 99ರಂದು ದೇಶದಾದ್ಯಂತ 41 ಪರೀಕ್ಷಾಕೇಂದ್ರಗಳಲ್ಲಿ ಪೂರ್ವಭಾವಿ ಪರೀಕ್ಷೆ ನಡೆಯಲಿದೆ. ಕರ್ನಾಟಕದಲ್ಲಿ ಬೆಂಗಳೂರು ಮತ್ತು ಧಾರವಾಡದಲ್ಲಿ ಪರೀಕ್ಷಾ ಕೇಂದ್ರ ಇದೆ.

ಭಾರತೀಯ ಆಡಳಿತ ಸೇವೆಯಿಂದ ಮೊದಲ್ಗೊಂಡು ಭಾರತೀಯ ಪೊಲೀಸ್ ಸೇವೆ, ಭಾರತೀಯ ವಿದೇಶೀ ಸೇವೆಯಲ್ಲದೆ; ಅನೇಕ ಸಾರ್ವಜನಿಕ ಸೇವಾ ಹುದ್ದೆಗಳಿದ್ದು, ಒಟ್ಟು ಹುದ್ದೆಗಳ ಸಂಖ್ಯೆ ಸುಮಾರು 620.

ಸಾಮಾನ್ಯ ಅರ್ಹತೆ

ಭಾರತೀಯ ಆಡಳಿತ ಸೇವೆ ಮತ್ತು ಪೊಲೀಸ್ ಸೇವೆಗೆ ಸೇರಲಿಚ್ಚಿಸುವವರು ಭಾರತೀಯನಾಗಿರಬೇಕು. ಉಳಿದ ಸೇವೆಗಳಿಗೆ ಆತ ಭಾರತದ ಪ್ರಜೆಯಾಗಿರಬೇಕು ಇಲ್ಲವೇ ನೇಪಾಳ, ಭೂತಾನ್ ಅಥವಾ 1962ಕ್ಕೆ ಮೊದಲು ವಲಸೆ ಬಂದ ಟಿಬೆಟ್‌ನವನಾಗಿರಬೇಕು.

ವಿದ್ಯಾರ್ಹತೆ

ವಿಶ್ವವಿದ್ಯಾನಿಲಯವೊಂದರ ಪದವಿ ಇಲ್ಲವೇ ತತ್ಸಮಾನ ವಿದ್ಯಾರ್ಹತೆಯನ್ನು ಪಡೆದಿರಬೇಕು.

ವಿ.ಸೂ: ಅಂತಿಮ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವವರೂ ಸಹ ಪೂರ್ವ ಭಾವಿ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು. ಆದರೆ ಮುಖ್ಯ ಪರೀಕ್ಷೆಗೆ ಅರ್ಜಿ ಸಲ್ಲಿಸುವಾಗ ಪದವಿ ಪಡೆದಿರಲೇ ಬೇಕು.

ವಯಸ್ಸು

21 ವರ್ಷ ತುಂಬಿರುವ ಮತ್ತು 1.8.99ಕ್ಕೆ 30 ವರ್ಷ ಮೀರದ ವ್ಯಕ್ತಿಗಳು ಅರ್ಜಿ ಸಲ್ಲಿಸಲು ಅರ್ಹರು. ಪರಿಶಿಷ್ಟ ಜಾತಿ/ಪರಿಶಿಷ್ಟವರ್ಗದ ಅಭ್ಯರ್ಥಿಗಳಿಗೆ 5 ವರ್ಷ, ಜಮ್ಮು ಮತ್ತು ಕಾಶ್ಮೀರದ ಅಭ್ಯರ್ಥಿಗಳಿಗೆ 5 ವರ್ಷ, ಅದೇ ಪ್ರದೇಶದ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ 10 ವರ್ಷ, ರಕ್ಷಣಾ ಸೇವೆಯಲ್ಲಿರುವವರಿಗೆ 3 ವರ್ಷ ಮತ್ತು ರಕ್ಷಣಾ ಸೇವೆಯಲ್ಲಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ 8 ವರ್ಷ ವಯಸ್ಸಿನ ಮಿತಿಯಲ್ಲಿ ರಿಯಾಯಿತಿ ಇದೆ.

ಸಾಮಾನ್ಯ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು 4 ಅವಕಾಶಗಳಿದ್ದು, ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಎಷ್ಟು ಬಾರಿ ಬೇಕಾದರೂ ಪರೀಕ್ಷೆಗೆ ಕುಳಿತುಕೊಳ್ಳಬಹುದು. ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳು ಗರಿಷ್ಠ 7 ಬಾರಿ ಪರೀಕ್ಷೆ ತೆಗೆದುಕೊಳ್ಳಲು ಅರ್ಹರು.

ಆಯ್ಕೆಯ ವಿಧಾನ

ನಾಗರೀಕ ಸೇವೆಗಳಿಗೆ ಅಭ್ಯರ್ಥಿಗಳ ಆಯ್ಕೆಯನ್ನು ಮೂರು ಹಂತಗಳಲ್ಲಿ ಮಾಡಲಾಗುತ್ತದೆ.

I. ಪೂರ್ವಭಾವಿ ಪರೀಕ್ಷೆ

ಪೂರ್ವ ಭಾವಿ ಪರೀಕ್ಷೆಯಲ್ಲಿ 2 ಪ್ರಶ್ನೆ ಪತ್ರಿಕೆಗಳಿರುತ್ತವೆ. 150 ಅಂಕದ ಸಾಮಾನ್ಯ ಅಧ್ಯಯನ ಪತ್ರಿಕೆ. ಇದು ಅಭ್ಯರ್ಥಿಯ ಸಾಮಾನ್ಯಜ್ಞಾನ, ಸಾಮಾನ್ಯವಿಜ್ಞಾನ, ಭಾರತದ ಚರಿತ್ರೆ, ದೇಶ/ ವಿದೇಶದ ಪ್ರಚಲಿತ ವಿದ್ಯಮಾನಗಳು, ಜಾಗತಿಕ ಭೂಗೋಳಶಾಸ್ತ್ರ, ಭಾರತದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿ, ಭಾರತದ ಸ್ವಾತಂತ್ರ್ಯ ಆಂದೋಳನ ಮತ್ತು ಸಾಮಾನ್ಯ ಬೌದ್ಧಿಕ ಸಾಮರ್ಥ್ಯವನ್ನು ಪರೀಕ್ಷಿಸುವ ಪ್ರಶ್ನೆಗಳನ್ನೊಳಗೊಂಡಿರುತ್ತದೆ.

ಪ್ರತಿಯೊಂದು ಪತ್ರಿಕೆಗೂ ಕಾಲಾವಧಿ 2 ಗಂಟೆ.

ಅಭ್ಯರ್ಥಿಯು ಯಾವುದಾದರೂ ಒಂದು ಐಚ್ಛಿಕ ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕು. ಈ ಪತ್ರಿಕೆ 300 ಅಂಕಗಳನ್ನು ಒಳಗೊಂಡಿರುತ್ತದೆ. ಆತ ಆಯ್ಕೆ ಮಾಡಿಕೊಳ್ಳಬಹುದಾದ ವಿಷಯಗಳು

1. ಪಶುಸಂಗೋಪನೆ ಮತ್ತು ಪಶುವೈದ್ಯಶಾಸ್ತ್ರ
2. ಕೃಷಿ
3. ಸಿವಿಲ್ ಇಂಜನಿಯರಿಂಗ್
4. ಸಸ್ಯಶಾಸ್ತ್ರ
5. ರಸಾಯನ ಶಾಸ್ತ್ರ
6. ವಾಣಿಜ್ಯ ಶಾಸ್ತ್ರ
7. ಅರ್ಥ ಶಾಸ್ತ್ರ
8. ಎಲೆಕ್ಟ್ರಿಕಲ್ ಇಂಜನಿಯರಿಂಗ್
9. ಭೂಗೋಳ
10. ಭೂಗರ್ಭಶಾಸ್ತ್ರ
11. ಭಾರತದ ಚರಿತ್ರೆ
12. ಕಾನೂನು
13. ಗಣಿತ
14. ಯಾಂತ್ರಿಕ ತಂತ್ರಜ್ಞಾನ
15. ವೈದ್ಯಕೀಯ ಶಾಸ್ತ್ರ
16. ತತ್ವಶಾಸ್ತ್ರ
17. ಭೌತಶಾಸ್ತ್ರ
18. ರಾಜ್ಯಶಾಸ್ತ್ರ ಮತ್ತು ಅಂತರಾಷ್ಟ್ರೀಯಾ ಸಂಬಂಧಗಳು
19. ಮನೋವಿಜ್ಞಾನ
20. ಸಾರ್ವಜನಿಕ ಆಡಳಿತ
21. ಸಮಾಜಶಾಸ್ತ್ರ
22. ಸಂಖ್ಯಾಶಾಸ್ತ್ರ
23. ಪ್ರಾಣಿಶಾಸ್ತ್ರ

ಎರಡೂ ಪ್ರಶ್ನೆಪತ್ರಿಕೆಗಳಲ್ಲಿ ಬಹು ಆಯ್ಕೆ ಮಾದರಿಯ ಪ್ರಶ್ನೆಗಳಿರುತ್ತವೆ. ಪ್ರಶ್ನೆ ಪತ್ರಿಕೆಯನ್ನು ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಮುದ್ರಿಸಲಾಗಿರುತ್ತದೆ. ಪ್ರತೀ ಪತ್ರಿಕೆಯ ಮಟ್ಟ ಪದವಿ ಪಠ್ಯಕ್ರಮವನ್ನು ಆಧರಿಸಿರುತ್ತದೆ.

II. ಮುಖ್ಯ ಪರೀಕ್ಷೆ

ಪೂರ್ವಭಾವಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಯು ಮುಖ್ಯ ಪರೀಕ್ಷೆಗೆ ಅರ್ಹನಾಗುತ್ತಾನೆ. ಮುಖ್ಯ ಪರೀಕ್ಷೆಯು 9 ಪತ್ರಿಕೆಗಳನ್ನು ಒಳಗೊಂಡಿರುತ್ತದೆ.

ಭಾಷೆ

ಸಂವಿಧಾನದ 8ನೇ ಷೆಡ್ಯೂಲಿನಲ್ಲಿರುವ ಯಾವುದಾದರೊಂದು ಭಾಷೆಯನ್ನು (ಅಸ್ಸಾಮಿ, ಬೆಂಗಾಳಿ, ಗುಜರಾತಿ, ಹಿಂದಿ, ಕನ್ನಡ, ಕಾಶ್ಮೀರಿ, ಕೊಂಕಣಿ, ಮಲೆಯಾಳಂ, ಮಣಿಪುರಿ, ಮರಾಠಿ, ನೇಪಾಳಿ, ಒರಿಯಾ, ಪಂಜಾಬಿ, ಸಂಸ್ಕೃತ, ಸಿಂಧಿ, ತಮಿಳು, ತಲುಗು ಮತ್ತು ಉರ್ದು) ಅಭ್ಯರ್ಥಿಯು ಆಯ್ದುಕೊಂಡು, 300 ಅಂಕಗಳ ಪತ್ರಿಕೆಯನ್ನು ಉತ್ತರಿಸಬೇಕು.

CUT HERE NEATLY

UNION PUBLIC SERVICE COMMISSION

APPLICATION FORM FOR

CIVIL SERVICES (PRELIMINARY) EXAMINATION, 1999

FOR OFFICE USE ONLY						
Roll No.						

(To be filled in by the candidate with ball-point pen)

1. (a) Details of Fee Paid. Fee to be paid is **Rs. 40.**(SC/ST/Physically Handicapped candidates are not required to pay any fee.)

Space for affixing Central Recruitment Fee Stamps. (This is the sole mode prescribed for payment of fees) N.B. : Please ensure that the CRF stamps are affixed firmly and duly cancelled by P.O. of purchase on the form itself.	Name of Post Office	Value of CRF Stamps Rs.
	Total Value	

N.B. : Indian Postal Orders/Bank Drafts/Money Orders/ Crossed Cheque/Treasury Challan/ Currency Notes/Postage/ Revenue/ Court Fee Stamps etc. are **not acceptable.**

PASTE HERE FIRMLY A COPY OF YOUR RECENT PASSPORT SIZE PHOTOGRAPH (approx. 4 cm x 5 cm) DULY ATTESTED BY A GAZETTED OFFICER/ PRINCIPAL OF COLLEGE LAST ATTENDED

(b) Do you claim Fee remission as a physically handicapped candidate? Write Yes or No ☐

2. Name (as recorded in Matriculation or equivalent certificate) (in BLOCK CAPITALS in English) ☐☐☐☐☐☐☐☐☐☐☐☐☐☐☐☐☐☐☐☐☐☐☐☐☐

3. Sex : Write 1, if male; or 2, if female ☐

IMPORTANT : PLEASE DO NOT LEAVE ANY COLUMN BLANK.

4. (a) Date of birth (as recorded in Matriculation or equivalent certificate)

D	D	M	M	Y	Y	Y	Y
				1	9		

(b) Write your date of birth in words ______________________

Date of Birth (in words)

(c) In case you claim age-relaxation, mention relevant provision(s) of Para 4 of the Notice. ______________________

5. Father's Name (in BLOCK CAPITALS in English) ☐☐☐☐☐☐☐☐☐☐☐☐☐☐☐☐☐☐☐☐☐☐☐☐☐

6. Community : (Indicate one out of the following categories in words and code)

Scheduled Caste ________ 1

Scheduled Tribe ________ 2

Other Backward Classes (OBCs) ________ 3

General Category (Others)

COMMUNITY

In words	Code

NOTE : Candidates belonging to OBCs but coming in the Creamy Layer', and thus not being entitled to OBC reservation, should indicate their community as "General Category .. Code No.4".

7. Qualification : Write 1 if you have already passed the degree or equivalent Examination; or 2 if you have appeared/appearing. [ ]

8. Centre at which you wish to appear (write the Name of only one centre out of the list of centres given in Appendix). [ ]

9. Optional Subject (indicate the name of *only* one Subject out of subjects given in Appendix). [ ]

10. Address for Correspondence (in BLOCK CAPITALS in English) [ ]

Pin Code [ ]

11. If you are a candidate from any one of the areas entitled to additional time e.g. Assam, Meghalaya, etc. indicate clearly the name of the State/UT/area or region where you are residing. [ ]

12. If you are a blind candidate, Write (in words)—"BLIND" otherwise write "NA". [ ]

NOTE : For the definition of 'Blind', please see General Instructions below Appendix-I, Section II(B).

IMPORTANT : BEFORE SIGNING, PLEASE CHECK YOUR ENTRIES.

DECLARATION TO BE SIGNED BY THE CANDIDATE

I hereby declare that all entries/statements made in columns 1 to 12 of this application are true, complete and correct to the best of my knowledge and belief. In the event of any information being found false or incorrect, or ineligibility being detected before or after the examination, action can be taken against me by the Commission under Rule 14 of the Rules notified in Gazette of India Extraordinary dated 12th December, 1998 and also reproduced in Para 6 of the Notice of the Commission published in Employment News/ Rozgar Samachar dated 12th December, 1998.

I have read the provisions in the Rules and the Notice of the Commission carefully and I hereby undertake to abide by them.

I further declare that I fulfil all the conditions of eligibility regarding Age Limits, Educational Qualifications etc. prescribed for admission to the examination and that I have not exhausted the number of attempts admissible (General Category-4, OBC-7) under para 4 of the Notice

*I have informed my Head of Office/Department in writing that I am applying for this examination.

Place .... **Signature of Candidate** ....

Date .... **Name as signed** ....
(in BLOCK CAPITALS in English)

*Strike off this sentence if not applicable. **Application not signed by the candidate is liable to rejection.

NOTE : (i) THE CANDIDATE IS NOT REQUIRED TO ENCLOSE WITH HIS APPLICATION ANY CERTIFICATE OR COPY THEREOF.

NOTE : (ii) THE CANDIDATE SHOULD ENSURE THAT THE APPLICATION FORM USED BY HIM IS EXACTLY IN THE SAME FORMAT AS PRINTED IN THE UPSC ADVERTISEMENT.

IMPORTANT : The application form, duly completed, must reach the office of the UPSC on or before **11th January, 1999**. In respect of candidates residing in remote areas/ regions specified in Para 7 of Notice, whose applications are received by post/speed post, the last date is **18th January, 1999**. In case of applications received by hand or courier service, benefit of extended time will NOT be available, regardless of the place of residence of the applicant.

.CUT HERE NEATLY

- 300 ಅಂಕಗಳ ಇಂಗ್ಲಿಷ್ ಪತ್ರಿಕೆ
- 200 ಅಂಕಗಳ ಪ್ರಬಂಧ ಬರಹ
- 4 ಮತ್ತು 5ನೇ ಪತ್ರಿಕೆ ಸಾಮಾನ್ಯ ಅಧ್ಯಯನದ ಪತ್ರಿಕೆಗಳು ಪ್ರತೀ ಪತ್ರಿಕೆಗೂ 300 ಅಂಕಗಳು
- 6, 7, 8, ಮತ್ತು 9 ಇವು ಅಭ್ಯರ್ಥಿ ಆಯ್ದು ಕೊಂಡ 2 ಐಚ್ಛಿಕ ವಿಷಯಗಳಲ್ಲಿನ 4 ಪತ್ರಿಕೆಗಳು (ಪ್ರತೀ ವಿಷಯಕ್ಕೂ 2 ಪತ್ರಿಕೆಗಳಂತೆ) ಒಟ್ಟು 1200 ಅಂಕಗಳು.

ಅಭ್ಯರ್ಥಿಯು ಕೃಷಿ, ಪಶುಸಂಗೋಪನೆ ಮತ್ತು ಪಶುವೈದ್ಯಶಾಸ್ತ್ರ, ಪೌರಾತ್ವಶಾಸ್ತ್ರ, ಸಸ್ಯ ಶಾಸ್ತ್ರ, ರಸಾಯನ ಶಾಸ್ತ್ರ, ಸಿವಿಲ್ ಇಂಜಿನಿಯ ರಿಂಗ್, ವಾಣಿಜ್ಯ ಮತ್ತು ಲೆಕ್ಕ ಶಾಸ್ತ್ರ, ಅರ್ಥಶಾಸ್ತ್ರ, ಎಲೆಕ್ಟ್ರಿಕಲ್ ಇಂಜಿನಿಯರಿಂಗ್, ಭೂಗರ್ಭಶಾಸ್ತ್ರ, ಭೂಗೋಳ, ಚರಿತ್ರೆ, ಕಾನೂನು, ಮ್ಯಾನೇಜ್ ಮೆಂಟ್, ಗಣಿತ, ಯಾಂತ್ರಿಕ ತಂತ್ರಜ್ಞಾನ, ವೈದ್ಯ ಶಾಸ್ತ್ರ, ತತ್ವಶಾಸ್ತ್ರ, ಭೌತಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಅಂತರಾಷ್ಟ್ರೀಯಾ ಸಂಬಂಧಗಳು, ಮನಶಾಸ್ತ್ರ ಸಾರ್ವಜನಿಕ ಆಡಳಿತ, ಸಮಾಜಶಾಸ್ತ್ರ, ಸಂಖ್ಯಾ ಶಾಸ್ತ್ರ, ಪ್ರಾಣಿಶಾಸ್ತ್ರ ಮತ್ತು 26 ಭಾಷೆಗಳಲ್ಲಿ ಯಾವುದಾದರೊಂದು ಭಾಷೆಯ ಸಾಹಿತ್ಯ. ಈ ವಿಷಯಗಳಲ್ಲಿ ಯಾವುದಾದರೂ 2 ವಿಷಯ ಗಳನ್ನು ಆಯ್ದುಕೊಳ್ಳಬೇಕು.

ಮೇಲಿನ ಎಲ್ಲ ಪತ್ರಿಕೆಗಳಲ್ಲಿನ ಪ್ರಶ್ನೆಗಳಿಗೆ ಪ್ರಬಂಧರೂಪದ ಉತ್ತರವನ್ನು ನೀಡಬೇಕು. 3 ಗಂಟೆ ಅವಧಿಯ ಪ್ರಶ್ನೆಪತ್ರಿಕೆಗಳನ್ನು (ಪತ್ರಿಕೆ 1 ಮತ್ತು 2ನ್ನು ಬಿಟ್ಟು) ಇಂಗ್ಲಿಷ್ ಅಥವಾ 8ನೇ ಷೆಡ್ಯೂಲಿನಲ್ಲಿರುವ ಯಾವುದೇ ಭಾಷೆಯಲ್ಲಿ ಉತ್ತರಿಸಬಹುದು. ನಮ್ಮಲ್ಲಿ ಅನೇಕ ಜನ ಕನ್ನಡದಲ್ಲಿ ಉತ್ತರಿಸಿ ಯಶಸ್ವಿಯಾಗಿರುವ ಅಭ್ಯರ್ಥಿಗಳು ಇದ್ದಾರೆ. ಭಾಷೆಯ ಪತ್ರಿಕೆಗಳನ್ನು ಹೊರತು ಪಡಿಸಿ ಉಳಿದೆಲ್ಲ ಪತ್ರಿಕೆಗಳು ಇಂಗ್ಲಿಷ್ ಮತ್ತು ಹಿಂದಿಯಲ್ಲಿರುತ್ತವೆ.

III. ಸಂದರ್ಶನ:

ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ಮೌಖಿಕ ಸಂದರ್ಶನಕ್ಕೆ ಕರೆಯ ಲಾಗುತ್ತದೆ. ಅಭ್ಯರ್ಥಿಯ ಆಸಕ್ತಿ, ಸಾಮಾನ್ಯ ವಿಷಯಗಳ ಬಗ್ಗೆ ಆತನ ಜ್ಞಾನ ಮತ್ತು ಹುದ್ದೆಗೆ ಆತ ಅರ್ಹನೇ ಎನ್ನುವುದನ್ನು ಅಳೆಯಲು ಇರುವ ಸಂದರ್ಶನವು ಒಂದು ಪಾಟೀ ಸವಾಲಲ್ಲ, ಬದಲಿಗೆ ಒಂದು ಸಂವಾದ. ಅಭ್ಯರ್ಥಿಯು ಈಗಾಗಲೇ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆ ಗಳಲ್ಲಿ ತೇರ್ಗಡೆಯಾಗಿ ತನ್ನ ಬುದ್ಧಿಮತ್ತೆಯನ್ನು ಸಾಬೀತುಪಡಿಸಿರುತ್ತಾನೆ. ಅಭ್ಯರ್ಥಿಯ ಮಾನಸಿಕ ಸ್ಥಿರತೆ, ಬೌದ್ಧಿಕ ಏಕಾಗ್ರತೆ, ವಿಷಯವನ್ನು ಆತ ವಿಶ್ಲೇಷಿಸುವ ರೀತಿ, ಆತ ತರ್ಕ ಬದ್ಧನಾಗಿ/ ಪಕ್ಷಾತೀತವಾಗಿ ಯೋಚಿಸಬಲ್ಲನೇ, ಆತನಿಗೆ ನಾಯಕತ್ವದ ಗುಣ/ಸಾಮರ್ಥ್ಯವಿದೆಯೇ, ಆತ ನೈತಿಕವಾಗಿ, ಸಮರ್ಥನೋ ಎನ್ನುವುದನ್ನು ಪಕ್ಷಾ ತೀತವಾದ ಸದಸ್ಯರ ಗುಂಪೊಂದು ಪರೀಕ್ಷಿಸುತ್ತದೆ.

ಇದಕ್ಕಾಗಿ ಮೀಸಲಿಟ್ಟ ಅಂಕಗಳು 300.

ಅರ್ಜಿ ಶುಲ್ಕ:

ಸಾಮಾನ್ಯ ಅಭ್ಯರ್ಥಿಗಳು ರೂ 40 ನ್ನು ಅಂಚೆ ಕಚೇರಿಯಲ್ಲಿ ದೊರೆಯುವ ಕೇಂದ್ರ ನೇಮಕಾತಿ ಶುಲ್ಕ ಸ್ಟಾಂಪ್ ರೂಪದಲ್ಲಿ ನೀಡಬೇಕು. ಬೇರಾವುದೇ ರೂಪದಲ್ಲಿ ಹಣ ನೀಡಬಾರದು. ದೈಹಿಕ ಅಂಗವಿಕಲರು, ಪರಿಶಿಷ್ಟ ವರ್ಗ/ ಜಾತಿಗೆ ಸೇರಿ ದವರು ಯಾವುದೇ ಶುಲ್ಕ ಸಲ್ಲಿಸುವಂತಿಲ್ಲ.

ಮುಖ್ಯ ಪರೀಕ್ಷೆಗೆ ಆಯ್ಕೆಯಾದ ಅಭ್ಯರ್ಥಿ ಗಳು ಮತ್ತೊಮ್ಮೆ ರೂ. 60 ಶುಲ್ಕವನ್ನು ನೀಡಬೇಕಾಗುತ್ತದೆ.

ವಿವಿಧ ವರ್ಗಗಳ ಕೋಡ್ ಸಂಖ್ಯೆ

- ಪರಿಶಿಷ್ಟ ಜಾತಿ 1
- ಪರಿಶಿಷ್ಟ ಪಂಗಡ 2
- ಇತರ ಹಿಂದುಳಿದ ವರ್ಗಗಳು (ಓಬಿಸಿ) 3
- ಸಾಮಾನ್ಯ ವರ್ಗ 4

ಅರ್ಜಿ ಸಲ್ಲಿಸುವ ವಿಧಾನ:

ಆಯೋಗವು ನಿಗದಿಪಡಿಸಿದ ಅರ್ಜಿಯನ್ನು (ಎಂಪ್ಲಾಯ್‌ಮೆಂಟ್ ನ್ಯೂಸ್, ಡಿಸೆಂಬರ್ - 12) ತುಂಬಿ.

UNDER SECRETARY (CSP)
UNION PUBLIC SERVICE
COMMISSION
DHOLPUR HOUSE
(POST BOX NO. 2)
NEW DELHI - 110 011

ಇಲ್ಲಿಗೆ 11. 1.99 ರೊಳಗೆ ತಲುಪುವಂತೆ ಕಳಿಸ ಬೇಕು. ಅರ್ಜಿಯ ಮೇಲೆ Application for Civil services (preliminary) examinations 99' ಎಂದು ಸ್ಪಷ್ಟವಾಗಿ ಬರೆದಿರಬೇಕು.

ಅರ್ಜಿಯ ಜೊತೆ:

- 40. ರೂ. ನೇಮಕಾತಿ ಶುಲ್ಕದ ಸ್ಟಾಂಪ್‌ಗಳು.
- ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿದ ಪಾಸ್‌ಪೋರ್ಟ್ ಅಳತೆಯ (4X 5 ಸೆ.ಮೀ) ಭಾವಚಿತ್ರ. ಇಂತಹದೇ ಒಂದು ಭಾವಚಿತ್ರ ವನ್ನು ಅಭ್ಯರ್ಥಿ ಪರೀಕ್ಷೆಗೆ ಹೋಗುವಾಗ ತೆಗೆದುಕೊಂಡು ಹೋಗಬೇಕು.
- ಸ್ವವಿಳಾಸದ ರೂ. 1.25ರ ಅಂಚೆ ಚೀಟಿ ಅಂಟಿಸಿರುವ ಪೋಸ್ಟ್‌ಕಾರ್ಡ್.
- ಸ್ವವಿಳಾಸವಿರುವ 11.7X27.5 ಸೆ.ಮೀ.ನ ಉತ್ತಮ ದರ್ಜೆಯ ಲಕೋಟೆಯನ್ನು ಕಳಿಸ ಬೇಕು. ಅರ್ಜಿಯನ್ನು ಉತ್ತಮ ದರ್ಜೆಯ ಕಾಗದದ ಮೇಲೆ ಬರೆಯಬೇಕು. ಅರ್ಜಿ ಯನ್ನು ಚಿತ್ತಿಲ್ಲದೇ ಸೂಚನೆಗನುಗುಣವಾಗಿ ತುಂಬಬೇಕು. ಅರ್ಜಿಯ ಜೊತೆ ಯಾವುದೇ ಸರ್ಟಿಫಿಕೆಟ್‌ಗಳನ್ನು ಲಗತ್ತಿಸಬಾರದು.

ಸೂಚನೆಗಳು

- ದೃಢೀಕರಿಸಿದ ಪಾಸ್‌ಪೋರ್ಟ್ ಅಳತೆಯ (4X5 ಸೆ.ಮೀ) ಭಾವ ಚಿತ್ರವನ್ನು ಅರ್ಜಿಯಲ್ಲಿ ನಿಗದಿಪಡಿಸಿರುವ ಜಾಗದಲ್ಲಿ ಅಂಟಿಸಬೇಕು. ಪಿನ್ ಮಾಡಕೂಡದು.
- ಕೇಂದ್ರ ನೇಮಕಾತಿ ಶುಲ್ಕದ ಸ್ಟಾಂಪ್‌ಗಳನ್ನು ಮಾತ್ರ ಬಳಸಬೇಕು. ಇನ್ನಾವುದೇ ರೀತಿಯಲ್ಲಿ ಶುಲ್ಕ ಸ್ವೀಕರಿಸುವುದಿಲ್ಲ.
- ಅರ್ಜಿಯಲ್ಲಿ ಸೂಚಿಸಿರುವ ಎಲ್ಲ ಕಾಲಂಗಳನ್ನು ಸರಿಯಾಗಿ ಭರ್ತಿ ಮಾಡಬೇಕು.
- ಅಭ್ಯರ್ಥಿಯು ಯಾವ ವರ್ಗಕ್ಕೆ ಸೇರುತ್ತಾನೋ ಅದನ್ನು ಸ್ಪಷ್ಟವಾಗಿ ಅಕ್ಷರಗಳಲ್ಲಿ ಮತ್ತು ಕೋಡ್ ಮುಖಾಂತರ ನಮೂದಿಸಬೇಕು.
- ಅರ್ಜಿಯ ಮೇಲೆ ಅಭ್ಯರ್ಥಿ ಸಹಿ ಮಾಡಿರಬೇಕು. ಸಹಿ ಮಾಡಿರದ ಅರ್ಜಿಯನ್ನು ತಿರಸ್ಕರಿಸಲಾಗುತ್ತದೆ.
- ಅಭ್ಯರ್ಥಿಯು ಅರ್ಜಿಯನ್ನು ತುಂಬುವಾಗ ಇಂಗ್ಲಿಷ್ ಅಂಕೆಗಳನ್ನು ಮಾತ್ರ ಬಳಸಬೇಕು. ಉದಾ. 1, 2, 3, 4, 5, 6. ಇತ್ಯಾದಿ.
- ಒಂದು ಸಲ ವಿಷಯವನ್ನು ಆಯ್ಕೆ ಮಾಡಿಕೊಂಡ ಮೇಲೆ ಯಾವುದೇ ಕಾರಣಕ್ಕೂ ಬದಲಾವಣೆಗೆ ಅವಕಾಶವಿಲ್ಲ.

KITTUR RANI CHANNAMMA RESIDENTIAL SCHOOL FOR GIRLS, KITTUR 59115. DIST : BELGAUM

Phone No. Office: 08288-86239

I. SCHOLARSHIP SCHEME:

1. Approximately 21 scholarships are likely to be available to the children who are natives of Karnataka or Children of other States whose parents have lived in Karnataka continuously for a minimum period of three years as on 01.06.1999. The scholarship amount is much below the fee which will be revised from time to time. Parents have to pay the difference as of now and also whenever the fee is revised, as and when the management so decides.
2. **Age Limit.**
   Girls born between 01.06.1987 and 31.05.1989 are eligible.
3. **Educational Qualification:**
   Should have passed or be studying in Std V at the time of filing of the application and should have passed Std V at the time of admission.
4. **Entrance Examination:**
   The Entrance Examination will be held on Sunday 07 March 1999. Applicants can write the examination in Kannada or English or Hindi. The centres are at Kittur, Bijapur, Bangalore.
5. The prospectus containing an application form can be had from the Principal by sending D.D. for Rs. 200/- Old question papers can also be had by sending a D.D. for Rs. 50/- per set. (Three sets each in Kannada and English are available). Old Question papers are no guide to the type of question at the Entrance Examination. D.D.s should be drawn in the name of the Principal and should be payable at Kittur.
6. The Completed application from together with a Registration fee of Rs. 200/- (Rs.100/- in the case of SC & ST candidates) should reach the School on or before 15th January 1999.
7. Admission for 1999-2000 Merit Category Students Reservations:

   Defence : 2 Seats

   Kittur Hobli : 2 Seats

   (Studied from Class I to V in Kittur) and shall be countersigned by Deputy Tahashildar of Kittur.

   Others as per Castewise Categories by stipulated Govt. Roster

II. FULL FEE PAYMENT SCHEME:

Admission on full fee payment is also available only for VI & VIII & IX standards depending on the availability of vacancies. A prospectus with a separate application form is available for full fee seats. Please send a D.D. of Rs. 200/-. The duly filled application shall be sent to this office along with a Registration fee of Rs. 200./- on or Before 30.4.1999. Full fee candidates have to pay revised fees when required to do so. The existing rate of is Rs. 18000/- per annum.

Note I: All payment should be made through DDs payable at the Syndicate Bank Kittur, infavour of Principal K.R.C.R. School, Kittur.

Note: II Merit Category candidates who qualify for the Viva Voce will be intimated of the date of the Viva Voce Full payment candidates will be put through the Test and the Viva Voce on the same day.

III. SCHOOL OFFICE HOURS:

8.00 am. to 2.00 p.m on all working days.

ಉನ್ನತ ವಿದ್ಯಾಭ್ಯಾಸಕ್ಕೆ ಸಾಲ ಸೌಲಭ್ಯಗಳು

ಇಂದು ಉನ್ನತ ವಿದ್ಯಾಭ್ಯಾಸ ವಿಪರೀತ ದುಬಾರಿಯಾಗುತ್ತಿದೆ. ಅದರಲ್ಲೂ ವೃತ್ತಿಪರ ಶಿಕ್ಷಣಕ್ಕೆ ಲಕ್ಷಾಂತರ ರೂಪಾಯಿಗಳು ಖರ್ಚಾಗುತ್ತದೆ. ಹಿಂದೆ ರೂ. 10,000 ರಿಂದ 15,000 ದೊಳಗೆ ಇಂಜಿನಿಯರಿಂಗ್ ಅಥವಾ ಮೆಡಿಕಲ್ ಕೋರ್ಸ್‌ನ್ನು ಮುಗಿಸಬಹುದಿತ್ತು. ಆದರೆ ಇಂದು ಆ ಕೋರ್ಸ್‌ಗಳನ್ನು ಮುಗಿಸಲು 1 ರಿಂದ 1.5 ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಬೇಕಾಗುತ್ತದೆ. ಇದರಲ್ಲಿ ಡೊನೇಷನ್ ಅಥವಾ ಕ್ಯಾಪಿಟೇಶನ್ ಫೀಯನ್ನು ಸೇರಿಸಿಲ್ಲ ಎನ್ನುವುದು ಗಮನಾರ್ಹ.

ಪ್ರತಿಷ್ಠಿತ ಮ್ಯಾನೇಜ್‌ಮೆಂಟ್ ಕೋರ್ಸ್‌ಗಳು ಇನ್ನೂ ದುಬಾರಿ. Indian Institute of Managementನಲ್ಲಿ 2 ವರ್ಷಗಳ ಕೋರ್ಸ್ ಮುಗಿಸಲು ಹೆಚ್ಚು ಕಮ್ಮಿ 2 ಲಕ್ಷ ರೂಪಾಯಿಗಳಾಗಬಹುದು. ಅಷ್ಟೇ ಏಕೆ ಕೆಲವು ಅನ್ವಯಿಕ ವಿಷಯ (ಉದಾ: ಮೈಕ್ರೋಬಯಾಲಜಿ, ಜೈವಿಕ ತಂತ್ರಜ್ಞಾನ, ಕಂಪ್ಯೂಟರ್ ಕೋರ್ಸ್ ಇತ್ಯಾದಿ) ಗಳಲ್ಲಿ ಪದವಿ ಪಡೆಯಲು ಸಹ 50 ರಿಂದ 75 ಸಾವಿರ ರೂಪಾಯಿಗಳಷ್ಟು ಬೇಕಾಗುತ್ತದೆ.

ಈ ರೀತಿ ವಿಪರೀತವಾಗಿ ಏರಿಕೆ ಕಾಣುತ್ತಿರುವ ವಿದ್ಯಾಭ್ಯಾಸದ ಶುಲ್ಕ ಪಾಲಕರನ್ನು ಹಾಗು ವಿದ್ಯಾರ್ಥಿಗಳನ್ನು ಚಿಂತೆಗೀಡು ಮಾಡಿದೆ. ಇಷ್ಟೊಂದು ಹಣವನ್ನು ಹೊಂದಿಸುವುದಾದರೂ ಹೇಗೆ?

ಈ ಪರಿಸ್ಥಿತಿಯಲ್ಲಿ ವಿದ್ಯಾಭ್ಯಾಸಕ್ಕಾಗಿ ಸಾಲ ನೀಡಲು ಮುಂದೆ ಬಂದಿರುವ ಕೆಲವು ಸಂಸ್ಥೆ ಹಾಗು ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳ ಬಗ್ಗೆ ಮಾಹಿತಿ ದೊರಕಿಸುವುದು ಈ ಲೇಖನದ ಉದ್ದೇಶ.

❒ ಬ್ಯಾಂಕುಗಳಿಂದ ಸಾಲ ಸೌಲಭ್ಯ

ರಾಷ್ಟ್ರೀಕೃತ ಹಾಗು ವಿದೇಶಿ ಬ್ಯಾಂಕುಗಳು ಉನ್ನತ ವಿದ್ಯಾಭ್ಯಾಸಕ್ಕೆ ಸಾಲ ನೀಡುವ ವಿವಿಧ ಯೋಜನೆಗಳನ್ನು ಜಾರಿಗೊಳಿಸಿವೆ.

ವಿದ್ಯಾಭ್ಯಾಸಕ್ಕೆ ಸಾಲ ಕೊಡಲು ರಾಷ್ಟ್ರೀಕೃತ ಬ್ಯಾಂಕುಗಳು ಸದಾ ಮುಂದಿರುತ್ತವೆ. ಕಾರಣವೇನೆಂದರೆ ನಮ್ಮ ದೇಶದಲ್ಲಿ ವಿದ್ಯಾಭ್ಯಾಸಕ್ಕಾಗಿ ಸಾಲ ಕೊಡುವ ಯೋಜನೆಯು ಬ್ಯಾಂಕುಗಳ Priority sector lending ಅಡಿಯಲ್ಲಿ ಬರುತ್ತದೆ. ಹೀಗಾಗಿ ಪ್ರತಿ ವರ್ಷವೂ ಬ್ಯಾಂಕುಗಳು ಈ ಯೋಜನೆಗಳಲ್ಲಿ ಕೊಡಬೇಕಾದ ಸಾಲಗಳನ್ನು ಆದ್ಯತೆಯ ಮೇರೆಗೆ ನೀಡಿ ನಿಗದಿ ಪಡಿಸಿದ ಗುರಿ ತಲುಪಬೇಕಾಗುತ್ತದೆ.

ಬ್ಯಾಂಕುಗಳು ಸಾಧಾರಣವಾಗಿ ಪೂರ್ಣಾವಧಿಯ ಕೋರ್ಸ್‌ಗಳಿಗೆ ಸಾಲ ನೀಡುತ್ತವೆ.

ಇಂಜಿನಿಯರಿಂಗ್, ಮೆಡಿಕಲ್‌ನಂತಹ ಕೋರ್ಸ್‌ಗಳಲ್ಲದೇ ಇನ್ನಿತರ ಹಲವಾರು ಕೋರ್ಸ್‌ಗಳನ್ನು ಅಭ್ಯಾಸ ಮಾಡಲು ಸಹ ಬ್ಯಾಂಕುಗಳಿಂದ ಸಾಲ ಸೌಲಭ್ಯ ಲಭ್ಯವಿದೆ.

Citibank, ಬೆಂಗಳೂರಿನಲ್ಲಿರುವ IIMನಲ್ಲಿ ಓದಲು ಬಯಸುವವರಿಗೆ ಸಾಲ ನೀಡುವ ಯೋಜನೆಯನ್ನು ಇತ್ತೀಚೆಗಷ್ಟೇ ಜಾರಿಗೊಳಿಸಿದೆ. Stanchart ಸಹ ಉನ್ನತ ವಿದ್ಯಾಭ್ಯಾಸಕ್ಕೆ ಸಾಲ ನೀಡುವ ಉದ್ದೇಶದಿಂದ ವಿಶಿಷ್ಟ ಯೋಜನೆ (Career savings plans)ಯೊಂದನ್ನು ಜಾರಿ ತಂದಿದೆ.

ಕೆನರಾ ಬ್ಯಾಂಕ್ ಹಾಗು ಯುನಿಯನ್ ಬ್ಯಾಂಕ್‌ಗಳು ಡಿಗ್ರಿ, ಡಿಪ್ಲೊಮಾ ಹಾಗು ಸರ್ಟಿಫಿಕೇಟ್ ಕೋರ್ಸ್‌ಗಳಿಗೂ ಸಾಲ ನೀಡುವುವು.

Commercial Pilots licence, cost accountancy, CFA, ಚಾರ್ಟರ್ಡ್ ಅಕೌಂಟೆನ್ಸಿ (Chartered accountancy) CMA ಮುಂತಾದ ಕೋರ್ಸ್‌ಗಳನ್ನು ಅಭ್ಯಸಿಸಲು ಸಹ ಈ ಬ್ಯಾಂಕ್‌ಗಳಿಂದ ಸಾಲ ಪಡೆಯಬಹುದಾಗಿದೆ.

❒ ಸಾಲದ ಮಿತಿ

ಬ್ಯಾಂಕುಗಳು ನೀಡುವ ಸಾಲದ ಗರಿಷ್ಠ ಮಿತಿ 3 ರಿಂದ 5 ಲಕ್ಷ ರೂ.ಗಳು. ವಿದೇಶದಲ್ಲಿ ಉನ್ನತ ವಿದ್ಯಾಭ್ಯಾಸಕ್ಕಾಗಿ ಈ ಮಿತಿಯನ್ನು 10 ಲಕ್ಷ ರೂಪಾಯಿಗಳವರೆಗೂ ವಿಸ್ತರಿಸಬಹುದಾಗಿದೆ. ವಿದ್ಯಾರ್ಥಿನಿಲಯದ ಖರ್ಚು, ಪುಸ್ತಕಗಳ ಕ್ರಯ, ಉಪಕರಣಗಳು, ಪರೀಕ್ಷಾ ಶುಲ್ಕ ಮುಂತಾದವುಗಳನ್ನು ಬ್ಯಾಂಕಿನಿಂದ ಸಾಲದ ರೂಪದಲ್ಲಿ ಪಡೆಯಬಹುದು. ವಿದೇಶ ಪ್ರಯಾಣದ ಖರ್ಚಿಗಾಗಿಯೂ ಸಾಲವನ್ನು ಕೇಳಬಹುದು.

ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿಗೆ ತಗಲುವ ಒಟ್ಟು ಖರ್ಚಿನ 75 ರಿಂದ 85% ರಷ್ಟು ಸಾಲವನ್ನು ಬ್ಯಾಂಕಿನಿಂದ ನೀಡಬಹುದಾಗಿದೆ. ಉಳಿದದ್ದನ್ನು ಪಾಲಕರು ಭರಿಸಬೇಕಾಗುವುದು. 18 ವರ್ಷ ತುಂಬದಿರುವ ವಿದ್ಯಾರ್ಥಿ ಪರವಾಗಿ ಪೋಷಕರಿಗೆ ಸಾಲ ನೀಡಲಾಗುವುದು.

❒ ಮರುಪಾವತಿ

ವಿದ್ಯಾರ್ಥಿಯು ಕೋರ್ಸ್‌ನ್ನು ಮುಗಿಸುವ ತನಕ ಸಾಲವನ್ನು ಮರುಪಾವತಿ ಮಾಡಬೇಕಾಗಿಲ್ಲ. ಆದರೆ ಕೋರ್ಸ್ ಮುಗಿದ 6 ತಿಂಗಳ ನಂತರ ಇಲ್ಲವೇ ಉದ್ಯೋಗ ದೊರೆತ ತಕ್ಷಣ, ಅಂದರೆ ಯಾವುದು ಮೊದಲು ಸಂಭವಿಸುವುದು ಅದರಂತೆ, ಮರುಪಾವತಿ ಶುರು ಮಾಡಬೇಕಾಗುವುದು. ಸಾಲ ಮರುಪಾವತಿಯ ಕಂತಿನ ಹಣವನ್ನು ವಿದ್ಯಾರ್ಥಿ ಉದ್ಯೋಗ ಗಳಿಸಿದ ನಂತರ ಬರಬಹುದಾದ ಆದಾಯದ ಅಂದಾಜನ್ನು ಅನುಸರಿಸಿ ನಿಗದಿ ಪಡಿಸಲಾಗುತ್ತದೆ. ಮರುಪಾವತಿಗೆ ಕಾಲಾವಕಾಶ 3 ರಿಂದ 5 ವರ್ಷಗಳು. ಕೆಲವು ವಿದ್ಯಾರ್ಥಿಗಳು ಈ ಸಾಲವನ್ನು ತಾವು ಪಡೆದಿಲ್ಲ. ಅದನ್ನು ಪೋಷಕರು/ಪಾಲಕರು ಪಡೆದಿದ್ದಾರೆ, ಆದ್ದರಿಂದ ಅವರಿಂದ ವಸೂಲಿ ಮಾಡಿ ಎಂದು ಹಣ ಮರುಪಾವತಿ ಮಾಡದಿರುವ ಘಟನೆಗಳನ್ನು ಗಮನದಲ್ಲಿರಿಸಿಕೊಂಡು ಬಹಳಷ್ಟು ಬ್ಯಾಂಕ್/ಸಂಸ್ಥೆಗಳು ವಿದ್ಯಾರ್ಥಿಯನ್ನೂ ಸಹ ಸಾಲಕ್ಕೆ ಜವಾಬ್ದಾರನನ್ನಾಗಿ ಮಾಡುತ್ತಿವೆ. ಇನ್ನು ಕೆಲವು ಜನ ವಿದ್ಯಾರ್ಥಿಗಳು ಸಾಲ ಪಡೆದು ಉನ್ನತ ಹುದ್ದೆ ಹಾಗು ಸಂಬಳ ಪಡೆಯುತ್ತಿದ್ದರೂ ಸಾಲದ ಮರುಪಾವತಿ ಮಾಡದಿರುವುದು ಬ್ಯಾಂಕ್‌ಗಳನ್ನು ತುಂಬಾ ಇಕ್ಕಟ್ಟಿಗೆ ಸಿಲುಕಿಸಿದೆ. ಹೀಗಾಗಿ ಯೋಗ್ಯತೆ

ಇದ್ದರೂ ಬಡ ವಿದ್ಯಾರ್ಥಿಗೆ ನಿರಾಶೆ ಉಂಟಾಗುವ ಸಾಧ್ಯತೆಗಳಿವೆ.

❒ ಬಡ್ಡಿ ದರ

ಸದ್ಯಕ್ಕೆ ಚಾಲ್ತಿಯಲ್ಲಿರುವ ಬಡ್ಡಿದರಗಳು ಇಂತಿವೆ.

2 ಲಕ್ಷಕ್ಕೆ ಮೇಲ್ಪಟ್ಟ ಸಾಲಕ್ಕೆ ಶೇ. 16 ರಿಂದ 16.5 ಹಾಗು ಕಮ್ಮಿ ಸಾಲದ ಮೊತ್ತಕ್ಕೆ ವಾರ್ಷಿಕ ದರ ಶೇ. 13ರಿಂದ 13.5 ರಷ್ಟಿದೆ. ಸಾಲಕ್ಕೆ ಸರಳ ಬಡ್ಡಿದರ ವಿಧಿಸಲಾಗುವುದು ಹಾಗು ಸಾಲ ಪಡೆದು ವಿದ್ಯಾಭ್ಯಾಸ ಪೂರ್ಣಗೊಳಿಸುವ ಅವಧಿ ಯವರೆಗೆ ತ್ರೈಮಾಸಿಕವಾಗಿ ಕೇವಲ ಬಡ್ಡಿಯನ್ನು ಕಟ್ಟಬೇಕಾಗುತ್ತದೆ. ಅಸಲು ಸಾಲದ ಹಣವನ್ನು ಈ ಹಿಂದೆ ತಿಳಿಸಿದಂತೆ ಮರುಪಾವತಿ ಮಾಡಬೇಕಾ ಗುವುದು. ಬಡ್ಡಿದರ ಬ್ಯಾಂಕ್‌ನಿಂದ ಬ್ಯಾಂಕ್‌ಗೆ ಬೇರೆ ಬೇರೆಯಾಗಿರುವುದು.

❒ ಸಾಲಕ್ಕೆ ಆಧಾರ (Collateral Security)

ಬ್ಯಾಂಕ್ ನೀಡುವ ಸಾಲಕ್ಕೆ ಶೇ. 100 ರಷ್ಟು ಆಧಾರ ನೀಡಬೇಕಾಗುವುದು. ಸ್ಥಿರಾಸ್ತಿ, ಸೆಕ್ಯುರಿ ಟಿಸ್‌ಗಳನ್ನು (ಬ್ಯಾಂಕ್‌ನಿಂದ ಅಂಗೀಕಾರ ಪಡೆ ದಂತವು ಮಾತ್ರವೇ) ಸಾಲಕ್ಕೆ ಆಧಾರವಾಗಿ ನೀಡ ಬಹುದು. ಇಂದಿರಾ ವಿಕಾಸ ಪತ್ರ N.S. Certificate, Kissan Vikas ಪತ್ರ, ಇತ್ಯಾದಿ ಗಳು ಆಧಾರವಾಗಿ ಸಾಲಕ್ಕೆ ನೀಡಬಹುದು. ಆದರೆ ಅಂತಿಮ ನಿರ್ಧಾರ ಬ್ಯಾಂಕ್‌ಗಳಿಗೆ ಬಿಟ್ಟಿದ್ದು.

ಸಾಲ ಪಡೆಯುವ ಬ್ಯಾಂಕ್‌ನಲ್ಲಿರುವ Fixed Depositಗಳನ್ನು ಆಧಾರವಾಗಿ ನೀಡಬಹುದು. N.B.F.C.ಗಳ (ಬ್ಯಾಂಕಿಗೇತರ ಹಣಕಾಸು ಸಂಸ್ಥೆಗಳು) ಡಿಪಾಸಿಟ್‌ಗಳನ್ನು ಆಧಾರವಾಗಿ ನೀಡಲುಬಾರದು.

ಮನೆಯನ್ನು ಆಧಾರವಾಗಿಟ್ಟು ಸಾಲ ಪಡೆಯ ಬಹುದಾದರೂ ಇದು ತುಸು ಸಮಯವನ್ನು ತೆಗೆದುಕೊಳ್ಳುವುದು. ಬ್ಯಾಂಕ್ ನಿಮ್ಮ ಮನೆಗೆ ಬೆಲೆ ನಿರ್ಧರಿಸಿದ ನಂತರವೇ ಸಾಲ ಮಂಜುರಾಗು ವುದು. ಇದಕ್ಕೆ ತಗಲುವ ಖರ್ಚನ್ನು ಸಹ ನೀವೇ ಭರಿಸಬೇಕಾಗುತ್ತದೆ. (ಸಾಧಾರಣವಾಗಿ 5000 ರೂ. ಹಾಗು ಅದಕ್ಕೂ ಮೇಲ್ಪಟ್ಟು ಹಣ ಖರ್ಚಾಗುತ್ತದೆ).

ವಿಮೆ ಪಾಲಿಸಿ, 'A' ಗ್ರೂಪಿನ ಶೇರುಗಳು, ಮ್ಯೂಚ್ಯುವಲ್ ಫಂಡ್ ಯೂನಿಟ್‌ಗಳು, U.T.Iನ ಯೂನಿಟ್‌ಗಳನ್ನು ಸಹ ಸಾಲಕ್ಕೆ ಆಧಾರ ವಾಗಿ ನೀಡಬಹುದಾಗಿದೆ. IDBI, ICICI ಮುಂತಾದ ಪ್ರತಿಷ್ಠಿತ ಸಂಸ್ಥೆಗಳ ಬಾಂಡ್‌ಗಳನ್ನು ಸಹ ಸಾಲಕ್ಕೆ ಆಧಾರವಾಗಿ ಕೆಲವು ಬ್ಯಾಂಕ್‌ಗಳು ಸ್ವೀಕರಿಸುತ್ತವೆ.

ಇಂತಹ ಶೇರು ಹಾಗು ಬಾಂಡ್‌ಗಳ ಮಾರು ಕಟ್ಟೆ ಬೆಲೆಯ 50 ರಿಂದ 60 ಪ್ರತಿಶತದಷ್ಟು ಮಾತ್ರವೇ ಸಾಲಕ್ಕೆ ಆಧಾರವಾಗಬಲ್ಲದು. ಇಲ್ಲೊಂದು ಕಿವಿ ಮಾತು, ಸಾಲಕ್ಕೆ ಆಧಾರವಾಗಿ ಹಲ ವಾರು ಕಂಪನಿಗಳ ಶೇರು ಮತ್ತು ಬಾಂಡ್ ಇತ್ಯಾದಿಗಳನ್ನು ನೀಡುವುದು ಅಷ್ಟೊಂದು ಒಳ್ಳೆಯ ಐಡಿಯಾ ಅಲ್ಲ. ಕಾರಣವೇನೆಂದರೆ ಸಾಲ ನೀಡುವ ಬ್ಯಾಂಕು, ನೀವು ನೀಡುವ ಷೇರು ಪತ್ರ ವಿತರಿಸಿದ ಸಂಸ್ಥೆಯೊಂದಿಗೆ ಪತ್ರ ವ್ಯವಹಾರ ಮಾಡಿ ಸಾಲ ನೀಡುವುದು. ಇದು ವಿಳಂಬಕ್ಕೆ ಎಡೆಮಾಡಿ ಕೊಡುವುದು.

Citibank ಜಾರಿಗೆ ತಂದಿರುವ ಯೋಜನೆ ಯಂತೆ ಕೇವಲ ಒಬ್ಬ ಗ್ಯಾರೆಂಟರನ್ನು ನೀಡಿದರೆ ಸಾಕು. ಸಾಲ ಮಂಜೂರು ಮಾಡಿಸಿಕೊಳ್ಳಲು ಪಾಲಕ ಅಥವಾ ಪೋಷಕರು ಗ್ಯಾರೆಂಟರ್ ಆಗಿ ನಿಲ್ಲಬಹುದು. ಸಾಲಕ್ಕೆ (Collateral Security) ಅಗತ್ಯವೇನಿಲ್ಲ.

ಗ್ಯಾರೆಂಟರ್ ಪೋಸ್ಟ್ ಡೇಟೆಡ್ (Post dated) ಚೆಕ್‌ಗಳನ್ನು ನೀಡಬೇಕಾಗುವುದು.

❒ Stanchart Saving plans

ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಸಹ ವಿಶೇಷ ಯೋಜನೆಯೊಂದನ್ನು ಜಾರಿಗೊಳಿಸಿದೆ. ಈ ಯೋಜನೆಯಲ್ಲಿ ಸಾಲ ಪಡೆಯಲು ನಿಮಗೆ 26 ವರ್ಷಕ್ಕಿಂತಲೂ ಹೆಚ್ಚಾಗಿ ವಯಸ್ಸಾಗಿರಬೇಕು. ಅದಕ್ಕಿಂತ ಕೆಳಗಿನ ವಯಸ್ಸಿನವರಿಗೆ ಪಾಲಕರ ಹೆಸರಿನಲ್ಲಿ ಸಾಲ ನೀಡಬಹುದಾಗಿದೆ. ಇಲ್ಲಿನ ವೈಶಿಷ್ಟವೇನೆಂದರೆ, ಸಾಲ ಪಡೆಯುವ ಮುನ್ನ ಬ್ಯಾಂಕಿನಲ್ಲಿ ನೀವು ಉಳಿತಾಯ ಮಾಡಬೇಕಾ ಗುತ್ತದೆ ಹಾಗು ಈ planನ ಕೊನೆಯಲ್ಲಿ ನೀವು ಉಳಿಸಿದ ಒಟ್ಟು ಹಣದ ಶೇ. 30ರಷ್ಟು ಸಾಲವಾಗಿ ಪಡೆಯಲು ಅರ್ಹರು. ಇಲ್ಲಿ ಬಡ್ಡಿ ದರ ಶೇ. 11ರಿಂದ 14ರಷ್ಟಿದೆ... ನಿಮ್ಮ ಉಳಿತಾಯ ಅವಧಿ 3 ರಿಂದ 5 ವರ್ಷಗಳಾಗಿರಬಹುದು.

❒ ಮಂಜೂರಾತಿಗೆ ಕಾಲಾವಕಾಶ

ರಾಷ್ಟ್ರೀಕೃತ ಬ್ಯಾಂಕ್‌ಗಳು 3 ರಿಂದ 4 ವಾರಗಳ ಕಾಲಾವಕಾಶವನ್ನು ತೆಗೆದುಕೊಳ್ಳುತ್ತವೆ. ನೀವು ಸಲ್ಲಿಸಬೇಕಾದ ಆಧಾರದ ಕಾಗದ ಪತ್ರ ಹಾಗು ಇನ್ನಿತರ ದಾಖಲೆಗಳು ಸಂಪೂರ್ಣವಾಗಿದೆಯೋ ಇಲ್ಲವೋ ಮತ್ತು ಸರಿಯಾಗಿದೆಯೋ ಇಲ್ಲವೇ ಎನ್ನುವುದನ್ನು ಖಾತರಿ ಪಡಿಸಿಕೊಂಡು ಸಾಲಕ್ಕೆ ಅರ್ಜಿ ಹಾಕಿ. ಇಲ್ಲವಾದಲ್ಲಿ ಬ್ರಾಂಚ್ ಆಫೀಸು ಅದನ್ನು ಹೆಡ್ ಆಫೀಸಿಗೆ ಕಳುಹಿಸಿ ಮಂಜೂರಾತಿ ಪಡೆಯಬೇಕಾದ ಪ್ರಮೇಯಯುಂಟಾಗಿ ನಿಮ್ಮನ್ನು ಚಿಂತೆಗೆ ಈಡು ಮಾಡಬಹುದು. ಕೆಲವೊಮ್ಮೆ ಅರ್ಜಿಯು ವಾಪಸಾಗುವ ಸಾಧ್ಯತೆಗಳೂ ಇವೆ.

ಹಾಗಿದ್ರೆ ನೀವೆಲ್ಲ ವಿದ್ಯಾಭ್ಯಾಸ ಸಾಲವೆಂಬ ಲಕ್ಷ್ಮಿಯ ಕೃಪೆ ಪಡೆದು ಸರಸ್ವತಿಯ ಆರಾಧನೆಗೆ ತೊಡಗಲು ರೆಡಿಯಾ? ನಿಮಗೆ ಯಶ ಲಭಿಸಲಿ. ಆದರೆ ಸಾಲ ಮರುಪಾವತಿ ಮಾತ್ರ ಮರೆಯ ಬೇಡಿ. ಯಾಕೆಂದರೆ ನಿಮ್ಮಂತೆ ಅಗತ್ಯವಿರುವ ಇನ್ನಿತರರಿಗೂ ಅವಕಾಶ ಲಭಿಸಬೇಕಲ್ಲವೇ?

■ ನಾರಾಯಣ ಎಂ. ಭಟ್

ಸಂಕ್ರಮಣ ಸಾಹಿತ್ಯ ಸ್ಪರ್ಧೆ: ಫಲಿತಾಂಶ

1998ರ ಸಂಕ್ರಮಣ ಸಾಹಿತ್ಯ ಸ್ಪರ್ಧೆಯಲ್ಲಿ 'ಸಣ್ಣ ಕಥೆ' ವಿಭಾಗದಲ್ಲಿ ಸಾಗರದ ಡಾ. ಜಿ.ಎಸ್. ಭಟ್ ಅವರ 'ಷೋಕಿ ಕುಪ್ಪನ ಬಾಕೀ ಇತಿಹಾಸ' ಮತ್ತು ಬೆಂಗಳೂರಿನ ಸರಸ್ವತಿ ದು ಅವರ 'ಪ್ರಕೃತಿ ಹೂಡಿದ ನಾಟಕ' ಕಥೆಗಳು ಬಹುಮಾನ ಪಡೆದಿದ್ದು, ಲಲಿತ ಪ್ರಬಂಧ ವಿಭಾಗದಲ್ಲಿ ಚಿತ್ರದುರ್ಗದ ಟಿ.ಆರ್. ರಾಧಾಕೃಷ್ಣ ಅವರ 'ನುಡಿವೆಣ ನಡೆವೆಣ ಬಾಳ್ವೆಣ ಮತ್ತು ಸ್ಮಶಾನ' ಎಂಬ ಪ್ರಬಂಧ ಬಹುಮಾನ ಗಳಿಸಿದೆ.

ಕಾವ್ಯ ವಿಭಾಗದಲ್ಲಿ ಬಹುಮಾನ ಪಡೆದ ಕವಿಗಳು: ಅರವಿಂದ ಮುದ್ಗಲೆ, ಯು.ವಿ. ತಾರಿಣಿರಾವ್, ಕೆ.ಪಿ. ನಟರಾಜ್, ಯಲಗುರೇಶ ಸಂಕನಾಳ, ರಾ. ರಮಾಕಾಂತ, ಟಿ.ಎಸ್. ರಾಜೇಂದ್ರ ಪ್ರಸಾದ, ರೇವಣಸಿದ್ಧ ಪೂಜಾರ, ಲತಾ ರಾಜಶೇಖರ, ಸಿ.ವಿ. ಶೇಷಾದ್ರಿ ಮತ್ತು ಸಾಗವಾನಿ ಸತೀಶ್.

ಹನಿಗವನ ವಿಭಾಗದಲ್ಲಿ ನಾಡಿನ ಬೇರೆ ಬೇರೆ ಭಾಗಗಳ ಇಪ್ಪತ್ತೈದು ಕವಿಗಳು ಬಹುಮಾನ ಗಳಿಸಿದ್ದಾರೆ. ಬಹುಮಾನಿತ ಬರಹಗಳು ಸಂಕ್ರಮಣ ಪತ್ರಿಕೆಯ ನವೆಂಬರ್ ಡಿಸೆಂಬರ್ 1998ರ ಸಂಯುಕ್ತ ಸಂಚಿಕೆಯಲ್ಲಿ ಪ್ರಕಟವಾಗಲಿವೆ.

ನೀವೂ ಇಂಗ್ಲಿಷ್ ಕಲಿಯಿರಿ | ಭಾಗ-12

ಸಾಮಾನ್ಯರೂ ಸುಲಭವಾಗಿ ಇಂಗ್ಲಿಷ್ ಕಲಿಯಬಹುದಾದ ಸರಳ ಮಾರ್ಗ ಇಲ್ಲಿದೆ

(ಹಿಂದಿನ ಸಂಚಿಕೆಯಿಂದ)

ಕ್ರಿಯಾಪದ - Verb

ಜಾನ್ : ಇವತ್ತು ಏನು ಕಲಿಯುವುದು ಅದೆ?

ಜಾನಕಿ : ನೀನು ಎಂತಹ ಮಾಸ್ತರಪಾ. ಕ್ರಿಯಾಪದಗಳ ವಿವಿಧ ರೂಪಗಳನ್ನು ಕಲಿಸಿ ಮತ್ತು ಪ್ರಮುಖವಾಗಿ ಮೂರು ಕಾಲ (Tenses)ಗಳನ್ನು ಕಲಿಸಿ. ವಿವಿಧ ಕಾಲಗಳನ್ನು ಒಟ್ಟು 12 ಕಲಿಸುವುದಾಗಿ ಹೇಳಿದ್ದೆ?

ಜಾನ್ : Correct. ಏಕಪಾಠಿ ಅಂದದ್ದು ಸರಿ.ಇರಲಿ. Infinitive Verb, Participle, Strong and Weak Verb ಕಲಿತೆವು. ಈಗ ಇನ್ನೆರಡು ಪ್ರಮುಖ ಕ್ರಿಯಾಪದಗಳ ರೂಪಗಳನ್ನು ಕಲಿಯುವುದು ಅವಶ್ಯಕ.

ಜಾನಕಿ : ಈಗ ಯಾಕೆ ನೆನಪಾಯಿತು ನಿನಗೆ!

ಜಾನ್ : ನಮ್ಮ ವಿದ್ಯಾರ್ಥಿಗಳು, ಅಂದರೆ ಇಂಗ್ಲಿಷ್ ಕಲಿಯುವವರು, ಏನು ತಪ್ಪು ಮಾಡ್ತಾರೆ ಅಂದರೆ, ಒಂದು ವಾಕ್ಯದಲ್ಲಿ ಎರಡು Finite Verb ಉಪಯೋಗಿಸುತ್ತಾರೆ. ಅವರಿಗೆ ಗೊತ್ತಿಲ್ಲದ್ದಕ್ಕೆ, ಉದಾ. **I am go** ಇದು ತಪ್ಪು.

ಜಾನಕಿ : ಇಂತಹವುಗಳನ್ನು ಮೊದಲು ಹೇಳು. ಅಂದರೆ ನಾವು ಸರಿಯಾಗಿ ಕಲಿಯುತ್ತೇವೆ.

ಜಾನ್ : ಇಲ್ಲೊಂದು ಮೂಲ ರೂಪ ಅದೆ- 'To be' ಇರು. To be- ವಿವಿಧ ಕಾಲದಲ್ಲಿ, ವಚನದಲ್ಲಿ, ವಿವಿಧ ಪುರುಷದಲ್ಲಿ ಹೇಳುವ ರೂಪ ತಿಳಿಯಬೇಕು ಮತ್ತು ಅದರ ಜೊತೆ ಬೇರೆ Finite Verb ಉಪಯೋಗಿಸಬಾರದು.

ಜಾನಕಿ : ವಿವರಿಸಿ ಹೇಳು. ಆಗ ತಿಳಿಯುತ್ತದೆ.

ಜಾನ್ : To be ಇರು. (ಮೂಲರೂಪ)

PRESENT TENSE-ವರ್ತಮಾನ ಕಾಲ

	ಏಕವಚನ (Singular)	ಬಹುವಚನ (Plural)
First Person	I am ನಾನು ಇದ್ದೇನೆ	We are ನಾವು ಇರುತ್ತೇವೆ.
Second Person	You are ನೀನು ಇರುತ್ತೀ	You are ನೀವು ಇರುತ್ತೀರಿ
Third Person	He is (ಇರುತ್ತಾನೆ)	They are (ಇರುತ್ತಾರೆ)
	She is (ಇರುತ್ತಾಳೆ)	They are (ಇರುತ್ತಾರೆ)
	It is (ಇರುತ್ತದೆ)	They are (ಇರುತ್ತವೆ)

ದಪ್ಪ ಅಕ್ಷರದ ಶಬ್ದಗಳು To be ಇದರ ಆಯಾ ಪುರುಷ, ವಚನಗಳಲ್ಲಿಯ ರೂಪಗಳು ಮತ್ತು ಇವು finite Verb

PAST TENSE-ಭೂತಕಾಲ

F.P	I **was** (ಇದ್ದೆ)	We **were** (ಇದ್ದೇವು)
S.P	You **were** (ಇದ್ದಿ)	You **were** (ಇದ್ದಿರಿ)
T.P	He **was** (ಇದ್ದನು)	They **were** (ಇದ್ದರು)
	She **was** (ಇದ್ದಳು)	They **were** (ಇದ್ದರು)
	It **was** (ಇತ್ತು)	They **were** (ಇದ್ದವು)

FUTURE TENSE -ಭವಿಷ್ಯತ್ಕಾಲದಲ್ಲಿ

ಜಾನ್ : ಸಾಮಾನ್ಯವಾಗಿ ಇಲ್ಲಿ 'Shall' 'Will' ಉಪಯೋಗಿಸುತ್ತೇವೆ. ಅರ್ಥ ಸ್ವಲ್ಪ ಬದಲಾವಣೆಯಾದರೂ ಈ ಪದಗಳು ಭವಿಷ್ಯತ್ಕಾಲ ಸೂಚಕ.

	(Singular)	(Plural)
F.P	I **shall be** (ಇರುವೆನು)	We **shall** be(ಇರುವೆವು)
S.P	You **will be**(ಇರುವಿ)	You **will** be (ಇರುವಿರಿ)
T.F.	He **will be**(ಇರುವನು)	They **will be** (ಇರುವರು)
	She **will be**(ಇರುವಳು)	They **will be** (ಇರುವರು)
	It **will be** (ಇರುವುದು)	They **will be** (ಇರುವವು)

ಇಲ್ಲಿ ಕ್ರಿಯಾಪದಗಳು ದಪ್ಪ ಅಕ್ಷರದಿಂದ ಕೂಡಿವೆ. ಅವು Finite Verb. ಸ್ಮರಣೆಯಲ್ಲಿರಲಿ.

ಜಾನಕಿ : ಎಷ್ಟು ಸಲ ಹೇಳ್ತಿ..?

ಜಾನ್ : ಅದು ಭಾರಿ ಮಹತ್ವದು. ಮೇಲ್ನೋಟಕ್ಕೆ ಅನ್ನಿಸಲಿಕ್ಕಿಲ್ಲ. ಆದರೆ ತಪ್ಪು ಮಾಡುವುದು ಇಲ್ಲೆ.

ಜಾನಕಿ : ಮೂಲ ರೂಪ To be -ಇದರ ವಿವಿಧ ರೂಪ ಸಂಕ್ಷಿಪ್ತದಲ್ಲಿ ಹೇಳು.

ಜಾನ್ :

	ಏಕವಚನ	ಬಹುವಚನ
ವರ್ತಮಾನ ಕಾಲದಲ್ಲಿ	am/is	are
ಭೂತಕಾಲದಲ್ಲಿ	were/was	were
ಭವಿಷ್ಯತ್ಕಾಲದಲ್ಲಿ	shall be will be	shall be will be

(am, are, is, was, were, shall be, will be) ಸರಿ..

ಜಾನಕಿ : To be ಇದು ಮೂಲ ರೂಪಾನು ಹೌದು ಮತ್ತು Infinitive ಹೌದು? ಆದರೆ Participle.

ಜಾನ್ : ಕ್ರಿಯಾಪದದ ಮೂಲ ರೂಪಕ್ಕೆ -ing ಪ್ರತ್ಯಯ ಹಚ್ಚಿದರೆ ಅದು participle ಆಗುವುದು ಅಂತಾ ಹೇಳಿದ್ದು... ? ಅದೇ ರೀತಿ

To be - **being**
To stand - **standing**
To go - **going**

ಜಾನಕಿ : ಕ್ರಿಯಾಪದಗಳು ಮುಗಿದ ಹಾಗಿದೆ?

ಜಾನ್ : ಬರೇ... ಅವಸರ. ಅಭ್ಯಾಸ ಮಾಡುವಾಗ, ಊಟ ಮಾಡುವಾಗ... ಅವಸರ ಮಾಡೋದು ಸರಿ ಅಲ್ಲ. ಇನ್ನೊಂದು ಅದೆ. ಬಹಳ easy ಅದೆ... ನೀನೇ ಹೇಳು 'ನನಗೆ ಎರಡು ಕೈಗಳಿವೆ.' 'ನನ್ನಲ್ಲಿ ಎಂಟು ಸೀರೆಗಳಿವೆ..'

ಜಾನಕಿ : ಈ ರೀತಿ ಕ್ರಿಯಾಪದ ಮೊದಲು ಹೇಳು, ಆ ಮೇಲೆ.

ಜಾನ್ : I **have** two hands.

I **have** eight sarees.

ಇಲ್ಲಿ ಉಪಯೋಗಿಸಿದ ಕ್ರಿಯಾಪದ **'Have'** ಇದರ ಮೂಲರೂಪ **To have** - ಬಳಿಗೆ ಇರು, ಹತ್ತಿರ ಇರು. ಇದರ ರೂಪಗಳನ್ನು, ವಿವಿಧ ಕಾಲ, ವಚನ, ಪುರುಷಗಳಲ್ಲಿ ಕಲಿತರಾಯಿತು.

PRESENT TENSE

	Singular	Plural
First person	I **have** a book ನನ್ನ ಬಳಿ ಒಂದು ಪುಸ್ತಕವಿದೆ.	We **have** a book ನಮ್ಮ ಬಳಿ ಒಂದು ಪುಸ್ತಕವಿದೆ.
Second Person	You **have**	You **have**
Third person	He **has**	They **have**
	She **has**	They **have**
	It **has**	They **have**

ವಿಶೇಷ ಸೂಚನೆ : ವರ್ತಮಾನ ಕಾಲ third person ಏಕವಚನದಲ್ಲಿ ಮಾತ್ರ **'has'** ರೂಪ ಮತ್ತು ಉಳಿದೆಲ್ಲ ಕಡೆಗೆ **'have'** ರೂಪ ಉಪಯೋಗಿಸುವುದು.

PAST TENSE

F.P.	I **had**	We **had**
S.P.	You **had**	You **had**
T.P	He **had**	They **had**
	She **had**	They **had**
	It **had**	They **had**

ವಿ.ಸೂ. ಎಲ್ಲ ಕಡೆಗೆ **had** ರೂಪ ಬರುವುದು.

FUTURE TENSE

ವಿ.ಸೂ. ಇಲ್ಲಿ ಕ್ರಿಯಾಪದದ ಮೂಲ ರೂಪ ಅಂದರೆ **'have'** ಬರುವುದು.

F.P.	I **shall have**	We **shall have**
S.P.	You **will have**	You **will have**
T.P.	He **will have**	They **will have**
	She **will have**	They **will have**
	It **will have**	They **will have**

ಜಾನಕಿ : ಇದೇನೊ very easy ಅದೆ. ಅಂತೂ ಇಷ್ಟು ಬಂದರೆ ಇಂಗ್ಲಿಷ್ ಬಂದ್ಹಂಗೆ...

ಜಾನ್ : ವಿವಿಧ ಕಾಲಗಳ ರೂಪ ತಿಳಿಯಬೇಕು. ಅದಕ್ಕೂ ಮೊದಲು ಒಂದು ವಿಷಯ. 'ಷಷ್ಠಿ ವಿಭಕ್ತಿ' Possessive case ಬಹಳ ಮಹತ್ವದ್ದು. ಕನ್ನಡದಲ್ಲಿ ಹೇಳುವುದು ..

ಪುಸ್ತಕದ ಪುಟಗಳು, ಮನೆಯ ಬಾಗಿಲು,
ಪುರುಷನ ಗಾಡಿ, ನಾಯಿಯ ಬಾಲ,

ಇಲ್ಲಿ -ದ, -ಯ, -ನ, -ಯ ಇವುಗಳಿಗೆ ಸಾಮಾನ್ಯವಾಗಿ ಇಂಗ್ಲಿಷ್‌ನಲ್ಲಿ - of ಉಪಯೋಗಿಸುವುದು.

ಉದಾ. 1. Pages of book
2. Door of house
3. Vehicle of man
4. Tail of dog.

ಇದರಲ್ಲಿ (3) (4) ಇನ್ನೊಂದು ರೀತಿ ಹೇಳಬಹುದು.

Man's Vehicle. Dog's tail.

ಇದಕ್ಕೆ Apostrophe-s ಅಂತಾರೆ. ಸಜೀವ ವಸ್ತುಗಳಿಗೆ ಮಾತ್ರ Apostrophe-s ಹಚ್ಚಬೇಕು. (Book's page ಇದು ತಪ್ಪು ಯಾಕೆಂದರೆ book ನಿರ್ಜೀವ). ಏಕವಚನದಲ್ಲಿ Apostrophe's ಹೀಗೆ, ಬಹುವಚನದಲ್ಲಿ -s' ಹೀಗೆ ಬರೆಯಬೇಕು. ಸಜೀವ ಇದ್ದಲ್ಲಿ of ಮತ್ತು Apostrophes ಎರಡೂ ಉಪಯೋಗಿಸಬಹುದು.

ಉದಾ. ಏಕವಚನ ಬಹುವಚನ
Dog's Tail **Dogs'** tails.(Tails of Dogs)

Apostrophe ಗುರ್ತು ಇಲ್ಲಾ ಅಂದರೆ ಅದು ಬಹುವಚನದಲ್ಲಿದೆ ಅಂತಾ ತಿಳಿ. ಉದಾ. Dogs, Books.

ಕೊನೆ ಹನಿ

ಜಾನ್ : ಹಾಗಾದರೆ ತಪ್ಪು ಸರಿ ಹೇಳು.

1) Friend's Pen 2) Pen's nib
3) Mayor's gown 4) Coat's Button
5) Door of Window

ಜಾನಕಿ : (1), (3), (5) ಇವು ಸರಿ ಮತ್ತು (2), (4) ಇವು ತಪ್ಪು.

ಶಬ್ದ ಸಂಪತ್ತು

ಪ್ರತಿ ಶಬ್ದಕ್ಕೆ 4 ಅರ್ಥಕೊಟ್ಟಿದ್ದು, ಕೊಟ್ಟ ಶಬ್ದದ ಸಮಾನಾರ್ಥ ಪದ ಹುಡುಕಿರಿ, ನಂತರ ಉತ್ತರ ನೋಡಿ.

a. Certain - ಅ. ನಿಶ್ಚಿತ ಬ. ಪರದೆ
ಕ. ಶುದ್ಧ ಡ. ಪರಿಚಿತ

b. Distinct - ಅ. ಭಿನ್ನವಾದ ಬ. ಸ್ಪಷ್ಟ
ಕ. ಬೇರೆ ಬೇರೆ ಡ. ದೂರ

c. Accurate - ಅ. ಸಂಗ್ರಹಾಲಯ ಬ. ಸೂಕ್ಷ್ಮ
ಕ. ಸರಿಯಾದ ಡ. ಶಿಸ್ತು

d. Metal - ಅ. ಲೋಹ ಬ. ಶಕ್ತಿ
ಕ. ಬುದ್ಧಿ ಡ. ಯಾವುದೂ ಅಲ್ಲ

e. Mortal - ಅ. ನೀತಿ ಬ. ಅನೀತಿ
ಕ. ಶವಾಗಾರ ಡ. ಮರಣಾಧೀನ

ಉತ್ತರಗಳು :

a. ಅ b. ಬ c. ಕ d. ಅ e. ಡ

ಅಂಚೆ ತೆರಪಿನ ಶಿಕ್ಷಣ

ಪಾಂಡಿಚೆರಿ ವಿಶ್ವವಿದ್ಯಾಲಯದ ವಿವಿಧ ಕೋರ್ಸುಗಳು



ಪಾಂಡಿಚೆರಿ ನಮ್ಮ ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಂದು. ಪಾಂಡಿಚೆರಿಯೆಂದರೆ ಸರ್ವರಿಗೂ ನೆನಪಾಗುವುದು ಅರವಿಂದ ಮಹರ್ಷಿಗಳ ಆಶ್ರಮ. ಆಧ್ಯಾತ್ಮಿಕ ಸಾಧನೆಗೆ ಈ ಆಶ್ರಮ ದಾರಿದೀಪವಾದರೆ ವಿದ್ಯಾಕಾಂಕ್ಷಿಗಳಿಗೆ, ದಾರಿದೀಪ ತೋರುವ ಭವ್ಯ ವಿಶ್ವವಿದ್ಯಾಲಯವೂ ಇಲ್ಲಿದೆ. ಅದೇ ಪಾಂಡಿಚೆರಿ ವಿಶ್ವವಿದ್ಯಾಲಯ. ಈ ವಿಶ್ವವಿದ್ಯಾಲಯ 1985ರ ಅಕ್ಟೋಬರ್‌ನಲ್ಲಿ ಪ್ರಾರಂಭವಾಯಿತು. ಯು.ಜಿ.ಸಿ.ಯಿಂದ ಅನುಮೋದನೆ ಪಡೆದಿರುವ ಈ ವಿಶ್ವವಿದ್ಯಾಲಯ ಕಾಮನ್‌ವೆಲ್ತ್ ವಿಶ್ವವಿದ್ಯಾಲಯಗಳ ಸಂಘದ ಸದಸ್ಯ ಕೂಡಾ. ಅಂಚೆ ತೆರಪಿನ ಶಿಕ್ಷಣಕ್ಕೊಂದು ಹೊಸ ಆಯಾಮ ನೀಡಿದ ಈ ವಿಶ್ವವಿದ್ಯಾಲಯ ದೇಶಾದ್ಯಂತ 14 ಅಧ್ಯಯನ ಕೇಂದ್ರಗಳನ್ನು ಹೊಂದಿದೆ.

➢ ಲಭ್ಯವಿರುವ ಪದವಿ ಕೋರ್ಸುಗಳು

ಬ್ಯಾಚುಲರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ (ಬಿ.ಬಿ.ಎ), ಬ್ಯಾಚುಲರ್ ಆಫ್ ಕಾರ್ಪೊರೇಟ್ ಸೆಕ್ರೆಟರಿಶಿಪ್ (ಬಿ.ಸಿ.ಎಸ್) ಹಾಗು ಬ್ಯಾಚುಲರ್ ಆಫ್ ಕಾಮರ್ಸ್ (ಬಿ.ಕಾಂ).

ಈ ಕೋರ್ಸುಗಳಿಗೆ ಸೇರಲಿಚ್ಛಿಸುವವರು ಪಿ.ಯು.ಸಿ. ಪರೀಕ್ಷೆಯಲ್ಲಿ ಪಾಸಾಗಿರಬೇಕು ಅಥವಾ 3 ವರ್ಷದ ಡಿಪ್ಲೊಮಾ ಪರೀಕ್ಷೆಯಲ್ಲಿ ಪಾಸಾಗಿರಬೇಕು.

ಕೋರ್ಸಿನ ಕಾಲಾವಧಿ ಮೂರು ವರ್ಷಗಳಾಗಿರುತ್ತದೆ.

➢ ಸ್ನಾತಕೋತ್ತರ ಪದವಿ ಕೋರ್ಸುಗಳು

ಮಾಸ್ಟರ್ ಆಫ್ ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್, ಮಾಸ್ಟರ್ ಆಫ್ ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್, ಮಾಸ್ಟರ್ ಆಫ್ ಫಾರಿನ್ ಟ್ರೇಡ್ (ಎಂ.ಎಫ್.ಟಿ) ಮಾಸ್ಟರ್ ಆಫ್ ಎಜುಕೇಷನ್ (ಎಂ.ಎಡ್), ಮಾಸ್ಟರ್ ಆಫ್ ಆರ್ಟ್ಸ್ ಇನ್ ಹಿಸ್ಟರಿ, ಹಿಂದಿ, ಸೋಷಿಯಾಲಜಿ.

➢ ಎಂ.ಎಂ.ಎಂ, ಎಂ.ಎಫ್.ಎಮ್ ಹಾಗು ಎಂ.ಎಫ್.ಟಿ. ಕೋರ್ಸುಗಳು

ಈ ಮೇಲಿನ ಕೋರ್ಸುಗಳನ್ನು ಮಾಡಲಿಚ್ಛಿಸುವವರು ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವೀಧರರಾಗಿರಬೇಕು.

ಯು.ಜಿ.ಸಿಯಿಂದ ಅನುಮೋದಿಸಲ್ಪಡದ ಕಾಲೇಜುಗಳಲ್ಲಿ ಪದವಿ ಪಡೆದವರ ಅರ್ಜಿಯನ್ನು ಅಂಗೀಕರಿಸಲಾಗುವುದಿಲ್ಲ.

➢ ಕಾಲಾವಧಿ

ಈ ಕೋರ್ಸುಗಳ ಕಾಲಾವಧಿ ಎರಡು ವರ್ಷಗಳು. ಕೇವಲ ಇಂಗ್ಲಿಷ್ ಮಾಧ್ಯಮ ಮಾತ್ರ ಲಭ್ಯ.

➢ ಎಂ.ಎಡ್. ಕೋರ್ಸು

ಈ ಕೋರ್ಸು ಮಾಡಲಿಚ್ಛಿಸುವವರು ಅಂಗೀಕೃತ ವಿಶ್ವವಿದ್ಯಾಲಯದ ಬಿ.ಎಡ್. ಪರೀಕ್ಷೆ ಅಥವಾ ಪದವೀಧರರಾಗಿರಬೇಕು.

ಈ ಕೋರ್ಸು ಒಂದು ಶೈಕ್ಷಣಿಕ ಕಾಲಾವಧಿಯದಾಗಿರುತ್ತವೆ.

➢ ಇನ್ನುಳಿದ ಸ್ನಾತಕೋತ್ತರ ಕೋರ್ಸುಗಳು

ಈ ಕೋರ್ಸುಗಳಿಗೆ ಅಭ್ಯರ್ಥಿಗಳು ಅಂಗೀಕೃತ ವಿಶ್ವವಿದ್ಯಾಲಯಗಳ ಪದವೀಧರರಾಗಿರಬೇಕು.

ಈ ಕೋರ್ಸುಗಳು ಎರಡು ವರ್ಷದ ಕಾಲಾವಧಿಯದಾಗಿರುತ್ತದೆ.

➢ ಪೋಸ್ಟ್ ಗ್ರಾಜ್ಯುಯೇಟ್ ಡಿಪ್ಲೊಮಾ ಕೋರ್ಸುಗಳು

ಪೋಸ್ಟ್ ಗ್ರಾಜ್ಯುಯೇಟ್ ಡಿಪ್ಲೊಮಾ ಇನ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್, ಇಂಟರ್‌ನ್ಯಾಷನಲ್ ಮ್ಯಾನೇಜ್‌ಮೆಂಟ್, ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್, ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್, ಪೋರ್ಟ್ ಫೋಲಿಯೋ ಮ್ಯಾನೇಜ್‌ಮೆಂಟ್, ಆಪರೇಷನ್ ರೀಸರ್ಚ್, ಬ್ಯಾಂಕಿಂಗ್ ಅಂಡ್ ಫೈನಾನ್ಸ್, ಹ್ಯೂಮನ್ ರಿಸೋರ್ಸ್ ಮ್ಯಾನೇಜ್‌ಮೆಂಟ್, ಟೂರಿಸಮ್ ಅಡ್ಮಿನಿಸ್ಟ್ರೇಷನ್ ಹಾಗು ಕಂಪ್ಯೂಟರ್ ಅಪ್ಲಿಕೇಷನ್ಸ್ ಈ ಕೋರ್ಸುಗಳು ಲಭ್ಯವಿವೆ.

ಈ ಎಲ್ಲಾ ಪೋಸ್ಟ್‌ಗ್ರಾಜ್ಯುಯೇಟ್ ಡಿಪ್ಲೊಮಾ ಕೋರ್ಸುಗಳಿಗೆ ಅಂಗೀಕೃತ ವಿಶ್ವವಿದ್ಯಾಲಯ ಅಥವಾ ಮುಕ್ತ ವಿಶ್ವವಿದ್ಯಾಲಯದ ಪದವಿಯನ್ನು ಪಡೆದಿರಬೇಕು.

ಈ ಕೋರ್ಸುಗಳು ಒಂದು ವರುಷದ ಕಾಲಾವಧಿಯದಾಗಿರುತ್ತದೆ.

ಕಂಪ್ಯೂಟರ್ ಅಪ್ಲಿಕೇಷನ್ಸ್ (ಪಿ.ಜಿ.ಡಿ.ಸಿ.ಎ.) ಕೋರ್ಸಿಗೆ ಮಾತ್ರ ಪದವಿ ಅಥವಾ ಎ.ಎಂ.ಐ.ಇ. ಅಥವಾ ಐ.ಇ.ಟಿ.ಇ. ಪರೀಕ್ಷೆ ಪಾಸಾದವರು ಅರ್ಹರು.

➢ಸಂಪರ್ಕ ತರಗತಿಗಳು

15 ದಿನಗಳ ಕಾಲಾವಧಿಯ ಎರಡು ಸಂಪರ್ಕ ತರಗತಿಗಳನ್ನು (Contact programme) ನಡೆಸಲಾಗುತ್ತದೆ. ವಿದ್ಯಾರ್ಥಿಗಳು ಈ ಎರಡು ಸಂಪರ್ಕ ಕಾರ್ಯಕ್ರಮಕ್ಕೆ ಕಡ್ಡಾಯವಾಗಿ ಬರತಕ್ಕದ್ದು. ಶೇ. 80ರಷ್ಟು ಹಾಜರಾತಿಯನ್ನು ಹೊಂದಲೇಬೇಕು.

➢ಕನಿಷ್ಠ ಅಂಕಗಳು

ಈ ಎಲ್ಲಾ ಪರೀಕ್ಷೆಗಳಲ್ಲಿ ಪ್ರತಿಯೊಂದು ವಿಷಯಕ್ಕೂ 100 ಅಂಕಗಳಿದ್ದು, ಅವುಗಳಲ್ಲಿ 25 ಇಂಟರ್‌ನಲ್ ಅಸೆಸ್‌ಮೆಂಟ್ ಹಾಗು 75 ಲಿಖಿತ ಪರೀಕ್ಷೆಗೆಂದು ವಿಭಾಗಿಸಲ್ಪಟ್ಟಿರುತ್ತದೆ. ಪ್ರತಿ ಪತ್ರಿಕೆಯಲ್ಲಿ 50 ಅಂಕ ಗಳಿಸಬೇಕಾದದ್ದು ಕಡ್ಡಾಯ. 13 ಅಂಕಗಳನ್ನು ಇಂಟರ್‌ನಲ್ ಅಸೆಸ್‌ಮೆಂಟ್‌ನಲ್ಲಿ ಹಾಗು 37 ಅಂಕಗಳನ್ನು ಲಿಖಿತ ಪರೀಕ್ಷೆಯಲ್ಲಿ ಪಡೆಯಲೇಬೇಕು.

ಈ ಸಂಪರ್ಕ ತರಗತಿಗಳನ್ನು ಪಾಂಡಿಚೆರಿ, ಮದ್ರಾಸ್, ಭುವನೇಶ್ವರ, ಬೆಂಗಳೂರು ಮತ್ತು ನವದೆಹಲಿ ಕೇಂದ್ರಗಳಲ್ಲಿ ನಡೆಸಲಾಗುತ್ತದೆ.

➢ಅಧ್ಯಯನ ಕೇಂದ್ರಗಳು

ಪಾಂಡಿಚೆರಿ, ಮದ್ರಾಸ್, ನವದೆಹಲಿ, ಮಧುರೈ, ಬೆಂಗಳೂರು, ಕೊಚ್ಚಿನ್, ಹೈದರಾಬಾದ್, ಭುವನೇಶ್ವರ. ಕಲ್ಕತ್ತಾ, ಪಾಟ್ನಾ, ಭೋಪಾಲ್, ಲಕ್ನೋ, ಪುಣೆ, ಗೌಹಾತಿ, ಜಮ್ಮು, ಪೋರ್ಟ್‌ಬ್ಲೇರ್ (ಅಂಡಮಾನ್ ನಿಕೋಬಾರ್), ಕೊಯಮತ್ತೂರು, ತಿರುವನಂತಪುರಂ, ವಿಶಾಖಪಟ್ಟಣಂ, ಜೈಪುರ.

ಇಷ್ಟೆಲ್ಲಾ ಕೋರ್ಸುಗಳು ಈ ವಿಶ್ವವಿದ್ಯಾಲಯದಲ್ಲಿ ಲಭ್ಯವಿವೆ. ಆಸಕ್ತ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ದಿ ಡೈರೆಕ್ಟರ್, ಡೈರೆಕ್ಟೋರೇಟ್ ಆಫ್ ಡಿಸ್ಟ್ಯಾನ್ಸ್ ಎಜುಕೇಷನ್, ಪಾಂಡಿಚೆರಿ ಯುನಿವರ್ಸಿಟಿ, ಪಾಂಡಿಚೆರಿ - 605 014 ಇವರನ್ನು ಸಂಪರ್ಕಿಸಬಹುದು. ■

ಗ್ರಾಮಾಭಿವೃದ್ಧಿ ಹಾಗು ಸ್ವ-ಉದ್ಯೋಗ ತರಬೇತಿ

ಗ್ರಾಮಾಭಿವೃದ್ಧಿ ಹಾಗು ಸ್ವ-ಉದ್ಯೋಗ ತರಬೇತಿ ಸಂಸ್ಥೆ ಅರಿಶಿನಕುಂಟೆ ನೆಲಮಂಗಲ ಇವರ ಆಶ್ರಯದಲ್ಲಿ ಬರುವ ಜನವರಿ ತಿಂಗಳಲ್ಲಿ, ಗ್ರಾಮೀಣ ನಿರುದ್ಯೋಗಿ ಯುವಕರಿಗಾಗಿ, ಹೈನುಗಾರಿಕೆ ಹಾಗೂ ರೇಷ್ಮೆ ವ್ಯವಸಾಯದ ಬಗ್ಗೆ ತಲಾ 8 ದಿನಗಳ ತರಬೇತಿಯನ್ನು ನೀಡಲಾಗುತ್ತದೆ. ತರಬೇತಿಯ ಸಮಯದಲ್ಲಿ ಉಚಿತ ಊಟ ಹಾಗೂ ವಸತಿ ವ್ಯವಸ್ಥೆ ಮಾಡಲಾಗುತ್ತದೆ.

ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಹಾಗೂ ತುಮಕೂರು ಜಿಲ್ಲೆಗಳ ಓದು ಬರಹ ಬಲ್ಲ ಆಸಕ್ತ ಯುವಕ ಯುವತಿಯರು ಸ್ವವಿವರಗಳನ್ನೊಳಗೊಂಡ ಅರ್ಜಿ ಸಲ್ಲಿಸಬೇಕಾದ ಹಾಗು ಸಂಪರ್ಕಿಸಬೇಕಾದ ವಿಳಾಸ,

ನಿರ್ದೇಶಕರು, ರುಡ್‌ಸೆಟ್ ಸಂಸ್ಥೆ,
ಚೆಕ್ ಪೋಸ್ಟ್ ಹಿಂಭಾಗ,
ಅರಿಶಿನಕುಂಟೆ,
ನೆಲಮಂಗಲ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಫೋನ್ : 08118-23166.

ಅರ್ಜಿ ಆಹ್ವಾನ

ಬರುವ ಮೇ ತಿಂಗಳಲ್ಲಿ ಕೇಂದ್ರ ಲೋಕ ಸೇವಾ ಆಯೋಗವು ನಡೆಸುವ ಪೂರ್ವಭಾವಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ (ಐ.ಎ.ಎಸ್, ಐ.ಪಿ.ಎಸ್.) ಹಾಜರಾಗುವ ಪರಿಶಿಷ್ಟರು, ಹಿಂದುಳಿದ ಹಾಗೂ ಅಲ್ಪ ಸಂಖ್ಯಾತ ವರ್ಗದ ಅಭ್ಯರ್ಥಿಗಳಿಂದ ಉಚಿತ ತರಬೇತಿಗಾಗಿ ಸಮಾಜ ಕಲ್ಯಾಣ ಇಲಾಖೆಯು ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನ ಇಂದಿರಾನಗರದಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದಲ್ಲಿ ತರಬೇತಿ ನೀಡಲಾಗುವುದು.

ಅರ್ಹರು ನಿಗದಿತ ಅರ್ಜಿಗಳನ್ನು ಪ್ರಾಚಾರ್ಯರು, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, 247, 13 ನೇ ಅಡ್ಡ ರಸ್ತೆ, 2ನೇ ಹಂತ, ಇಂದಿರಾನಗರ, ಬೆಂಗಳೂರು - 38 ಇವರಿಂದ ಖುದ್ದಾಗಿ ಅಥವಾ 4 ರೂಪಾಯಿ ಸ್ಟ್ಯಾಂಪ್ ಹಚ್ಚಿದ ಸ್ವ ವಿಳಾಸದ ಲಕೋಟೆ ಕಳಿಸಿ ಪಡೆಯಲು ಸೂಚಿಸಲಾಗಿದೆ.

ಸಮೂಹ ಗಾನ

ಕಾಲೇಜು ಯುವಕ ಯುವತಿಯರಿಗಾಗಿ ಜಾನಪದ ಸಮೂಹ ಗಾನ ಮತ್ತು ಭಾವಗೀತೆ ಸಮೂಹ ಗಾನ ಸ್ಪರ್ಧೆ ಗಾನೋತ್ಸವವನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹಾಗೂ ಜಾನಪದ ಕಲಾಕೇಂದ್ರಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಸ್ಪರ್ಧೆ ಜನವರಿ ತಿಂಗಳಲ್ಲಿ ನಡೆಯಲಿದೆ. ಹತ್ತು ಜನರ ತಂಡಗಳು ಭಾಗವಹಿಸಬಹುದು.

ಆಸಕ್ತ ತಂಡಗಳು ಅರ್ಜಿಯನ್ನು ಅಪ್ಪಗೆರೆ ತಿಮ್ಮರಾಜು, ಸಂಚಾಲಕರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು - 1, (ದೂರವಾಣಿ 2215509, 3320331) ಇವರಿಗೆ ಕಳಿಸಬೇಕು. ಸ್ಪರ್ಧೆಯ ದಿನಾಂಕ ಹಾಗೂ ಸ್ಥಳಗಳನ್ನು ನಂತರ ತಿಳಿಸಲಾಗುವುದು.

ಇಲಾಖಾ ಪರೀಕ್ಷೆಗಳಿಗೆ ಅರ್ಜಿ ಆಹ್ವಾನ

ಕರ್ನಾಟಕ ಲೋಕಸೇವಾ ಆಯೋಗದ ವಿವಿಧ ಇಲಾಖಾ ಪರೀಕ್ಷೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಸ್ವೀಕರಿಸಲು 1999ರ ಜನವರಿ 11 ಕೊನೆಯ ದಿನವಾಗಿರುತ್ತದೆ. ಸಂಬಂಧಪಟ್ಟ ಇಲಾಖಾ ಪರೀಕ್ಷೆಗಳು 1999ರ ಫೆಬ್ರವರಿ 25ರಿಂದ ನಡೆಯಲಿವೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಕೃತಿಗಳ ಆಹ್ವಾನ

1998ರಲ್ಲಿ ಪ್ರಕಟಗೊಂಡ ಜಾನಪದ ಸಾಹಿತ್ಯಕ್ಕೆ ಸಂಬಂಧಪಟ್ಟ ಸಾಹಿತ್ಯ ಕೃತಿಗಳಿಗೆ ಚಡಚಣದ ಡಾ.ಸಿಂಪಿ ಲಿಂಗಣ್ಣ ಜಾನಪದ ಅಧ್ಯಯನ ಕೇಂದ್ರದ ವತಿಯಿಂದ ಫೆಬ್ರುವರಿ 99ರಲ್ಲಿ ಪ್ರಶಸ್ತಿಯನ್ನು ನೀಡಲಾಗುತ್ತಿದ್ದು ತಮ್ಮ ಗ್ರಂಥಗಳನ್ನು ದ್ವಿಪ್ರತಿಗಳಲ್ಲಿ ಅಧ್ಯಕ್ಷರು, ಡಾ. ಸಿಂಪಿ ಲಿಂಗಣ್ಣ, ಜಾನಪದ ಅಧ್ಯಯನ ಕೇಂದ್ರ, ಚಡಚಣ - 586 205, ಜಿಲ್ಲೆ: ವಿಜಾಪೂರ ಈ ವಿಳಾಸಕ್ಕೆ ಜನವರಿ 10, 1999ರ ಒಳಗಾಗಿ ತಲುಪುವಂತೆ ಕಳಿಸಬೇಕಾಗಿ ಕೋರಲಾಗಿದೆ.

■ ಡಾ. ಎಸ್.ಸಿ. ಶರ್ಮಾ



ಮಾರ್ಗದರ್ಶಿ

ಪ್ರಾಧ್ಯಾಪಕರು,
ಆರ್.ವಿ. ಇಂಜಿನಿಯರಿಂಗ್ ಕಾಲೇಜು,
ಮೈಸೂರು ರಸ್ತೆ, ಬೆಂಗಳೂರು - 59.

ಕೆ.ಪ್ರಭಾಕರ, ಹಾರುಗೇರಿ

ನಾನು ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ತೇರ್ಗಡೆಯಾಗಿದ್ದೇನೆ. ಮುಂದೆ ನಾನು Indian Institute of Alternate Medicine ಇವರು ನಡೆಸುವ ಎರಡು ವರ್ಷದ ವೈದ್ಯಕೀಯ ಪದವಿಯನ್ನು ಅಂಚೆ ಮೂಲಕ ಮಾಡಬೇಕೆಂದಿದ್ದೇನೆ. Indian Institute of Alternative Medicine ನ BAMS ಅಂಚೆ ವಿಳಾಸ ತಿಳಿಸಿ. ಪದವಿಯ ನಂತರ IAS ಮಾಡಬಹುದೆ?

Indian Institute of Alternative Medicine, BAMSನ ಅಂಚೆ ವಿಳಾಸ ಈ ರೀತಿ ಇರುತ್ತದೆ. ಹೆಚ್ಚಿನ ಮಾಹಿತಿ ಇಲ್ಲಿಂದ ಪಡೆಯಬಹುದು.

ಪ್ರಿನ್ಸಿಪಾಲ್, ಗೌರ್ನಮೆಂಟ್ ಕಾಲೇಜ್ ಆಫ್ ಆಯುರ್ವೇದಿಕ್ ಸೈನ್ಸ್, ಆನಂದರಾವ್ ಸರ್ಕಲ್, ಬೆಂಗಳೂರು.

ಪದವಿಯ ನಂತರ IAS ಮಾಡಬಹುದು.

ಹೆಸರಿಲ್ಲ

ನಾನು ಎಸ್.ಎಸ್.ಎಲ್.ಸಿ. ಪರೀಕ್ಷೆ ಫಾರ್ಮ್ ಮತ್ತು ಸರ್ಟಿಫಿಕೇಟ್‌ನಲ್ಲಿ ಮಾಡಿದ್ದ ಸಹಿಯನ್ನೇ ಮುಂದಿನ ತರಗತಿಗೆ ಮಾಡಬೇಕೋ ಅಥವಾ ಬೇರೆ ಮಾಡಬಹುದೇ ತಿಳಿಸಿ.

ಅದೇ ಸಹಿಯನ್ನು ಮಾಡಬೇಕು. ನಿಮ್ಮ ಸಹಿ ಯಾವಾಗಲೂ ಒಂದೇ ರೀತಿ ಇರಬೇಕು.

ಕರಿಬಸಪ್ಪ ಬಿ. ಅಮರದೇವರಗುಡ್ಡ

ನಾನು ಬಿ.ಕಾಂ.ನಲ್ಲಿ ಶೇ.45 ಅಂಕಗಳೊಂದಿಗೆ ಉತ್ತೀರ್ಣನಾಗಿರುತ್ತೇನೆ. ನನಗೆ CA, ICWA, ಅಥವಾ MBA ಮಾಡಬೇಕೆಂಬ ಆಸೆ ಇದೆ. ಈ ಕೋರ್ಸ್‌ಗಳನ್ನು ಮಾಡಲು ಶೇ.50ರಷ್ಟು ಅಂಕಗಳನ್ನು ಪಡೆದಿರಬೇಕು. ರೂರಲ್‌ಕೋಟಾದ ಶೇ. 5 ಅಂಕಗಳು ಸೇರಿದರೆ, ಶೇ.50 ಅಂಕಗಳಾಗುತ್ತವೆ. ಈ ಅಂಕಗಳ ಸಹಾಯದಿಂದ CA, ICWA, MBA ಮಾಡಬಹುದೆ. ರೂರಲ್ ಅಂಕಗಳು ಯಾವ ಕೋರ್ಸ್‌ಗಳಿಗೆ ಅನ್ವಯಿಸುತ್ತವೆ ತಿಳಿಸಿ.

ಸಿ.ಎ., ಐ.ಸಿ.ಡಬ್ಲ್ಯು.ಎ., ಎಂ.ಬಿ.ಎ ಮಾಡಲು ಪದವಿಯಲ್ಲಿ ಶೇ.50 ಅಂಕಗಳನ್ನು ಗಳಿಸಿರಲೇಬೇಕು. ರೂರಲ್ ಅಂಕಗಳು ಎಂ.ಬಿ.ಎ.ಗೆ ಅನ್ವಯಿಸುತ್ತದೆ. ಸಿ.ಎ. ಹಾಗೂ ಐ.ಸಿ. ಡಬ್ಲ್ಯು.ಎ.ಗಳಿಗೆ ಅನ್ವಯಿಸುವುದಿಲ್ಲ.

ಕೃಷ್ಣಮೂರ್ತಿ, ಊರಿಲ್ಲ

ನಾನು ಎಸ್.ಎಸ್.ಎಲ್.ಸಿ. ಪಾಸ್ ಮಾಡಿ 4 ವರ್ಷವಾಗಿದೆ. ನನಗೆ ಈಗ ITI ಮಾಡಬೇಕೆಂಬ ಆಸೆ ಇದೆ. ITI ಮಾಡಲು ಯಾವುದಾದರೂ ಡಿಗ್ರಿ ಆಗಿರಬೇಕೆ? ITI ಮಾಡಿದ ನಂತರ ಇರುವ ಕೋರ್ಸ್‌ಗಳನ್ನು ತಿಳಿಸಿ.

ಐ.ಟಿ.ಐ. ಮಾಡಲು ಎಸ್.ಎಸ್.ಎಲ್.ಸಿ ಪಾಸ್ ಆಗಿದ್ದರೆ ಸಾಕು. ಇದಕ್ಕೆ ಪದವಿಯು ಬೇಕಿಲ್ಲ. ಐ.ಟಿ.ಐ. ನಂತರ ಅಪ್ರೆಂಟಿಸ್‌ಷಿಪ್ ಮಾಡಬಹುದು. ಇದಕ್ಕೆ ಉದ್ಯೋಗಾವಕಾಶಗಳಿವೆ.

ಜಯಕುಮಾರ, ಮಲ್ಲಸಂದ್ರ,

ನಾನು ಬಿ.ಎಸ್ಸಿಯನ್ನು correspondence ನಲ್ಲಿ ಮಾಡಲು ಇಚ್ಛಿಸುತ್ತೇನೆ. ಇದರ ಬಗ್ಗೆ ಮಾಹಿತಿ ನೀಡಿ. MCA ಬಗ್ಗೆ ತಿಳಿಸಿ. MCA ಮಾಡಿದ ನಂತರ MBA ಮಾಡಬಹುದೆ. ಅದು ಕೇವಲ Correspondence ನಲ್ಲಿ ಸಾಧ್ಯವೇ? BSC ಮಾಡಿದ ನಂತರ IAS ಹಾಗೂ IPS ಮಾಡಬಹುದೆ?

ನಿಮಗೆ 21 ವರ್ಷಗಳಾಗಿದ್ದರೆ ಬಿ.ಎಸ್ಸಿ.ಯನ್ನು ಅಗತ್ಯವಾಗಿ ಕರೆಸ್ಪಾಂಡೆನ್ಸ್‌ನಲ್ಲಿ ಮಾಡಬಹುದು. ಎಂ.ಸಿ.ಎ. ಅಥವಾ ಎಂ.ಬಿ.ಎ ಮಾಡಲು ಪದವಿಯಲ್ಲಿ ಶೇ.50 ಅಂಕಗಳನ್ನು ಪಡೆದಿರಬೇಕು ಹಾಗು ಪ್ರವೇಶ ಪರೀಕ್ಷೆಯನ್ನು ಬರೆಯಬೇಕು. ಐ.ಎ.ಎಸ್.ಅಥವಾ ಐ.ಪಿ.ಎಸ್. ಮಾಡಲು ಪದವಿಯಾಗಿದ್ದರೆ ಸಾಕು.

ಎಸ್.ಎಂ. ಪಾಟೀಲ, ಕಾಜಗಾರವಾಡಿ

ವಜ್ರ ಮತ್ತು ಹವಳಗಳ ಕುಶಲ ಕಲೆಯಲ್ಲಿ ತರಬೇತಿ ಕೊಡುವ ಕಾಲೇಜುಗಳು ಯಾವುವು? ಕರ್ನಾಟಕದಲ್ಲಿವೆಯೇ? ತರಬೇತಿಯ ನಂತರ ವ್ಯಾಪಕ ಉದ್ಯೋಗಾವಕಾಶಗಳಿವೆಯೇ?

ವಜ್ರ ಹಾಗು ಹವಳಗಳ ಕುಶಲ ಕಲೆಯಲ್ಲಿ ತರಬೇತಿ ಕೊಡುವ ಕಾಲೇಜುಗಳು ಹಲವಿವೆ. ಈ ಕಾಲೇಜುಗಳು ಬಾಂಬೆ, ಮದ್ರಾಸ್, ನವದೆಹಲಿಯಲ್ಲಿ ಇವೆ. ಅವುಗಳಲ್ಲೊಂದು ಕಾಲೇಜಿನ ವಿಳಾಸ ಈ ರೀತಿ ಇದೆ. ಜೆಮ್ಮೋಲಾಜಿಕಲ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯಾ, 29, ಗುರುಕಲ್ ಛೇಂಬರ್ಸ್, 187-189 ಮುಂಬಾದೇವಿ ರೋಡ್, ಬಾಂಬೆ - 400 002.

ರಾಜಣ್ಣಕಂಠಿ, ಸುರೇಬಾನ

ನಾನು ಒಂದೇ ವರ್ಷದ ಬಿ.ಎ. ಮಾಡಬೇಕೆಂದಿದ್ದೇನೆ. ಅಣ್ಣಾಮಲೈ ವಿ.ವಿ.ದಲ್ಲಿ, ಕನ್ನಡ ಮಾಧ್ಯಮದಲ್ಲಿ ಒಂದೇ ವರ್ಷದ ಬಿ.ಎ ಇದೆಯೇ? ಅದರ ವಿಳಾಸ ತಿಳಿಸಿ. ವಯಸ್ಸಿನ ಆಧಾರದ ಮೇಲೆ ಯಾವ ವಿದ್ಯಾರ್ಹತೆ ಇಲ್ಲದೆ ಪರೀಕ್ಷೆ ಬರೆಯಬಹುದೇ?

ವಯಸ್ಸಿನ ಆಧಾರದ ಮೇಲೆ ಬಿ.ಎ. ಮಾಡಬೇಕಿದ್ದರೆ ನಿಮಗೆ 21 ವರ್ಷ ವಯಸ್ಸಾಗಿರಬೇಕು. ನೀವು ಒಂದೇ ವರ್ಷದಲ್ಲಿ ಬಿ.ಎ. ಮಾಡಬೇಕೆಂದರೆ 3 ವರ್ಷಗಳ ಪರೀಕ್ಷೆಗಳನ್ನೂ ಒಂದೇ ಬಾರಿ ಬರೆಯಬೇಕಾಗುತ್ತದೆ. ಇದನ್ನು ಅಣ್ಣಾಮಲೈ ವಿಶ್ವವಿದ್ಯಾಲಯದಿಂದ ಮಾಡಲು ಸಾಧ್ಯವಿಲ್ಲ. ಆದರೆ ಉಸ್ಮಾನಿಯ ವಿಶ್ವವಿದ್ಯಾಲಯ, ಹೈದರಾಬಾದ್‌ನ ಮೂಲಕ ಮಾಡಬಹುದು.

ಸುರೇಶ ಭೀ. ಹೂಗಾರ, ಕಂಗನೂರು

ನಾನು ಎಸ್.ಎಸ್.ಎಲ್.ಸಿ. ಯಲ್ಲಿ ಶೇ.45ರಷ್ಟು ಅಂಕಗಳನ್ನು ಪಡೆದಿದ್ದೇನೆ. ಈಗ ಪಿ.ಯು.ಸಿ. ಆರ್ಟ್ಸ್ 2ನೇ ವರ್ಷದಲ್ಲಿ ಫೇಲಾಗಿದ್ದೇನೆ. ನಾನು ಎಷ್ಟು ಪ್ರಯತ್ನ ಮಾಡಿದರೂ ಆಗಲಿಲ್ಲ. ನನಗೆ ಬೇರೆ ಯಾವುದಾದರೂ ಕೋರ್ಸ್‌ಗಳಿದ್ದರೆ ತಿಳಿಸಿ. ನನಗೆ ಈಗ 30 ವರ್ಷ. ಕಂಪ್ಯೂಟರ್ ಮಾಡಬೇಕೆಂಬ ಆಸೆ ಇದೆ. ಇದನ್ನು ಮಾಡಲು ಸಾಧ್ಯವೇ ತಿಳಿಸಿ.

ಎಸ್.ಎಸ್.ಎಲ್.ಸಿ. ಆಧಾರದ ಮೇಲೆ ನೀವು ಯಾವುದಾದರೂ ಡಿಪ್ಲೊಮಾ ಮಾಡಬಹುದು. ಇಲ್ಲವೆ ನಿಮ್ಮ ಆಸೆಯಂತೆ ಖಾಸಗಿ ಕಂಪ್ಯೂಟರ್ ಕೇಂದ್ರಗಳಲ್ಲಿ ಕಂಪ್ಯೂಟರ್ ಕಲಿಯಬಹುದು. ಅಲ್ಲದೆ ಇನ್ನೂ ಮುಂದೆ ಓದುವ ಆಸೆಯಿದ್ದರೆ ವಯಸ್ಸಿನ ಆಧಾರದ ಮೇಲೆ ಬಿ.ಎ. ಅಥವಾ ಎಂ.ಎ. ಸಹ ಮಾಡಬಹುದು.

ಹೆಸರಿಲ್ಲ, ಮಂಗಳೂರು

ನಾನು ಎಸ್.ಎಸ್.ಎಲ್.ಸಿ. ಯನ್ನು 94ರಲ್ಲಿ ಪಾಸಾಗಿದ್ದೇನೆ. ಈಗ ನಾನು ಬಾಹ್ಯ ವಿದ್ಯಾರ್ಥಿಯಾಗಿ ಪಿ.ಯು.ಸಿ. ಕಟ್ಟಲು ಬರುವುದೇ? ಸರ್ಕಾರಿ ಅಥವಾ ಖಾಸಗಿ ಶಾಲೆಯಲ್ಲಿ ಕಟ್ಟಬಹುದೇ? ನನ್ನ ಒರಿಜಿನಲ್ LC ಕಳೆದಿದ್ದು, ಡುಪ್ಲಿಕೇಟ್ LC ಇದೆ. ಇದರ ಆಧಾರದ ಮೇಲೆ ಪಿ.ಯು.ಸಿ. ಕಟ್ಟಬಹುದೇ?

ನಿಮಗೆ 19 ವರ್ಷ ವಯಸ್ಸಾಗಿದ್ದಲ್ಲಿ ಖಂಡಿತವಾಗಿಯೂ ನೀವು ಪಿ.ಯು.ಸಿ. ಪರೀಕ್ಷೆಯನ್ನು ಬಾಹ್ಯವಾಗಿ ತೆಗೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಹತ್ತಿರದ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಸಂಪರ್ಕಿಸಿ.

ರಾಮಲಿಂಗಪ್ಪ, ಅರಸೀಕೆರೆ

ನಾನು 1994ನೇ ಸಾಲಿನಲ್ಲಿ SSLC ಫೇಲ್ ಆಗಿದ್ದು, ಮುಂದೆ ಪರೀಕ್ಷೆ ಕಟ್ಟಲಿಲ್ಲ. ಈಗ ಮಿಲಿಟರಿ ಸೇರಬೇಕೆಂಬ ಆಸೆ. ಆದರೆ SSLC ಪಾಸಾಗಿರಬೇಕೆಂದು ಹೇಳುತ್ತಾರೆ. SSLC ಫೇಲ್ ಆದವರು ಮಿಲಿಟರಿಯಲ್ಲಿ ಯಾವುದಾದರೂ ಉದ್ಯೋಗಕ್ಕೆ ಸೇರಬಹುದೆ? ಮಿಲಿಟರಿ ಬಗ್ಗೆ ಮಾಹಿತಿ ನೀಡಿ.

ಮಿಲಿಟರಿಯಲ್ಲಿ ಯಾವುದೇ ವಿಭಾಗದಲ್ಲಿ ಸೇರಬೇಕಾದರೂ ಪಿ.ಯು.ಸಿ. ಮಾಡಿರಬೇಕು. ಇದರಿಂದ ನೀವು ಪಿ.ಯು.ಸಿ. ಮುಗಿಸಿ ನಂತರ ಮಿಲಿಟರಿಯಲ್ಲಿ ಉದ್ಯೋಗಕ್ಕೆ ಯತ್ನಿಸಿ.

ಹೆಸರಿಲ್ಲ

ನಾನು ಎಸ್.ಎಸ್.ಎಲ್.ಸಿ.ಯಲ್ಲಿ 70% ರಷ್ಟು ಅಂಕಗಳನ್ನು ಪಡೆದಿದ್ದೇನೆ. ಆರ್ಥಿಕ ತೊಂದರೆ ಇರುವುದರಿಂದ ಮುಂದೆ ಓದಲು ಸಾಧ್ಯವಿಲ್ಲ. ನಾನು ಕೆ.ಎಸ್.ಆರ್.ಟಿ.ಸಿ. ಬಸ್ ಕಂಡಕ್ಟರ್ ಆಗಬೇಕೆಂದಿದ್ದೇನೆ. ಇದಕ್ಕೆ ಬೇಕಾದ ಅರ್ಹತೆ ಏನು? ಎಷ್ಟು ವರ್ಷಗಳಿಗೆ ಈ ನೌಕರಿ ಸಿಗುತ್ತದೆ.

ನೀವು ಕಂಡಕ್ಟರ್ ಆಗಬೇಕಾದಲ್ಲಿ ಫಸ್ಟ್ ಏಡ್ ಸರ್ಟಿಫಿಕೇಟನ್ನು ಡಾಕ್ಟರ್ ಕಡೆಯಿಂದ ಮಾಡಿಸಬೇಕು. ನಂತರ ಕಂಡಕ್ಟರ್ ಸರ್ಟಿಫಿಕೇಟನ್ನು ಸಂಬಂಧಪಟ್ಟ ಅಧಿಕಾರಿಯಿಂದ ಪಡೆದುಕೊಳ್ಳಬೇಕು.

ಮಹೇಂದ್ರ, ಗಂಗಾವತಿ

ನಾನು ಖಾಸಗಿಯಾಗಿ ಕಲಾ ವಿಭಾಗದಲ್ಲಿ ಪಿ.ಯು.ಸಿ. (ದ್ವಿತೀಯ) ಪರೀಕ್ಷೆ ಕಟ್ಟಬಹುದೆ?

1. ವಯಸ್ಸು ಎಷ್ಟಿರಬೇಕು?
2. ದ್ವಿತೀಯ ಪಿ.ಯು.ಸಿ. ಪರೀಕ್ಷೆ ಖಾಸಗಿಯಾಗಿ ಬರೆಯಲು ಯಾರನ್ನು ಸಂಪರ್ಕಿಸಬೇಕು.

ಖಾಸಗಿಯಾಗಿ ಪಿ.ಯು.ಸಿ. ಪರೀಕ್ಷೆ ಕಟ್ಟಲು 19 ವರ್ಷ ವಯಸ್ಸಾಗಿರಬೇಕು. ಹೆಚ್ಚಿನ ವಿವರಗಳಿಗೆ ಹತ್ತಿರದ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಸಂಪರ್ಕಿಸಿ.

ಎಸ್.ಎಂ. ಮಾರ್‍ವಾಳ, ಮಂಗಳೂರು

ನಾನು 21 ವರ್ಷದ ಯುವಕ. 10ನೇ ತರಗತಿಯಲ್ಲಿ ಶೇ. 57 ಅಂಕಗಳನ್ನು ಪಡೆದಿದ್ದೇನೆ. ಈಗ ನಾನು ಖಾಸಗಿಯಾಗಿ ಪಿ.ಯು.ಸಿ. ಮಾಡಬೇಕೆಂದಿದ್ದೇನೆ. ಇದು ಸಾಧ್ಯವೆ? ಖಾಸಗಿಯಾಗಿ ಪಿ.ಯು.ಸಿ.ಪಾಸಾದ ಮೇಲೆ TCH ಮಾಡಲು ಅರ್ಹನೆ?

ಖಾಸಗಿಯಾಗಿ ಪಿ.ಯು.ಸಿ. ಪರೀಕ್ಷೆ ಕಟ್ಟಲು 19 ವರ್ಷ ವಯಸ್ಸಾಗಿರಬೇಕು. ಹೆಚ್ಚಿನ ವಿವರಗಳಿಗೆ ಹತ್ತಿರದ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಸಂಪರ್ಕಿಸಿ. ಪಿ.ಯು.ಸಿ. ನಂತರ ಟಿ.ಸಿ.ಹೆಚ್. ಮಾಡಬಹುದು.

ಅರ್ಜುನ, ಬೆಂಗಳೂರು

ನಾನು ಬಿ.ಎಸ್ಸಿ. (ಬಯಾಲಜಿ) ಮಾಡಿದ ನಂತರ MBBS ಮಾಡಲು ಸಾಧ್ಯವೆ?

1. ಬಿ.ಎಸ್ಸಿ. ನಂತರ CET ಬರೆಯಬೇಕೇ?
2. ಬಿ.ಎಸ್ಸಿ.ಯಲ್ಲಿ ಎಷ್ಟು ಅಂಕಗಳನ್ನು ಪಡೆದರೆ MBBS ಮಾಡಬಹುದು.
3. ಬಿ.ಎಸ್ಸಿ. ನಂತರ MBBS ಎಷ್ಟು ವರ್ಷದ ಕೋರ್ಸ್ ಆಗಿರುತ್ತದೆ.

ಎಂ.ಬಿ.ಬಿ.ಎಸ್. ಮಾಡಲು ಸಿ.ಇ.ಟಿ. ಪ್ರವೇಶ ಪರೀಕ್ಷೆ ಬರೆಯಬೇಕು. ಬಿ.ಎಸ್ಸಿ. ಮಾಡಿದ್ದರೂ ಸಿ.ಇ.ಟಿ. ಬರೆಯಬೇಕು.

ಪಿ.ಎಚ್. ದಯಾನಂದ, ಹೊನ್ನಾವರ

ನಾನು B.Com. ಮಾಡಿ CA ಮಾಡಬೇಕೆಂದಿದ್ದೇನೆ. ಇದರ ಬಗ್ಗೆ ಯಾರನ್ನು ಸಂಪರ್ಕಿಸಬೇಕು ಹಾಗೂ ಎಲ್ಲಿ ತರಬೇತಿ ನೀಡಲಾಗುತ್ತದೆ ತಿಳಿಸಿ.

ಸಿ.ಎ. ಮಾಡಬೇಕಾದರೆ ಪದವಿಯಲ್ಲಿ ಶೇ. 50 ಅಂಕಗಳು ಬಂದಿರಬೇಕು. ಇಲ್ಲವೆ ಫೌಂಡೇಶನ್ ಪರೀಕ್ಷೆ ಬರೆಯಬೇಕು. ಇದರ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟಡ್ ಅಕೌಂಟಂಟ್ಸ್ ಆಫ್ ಇಂಡಿಯಾ, ಇಂದ್ರಪ್ರಸ್ಥ ಮಾರ್ಗ್, ನ್ಯೂಡೆಲ್ಲಿ - 110 002. ಇಲ್ಲಿ ಸಂಪರ್ಕಿಸಿ.

ಮಂಜುನಾಥ ಡೊಂಬರ, ಬೈಲಹೊಂಗಲ

ನಾನು TCH ದ್ವಿತೀಯ ವರ್ಷದಲ್ಲಿ ಓದುತ್ತಿದ್ದೇನೆ. ನಾನು ಬಾಹ್ಯ ವಿದ್ಯಾರ್ಥಿಯಾಗಿ ಬಿ.ಎ. ಮಾಡಬಹುದೇ? ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವಾಗ ಬಿ.ಎ., ಎಂ.ಎ. ಮುಂತಾದ ಕೋರ್ಸ್‌ಗಳನ್ನು ಮಾಡಬಹುದೆ?

ನೀವು ಈಗಾಗಲೇ ಟಿ.ಸಿ.ಹೆಚ್. ಮಾಡುತ್ತಿರುವುದರಿಂದ ಅದನ್ನು ಮುಗಿಸಿ ನಂತರ ಬಿ.ಎ. ಪರೀಕ್ಷೆ ತೆಗೆದುಕೊಳ್ಳಬಹುದು. ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಲೇ ಬಿ.ಎ., ಎಂ.ಎ.ಗಳನ್ನು ಖಂಡಿತವಾಗಿಯೂ ಮಾಡಬಹುದು.

ರಾಜು ಸಿ. ಸಂಪಗಾಂವ, ಹುಲಿಕಟ್ಟೆ

ನಾನು ಪ್ರಸಕ್ತ ಸಾಲಿನಲ್ಲಿ B.Com. ಅಂತಿಮ ಪದವಿ ಓದುತ್ತಿದ್ದೇನೆ. ನನಗೆ CA ಮಾಡಬೇಕೆನ್ನುವ ಆಸೆ ಇದೆ. ಆದ್ದರಿಂದ CA ಮಾಡುವುದು ಹೇಗೆ, ಎಷ್ಟು ವರ್ಷದ ಕೋರ್ಸು, ಎಷ್ಟು ವಿಷಯಗಳಿರುತ್ತವೆ ತಿಳಿಸಿ.

ಸಿ.ಎ.ನಲ್ಲಿ 3 ವಿಭಾಗಗಳಿವೆ. ಅವೆಂದರೆ ಫೌಂಡೇಶನ್, ಇಂಟರ್ ಹಾಗು ಫೈನಲ್. ಇಂಟರ್ ಹಾಗು ಫೈನಲ್ ಪ್ರತ್ಯೇಕವಾಗಿ 12 ತಿಂಗಳುಗಳ ಕೋರ್ಸ್ ಆಗಿದೆ. ಹೆಚ್ಚಿನ ಮಾಹಿತಿಯನ್ನು ಇನ್‌ಸ್ಟಿಟ್ಯೂಟ್ ಆಫ್ ಚಾರ್ಟಡ್ ಅಕೌಂಟಂಟ್ಸ್ ಆಫ್ ಇಂಡಿಯಾ, ಇಂದ್ರಪ್ರಸ್ಥ ಮಾರ್ಗ, ನ್ಯೂಡೆಲ್ಲಿ- 110 002. ಇಲ್ಲಿಂದ ಪಡೆಯಬಹುದು.

ಬಿ.ಎಂ. ಶ್ರೀನಿವಾಸ ರೈ, ಪೂನಾ

ನಾನು ಮೊದಲನೇ ವರ್ಷದ ಬಿ.ಎ.ನಲ್ಲಿ ಓದುತ್ತಿರುವಾಗ ಸೇನೆಗೆ ಸೇರಿದೆ. ಆದ್ದರಿಂದ ಪದವಿಯನ್ನು ಪೂರ್ಣಗೊಳಿಸಲು ಆಗಲಿಲ್ಲ. ಈಗ ನನಗೆ 22 ವರ್ಷ. ನಾನು ನೇರವಾಗಿ ಧಾರವಾಡ ವಿ.ವಿ. ಮೂಲಕ ಅಂಚೆಯ ಶಿಕ್ಷಣದಲ್ಲಿ ಅಂತಿಮ ಬಿ.ಎ.ಯನ್ನು ಮಾಡಬಹುದೇ ತಿಳಿಸಿ. ನೇರವಾಗಿ ಅಂತಿಮ ಪದವಿ ಮಾಡಲು ಸಾಧ್ಯವಾಗದಿದ್ದರೆ ಅಂಚೆಯ ಮೂಲಕ ಪಡೆಯಬಹುದೇ? HEP ತೆಗೆದುಕೊಂಡು ಕನ್ನಡ ಮಾಧ್ಯಮದಲ್ಲಿ ಬೆಳಗಾಂನಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಬಹುದೆ?

ನೀವು ನೇರವಾಗಿ ಅಂತಿಮ ವರ್ಷದ ಪರೀಕ್ಷೆ ಬರೆಯಲು ಸಾಧ್ಯವಿಲ್ಲ. ಮೊದಲ ಎರಡು ವರ್ಷದ ಪರೀಕ್ಷೆ ಸಹ ಬರೆಯಬೇಕು. ಇದನ್ನು ಅಂಚೆ ತೆರಪಿನ ಶಿಕ್ಷಣದ ಮೂಲಕ ಮಾಡಬಹುದು. ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ,

IGNOU, ರೀಜನಲ್ ಸೆಂಟರ್, NSSS ಕಲ್ಯಾಣ ಕೇಂದ್ರ, ನಂ. 293, 39ನೇ ಕ್ರಾಸ್, ಜಯನಗರ 8ನೇ ಬ್ಲಾಕ್, ಬೆಂಗಳೂರು-82.

ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗಿ

ಸಾಮಾನ್ಯ ಜ್ಞಾನ

1. ಬಿ.ಡಿ. ಗೊಯೆಂಕಾ ಪ್ರಶಸ್ತಿ ಪಡೆದ ಪ್ರಥಮ ವ್ಯಂಗ್ಯ ಚಿತ್ರಕಾರ ಯಾರು?
2. ಭಾರತದ ಭೂ ವಿಜ್ಞಾನ ಪಿತಾಮಹ ಯಾರು?
3. ಅಜಂತಾ ಗುಹೆಗಳು ಯಾರ ಕಾಲದಲ್ಲಿ ರೂಪುಗೊಂಡವು?
4. ತನ್ನ ಆಹಾರಕ್ಕಾಗಿ ಪುಸ್ತಕಗಳನ್ನೆ ಹೆಚ್ಚು ಆಶ್ರಯಿಸುವ ಕೀಟ ಯಾವುದು?
5. 1980ರಲ್ಲಿ ರಾಷ್ಟ್ರೀಕೃತಗೊಂಡ ಕರ್ನಾಟಕದ ಮೂಲ ಬ್ಯಾಂಕುಗಳು ಯಾವುವು?
6. ಭಾರತದ ಪ್ರಥಮ ಮಿಲಿಟರಿ ಟ್ಯಾಂಕ್‌ನ ಹೆಸರೇನು?
7. ಹಾಲು ಜೀರ್ಣವಾಗಲು ಸಹಕರಿಸುವ ವಸ್ತು ಯಾವುದು?
8. ಗ್ರ್ಯಾಂಡ್ ಓಲ್ಡ್ ಮ್ಯಾನ್ ಆಫ್ ಇಂಡಿಯಾ ಎಂದು ಯಾರನ್ನು ಕರೆಯುತ್ತಾರೆ?
9. ವಿದೇಶದಲ್ಲಿ ರಾಯಭಾರಿಯಾಗಿ ನೇಮಕಗೊಂಡ ಮೊದಲ ಸೇನಾಧಿಕಾರಿ ಯಾರು?
10. ಸಿಕ್ಕಿಂ ರಾಜ್ಯ ಭಾರತದ ಒಂದು ಭಾಗವಾಗಿದ್ದು ಯಾವಾಗ?
11. 1997-98ನೇ ಸಾಲಿನ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪಡೆದವರು ಯಾರು?
12. ಭಾರತದಲ್ಲಿ ತಯಾರಾದ ಮೊದಲ ಕಾರು ಯಾವುದು?
13. 'ಝೆಂಡ್ ಅವೆಸ್ತಾ' ಇದು ಯಾವ ಧರ್ಮದ ಪವಿತ್ರ ಗ್ರಂಥ?
14. ವಿಂಬಲ್ಡನ್ ಪಂದ್ಯಾವಳಿಯಲ್ಲಿ ಆಡಿದ ಮೊದಲ ಭಾರತೀಯ ಯಾರು?
15. ಮರಣೋತ್ತರವಾಗಿ ಭಾರತರತ್ನ ಪ್ರಶಸ್ತಿ ಪಡೆದ ಮೊದಲ ವ್ಯಕ್ತಿ ಯಾರು?
16. ನೊಬೆಲ್‌ಶಾಂತಿ ಪಾರಿತೋಷಕವನ್ನು ಮೂರು ಸಲ ಪಡೆದ ಸಂಸ್ಥೆ ಯಾವುದು?
17. ಭಾರತದ ಐತಿಹಾಸಿಕ ಸ್ಥಳವಾದ ಪಾಣಿಪಟ್, ಈಗ ಯಾವ ರಾಜ್ಯದಲ್ಲಿದೆ?
18. ಸೂರತ್ ನಗರ ಯಾವ ನದಿ ದಡದಲ್ಲಿದೆ?
19. ಅಮೃತಸರ ನಗರವನ್ನು ಸ್ಥಾಪಿಸಿದವರು ಯಾರು?
20. ಸತ್ಯಜಿತ್ ರೇರವರು ನಿರ್ದೇಶಿಸಿದ ಮೊದಲ ಹಿಂದಿ ಚಿತ್ರ ಯಾವುದು?
21. ಸಂವಿಧಾನದ ಎಷ್ಟನೇ ತಿದ್ದುಪಡಿಯು ಮತದಾನದ ವಯಸ್ಸನ್ನು 21 ರಿಂದ 18ಕ್ಕೆ ಇಳಿಸಿತು?
22. ವಿಶ್ವದ ಎರಡನೆ ಪ್ರನಾಳ (ಟೆಸ್ಟ್ ಟ್ಯೂಬ್ ಬೇಬಿ) ಶಿಶು ಯಾರು?
23. ಭಾರತಕ್ಕೆ ಭೇಟಿ ನೀಡಿದ ಮೊದಲ ಅಮೆರಿಕಾದ ಅಧ್ಯಕ್ಷರು ಯಾರು?
24. ಅಂತಾರಾಷ್ಟ್ರೀಯ ವಿಮಾನ ಸಂಸ್ಥೆಯ ಕೇಂದ್ರ ಕಛೇರಿ ಯಾವ ನಗರದಲ್ಲಿದೆ?
25. ಮೊಟ್ಟ ಮೊದಲು ಭೂಮಿಯನ್ನು ಅಳೆದವರು ಯಾರು?
26. ಗುಡ್ ಅರ್ಥ್ (Good earth)ದ ಲೇಖಕರು ಯಾರು?
27. ಭಾರತದಲ್ಲಿ ಕೊಲೆಗೀಡಾದ ವೈಸ್‌ರಾಯ್ ಯಾರು?
28. ಖ್ಯಾತ ಪರ್ಷಿಯನ್ ಹಬ್ಬ 'ನೌರೋಜ್' ನ್ನು ಭಾರತದಲ್ಲಿ ಪರಿಚಯಿಸಿದವರು ಯಾರು?
29. ಸಾಮಾನ್ಯವಾಗಿ ಉಪಯೋಗಿಸಲ್ಪಡುವ ಮಾದಕ ವಸ್ತು ಯಾವುದು?
30. ಕನ್ನಡದ ಮೊದಲ ವರ್ಣಚಿತ್ರ ಯಾವುದು?
31. ಲೋಕಸಭೆಯ ಸ್ಪೀಕರ್ ಆಗಿದ್ದ ಕನ್ನಡಿಗ ಯಾರು?
32. ಅಂತಾರಾಷ್ಟ್ರೀಯ ನ್ಯಾಯಾಲಯ ಎಲ್ಲಿದೆ?
33. ಭಾರತದ ಶೇಕ್ಸ್‌ಪಿಯರ್ ಎಂದು ಯಾರನ್ನು ಕರೆಯುತ್ತಾರೆ?
34. ಪದ್ಮಶ್ರೀ ಪ್ರಶಸ್ತಿ ಗಳಿಸಿದ ಮೊದಲ ಕ್ರೀಡಾಪಟು ಯಾರು?
35. ಶ್ರೀಲಂಕಾ ಮತ್ತು ಭಾರತಗಳ ನಡುವೆ ಇರುವ ಜಲಸಂಧಿ ಯಾವುದು?
36. ಕರ್ನಾಟಕದಲ್ಲಿರುವ ಏಕೈಕ ಭೂಕಂಪ ಮಾಪನ ಕೇಂದ್ರ ಎಲ್ಲಿದೆ?
37. ಕರ್ನಾಟಕದ ಮೊದಲ ವೈದ್ಯಕೀಯ ಕಾಲೇಜು ಯಾವುದು?
38. ಟಿ.ಪಿ. ಕೈಲಾಸಂ ಅವರ ಮೊದಲ ನಾಟಕ ಯಾವುದು?
39. 1997ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕನ್ನಡ ಕೃತಿ ಯಾವುದು?
40. ಟಿಪ್ಪು ಸುಲ್ತಾನ್‌ನ ಬೇಸಿಗೆಯ ಅರಮನೆ ಯಾವುದಾಗಿತ್ತು?
41. ಮೊಗಲರ ಆಸ್ಥಾನಕ್ಕೆ ಭೇಟಿಯಿತ್ತ ಮೊದಲ ಐರೋಪ್ಯ ರಾಯಭಾರಿ ಯಾರು?
42. ಬೌದ್ಧ ವಾಸ್ತುಶಿಲ್ಪದಲ್ಲಿ ಚೈತ್ಯ ಎಂದರೇನು?
43. ಮೊಸಳೆ ಬ್ಯಾಂಕ್ ಸ್ಥಾಪಿಸಿದ ಭಾರತದ ಮೊದಲ ರಾಜ್ಯ ಯಾವುದು?
44. ಭಾರತೀಯ ಅರಣ್ಯ ಸಮೀಕ್ಷಾ ಸಂಸ್ಥೆಯ ಕೇಂದ್ರ ಕಛೇರಿ ಎಲ್ಲಿದೆ?
45. ಮಾನವನ ತಲೆ ಬುರುಡೆಯಲ್ಲಿ ಎಷ್ಟು ಮೂಳೆಗಳಿರುತ್ತವೆ?
46. ಭಾರತದ ಮೊದಲ ತ್ರಿ-ಡಿ (3-D) ಚಿತ್ರ ಯಾವುದು?
47. ಕೃಷ್ಣದೇವರಾಯನ ತಾಯಿಯ ಹೆಸರೇನು?
48. ಭಾರತದಲ್ಲಿ ಅಧಿಕ ಹೊಗೆಸೊಪ್ಪು ಬೆಳೆಯುವ ರಾಜ್ಯ ಯಾವುದು?
49. ಲಾಗರಿಥಮ್‌ನ ಜನಕ ಯಾರು?
50. ಅಶೋಕನ ಕಾಲದಲ್ಲಿ ಬನವಾಸಿಯ ಹೆಸರು ಏನಾಗಿತ್ತು?

ಉತ್ತರಗಳು

1. ಆರ್.ಕೆ. ಲಕ್ಷ್ಮಣ್, 2. ಡಿ.ಎನ್.ವಾಡಿಯಾ, 3. ಗುಪ್ತರ, 4. ಸಿಲ್ವರ್ ಫಿಷ್, 5. ವಿಜಯಾ ಮತ್ತು ಕಾರ್ಪೋರೇಷನ್ ಬ್ಯಾಂಕ್, 6. ವೈಜಯಂತ, 7. ಕಿಸಿನ್, 8. ದಾದಾಭಾಯಿ ನವರೋಜಿ, 9. ಕೆ. ಎಂ. ಕಾರಿಯಪ್ಪ, 10. 1975ರಲ್ಲಿ, 11. ಪ್ರದೀಪ್, 12. ಹಿಂದೂಸ್ತಾನ್-10, 13. ಪಾರ್ಸಿಗಳ, 14. ಸರ್ದಾರ್ ನಿಹಾಲ್‌ಸಿಂಗ್, 15. ಲಾಲ್ ಬಹದ್ದೂರ್ ಶಾಸ್ತ್ರಿ, 16. ರೆಡ್‌ಕ್ರಾಸ್, 17. ಹರಿಯಾಣ, 18. ತಪತಿ, 19. ರಾಮದಾಸ್ (4ನೇ ಸಿಖ್‌ಗುರು) 20. ಶತ್ರಂಜ್‌ಕೆ ಖಿಲಾಡಿ, 21. 61ನೇ ತಿದ್ದುಪಡಿ, 22. ದುರ್ಗಾ ಅಗರ್‌ವಾಲಾ, 23. ಐಸೆನ್ ಹೋವರ್, 24. ಮಾಂಟ್ರಿಯಲ್, 25. ಎರೋಸ್ಥನಿಸ್, 26. ಪರ್ಲ್ ಎಸ್.ಬಕ್, 27. ಲಾರ್ಡ್ ಮೆಯೋ, 28. ಬಲ್ಬನ್, 29. ಆಲ್ಕೋಹಾಲ್, 30. ಅಮರ ಶಿಲ್ಪಿ ಜಕಣಾಚಾರ್ಯ, 31. ಕೆ. ಎಸ್. ಹೆಗಡೆ, 32. ಹೇಗ್, 33. ಕಾಳಿದಾಸ, 34. ಮಿಲ್ಖಾ ಸಿಂಗ್, 35. ಪಾಕ್ ಜಲಸಂಧಿ, 36. ಗೌರಿಬಿದನೂರು, 37. ಬೆಂಗಳೂರು ಮೆಡಿಕಲ್ ಕಾಲೇಜ್, 38. ಟೊಳ್ಳುಗಟ್ಟಿ, 39. ಹೊಸತು ಹೊಸತು, 40. ದರಿಯಾ ದೌಲತ್, 41. ಸರ್ ಥಾಮಸ್‌ರೋ, 42. ಪ್ರಾರ್ಥನಾ ಮಂದಿರ, 43. ತಮಿಳು ನಾಡು, 44. ಡೆಹ್ರಾಡೂನ್, 45. 29, 46. ಮೈಡಿಯರ್ ಕುಟ್ಟಿಚೇತನ್ (ಮಲಯಾಳಂ), 47. ನಾಗಲಾದೇವಿ, 48. ಆಂಧ್ರಪ್ರದೇಶ, 49. ಜಾನ್ ನೇಪಿಯರ್, 50. ವೈಜಯಂತಿ.

■ ಅಶೋಕ ಜಿ. ಸಜ್ಜನ್



ನಗುವೇ ಜೀವನ

(ನಗೆ ಹನಿಗಳ ಸಂಗ್ರಹ)
ಲೇ: **ಚಿಕ್ಕಮಗಳೂರು ಧ್ರುವ ಹರೀಶ್**
ಪ್ರ: ಎನ್. ಕೆ. ಪಬ್ಲಿಕೇಷನ್ಸ್
1007, 10ನೇ ಮೇನ್, ಫಸ್ಟ್ ಬ್ಲಾಕ್,
3ನೇ ಸ್ಟೇಜ್, ಬಸವೇಶ್ವರನಗರ,
ಬೆಂಗಳೂರು - 79

ಹಾಸ್ಯ ರಸವು ನವರಸಗಳಲ್ಲೊಂದು, ಹಾಸ್ಯ ಪ್ರಜ್ಞೆಯಿಲ್ಲದವನ ಜೀವನ, ದೇವರಿಲ್ಲದ ಗುಡಿಯಂತೆ ಶೂನ್ಯ. ಉತ್ತಮ ಅಭಿರುಚಿಯ ಹಾಸ್ಯ ಪ್ರಹಸನ ಕೇಳಿಯೂ ನಗದವ ಬಹುಶಃ ಕಿವುಡನಾಗಿರಬೇಕು. ಇಲ್ಲವೇ ಮನೋ ವೈಕಲ್ಯವುಳ್ಳವನಾಗಿರಬೇಕು. ಅಥವಾ ಆತ ಗಂಭೀರತೆಯ ಮುಖವಾಡ ತೊಟ್ಟ ಆಶಾಡಭೂತಿಯಾಗಿರಬೇಕು.ಇಲ್ಲವೆ, ಆತ ಸ್ಯಾಡಿಸ್ಟ್ ಆಗಿರಬೇಕು. ನೀವು ಇಂತಹವರಲ್ಲೊಬ್ಬರು ಖಂಡಿತ ಆಗಬೇಡಿ. ವಿಶಾಲ ಮನೋಭಾವ ಬೆಳೆಸಿಕೊಳ್ಳಿ, ಜೀವನದ ಪ್ರತಿಕ್ಷಣಗಳನ್ನೂ ಸಾತ್ವಿಕವಾಗಿ ಆನಂದಿಸುತ್ತ ಆಯುರಾರೋಗ್ಯ ವೃದ್ದಿಸಿಕೊಳ್ಳಿ.



ಪದಾರ್ಥ ಚಿಂತಾಮಣಿ

ಲೇ: **ಪಾ.ವೆಂ. ಆಚಾರ್ಯ**
ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು - 560 001
ಬೆಲೆ: 140, ಪುಟ: 352.

......ಪದಾರ್ಥ ಚಿಂತಾಮಣಿ ಈ ದಿಕ್ಕಿನಲ್ಲಿ (ಪದಪರಂಪರೆ Wordlore) ಎಂಬ ಜ್ಞಾನ ಪ್ರಕಾರಕ್ಕೆ ನಾಂದಿಹಾಕುವ ದಿಕ್ಕಿನಲ್ಲಿ) ಒಂದು ಮಹತ್ವದ ಹೆಜ್ಜೆ. ಇದನ್ನು ರಚಿಸಿರುವವರು ನಮ್ಮ ನಾಡಿನ ವಿರಳ ಬಹುಶ್ರುತರಲ್ಲಿ ಒಬ್ಬರಾದ ಪಾ.ವೆಂ. ಆಚಾರ್ಯ ಅವರು... ಪ್ರತಿಯೊಂದು ಪದಕ್ಕೂ ಅದರದೇ ಆದ ಚರಿತ್ರೆ ಉಂಟು, ಐತಿಹ್ಯವುಂಟು, ಕಥೆಯುಂಟು. ಪದಾರ್ಥ ಚಿಂತಾಮಣಿಯಲ್ಲಿ ಕಾಣಿಸಿಕೊಳ್ಳುವ ಪ್ರತಿಯೊಂದು ಪದವನ್ನೂ ಈ ದೃಷ್ಟಿಗಳಿಂದ ಕಾಣಲಾಗಿದೆ.... ಇದೊಂದು ಅಧ್ಯಯನಪೂರ್ಣ ಪುಸ್ತಕ. ಸಾಹಿತ್ಯ ಹಾಗೂ ಸಾಹಿತ್ಯೇತರ ಕ್ಷೇತ್ರಗಳಲ್ಲಿ ಆಚಾರ್ಯರು ಪಡೆದಿರುವ ಅಪಾರ ತಿಳಿವಳಿಕೆಗೆ ಸಾಕ್ಷಿ.

-ಹಾ.ಮಾ. ನಾಯಕ




ಬಯಲು ಬಿತ್ತನೆ

(ಕಥಾ ಸಂಕಲನ)
ಲೇ: **ಸಿದ್ದರಾಮ ಹೊನ್ಕಲ್**
ಪ್ರ: ಜಾಗೃತ ಪ್ರಕಾಶನ,
ಕಾವ್ಯಾಲಯ, ಶ್ರೀ ಲಕ್ಷ್ಮಿ ನಗರ, ಶಹಾಪುರ (ಅಂಚೆ),
ಕಲಬುರ್ಗಿ ಜಿಲ್ಲೆ
ಪುಟ: 88, ಬೆಲೆ: 40

ಗೆಳೆಯ ಸಿದ್ದರಾಮ ಹೊನ್ಕಲ್ ಇನ್ನೂ ಯುವಕರು. ಅವರ ಮೊದಲ ಕೃತಿ ಪ್ರಕಟವಾಗಿ ಆರೇಳು ವರ್ಷಗಳಾಗಿವೆ ಅಷ್ಟೆ. ಈ ವರ್ಷ ಅವರ ಪುಸ್ತಕ ಒಂದಕ್ಕೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಹಿಂದೆ ಗು.ವಿ.ವಿ. ಕಥಾಸ್ಪರ್ಧೆಯಲ್ಲಿ ಸತತ ಮೂರು ವರ್ಷ ಉತ್ತಮ ಕಥೆಗಾಗಿ ಪ್ರಶಸ್ತಿ ಪತ್ರ ಪಡೆದ ಅವರು ನಾಲ್ಕನೆ ವರ್ಷ ಚಿನ್ನದ ಪದಕ ಪಡೆದೇ ಬಿಟ್ಟಿದ್ದರು.

ಕವಿಯಾಗಿ ಹೆಸರು ಮಾಡಿಕೊಂಡು, ಈಗ ಕಥೆ ಬರೆಯುತ್ತಾ ಕಾವ್ಯಕ್ಕಿಂತ ಕಥೆಯೇ ಉತ್ತಮ ಮಾರ್ಗ ಎಂದು ಕಂಡುಕೊಂಡರು. ಬಹುಶಃ ಅವರ ಅನುಭವಗಳು ಕಥೆಯಾಗಿ ಹೊರಬಂದಾಗ ಎದೆ ಹಗುರಗೊಳಿಸಿದವೆಂದು ತೋರುತ್ತದೆ.

-ಡಾ. ವೀರಣ್ಣ ದಂಡೆ




ಎರವಲು ಪದಕೋಶ

ಲೇ: **ಪ್ರೊ. ಜಿ. ವೆಂಕಟಸುಬ್ಬಯ್ಯ**
ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು - 560 001
ಪುಟ: 248 ಬೆಲೆ: 100

ಎರವಲು ಪದಗಳು ಕನ್ನಡದ ಸ್ವಭಾವವನ್ನೂ ಸ್ವರೂಪವನ್ನೂ ಹೇಗೆ ಪಡೆಯುತ್ತವೆ ಎಂಬುದನ್ನು ತಿಳಿದಾಗ ಅಚ್ಚರಿಯಾಗುತ್ತದೆ. ಸಾಮಾನ್ಯವಾಗಿ ಜನರು ತಮ್ಮ ಧ್ವನ್ಯಂಗಗಳಿಗೆ ಹೊಂದಿಕೊಳ್ಳುವಂತೆ ಹೊಸ ಶಬ್ದಗಳನ್ನು ಉಚ್ಚರಿಸಿ, ಅವುಗಳಿಗೆ ಸ್ವರೂಪವನ್ನು ಉಚ್ಚಾರಣೆಯನ್ನೂ ನಿರ್ಧರಿಸುತ್ತಾರೆ. ಅವು ಹಾಗೇ ನಿಂತು ಬಿಡುತ್ತವೆ. ಹೀಗೆ ಮಾಡುವವರು ಭಾಷಾಶಾಸ್ತ್ರಜ್ಞರಾಗಲೀ, ವಿದ್ವಾಂಸರಾಗಲೀ ಅಲ್ಲ.

ಹೀಗೆ ಹಲವು ಭಾಷೆಗಳಿಂದ ಬಂದು ಕನ್ನಡವನ್ನು ಅಲಂಕರಿಸಿರುವ, ಸಮೃದ್ಧಗೊಳಿಸಿರುವ ಎರವಲು ಪದಗಳ ಮೂಲವನ್ನು ಶೋಧಿಸಲು ಮಾಡಿದ ಪ್ರಯತ್ನದ ಫಲವೇ ಈ ಎರವಲು ಪದಕೋಶ.



ಭಾರತಕ್ಕೆ ಆರ್ಯರ ಪ್ರವೇಶ

ಲೇ: ಆರ್.ಎಸ್. ಶರ್ಮಾ
ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು - 560 001. ಪುಟ: 104, ಬೆಲೆ: 35

'ಭಾರತಕ್ಕೆ ಆರ್ಯರ ಪ್ರವೇಶ' ಕೃತಿಯ ಲೇಖಕರಾದ ಪ್ರೊ. ಆರ್. ಎಸ್.ಶರ್ಮಾ ಅವರು, ಇಲ್ಲಿ ಪುರಾಣವನ್ನು ಇತಿಹಾಸವೆಂದು, ಇತಿಹಾಸವನ್ನು ಪುರಾಣವೆಂದು ಗೊಂದಲ ಉಂಟುಮಾಡುವವರಿಗೆ ಸಮರ್ಥ ಉತ್ತರ ನೀಡಿದ್ದಾರೆ. ಆರ್ಯರ ಪ್ರವೇಶವನ್ನು ಅತ್ಯಂತ ಸಮಾಹಿತ ಮನಸ್ಸಿನಿಂದ ಅಲ್ಲಗಳೆಯಲಾಗದ ಆಧಾರಗಳ ಸಹಿತ ಇಲ್ಲಿ ವಿವರಿಸಿದ್ದಾರೆ. ಆರ್ಯರಿಗಾಗಿ ಹುಡುಕಾಟ ಎಂಬ ಇವರ ಮತ್ತೊಂದು ಕೃತಿಯನ್ನು ನವಕರ್ನಾಟಕ ಪ್ರಕಟಿಸಿದೆ. ಈ ಎರಡೂ ಮಹತ್ವದ ಕೃತಿಗಳನ್ನು ಶ್ರೀ ಎಸ್. ಗುರುದತ್ ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರಸ್ತುತ ಕೃತಿ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಪ್ರಕಟವಾಗುವ ಮೊದಲೇ ಕನ್ನಡದಲ್ಲಿ ಪ್ರಕಟವಾಗುತ್ತಿದೆ. ಪ್ರೊ. ಶರ್ಮಾ ಅವರ ಪ್ರಾಚೀನ ಭಾರತ ಎಂಬ ಸಚಿತ್ರ ಕೃತಿಯ ಕನ್ನಡ ಅನುವಾದ ಸಹ ಪ್ರಕಟವಾಗಿದೆ.



ಜಗ ಬೆಳಗಿದ ಜ್ಯೋತಿ

(ಸಾಮಾಜಿಕ ನಾಟಕ)
ಲೇ: ಶ್ರೀ ವಿ.ಟಿ.ಸ್ವಾಮಿ
ಪ್ರ: ಶ್ರೀ ಜಿ. ಮಂಜುನಾಥ,
ಮಂಜುನಾಥ ಪ್ರಿಂಟಿಂಗ್ ಪ್ರೆಸ್
ಬಿ.ಹೆಚ್. ರಸ್ತೆ, ಸಾಗರ - 577 401
ಪುಟ: 246, ಬೆಲೆ: 45/-

ಕನ್ನಡ ಕಾವ್ಯದಲ್ಲಿ ಅದೆಷ್ಟೇ ಪ್ರಯೋಗಗಳು ಆಗಿರಲಿ ಸಾಂಪ್ರದಾಯಕ ದಾಟಿಯನ್ನು ಇರಿಸಿಕೊಂಡು, ಛಂದಸ್ಸನ್ನು ಬಳಸಿಕೊಂಡು, ಬರೆಯುವವರ ಸಂಖ್ಯೆಯೂ ಸಾಕಷ್ಟು ಇದೆ. ಅಂತೆಯೇ ಕನ್ನಡ ನಾಟಕ ಕ್ಷೇತ್ರದಲ್ಲಿ ಹಲವಾರು ಹೊಸ ಪ್ರಯೋಗಗಳು, ವಿಕ್ರಯಗಳು, ಸಾಧನೆಗಳು ನಡೆದಿದ್ದರೂ ನಮ್ಮ ಸಾಂಪ್ರದಾಯಕ ರಂಗಭೂಮಿಯು ಕೂಡ ಇಂದಿಗೂ ಉಳಿದುಕೊಂಡಿದೆ. ಈ ಸಾಂಪ್ರದಾಯಿಕ ರಂಗಭೂಮಿಗೆ ಹೇಳಿ ಮಾಡಿಸಿದಂತಹ ನಾಟಕಗಳು ಕೂಡ ಇಂದಿಗೂ ಹೊರ ಬರುತ್ತವೆ. ಇಂತಹ ನಾಟಕಗಳಲ್ಲಿ ಶ್ರೀ ವಿ.ಟಿ. ಸ್ವಾಮಿ, ಶಿಕ್ಷಕರು, ಕಳೂರು ಇವರ 'ಜಗ ಬೆಳಗಿದ ಜ್ಯೋತಿ' ಎಂಬ ನಾಟಕವೂ ಒಂದು.

-ನಾ. ಡಿಸೋಜ



ಕನ್ನಡ ಮೂಲದ ಈ ರೂಪದರ್ಶಿ ಮುಂಬೈಯಲ್ಲಿ ಮನೆಮಾತು!

ಗೌತಮಿ ಮಧುರ್

■ ಡಾ. ಟಿ.ಕೆ. ತಾಪಸ್

ಡಿಸೆಂಬರ್ 4. ಧಾರವಾಡದಲ್ಲಿ ಜರುಗಿದ, ನನ್ನ ನಿಕಟ ಬಂಧುಗಳೊಬ್ಬರ ಮದುವೆಗೆ ಹೋಗಿದ್ದೆ. ಅಕ್ಷತೆಯ ವೇಳೆ ಸಮೀಪಿಸಿಯೇ ಬಿಟ್ಟಿತ್ತು. ವಧುವಿನ ಬರುವಿಕೆ ನಿರೀಕ್ಷಿಸುತ್ತಿದ್ದ ಬಾಗಿಲಿನಿಂದ ಒಬ್ಬ ನಿರಾಭರಣ ಸುಂದರಿ ನಿರಿಗೆ ಚಿಮ್ಮುತ್ತ ಪ್ರತ್ಯಕ್ಷಳಾದಾಗ ಅವಳು ವಧುವಲ್ಲವೆಂಬುದನ್ನು ಅವಳು ಧರಿಸಿದ 'ಮಂಗಳಸೂತ್ರ' ಸಾರಿತು.

'ಇವರನ್ನೆಲ್ಲೋ ನೋಡಿರುವೆ' ಎಂದಿತು ಮನಸ್ಸು. ಆದರೆ ಮೆದುಳು ಸಹಕರಿಸಲಿಲ್ಲ. ಹೊಸದಾಗಿ ಸೇರಿಕೊಂಡ ಪತ್ರಿಕಾಬುದ್ಧಿ ಕೆಲಸ ಮಾಡಿತು. ಸ್ವಗತದ ಪ್ರತಿಕ್ರಿಯೆ ಪ್ರಶ್ನೆಯಾಗಿ ಹೊರಬಂದಿತು.

'ನಾನು ಮುಂಬೈ ಬಿಟ್ಟು ಕರ್ನಾಟಕಕ್ಕೆ ಬಂದುದೇ ಈ ಸಲ. ನನ್ನ ಅಜ್ಜ (ತಾಯಿಯ ತಂದೆ) ಗುರುರಾವ್ ಕುಲಕರ್ಣಿಯವರು ಹುಟ್ಟಿದ ಧಾರವಾಡ ಜಿಲ್ಲೆಯ ಅಭಿಮಾನ ಹಾಗೂ ನನ್ನ ಬಹಳಷ್ಟು ಬಂಧುಗಳನ್ನು ನೋಡಬೇಕೆಂಬ ಬಯಕೆ ನನ್ನನ್ನು ಇಲ್ಲಿಗೆ ತಂದಿದೆ' ಎಂದು ಮರಾಠಿ ಮಿಶ್ರಿತ ಹಿಂದಿ, ಹಿಂದಿ ಮಿಶ್ರಿತ ಇಂಗ್ಲಿಷಿನಲ್ಲಿ ಆಕೆ ನುಡಿದಾಗ,

'ಆದರೆ ಇಲ್ಲಿ ಮುಖ್ಯವಾಗಿ ಬೇಕಾದುದು ಕನ್ನಡ' ಎಂದು ನಾನೆಂದೆ. 'ಕನ್ನಡ ಅಷ್ಟು ಚೆನ್ನಾಗಿ ನಹೀ. ಆದರೆ ನೀವು ಮಾತನಾಡಿ. I can understand everything' ಎಂದರು.

ಸಿ.ಬಿ.ಐ. ಸೇವೆಯಲ್ಲಿದ್ದ ಕುಲಕರ್ಣಿಯವರು ಮಹಾರಾಷ್ಟ್ರ ಸೇರಿದ್ದು 1958ರಲ್ಲಿ. ಕರ್ನಾಟಕದಲ್ಲಿ ಜನಿಸಿದ ಮಗಳು 'ವಿಜೂ', ಮಾಧುರಿ ಗಾಡಗೀಳ್ ಆದರು. ಅವರ ಪತಿ ಖ್ಯಾತ ಚರ್ಮರೋಗ ತಜ್ಞ ಡಾ। ರಮೇಶ್ ಬಿ. ಗಾಡಗೀಳ್. ಇವರದು ಚಿಕ್ಕಚೊಕ್ಕ ಸಂಸಾರ. ಗೌತಮಿ ಜ್ಯೇಷ್ಠ ಪುತ್ರಿ. ಎಂ.ಬಿ.ಬಿ.ಎಸ್. ಮಾಡುತ್ತಿರುವ ಯತಿನ್ ಎರಡನೆಯವ. ತಾಯಿ ಶುಶ್ರೂಷಕ ಮಹಾವಿದ್ಯಾಲಯದ ಪ್ರಾಚಾರ್ಯೆ.

'ಇನ್ನು ನಿಮ್ಮ ಬಗೆಗೆ ಹೇಳಿ' ಎಂದು ಮುಂದುವರೆದೆ.

'ನನ್ನ ಹುಟ್ಟು ಮುಂಬೈನಲ್ಲಿ 1974. ಸಂಪೂರ್ಣ ಶಿಕ್ಷಣವೂ ಇಲ್ಲಿಯೇ. ಮುಂಬೈ ವಿಶ್ವವಿದ್ಯಾಲಯದ, ಪ್ರಥಮ ಶ್ರೇಣಿಯ ಬಿ.ಎಸ್ಸಿ (ಜೈವಿಕ ವಿಜ್ಞಾನ) ಹಾಗೂ ವೈದ್ಯಕೀಯ ಪ್ರಯೋಗಾಲಯ ತಾಂತ್ರಿಕತೆಯಲ್ಲಿ ಡಿಪ್ಲೊಮಾ. 1996ರಲ್ಲಿ ಶಿಕ್ಷಣ ಮುಕ್ತಾಯವಾಗುವ ಮೊದಲೇ ಮೂರು ವರ್ಷಗಳ ಭರತನಾಟ್ಯ ತರಬೇತಿ'.

'ಶಾಲೆ-ಕಾಲೇಜುಗಳಲ್ಲಿ ನೆನಪಿಡುವಂತಹದು?'

'ಇದೆ. ಆಟ-ಪಾಠ, ಭಾಷಣ, ಮುಂತಾದ ಸ್ಪರ್ಧೆಗಳಲ್ಲಿ ಬಹುಮಾನ, ಪ್ರಶಸ್ತಿ, ಪಾರಿತೋಷಕಗಳ ಸುರಿಮಳೆ. ಅತ್ಯುತ್ತಮ ವಿದ್ಯಾರ್ಥಿನಿಯಾಗಿ ಆಯ್ಕೆ.'

'ನೀವು ಆಗಬೇಕೆಂದುಕೊಂಡಂತೆ ಆಗಿರುವಿರಾ?'

'ಇಲ್ಲ. ನನ್ನ ಪ್ರಮುಖ ಬಯಕೆಗಳು ಎರಡು: ತಂದೆಯಂತೆ ಖ್ಯಾತ ವೈದ್ಯೆಯಾಗಬೇಕು; ಯಾವ ಕಾರಣಕ್ಕೂ ಮುಂಬೈಯಿಂದ ದೂರವಾಗ ಬಾರದು. ಆದರೆ ಜೀವನ ನಿರ್ಮಿಸಿದ ದಾರಿ ಬೇರೆಯೇ ಆಯಿತು.

ರಾಜೀವ್ ಮೆನನ್‌ರ ಉತ್ತೇಜನ ಮತ್ತು ಪ್ರತಿಭಾದರ್ಶನ ನನ್ನ ಜೀವನದ ದಿಕ್ಕನ್ನೇ ಬದಲಿಸಿತು! ನಾನು ಊಹಿಸದ ಅವಕಾಶಗಳು ತಂತಾನೆ ಪ್ರಾಪ್ತವಾದವು.'

'ಯಾರೀತ?'

'ನಿರಂತರ ಪ್ರತಿಭಾ ಶೋಧದಲ್ಲಿ ತೊಡಗಿರುವ ಸ್ವಯಂ ಪ್ರತಿಭಾವಂತ ನಿರ್ದೇಶಕರವರು. 'ಸಪ್ನೆ' ಚಲನಚಿತ್ರದ ನಿರ್ದೇಶಕ. ಅವರ ಒತ್ತಾಯದಿಂದ 19 ವರ್ಷಕ್ಕೇ ರೂಪದರ್ಶಿಯಾದೆ. 22 ವರ್ಷಗಳವರೆಗೂ ಸುಮಾರು 50ಕ್ಕೂ ಹೆಚ್ಚು ಪ್ರಸಂಗಗಳಲ್ಲಿ ಭಾಗವಹಿಸಿದ್ದೇನೆ. ಈಗ ಮುಂಬೈಯಲ್ಲಿ 'ಮೂವ್ ಹುಡಿಗಿ' ಎಂದು ಗುರುತಿಸಲ್ಪಡುತ್ತಿರುವ ನಾನು ಡಂಕನ್ ಚಹಾ, ಸಾವಲಾನ್ ಮಲಮು, ಉಜಾಲಾ, ಪ್ಯಾರಾಶೂಟ್ ಕೊಬ್ಬರಿ ಎಣ್ಣೆ ಮುಂತಾದವುಗಳ ಪ್ರಚಾರದಲ್ಲಿ ಪಾಲ್ಗೊಂಡಿದ್ದೇನೆ'.

'ರೂಪದರ್ಶಿಯಾಗಿ ನಿಮ್ಮ ಅನಿಸಿಕೆ?'

'ಸರುಕುಗಳ ಪ್ರಚಾರಕ್ಕಾಗಿ ಪಾತ್ರ ನಿರ್ವಹಿಸುವಾಗ ಅಪ್ಪಟ ಭಾರತೀಯತೆಯನ್ನು ಪ್ರತಿನಿಧಿಸುವ, ಜವಾಬ್ದಾರಿಯುತ, ಗುಣಗ್ರಾಹಿ, ಕುಟುಂಬ ವತ್ಸಲ ಮತ್ತು ಚಿಕಿತ್ಸಕ ಗೃಹಿಣಿಯನ್ನು ಪ್ರತಿನಿಧಿಸುವಂತೆ ನನ್ನನ್ನು ರೂಪಿಸಲಾಗುತ್ತದೆ. ಅಪ್ರಯತ್ನವಾಗಿ, ಬಯಸದೆ ಬಂದ ಭಾಗ್ಯವನ್ನು ಸದುಪಯೋಗ ಪಡಿಸಿಕೊಂಡು ಜನಪ್ರಿಯತೆಯತ್ತ ನಾನು ಸಾಗುತ್ತಿರುವುದು ಸಮಾಧಾನ ತರುತ್ತಿದೆ'.

'ಇತರ ಚಟುವಟಿಕೆಗಳೇನಾದರೂ ಇವೆಯೇ?'

1995ರ ಜನವರಿಯಲ್ಲಿ 'ಫೆಮಿನಾ ಮಿಸ್ ಇಂಡಿಯಾ' ಸ್ಪರ್ಧೆಯಲ್ಲಿ ಪಾಲ್ಗೊಂಡು, 6000 ಸ್ಪರ್ಧಿಗಳಲ್ಲಿ ಮೊದಲ ಹತ್ತರಲ್ಲಿ ಒಬ್ಬಳಾಗಿ ಆಯ್ಕೆಯಾದೆ.

'ರೂಪದರ್ಶಿಗಳಲ್ಲಿ ಹಲವರು ನಟನೆಯತ್ತ ಹೊರಳುತ್ತಾರೆ...'

'ನಿಜ. ಈ ವರ್ಷ ನನಗೂ ಹೀಗೆಯೇ ಕರೆ ಬಂದುದರ ಫಲವಾಗಿ, ಜೀ ಟಿ.ವಿ.ಯಲ್ಲಿ ಪ್ರಸಾರವಾಗುತ್ತಿರುವ, ಮಂಜುಲ್ ಸಿಂಹ ನಿರ್ದೇಶಿತ 'ಜೀ ಸಾಹಬ್', ಅಲ್ಲದೆ 'ರಿಶ್ತೆ', 'ಸೀಯತ್' ಮುಂತಾದ ಧಾರಾವಾಹಿಗಳಲ್ಲಿ, ಭಾರತೀಯ ದೂರದರ್ಶನದ ಮೊದಲನೆಯ ವಾಹಿನಿಯಲ್ಲಿ ಪ್ರಸಾರಗೊಳ್ಳುವ, ರಾಕೇಶ್ ಚೌಧರಿ ನಿರ್ದೇಶಿತ 'ಆಶಿಯಾನಾ' ಧಾರಾವಾಹಿಯಲ್ಲಿ ಸುಸಂಸ್ಕೃತ ಭಾರತೀಯ ನಾರಿಯ ಪ್ರಾತಿನಿಧಿಕ ಪಾತ್ರಗಳು ನನಗೆ ದೊರಕಿವೆ.

ಜಾಗತಿಕ ಅಂಗವಿಕಲರ ದಿನಾಚರಣೆಯ ಸಂದರ್ಭ (3.12.98)ಕ್ಕಾಗಿ ಸಿದ್ಧಪಡಿಸಿದ 'ಕ್ಲೋಸ್‌ಅಪ್ ಅಂತಾಕ್ಷರಿ' ಕಾರ್ಯಕ್ರಮ ನಿರ್ವಹಿಸಿದ್ದೇನೆ'.

'ಇವೆರಡೂ ರಂಗಗಳಲ್ಲಿ ನಿಮ್ಮ ಸಾಧನೆಯ ಬಗೆಗೆ ನಿಮ್ಮ ಅನಿಸಿಕೆಯೇನು?'

'ಜೀವನದ ಆಕಸ್ಮಿಕ ಧ್ಯೇಯ ಬದಲಾವಣೆಯಿಂದ ನಾನು ಮಂಕಾಗಿಲ್ಲ. ಮಾಡುವ ಯಾವುದೇ ಕೆಲಸವನ್ನು ಶ್ರದ್ಧೆ, ತಾದಾತ್ಮ್ಯ, ಉತ್ಸಾಹಗಳಿಂದ ಪೂರೈಸುವುದು ನನ್ನ ಇಚ್ಛೆ. 'ಮಾಡೆಲಿಂಗ್, ನಟನೆ ಈ ಎರಡೂ ನನಗೆ ವೈಯಕ್ತಿಕವಾಗಿ, ಆರ್ಥಿಕವಾಗಿ ತೃಪ್ತಿ ನೀಡಿವೆ.'

'ನಿಮ್ಮ ಯಶಸ್ಸಿನ ಪಾಲುದಾರರು?'

'ತಂದೆ -ತಾಯಿಗಳ ಪಾತ್ರ ಅತ್ಯಂತ ಹಿರಿದು. ತಾಯಿ ಹೆಜ್ಜೆ ಹೆಜ್ಜೆಗೂ ನೀಡುತ್ತಿರುವ ಸ್ವಾತಂತ್ರ್ಯ, ಬೆಂಬಲ ನನ್ನ ಎಳೆ ವಯಸ್ಸಿನಿಂದ ದುರುಪಯೋಗಗೊಳ್ಳದಂತೆ ತಂದೆಯ ಶಿಸ್ತುಬದ್ಧ ಮಾರ್ಗದರ್ಶನ, ಕಟ್ಟುನಿಟ್ಟಿನ ಕಣ್ಗಾವಲು ನನಗೆ ಶ್ರೀರಕ್ಷೆ'.

'ರೂಪದರ್ಶಿಯಾಗಿ, ನಟಿಯಾಗಿ ಯಾವ ಅನಾನುಕೂಲಕ್ಕೆ ಒಳಗಾಗಿರುವಿರೆಂದು ನಿಮ್ಮ ಅಭಿಪ್ರಾಯ?'

ಇಂಥ ಕಾರ್ಯ ಕ್ಷೇತ್ರಗಳಲ್ಲಿ ನಾನೊಬ್ಬ ಸ್ತ್ರೀ ಎಂಬ ಕಾರಣಕ್ಕಾಗಿ ಇತರರ ಅನಾದರ, ಅಸಡ್ಡೆ ಅತಿ ಸಲುಗೆ, ಅಪಮಾನಗಳಿಗೊಳಗಾಗಿಲ್ಲ. ಕನ್ನಡಿಯಂತಿರುವ ಈ ಜಗತ್ತಿನಲ್ಲಿ ನನ್ನ ಕ್ರಿಯೆಗಳಿಗೆ ತಕ್ಕ ಪ್ರತಿಕ್ರಿಯೆ ದೊರಕುವುದು ಎಂಬ ಮಾತಿನ ಸತ್ಯವನ್ನು ನನ್ನ ವೃತ್ತಿ ಜೀವನದಲ್ಲಿ ಕಂಡುಕೊಂಡಿದ್ದೇನೆ. ಆದುದರಿಂದ ನಾನು ಮರೆಯಲಿಚ್ಛಿಸುವ ನೆನಪುಗಳು ನನಗಿಲ್ಲ'.

'ಗಾಡಗೀಳ್ ಬದಲು ಸರಾಫ್ ಆದುದು ಹೇಗೆ?;

'ಓಹ್! ಅದೇ! 'ಸರಾಫ್' ಮಧುರರ ಅಡ್ಡ ಹೆಸರು. ಅವರೂ ಇಲ್ಲಿಯವರೇ. 29 ವರ್ಷದ, ಗಣಕಯಂತ್ರ 'ಹಾರ್ಡ್‌ವೇರ್' ಎಂಜಿನಿಯರ್. ಆದರೂ ಜಾಹೀರಾತು ಪ್ರಪಂಚದ ಗೀಳು. 'ಪೆಪ್ಸೋಡೆಂಟ್ ಪೇಸ್ಟ್'ದ ಜನಪ್ರಿಯತೆಗೆ ಕಾರಣರಾದವರು. ಛಾಯಾಗ್ರಹಣದ ಹವ್ಯಾಸ ಎಷ್ಟು ಪ್ರಬಲವೆಂದರೆ 'ಜನ-ಜೀವನ' ಛಾಯಾಗ್ರಹಣದಲ್ಲಿ ಭಾರತದಲ್ಲಿರುವ ಕಲಾವಿದರಲ್ಲಿ ಮೊದಲ ಇಪ್ಪತ್ತರಲ್ಲೊಬ್ಬರು. ಸ್ವ-ಪ್ರಯತ್ನದಿಂದ ನಿರಂತರ ಸಾಧನೆಯಲ್ಲಿದ್ದು ಯಶಸ್ಸನ್ನು ಗಳಿಸಿದವರು.

'1995ರ ನನ್ನ ಮಾಡಲಿಂಗ್ ಛಾಯಾಚಿತ್ರಗ್ರಹಣದಲ್ಲಿ ನಮ್ಮ ಮೊದಲ ಭೇಟಿ. ನನ್ನ ಧನಾತ್ಮಕ ಅಂಶಗಳಿಂದ ಪ್ರಭಾವಿತ. ನೇರವಾಗಿ ನನ್ನ ತಂದೆ - ತಾಯಿಗಳೊಂದಿಗೆ ಮದುವೆಯ ಪ್ರಸ್ತಾಪ. ಆದರೆ, ಹೊತ್ತುಗೊತ್ತಿಲ್ಲದ ಅನಿಯಮಿತ ಜೀವನ ಸಾಗಿಸುವ ಸಂಗಾತಿಯ ಬಗೆಗೆ ನನಗೆ ಗೌರವವಿರಲಿಲ್ಲ. ಹಾಗಾಗಿ ನಾನು ನಯವಾಗಿ ತಿರಸ್ಕರಿಸಿದೆ. ಸರಿಯಾಗಿ ಒಂದು ವರ್ಷದ ನಂತರ ಪ್ರಸ್ತಾಪ ನವೀಕೃತ. ಈ ಅವಧಿಯಲ್ಲಿ ನನಗೆ ಅವರ ಸ್ವಯಂ-ಸಿದ್ಧಿಯ ಪರಿಚಯವಾಗಿತ್ತು. ನನ್ನ ಆಕಾಂಕ್ಷೆಯೂ 'self made' ಆಗುವುದಾಗಿತ್ತು. ಇದು ಪ್ರೇಮಾಂಕುರಕ್ಕೆ ನೀರೆರೆಯಿತು. 'ನೀನು ಪ್ರೀತಿಸಿದವನನ್ನು ಮದುವೆಯಾಗುವುದಕ್ಕಿಂತ ನಿನ್ನನ್ನು ಪ್ರೀತಿಸುವವನನ್ನು ವರಿಸು' ಎಂಬುದು ಸೂಕ್ತ ಮಾರ್ಗದರ್ಶನವೆನ್ನಿಸಿತು. ಪರಿಣಾಮ ನನಗಾಗಿ ವರ್ಷಗಟ್ಟಲೆ ಕಾಯಲು ಸಿದ್ಧವಿರುವ, ಚಲನಚಿತ್ರಗಳ ನಾಯಕರಂತೆ ವರ್ತಿಸದಿರುವ, ಮಧುರರ ಸುಸಂಸ್ಕೃತ, ಸಂಯಮಭರಿತ ನಡಾವಳಿ ಎಲ್ಲರಿಗೂ ಒಪ್ಪಿಗೆಯಾಗಿ, 1998ರಲ್ಲಿ ಶಾಸ್ತ್ರಬದ್ಧವಾಗಿ ನಮ್ಮ ಮದುವೆ ಜರುಗಿತು. ಈ ಬಂಧನವನ್ನು ಹೊಂದಾಣಿಕೆ, ಪರಸ್ಪರ ವಿಶ್ವಾಸಗಳ ಮೂಲಕ ಕೊನೆಯ ತನಕ ಕಾಯ್ದುಕೊಳ್ಳುವ ದೃಢ ನಿರ್ಧಾರ ನಮ್ಮದು. ಅದಕ್ಕಾಗಿ ನಾವಿಬ್ಬರೂ ನಮ್ಮ ನಮ್ಮ ವೃತ್ತಿ ಜೀವನದಲ್ಲಿ ಅವಶ್ಯಕ ಹೊಂದಾಣಿಕೆಗೂ ಸಿದ್ಧ. ಮಧುರರ ಸಾಹಚರ್ಯ ಕಲಾವೃತ್ತಿ ಜೀವನದಲ್ಲಿ ಪ್ರಗತಿಗೆ ಪ್ರೇರಕ ಶಕ್ತಿ. ಅವರು ನನ್ನ ಕಟು ವಿಮರ್ಶಕರು! ನನ್ನ ದಕ್ಷತೆಯನ್ನು ಮನಗಂಡಿರುವ ಮಧುರ್ ಎಲ್ಲ ಜವಾಬ್ದಾರಿಯನ್ನೂ ನನಗೆ ವಹಿಸಿ ತಣ್ಣಗಿದ್ದಾರೆ!'

'ಈ ಕಲಾರಂಗಗಳಿಗೆ ಪ್ರವೇಶಿಸುವವರಿಗೆ ಏನು ಹೇಳಬಯಸುವಿರಿ?'


'ಅಷ್ಟು ಪ್ರಬುದ್ಧಳಲ್ಲ ನಾನು. ಆದರೆ ನನ್ನ ಚಿಂತನೆ ಹೀಗಿದೆ: ನನಗೆ ಗೊತ್ತಿದ್ದುದೆಲ್ಲದಕ್ಕಾಗಿ ನನಗೆ ಹೆಮ್ಮೆಯಿದೆ; ನನಗೆ ಗೊತ್ತಿರದಿದ್ದುದು ಸಾಗರದಷ್ಟಿರುವುದರ ಕಲ್ಪನೆಯೂ ನನಗಿದೆ. ಹಾಗಾಗಿ, ನನ್ನ ಕಣ್ಣು 'ಪರಿಪೂರ್ಣತೆ ದಾರಿ'ಯ ಮೇಲೆ ನೆಟ್ಟಿದೆ. ನಾನು ಯಾರನ್ನೂ ಅನುಕರಿಸಲಿಚ್ಛಿಸುವುದಿಲ್ಲ. ಉಪಾಹಾರ ಗೃಹಗಳಲ್ಲಿ 'ಸಂಗೀತಾ' ಎಂಬುದೊಂದು ಖಾದ್ಯ ದೊರಕುತ್ತದೆ. ವಿವಿಧ ಖಾದ್ಯಗಳಲ್ಲಿನ ರುಚಿ ಅದರಲ್ಲಿ ಹಿತ-ಮಿತವಾಗಿ ಮೇಳೈಸಿರುತ್ತದೆ. ಆದರೂ ಅದೊಂದು ಪ್ರತ್ಯೇಕ ಖಾದ್ಯ! ನಾನು ಮತ್ತು ನನ್ನ ಸಹಕಲಾವಿದರೆಲ್ಲ 'ಸಂಗೀತಾ' ಆಗಬೇಕೆಂಬುದೇ ನನ್ನ ಹೆಗ್ಗುರಿ; ನನ್ನ ಸದಿಚ್ಛೆ!

'ಈ ಮಹಿಳೆಯನ್ನೆಲ್ಲೋ ನೋಡಿರುವೆ', ಎಂಬ ಪ್ರಶ್ನೆ ಕಾಡುವುದು ಕರಗಿ ಬಹಳ ಸಮಯವಾಗಿತ್ತು. ■









ಉತ್ತರ ಕರ್ನಾಟಕದವರಿಗೆ ಹಳೆಯ ಮೈಸೂರು ಜನರ ನಡವಳಿಕೆ ಅಷ್ಟಾಗಿ ಹಿಡಿಸದು. ಹಳೆಯ ಮೈಸೂರು ಪ್ರಜೆಗಳಿಗೆ ಉತ್ತರ ಕರ್ನಾಟಕದ ಬಗ್ಗೆ ಅಸಡ್ಡೆ. ಈ ನಡುವೆ ಹಲವು ಕಾರಣಗಳನ್ನು ಮುಂದೊಡ್ಡಿ ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯದ ಕೂಗೆಬ್ಬಿಸುತ್ತಿದ್ದಾರೆ ಕೆಲವರು. ಈ ಕುರಿತ ಕುತೂಹಲಕಾರಿ ಚಾರಿತ್ರಿಕ ಸಂಗತಿಗಳನ್ನು ತಮ್ಮದೇ ಆದ ಶೈಲಿಯಲ್ಲಿ ನಿರೂಪಿಸಿದ್ದಾರೆ ಡಾ. ಶ್ರೀನಿವಾಸ ಹಾವನೂರ.

ತುಂಗಭದ್ರೆ! ನಾಡಿಗೆ ವರವೊ, ಶಾಪವೊ?

"ನೀವು ತುಂಗಭದ್ರೆಯ ಆಚೆಯವರು, ಸ್ವಾಮಿ" ಎಂದು ಅನ್ನಿಸಿಕೊಂಡಿದ್ದ ನನಗೆ ಇತಿಹಾಸದ ಪುಟಗಳಲ್ಲಿ ಉತ್ತರ ದೊರೆಯಿತು. ಬ್ರಿಟಿಷರು ನಾಡನ್ನು ಹರಿದು ಹಂಚಿ-ಹಾಕಿದರು ಎಂದು ನಾವು ಸಾಮಾನ್ಯವಾಗಿ ಹೇಳುವುದುಂಟು. ಆದರೆ ಅದು ಅರ್ಧಸತ್ಯ ಮಾತ್ರ. ಕಳೆದ ಎಂಟುನೂರು ವರ್ಷಗಳಿಂದ ಈ ಸಾಂಸ್ಕೃತಿಕ ಬಿರುಕು ಆಗುತ್ತಲೇ ಇದ್ದಿತೆಂಬುದುನ್ನು ನೋಡಿದ್ದೇವೆ.

■ ಡಾ.ಶ್ರೀನಿವಾಸ ಹಾವನೂರ

36, ವಿನಾಯಕ ಲೇಔಟ್, ವಿಜಯನಗರ 3ನೇ ಸ್ಟೇಜ್, ಬೆಂಗಳೂರು - 560 040

ಮಂಡ್ಯದಲ್ಲಿಯ ನನ್ನ ಮಿತ್ರರು ತಮ್ಮ ಗುರುತಿನವರೊಬ್ಬರಿಗೆ ನನ್ನನ್ನು ಪರಿಚಯಿಸುತ್ತ "ಇವರು ಡಾ.ಹಾವನೂರು. ಒಳ್ಳೇ..." ಎಂದೆಲ್ಲ ಹೇಳುವಾಗ ಆ ವ್ಯಕ್ತಿ "ನೀವು ಯಾವೂರವರು, ಸ್ವಾಮಿ?" ಎಂದು ಕೇಳಿದರು. ನಾನು "ಹಾವನೂರವನೇ" ಎಂದೆ. "ಎಲ್ಲಿದೆ?" ಎಂದು ಕೇಳಿದ್ದಕ್ಕೆ "ಧಾರವಾಡ ಜಿಲ್ಲೆಯಲ್ಲಿದೆ" ಎಂದು ಉತ್ತರಿಸಿದೆ. ಆದಕ್ಕೆ ಅವರು "ಓಹೋ! ನೀವು ತುಂಗಭದ್ರೆಯ ಆಚೆಯವರು!" ಎಂದು ಉದ್ಗರಿಸಿದರು. ಥಟ್ಟನೆ ಏನು ಉತ್ತರ ಹೇಳಬೇಕೊ ಹೊಳೆಯಲಿಲ್ಲ. ತುಂಗಭದ್ರೆಯ ಆಚೆಯವರು ಎಂದರೆ 'ಉತ್ತರ ಕರ್ನಾಟಕದವರು; ಈಚೆಯವರು ಎಂದರೆ ನಾವು ಮೈಸೂರು ಸೀಮೆಯವರು' ಎಂಬ ಅವರ ಆಶಯ ಸ್ಪಷ್ಟವಾಗಿತ್ತು. ಏಕೀಕರಣ ವಾಗಿ ನಾಲ್ಕು ದಶಕಗಳು ಕಳೆದುಹೋಗಿದ್ದರೂ ಈ ಭೇದಭಾವ ನಿಚ್ಚಳವಾಗಿ ಉಳಿದುಕೊಂಡು ಬಂದಿದೆಯಲ್ಲ ಎಂದು ಬೇಸರವಾಯಿತು.

ಇದನ್ನು ನಮ್ಮ ಡಾ.ಎಚ್.ಎಸ್. ಗೋಪಾಲ ರಾಯರೆದುರು ಪ್ರಸ್ತಾಪಿಸಿದಾಗ "ಇದಕ್ಕೆಲ್ಲ ನಿಮ್ಮ ತುಂಗಭದ್ರೆಯೇ ಕಾರಣ. ಈ ನದಿ ಅಡ್ಡಲಾಗಿ ಹರಿದು ಕನ್ನಡ ನಾಡನ್ನು ಸಾಂಸ್ಕೃತಿಕವಾಗಿ ಸೀಳಿ ಹಾಕಿದೆ!" ಎಂದರು. ('ನಿಮ್ಮ' ಎಂದು ಅವರು ವಿಶ್ಲೇಷಿಸಿದ್ದರ ಕಾರಣ ಹಾವನೂರು ಗ್ರಾಮವು ತುಂಗಭದ್ರೆಯ ತೀರದಲ್ಲೇ ಇದ್ದು ನಾನು ಆ ನೀರನ್ನು ಕುಡಿದೇ ಬೆಳೆದವನೆಂದು). ಆ ಮುಂದೆ ನಾವು ಈ ವಿಷಯವಾಗಿ ಪರಸ್ಪರ ವಾದಿಸಿದ್ದರ ಫಲವೇ ಈ ಪ್ರಬಂಧ.

ಯಾವುದೇ ನದಿಯು ತನ್ನ ಪಾಡಿಗೆ ತಾನು ಹರಿಯುತ್ತಿರುತ್ತದೆ. ಆದರೆ ಅದರ ಪರಿಣಾಮ ಅಲ್ಲಿಯ ಜನಜೀವನದ ಎಲ್ಲ, ಅಂದರೆ ಅಕ್ಷರಶಃ ಎಲ್ಲ ಕ್ಷೇತ್ರಗಳಲ್ಲಿ ಕಂಡುಬರುತ್ತದೆ -ಅಲ್ಲಿಯ ಜನತೆಯ ಒಳ್ಳೆಯದಕ್ಕೇ. ಅದಕ್ಕೆಯೇ, ನೈಲ್, ಥೇಮ್ಸ್, ನಮ್ಮ ಗಂಗಾನದಿ-ಎಲ್ಲವೂ ವರನದಿ, ಜೀವನದಿ, ಪವಿತ್ರನದಿ ಎನಿಸಿಕೊಂಡಿವೆ. ಹೀಗೆ ನದಿಯು ತನ್ನ ನೆರೆಯ ಜನಾಂಗದ ಸಂಸ್ಕೃತಿಯನ್ನು ರೂಪಿಸುವ, ಅದರ ಇತಿಹಾಸವನ್ನೇ ನಿರ್ಮಿಸುವ ಸಾಮರ್ಥ್ಯವುಳ್ಳದ್ದು.

ನಮ್ಮ ನಾಡಿನಲ್ಲಿ ಇಂತಹ ಮೂರು ದೊಡ್ಡ ನದಿಗಳಿವೆ. ಉತ್ತರದ ಗಡಿಯಲ್ಲಿಯ ಕೃಷ್ಣೆ; ದಕ್ಷಿಣ ಭಾಗವನ್ನು ಪೋಷಿಸುತ್ತಿರುವ ಕಾವೇರಿ ಇವೆರಡೂ ನಮ್ಮವರ ಪಾಲಿಗೆ ವರನದಿಗಳು. ಮೂರನೆಯದೇ ತುಂಗಭದ್ರೆ. ಕನ್ನಡ ನಾಡಿನಲ್ಲಿಯೆ ಉಗಮ ಹೊಂದಿ, ದಕ್ಷಿಣ-ಪೂರ್ವಾಭಿಮುಖವಾಗಿ, ನಾಡ ಮಧ್ಯದ ಐದು ಜಿಲ್ಲೆಗಳಲ್ಲಿ ಹರಿದು ಕೃಷ್ಣಾನದಿಯನ್ನು ಕೂಡಿಕೊಂಡಿದೆ. ಈ ಮೂರು ನದಿಗಳಲ್ಲಿ ಮಾರ್ಗ ಕ್ರಮಣ ತುಸು ಹೆಚ್ಚು ಕಡಿಮೆ ಒಂದೇ ಆಗಿದ್ದರೂ (360-400), ತುಂಗಭದ್ರೆಯ ಜಲಾನಯನ ಪ್ರದೇಶವು ಇತರ ನದಿಗಳಿಗಿಂತ ಹೆಚ್ಚು ವಿಸ್ತಾರ ಹೊಂದಿದೆ.

ತುಂಗಭದ್ರೆಯು ಇನ್ನು ಕೆಲವು ಹೆಚ್ಚಳಗಳನ್ನು ಹೊಂದಿದೆ. ಇದಕ್ಕೆ ಸೇರುವ ಉಪನದಿಗಳ, ಹಳ್ಳಗಳ ಸಂಖ್ಯೆ ದೊಡ್ಡದು. (ಇಪ್ಪತ್ತಕ್ಕೂ ಮೇಲ್ಪಟ್ಟು). ನದೀ ಪ್ರವಾಹದಲ್ಲಿ ಕಲ್ಲಿನ ಬಂಡೆಗಳು ಹೇರಳವಾಗಿ ಕಾಣಿಸಿಕೊಂಡರೂ ಒಟ್ಟಿನಲ್ಲಿ ಸಮತಟ್ಟಾದ ನೆಲದಲ್ಲಿಯೇ ಹರಿದು ಬಂದಿದೆ. ಮೋಜೆಂದರೆ ಎಲ್ಲಿಯೂ ಜಲಪಾತ ಇಲ್ಲ. ಶಿವಮೊಗ್ಗ ಜಿಲ್ಲೆಯ ಕೂಡಲಿಯಲ್ಲಿ ತುಂಗೆ, ಭದ್ರೆ ಇವೆರಡು ಸಂಗಮವಾಗಿ ಮುಂದುವರಿದಾಗ ಆ ಎರಡು ಹೆಸರುಗಳು ಸೇರಿದ ಹೆಸರೇ ಇದಕ್ಕಿದೆಯಷ್ಟೇ. ಹೀಗೆ ಜೋಡಿ ಹೆಸರಿನ ನದಿಗಳು ದೇಶದಲ್ಲಿಯೇ ಅಪರೂಪ.

ತುಂಗಭದ್ರಾ ಎಂಬ ಹೆಸರು ಎಷ್ಟೇ ಪ್ರಾಚೀನವಾದರೂ ಇತಿಹಾಸ ಕಾಲದ್ದೇ ಅದು. ಪೌರಾಣಿಕ, ಯುಗದಲ್ಲಿಯೂ ಇದರ ಪ್ರಸಿದ್ಧಿ ಇದೆ. ರಾಮಾಯಣ ಕಾಲದಲ್ಲಿ ಅದರ ಹೆಸರು 'ಪಂಪಾ' ಎಂಬುದು. ಶ್ರೀರಾಮನ ವನವಾಸ, ವಾಲಿ ಸುಗ್ರೀವಾದಿಗಳ ಕಿಷ್ಕಿಂಧೆ. ಇದರ ಆಸುಪಾಸಿನಲ್ಲಿಯೇ ನಡೆಯಿತು.

ನೀರಿದ್ದಲ್ಲಿ ನೇಮ ಹೆಚ್ಚು. ಆ ರೀತಿಯ ಧಾರ್ಮಿಕ ಶ್ರದ್ಧೆಯಿಂದಾಗಿ ನದೀ ತೀರದ ಹತ್ತೈವತ್ತು ಕಡೆಗಳಲ್ಲಿ ದೇವಾಲಯಗಳು ನಿರ್ಮಿತವಾಗಿವೆ. ತೀರ್ಥ ಕ್ಷೇತ್ರಗಳೆನಿಸಿಕೊಂಡಿವೆ. ಜೊತೆಗೆ ಶಿಲ್ಪಕಲೆಯ ಆವಿರ್ಭಾವಕ್ಕೂ ಅವಕಾಶ ಒದಗಿದೆ. ವಿಶೇಷತಃ ಚಾಲುಕ್ಯ ಶೈಲಿಗೆ ಇಲ್ಲಿ ಅಗ್ರಪಟ್ಟ. ಸಂಗಮ ಸ್ಥಾನವನ್ನು ದಾಟಿದ ಅನಂತರ ಹರಿಹರದಲ್ಲಿ ಹರಿಹರೇಶ್ವರ, ಕುರವತ್ತಿಯಲ್ಲಿ ಮಲ್ಲಿಕಾರ್ಜುನ, ಮೈಲಾರದಲ್ಲಿ ಮೈಲಾರ ದೇವರು, ಗಳಗನಾಥದ ಗಳಗೇಶ್ವರ, ಬಿದರಹಳ್ಳಿಯ ಅಶ್ವತ್ಥನಾರಾಯಣ ಇವೇ ಮುಂತಾದವುಗಳು ಹೆಸರಾಂತ ದೇವತಾ ಸನ್ನಿಧಿಗಳು. ಹಂಪಿಯಲ್ಲಂತೂ ವಿರೂಪಾಕ್ಷ, ಪುರಂದರ ಮಂಟಪ, ನವವೃಂದಾವನ ಏನೆಲ್ಲಾ ಇವೆ. ಹಂಪಿಯ ಜೊತೆಗೆ ಹೊಸಪೇಟೆಯ ಆನೆಗೊಂದಿಗಳನ್ನೂ ಪ್ರಸಿದ್ಧ ಸ್ಥಳಗಳೆಂದೇ ಪರಿಗಣಿಸಬೇಕು. ಹಾಲ್ವಿ, ಮಂತ್ರಾಲಯಗಳು ಸದ್ಯ ಆಂಧ್ರದಲ್ಲಿದ್ದರೂ ಅಲ್ಲಿಯ ಸ್ವಾಮಿಗಳು ನಮ್ಮವರೇ. ಶ್ರೀರಾಘವೇಂದ್ರ ಯತಿವರರನ್ನು ಅನೇಕ ಹರಿದಾಸರು ಮನದುಂಬಿ ಸ್ತುತಿಸಿದ್ದಾರಷ್ಟೇ, ಆಗೆಲ್ಲ ತುಂಗಭದ್ರೆಯನ್ನು ಪ್ರಸ್ತಾಪಿಸಿದುದಿದೆ (ಉದಾ: ತುಂಗಾತೀರದಿ ನಿಂತ ಸುಯತಿ ವರನ್ಯಾರೆ ಪೇಳಮ್ಮಯ್ಯ').

ಅದೆಷ್ಟು ಜನ ಕವಿಗಳು, ತುಂಗಭದ್ರೆಯನ್ನು ಹೊಗಳಿದ್ದಾರೆ! ಆ ನದಿಯ ನೀರನ್ನು ಕುಡಿದು ಬೆಳೆದದ್ದರ ಋಣವನ್ನು ತೀರಿಸುವಂತಿದೆ ಆ ಹೊಗಳಿಕೆ. ಹರಿಹರನು ಇದನ್ನು 'ಮಹಾನದೀಶ್ವರಿ' ಎಂದು ಕರೆದದ್ದು ಮಾತ್ರವಲ್ಲದೆ, ತನ್ನ 'ಗಿರಿಜಾಕಲ್ಯಾಣ'ದಲ್ಲಿ ಶಿವ-ಪಾರ್ವತಿಯರ ವಿವಾಹವನ್ನು ದೇವಲೋಕದಲ್ಲಿ ನಡೆಸದೇ ಈ ನದೀತೀರದಲ್ಲೇ ಜರುಗಿಸುವಷ್ಟು ಆತ್ಮೀಯತೆಯನ್ನೂ ತೋರಿದ್ದಾನೆ. ರಾಘವಾಂಕನಿಗಂತೂ ಇದು 'ಪಾಪನಾಶಿನಿ'. ಚಾಮರಸ, ಸಿದ್ಧ ನಂಜೇಶರ ಹೊಗಳಿಕೆಯೂ 'ಡಿಟ್ಟೋ'! ಚಂದ್ರಶೇಖರ ಎಂಬ ಕವಿಯು ಉತ್ತರದ ಗಂಗಾ, ಯಮುನಾ, ಸರಸ್ವತಿ - ಈ ನದಿಗಳಿಗಿಂತಲೂ ಮಿಗಿಲು ಎಂಬುದನ್ನು, ಕಾರಣ ಕೊಟ್ಟು ವಿವರಿಸಿದ್ದಾನೆ. ಲಕ್ಕಣ್ಣ ದಂಡೇಶನು ತುಂಗಾ, ಭದ್ರಾ - ಈ ಎರಡು ಹೆಸರುಗಳನ್ನು ಎತ್ತಿಕೊಂಡು ಅವುಗಳಲ್ಲಿ ವಿಶೇಷ ಅರ್ಥವನ್ನು ಕಂಡಿದ್ದಾನೆ.

'ಸಕಲ ತೀರ್ಥದ ಮಹಿಮೆಯಂ ತನ್ನೊಳಂಗೀಕರಿಸಿ ಧರಾತಳದ ಜೀವರ್ಗೆಲ್ಲ ತುಂಗೆ'; ಭದ್ರ ಲಕ್ಷಣವಿಡಿದುದರಿಂದ ಭದ್ರೆ' ಎಂದಿದ್ದಾನೆ.

ಆಧುನಿಕ ಕವಿಗಳೂ ಈ ಸ್ತುತಿಯ ಸೊಲ್ಲಿನಲ್ಲಿ ಹಿಂದೆ ಬಿದ್ದವರಲ್ಲ. ಅಕಬರ ಅಲಿ, ಚೆನ್ನವೀರ ಕಣವಿ, ಚಂದ್ರಕಾಂತ ಕುಸನೂರ, ಶಾಂತರಸ, ಜಿ.ಎಸ್.ಸಿದ್ಧಲಿಂಗಯ್ಯ... ಪಟ್ಟಿ ಇನ್ನೂ ದೊಡ್ಡದಿದೆ.


ನದೀ ತೀರದ ಹಳ್ಳೂರು - ಎಂಬಲ್ಲಿ ಉತ್ಖನನ ಮಾಡಿದಾಗ, ಪ್ರಾಗೈತಿಹಾಸಿಕ ಕಾಲದ ಜನ ಜೀವನದ ಕುರುಹು ಕಂಡು ಬಂದಿದ್ದು ಅನಾದಿ ಕಾಲದಿಂದ ಇದರ ಪ್ರತಿಷ್ಠೆ - ಪ್ರಭಾವ ಇದೆಯೆನ್ನಬೇಕು.

ಹೀಗಿರುತ್ತ ಇದನ್ನು ವರನದಿಯೇ ಎನ್ನಬೇಕಲ್ಲವೆ?

ಇತಿಹಾಸ ಕಾಲದಲ್ಲಿ

ನಮ್ಮ ಇತಿಹಾಸದ ಹಲವಾರು ಗ್ರಂಥಗಳಲ್ಲಿ ನದಿಗಳ ಪ್ರಸ್ತಾಪ ಬರುತ್ತದೆ. ಆದರೆ ಎಲ್ಲಕ್ಕೂ ಹೆಚ್ಚು ಕಾಣಿಸಿಕೊಂಡದ್ದು ಈ ನದಿಯೇ. (ಮೋಜಿಗಾಗಿ ಈ ಸಂಖ್ಯೆಗಳನ್ನು ಕೊಡುವೆ. ಡಾ.ಪಿ.ಬಿ.ದೇಸಾಯಿರವರ ಚಿರಪರಿಚಿತ ಕರ್ನಾಟಕ ಇತಿಹಾಸದ ಪುಸ್ತಕದಲ್ಲಿ ಕಾವೇರಿ ನದಿಯ ಪ್ರಸ್ತಾಪ 18 ಸಲ; ಕೃಷ್ಣಾನದಿಯದು 24 ಸಲ ಇದ್ದರೆ, ತುಂಗಭದ್ರೆಯದು 40 ಸಾರಿ ಬಂದಿದೆ).

ಹಾಗೆಂದು ಚರಿತ್ರೆಯ ಎಲ್ಲ ಕಾಲದಲ್ಲಿ ಈ ನದಿ ಗಣನೀಯ ಪಾತ್ರ ವಹಿಸಿದೆ ಎಂದಲ್ಲ. ಕದಂಬ, ಗಂಗ, ಬಾದಾಮಿ ಚಾಲುಕ್ಯರ ಆಳ್ವಿಕೆಯಲ್ಲಿ ಇದು ನಗಣ್ಯವಾಗಿದ್ದಿತು. ರಾಷ್ಟ್ರಕೂಟರ ಕಾಲದಲ್ಲಿ ಅದೇ ಸ್ಥಿತಿ ಎನ್ನಬಹುದಾದರೂ, ಅವರ ಒಂದು ಸಂದರ್ಭ ಶಾಸನೋಕ್ತವಾಗಿದೆ. ಎರಡನೆಯ ಗೋವಿಂದನು ದಕ್ಷಿಣದ ಪಾಂಡ್ಯ, ಚೋಳ, ಗಂಗರನ್ನು ಸೋಲಿಸಿ ಹಿಂತಿರುಗುವಾಗ ತುಂಗಭದ್ರೆಯ ತೀರವೊಂದರಲ್ಲಿ ತಂಗಿ, ನೆರೆಯ ಕಾಡಿನಲ್ಲಿ ಹಂದಿಯ ಬೇಟೆಯನ್ನಾಡಿದನಂತೆ!



ಚೋಳ-ಚಾಲುಕ್ಯರು

ಆ ಮುಂದಿನ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಮಾತ್ರ, ಈ ನದಿಯು ಮುಖ್ಯ ಪಾತ್ರ ವಹಿಸಿದೆ. ಈ ಚಾಲುಕ್ಯರಿಗೂ ಚೋಳರಿಗೂ ಹನ್ನೊಂದನೆಯ ಶತಮಾನವಿಡೀ ಯುದ್ಧಗಳು ಜರುಗಿದವು. ಅವರ ಯುದ್ಧಗಳ ಮೂಲ ಕಾರಣ ಎಂದರೆ ಚಾಲುಕ್ಯರಿಗೆ ನದಿಯಾಚೆಗಿನ ವೆಂಗಿ ಪ್ರದೇಶವನ್ನು (ಅಲ್ಲಿ ಆಳುತ್ತಿದ್ದವರು ದಾಯಾದಿ ಚಾಲುಕ್ಯರೇ) ತಮ್ಮದಾಗಿಸಿಕೊಳ್ಳಬೇಕೆಂದಿದ್ದರೆ, ಚೋಳರಿಗೆ ತುಂಗಭದ್ರಾ-ಕೃಷ್ಣಾ ನಡುವಿನ ಫಲವತ್ತಾದ ಪ್ರದೇಶದ ಮೇಲೆ ಕಣ್ಣಿದ್ದಿತು.

ಚೋಳರ 'ರಾಜರಾಜ' ಎಂಬುವನು (985-1014) ಪ್ರಬಲನಿದ್ದು, ತನ್ನ ಸಮಕಾಲೀನನಾದ ಚಾಲುಕ್ಯ ಸತ್ಯಾಶ್ರಯನೊಂದಿಗೆ (997-1008) ಸೆಣಸಿ, ವಿಜಾಪುರ ಜಿಲ್ಲೆಯ ಒಳತನಕ ದಂಡೆತ್ತಿ ಹೋದನು. ತಿರುಗಿ ಬರುವಾಗ ಅವನ ಆನೆಗಳು ತುಂಗಭದ್ರೆಯ ನೀರನ್ನೆಲ್ಲ ಕದಡಿ ರಾಡಿ ಮಾಡಿದುವಂತೆ. ಅವನ ಮಗ ರಾಜೇಂದ್ರ ಚೋಳನು (1014-1044) ಇನ್ನಷ್ಟು ಪ್ರಬಲನೆನಿಸಿ ದೂರದ ಮಳಖೇಡದವರೆಗೂ ಸಾಗಿ ಹೋದನಂತೆ. ಈ ಬಗ್ಗೆ ವಿವರಗಳನ್ನು ಕೊಡುತ್ತ ಕೆ.ಎ.ನೀಲಕಂಠಶಾಸ್ತ್ರಿಗಳು ಹೀಗೆ ಹೇಳಿದ್ದಾರೆ:

These campaigns resulted in the annexation to the Cola empire of nearly the whole of the modern district of Bellary, so that the Tungabhadra became the boundary between the two empires.(The Colas, p. 176).

ಇನ್ನು ಚಾಲುಕ್ಯರ ಸರದಿ. ಜಯಸಿಂಹನು (1015-1044) ಪ್ರತಿ ದಾಳಿಯನ್ನು ಕೈಕೊಂಡಾಗ ಚೋಳರು ಭೋಜ, ಮುಂತಾದ ಸಾಮಂತರೊಂದಿಗೆ ಅವನನ್ನು ಎದುರಿಸಿದರು. ಜಯಸಿಂಹನು ಆ ಒಕ್ಕೂಟವನ್ನು ಸದೆಬಡೆದನಲ್ಲದೆ, ಬಳ್ಳಾರಿ ಪ್ರದೇಶದಿಂದ ಅವರನ್ನು ಹೊರದೂಡಿದನು. ಹೀಗೆ ಒಮ್ಮೆ ಚೋಳರು, ಮತ್ತೊಮ್ಮೆ ಚಾಲುಕ್ಯರು ಗೆಲ್ಲುವುದು ಇಲ್ಲವೆ ಸೋಲುವುದು ನಡೆದಾಗ ತುಂಗಭದ್ರೆ ಅವರ ನಡುವಿನ ಗಡಿರೇಖೆ ಎಂಬುದು ನೆಲೆಗೊಂಡು ಬಿಟ್ಟಿತು.

ಹನ್ನೊಂದನೆಯ ಶತಮಾನದ ಉತ್ತರಾರ್ಧದಲ್ಲಿಯೂ ಈ ಘರ್ಷಣೆ ಮುಂದುವರಿಯಿತು. ಚಾಳುಕ್ಯ ಸೋಮೇಶ್ವರನಿಗೆ (1042-1068), ಚೋಳರ ರಾಜಾಧಿರಾಜ ಹಾಗೂ ಅವನ ತಮ್ಮ ರಾಜೇಂದ್ರ ಇಬ್ಬರೂ (1044-1052-1063) ತಕ್ಕ ಪ್ರತಿಸ್ಪರ್ಧಿಗಳಾಗಿದ್ದರು. ಅವರ ನಡುವೆ ಆದ ಮೂಡಕ್ಕಾರು ಮತ್ತು ಕೊಪ್ಪಮ್ ಸ್ಥಳಗಳಲ್ಲಿಯ ಯುದ್ಧಗಳು ಇತಿಹಾಸದ ಪುಟಗಳಲ್ಲಿ ದಾಖಲಾದವು. ಆಗೆಲ್ಲ ತುಂಗಭದ್ರೆಯನ್ನು ದಾಟುವ ಇಲ್ಲವೆ ಇದ್ದಲ್ಲಿಯೆ ಉಳಿಯುವಂಥ ಪ್ರಸಂಗಗಳು ಪರಸ್ಪರರ ಸೋಲು-ಗೆಲುವುಗಳಿಗೆ ಪರೋಕ್ಷವಾಗಿ ಕಾರಣೀಭೂತವಾದುವು.

ಮತ್ತೊಂದು ಗಣನೀಯ ಯುದ್ಧವು 2ನೆಯ ಸೋಮೇಶ್ವರ (1069-1076) ಹಾಗೂ ವೀರ ರಾಜೇಂದ್ರ, (1064-1070) ಇವರ ನಡುವೆ ಕೂಡಲ ಸಂಗಮ ಎಂಬಲ್ಲಿ ಜರುಗಿತು. 'ಎಂಬಲ್ಲಿ' ಎಂದುದರ ಕಾರಣ, ವಿಜಾಪುರ ಜಿಲ್ಲೆಯ ಘಟಪ್ರಭಾ-ಕೃಷ್ಣಾನದಿಗಳ ಸಂಗಮ ಇದಾಗಿರದೇ, ಕುಮದ್ವತಿ-ತುಂಗಭದ್ರಾ ಇವುಗಳ ಸಂಗಮ ಸ್ಥಳವಾಗಿರಬೇಕು. (ಅದಕ್ಕೂ ಕೂಡಲ ಸಂಗಮ ಎನ್ನುತ್ತಿದ್ದರೆಂದು ಹಲ್ಟ್ ಅವರು ಊಹಿಸಿದ್ದಾರೆ). ದಕ್ಷಿಣದ ಚೋಳರಿಗೆ ಈ ಸಂಗಮವೇ ಹತ್ತಿರದ್ದು. ಆ ಭೀಕರ ಯುದ್ಧದಲ್ಲಿ ಚಾಲುಕ್ಯರ ಏಳು ಜನ ಸೇನಾಪತಿಗಳು ಚೋಳರಿಗೆ ಸೆರೆ ಸಿಕ್ಕರು. (ಅವರ ಹೆಸರುಗಳೂ ಒಂದು ತಮಿಳು ಶಾಸನದಲ್ಲಿವೆ). ಆಗ ಸೋಮೇಶ್ವರನು ವೀರರಾಜೇಂದ್ರನಿಗೆ "ಈ ರೀತಿ ಅವಮಾನ ಹೊಂದಿ ಬದುಕುವುದುಂಟೆ? ಇದರ ಪರಿಮಾರ್ಜನೆಗಾಗಿ ನಾನು ಮತ್ತೆ ಇದೇ ಜಾಗದಲ್ಲಿ (ಕುಮದ್ವತಿ - ತುಂಗಭದ್ರಾ ಸಂಗಮ) ಸೈನ್ಯ ಸನ್ನದ್ಧವಾಗಿ ಒಂದು ತಿಂಗಳಲ್ಲಿ ಮರಳಿ ಬರುವೆ" ಎಂದು ತಿಳಿಯಪಡಿಸಿದನಂತೆ. 'ಹೋ, ಆಗಲಿ' ಎಂದು ವೀರರಾಜೇಂದ್ರನು ಒಪ್ಪಿ, ತಾನು ಬಂದು ದಾರಿ ಕಾಯ್ದನಂತೆ. ಸೋಮೇಶ್ವರನು ಬರಲಿಲ್ಲವಂತೆ.

ಈ ಅಂಶ - ಎಂದರೆ ಸೋಮೇಶ್ವರನ ಆಹ್ವಾನ, ಚೋಳರಾಜನ ಕಾಯುವಿಕೆ ಹಾಗೂ ಸೋಮೇಶ್ವರನ ಅನಾಗಮನ ಇವು ನಮ್ಮ ಕಡೆಯ ಯಾವುದೇ ಶಾಸನದಲ್ಲಿ ಉಲ್ಲೇಖವಾಗಿಲ್ಲ (ಅದು ಸಹಜವೇ). ವೀರರಾಜೇಂದ್ರನು ಗೆದ್ದುದಂತೂ ನಿಜ. ಏನೇ ಬರಲಿ, ಇದಾಗಿ ಕೆಲವೇ ತಿಂಗಳಲ್ಲಿ ಸೋಮೇಶ್ವರನು ಮಹಾವ್ಯಾಧಿಯಿಂದ ಬಳಲಿದವನಾಗಿ ಕುರವತ್ತಿಯ ತೀರದ

ತುಂಗಭದ್ರೆಯಲ್ಲಿ ಜಲಸಮಾಧಿಯಿಂದ ಪ್ರಾಣ ತೆತ್ತ. ಈ ವಿಷಯವು ಮಾತ್ರ ಬಿಲ್ಹಣನ ಸುಪ್ರಸಿದ್ಧ 'ವಿಕ್ರಮಾಂಕದೇವ ಚರಿತೆ'ಯಲ್ಲಿ ಹಾಗೂ ಒಂದೆರಡು ಶಾಸನಗಳಲ್ಲಿಯೂ ವೈಭವೋಪೇತವಾಗಿ ವರ್ಣಿತವಾಗಿದೆ.

ಈ ಜಲಸಮಾಧಿಯನ್ನು ಕುರಿತು ನನ್ನವೇ ಆದ ಒಂದೆರಡು ಸಂದೇಹಗಳಿವೆ. ಚಕ್ರವರ್ತಿಯಾದರೇನು, ಮಹಾರೋಗ ಬರಬಾರದೆಂದೇನಲ್ಲ. ಆದರೆ ಅದು ಗುಣವಾಗದೆಂಬ ಕಾರಣದಿಂದ ಜಲಸಮಾಧಿಯಂಥ ಲೋಕರೂಢಿಯಲ್ಲಿಲ್ಲದ ಉಜ್ಜುಗಕ್ಕೆ ತೊಡಗಬೇಕಿತ್ತೆ? ನಮ್ಮಲ್ಲಿ ಸಲ್ಲೇಖನವ್ರತ, ಮಾಸತಿಯರ ಸಹಗಮನ, ಸಶರೀರ ಸಮಾಧಿ (ಕೆಲವು ಮಾಧ್ವ ಯತಿಗಳು ಮಾಡಿದಂತೆ) ಇವು ಕೆಲವು ಧಾರ್ಮಿಕ ಮನ್ನಣೆಯನ್ನು ಪಡೆದಿವೆ.. ಜಲಸಮಾಧಿಯ ಬಗ್ಗೆ ಯಾವುದೇ ಧಾರ್ಮಿಕ ವಿಧಿನಿಯಮ ಇಲ್ಲ. ಬೇರೆ ಯಾರಾದರೂ ಮಾಡಿದ್ದರ ಪ್ರಸ್ತಾಪ ಚರಿತ್ರೆಯಲ್ಲಿ ಬಂದಿಲ್ಲ.

ಈ ಕುರಿತ ನನ್ನ ಅನಿಸಿಕೆ ಇದು. ಅವನು ಚೋಳರೊಡನೆಯ ಯುದ್ಧದಲ್ಲಿ ಸೋತನೆಂದ ಮೇಲೆ 'ಆಹವಮಲ್ಲ' ಎಂಬ ಅವನ ಬಿರುದಿಗೇ ಪೆಟ್ಟು ತಗಲಿದಂತಾಯ್ತಲ್ಲವೆ? ಆದಾವ ಕಾರಣದಿಂದಲೋ, ಮರು ಯುದ್ಧಕ್ಕೆ ಹೋಗಲಿಲ್ಲ ಎನ್ನುವ, ಈ ಸೋಲು ಮತ್ತು ಸಾವುಗಳ ಸಂಬಂಧವನ್ನು ತೋರ್ಪಡಿಸುವ ಈ ಶ್ಲೋಕವನ್ನು ಗಮನಿಸಬೇಕು (ಇದು ಸುಪ್ರಸಿದ್ಧ ಬಾದಾಮಿ ಶಾಸನ-ಕಪ್ಪೆಅರಭಟ್ಟ ಸ್ತುತಿಪರ ವಾದದ್ದು);

ವರಂ ತೇಜಸ್ವಿನೋ ಮೃತ್ಯುಃ ನತು ಮಾನವ ಖಂಡನಂ।

ಮೃತ್ಯುಃ ತತ್ ಕ್ಷಣಿಕೋ ಹಂತಿ ಮಾನಭಂಗಂ ದಿನೇದಿನೇ॥

ಇನ್ನೊಂದು ಪ್ರಶ್ನೆ. ಸೋಮೇಶ್ವರನು ರಾಜಧಾನಿಯಿಂದ ದೂರವಿರುವ ಕುರವತ್ತಿಯನ್ನೇಕೆ ಆಯ್ದುಕೊಂಡ? ಬನವಾಸಿಯ ಬಗ್ಗೆ ಪಂಪನಿಗಿದ್ದಂತೆ ಸೋಮೇಶ್ವರನಿಗೆ ಕುರವತ್ತಿಯ ಬಗ್ಗೆ ವಿಶೇಷ ವ್ಯಾಮೋಹ ಇದ್ದಿರಬಹುದೇ? ಹೌದು ಎಂಬುದಾಗಿ ಅಲ್ಲಿಯ ಶಾಸನಗಳನ್ನು ಅಭ್ಯಸಿಸಿದ ಡಾ. ದೇವರಕೊಂಡಾರೆಡ್ಡಿಯವರು ದೃಢೀಕರಿಸುತ್ತಾರೆ. ಇದೇ ಸೋಮೇಶ್ವರನ ಹೆಂಡತಿ-ಹೊಯ್ಸಳಾದೇವಿ, 1055ರಲ್ಲಿ ನೆರೆಯ ಒಂದು ಕ್ಷೇತ್ರಕ್ಕೆ ದತ್ತಿಬಿಟ್ಟಿದ್ದಾಳೆ. ಅಲ್ಲದೆ ಚೋಳರನ್ನು ಎದುರಿಸ ಹೊರಟಾಗ ಇಲ್ಲಿಯೇ ನದಿಯನ್ನು ದಾಟುತ್ತಿದ್ದ ಪರಿಚಿತ ಸ್ಥಳವಾಗಿರಬೇಕು. ಅಲ್ಲದೆ ಕುರವತ್ತಿಯ ಬಳಿಯಲ್ಲಿ ತುಂಗಭದ್ರೆ ಒಂದಿಷ್ಟು ಬಾಗಿಕೊಂಡು ಹರಿಯುತ್ತಿದ್ದು, ಅಂಥ ಸ್ಥಾನದಲ್ಲಿ ದೇವತಾ ಸನ್ನಿಧಾನವಿರುವುದೆಂಬ ನಂಬಿಕೆ ಈಗಲೂ ಪ್ರಚಲಿತವಿದೆ. ಏನಿದ್ದರೂ ಆ ಮೂಲಕ ಈ ನದಿಯ ಬಗೆಗಿನ ತನ್ನ ಒಲವನ್ನು ತೋರ್ಪಡಿಸಿದ್ದಾನೆ. ಅವನ ಮರಣಾನಂತರ ಕಟ್ಟಿಸಿದ್ದಿರಬಹುದಾದ ಮಲ್ಲಿಕಾರ್ಜುನ ದೇವಾಲಯಕ್ಕೆ ಆಹವಮಲ್ಲೇಶ್ವರ ಎಂದೇ ಹೆಸರಿಟ್ಟು ಆ ಮುಂದಿನವರು ದತ್ತಿ ಬಿಟ್ಟದ್ದಾರೆ.

ಈ ಸೋಮೇಶ್ವರನ ಇನ್ನೊಬ್ಬ ಮಗನೇ ಆರನೆಯ ವಿಕ್ರಮಾದಿತ್ಯ. ಮಹಾ ಪರಾಕ್ರಮಿ. ಚೋಳರನ್ನು ಸದೆಬಡೆಯಲೆಂದು ಅವರ ರಾಜಧಾನಿಯ ತನಕ ಸಾಗಿಬಂದ ವೇಳೆಗೆ ವೀರ ರಾಜೇಂದ್ರನು ಮುದುಕನಾಗಿದ್ದ. ವಿಕ್ರಮಾದಿತ್ಯನನ್ನು ಎದುರಿಸಲಾಗದೇ, ತನ್ನ ಮಗಳನ್ನು ಧಾರೆಯೆರೆದು ಮಿತ್ರತ್ವವನ್ನು ಸಂಪಾದಿಸಿದ. ಆ ನೂತನ ವಧುವಿನೊಂದಿಗೆ ವಿಕ್ರಮಾದಿತ್ಯನು ರಾಜಧಾನಿಗೆ ಹಿಂತಿರುಗುವಾಗ, ತುಂಗಭದ್ರೆಯ ತೀರದಲ್ಲಿ ತಂಗಿದ್ದನಂತೆ. ಈಗಿನ ಪರಿಪಾಠದಲ್ಲಿ ಹೇಳುವುದಾದರೆ ಆ ನದೀತೀರವು ಅವನ ಹನಿಮೂನ್ ತಾಣವಾಯಿತೆನ್ನಬೇಕು! ಅಂತೂ ಈ ಬೀಗತನದಿಂದ ಚಾಲುಕ್ಯ ಚೋಳರ ತುಂಗಭದ್ರೆಯ ಎಡಬಲದಲ್ಲಿಯ ಸಂಘರ್ಷಕ್ಕೆ ತೆರೆಬಿದ್ದಿತು.

ಇನ್ನೀಗ ಚಾಲುಕ್ಯರೊಡನೆ ಯುದ್ಧ ಮಾಡಲು ಹೊಯ್ಸಳರು ಮತ್ತು ಸೇಉಣರ ಸರದಿ. ಹೊಯ್ಸಳರು ಕರ್ನಾಟಕದ ದಕ್ಷಿಣ-ಪೂರ್ವ ಭಾಗದಲ್ಲಿ ರಾಜ್ಯವಾಳುತ್ತಿದ್ದರೆ ಸೇಉಣರು ಈಗಿನ ಮಹಾರಾಷ್ಟ್ರದ ಬಹುಭಾಗ ಮತ್ತು ನಮ್ಮ ನಾಡಿನ ಪಶ್ಚಿಮೋತ್ತರ ಪ್ರದೇಶವನ್ನು ಆಳುತ್ತಿದ್ದರು. ಹೀಗಿರುತ್ತ 12-13ನೆಯ ಶತಮಾನಗಳಲ್ಲಿ ಈ ಮೂವರು ರಾಜಮನೆತನದವರು ಸಮರೋತ್ಸಾಹಿಗಳಾದರು. ಹೊಯ್ಸಳರ ವಿಷ್ಣುವರ್ಧನನು ತುಂಗಭದ್ರೆಯ ಪೂರ್ವ ದಿಕ್ಕಿಗಿರುವ ಕುಮ್ಮಟವನ್ನು ಗೆದ್ದು ನದಿಯನ್ನು ದಾಟಿ ಧಾರವಾಡ ಜಿಲ್ಲೆಯ ಬಹುಭಾಗವನ್ನು ವಶಪಡಿಸಿ ಕೊಂಡನು (1135). ಕೆಲ ಕಾಲದ ಮೇಲೆ ಚಾಲುಕ್ಯರು ಅವರನ್ನು ಸೋಲಿಸಿ ತುಂಗಭದ್ರೆಯ ಗಡಿಯಾಚೆ ದಾಟ ಹಾಕಿದರು... ಇತ್ಯಾದಿ

ಆದರೆ ಆ ಮುಂದಿನ ಸೇಉಣ, ಹೊಯ್ಸಳರ ಸೆಣಸಾಟ ದೀರ್ಘ ಕಾಲದ್ದಾಗಿ ನಾಡನ್ನು ಇಬ್ಭಾಗಿಸುವ ಕೆಲಸಕ್ಕೆ ಗಟ್ಟಿಯಾದ ತಳಹದಿಯನ್ನು ಹಾಕಿತು. ಅದರಲ್ಲಿಯೂ ಸೇಉಣ ಸಿಂಘಣ ಹಾಗೂ ಹೊಯ್ಸಳ ನರಸಿಂಹರ ಕಾದಾಟ, (1235) ಚೋಳ-ಚಾಲುಕ್ಯರದನ್ನು ಪುನರಾವೃತ್ತಿಗೊಳಿಸಿದಂತಿತ್ತು. ಒಂದು ಮಹತ್ತರವಾದ ಸ್ಥಿತ್ಯಂತರವೆಂದರೆ ತುಂಗಭದ್ರೆ, ಅದುವರೆಗೆ ಗಡಿರೇಖೆಯಾಗಿ ಇದ್ದದ್ದು ನಾಡಿನ ವಿಭಜನಾ ರೇಖೆಯಾಗಿ ಪರಿಣಮಿಸಿದ್ದುದು, ಸೇಉಣರನ್ನು ಕುರಿತ ತಮ್ಮ ಗ್ರಂಥದಲ್ಲಿ ಡಾ. ರಿತ್ತಿ ಅವರು ಈ ಅಂಶವನ್ನು ಹೀಗೆ ಎತ್ತಿ ತೋರಿಸಿದ್ದಾರೆ.

From the Sixth to the end of the twelfh century it flourished as one unit between the traditional boundaries of Godavari & Kaveri. (ಕಾವೇರಿಯಿಂದ ಮಾ ಗೋದಾವರಿವರಮಿರ್ದ ನಾಡದಾ....)But it came to be divided into two regions due to the rivalry between Seunas and Hoysalas. Broadly the river became the dividing line. The result was the gradual lessoning of contacts between the two peoples.

ಪಿ.ಬಿ. ದೇಸಾಯಿಯವರಂತೂ ತಮ್ಮ History of Karnatakaದ ಸೇಉಣ ಚರಿತ್ರೆಯ ಕೊನೆಯ ಪ್ಯಾರಾದಲ್ಲಿ "Karnataka Divided' ಎಂದೇ ಶೀರ್ಷಿಕೆ ಕೊಟ್ಟಿದ್ದಾರೆ. ಈ ವಿಷಯದ ಒಂದು ವ್ಯಂಗ್ಯವೆಂದರೆ ಇಬ್ಬರೂ ಕರ್ನಾಟಕದ ರಾಜರೇ ಎನಿಸಿದ್ದರೂ, ಕನ್ನಡಿಗರ ಭಾಷೆ ಹಾಗೂ ಮತಧರ್ಮಗಳು ಒಂದೇ ಆಗಿದ್ದರೂ, ಆಚಾರ-ವಿಚಾರ, ಸಾಮಾಜಿಕ ನಡವಳಿಕೆ, ವೇಷ-ಭೂಷಣ, ಆಹಾರಾದಿ ವಿಷಯಗಳಲ್ಲಿಯೂ ಭಿನ್ನತೆ ಕಂಡುಬರ ತೊಡಗಿದ್ದದ್ದು ಇದೇ ಕಾಲದಿಂದ. ಏನು ಕಾರಣ? ಎಂದರೆ ತುಂಗಭದ್ರೆಯ ಉತ್ತರ ಪ್ರದೇಶವನ್ನಾಳುತ್ತಿದ್ದ ಸೇಉಣರು ಮಹಾರಾಷ್ಟ್ರದ ಆಧಿಪತ್ಯವನ್ನು ಹೆಚ್ಚಾಗಿ ಹೊಂದಿದ್ದರಿಂದ ಆ ಪ್ರದೇಶದ ಸಾಮಾಜಿಕ ಜೀವನಕ್ಕೆ ಅಲ್ಲಿಯ ಕನ್ನಡಿಗರು ಹೊಂದಿಕೊಳ್ಳುವುದು ಅನಿವಾರ್ಯ ವಾಯಿತು. ಸೇಉಣರ ಅನಂತರ ಆ ಪ್ರದೇಶವನ್ನು ಆಳಿದ ಬಹುಮನಿ ಸುಲ್ತಾನರು ಅದನ್ನು ಮುಂದು

ಸರ್ಕಾರಿ ಆಸ್ಪತ್ರೆ

ಸರ್ಕಾರಿ ಆಸ್ಪತ್ರೆಗಳಲ್ಲಿ
ನಿಮಗೆ ದೊರೆವುದು
ಸೇವೆ ಉಚಿತ
ಸ್ವಲ್ಪ ಯಾಮಾರಿದರೂ
ನಿಮಗೆ ಸಾವು ಖಚಿತ

– ಸಿ. ಡಿ. ಹರೀಶ್

ವರಿಸಿದರು. ಹೀಗೆ 'ಇದು ಉತ್ತರ ಕರ್ನಾಟಕ ದಕ್ಷಿಣ ಭಾಗಕ್ಕಿಂತ ಬೇರೆಯದು' - ಎಂಬ ಪ್ರಮೇಯ ನೆಲೆಗೊಂಡದ್ದು ಈ ಹದಿಮೂರನೆಯ ಶತಮಾನದಿಂದ.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ

ಹದಿನಾಲ್ಕನೆಯ ಶತಮಾನದ ಆರಂಭಕ್ಕೆ ನಾಡಿನ ರಾಜಕೀಯ ದೃಶ್ಯ ಆನೆಗೊಂದಿ-ಹಂಪಿ ಈ ಸೀಮೆಗೆ ಸ್ಥಳಾಂತರಗೊಂಡಿತು. ವಿಜಯನಗರ ರಾಜ್ಯವು ಅಸ್ತಿತ್ವಕ್ಕೆ ಬರುವ ಮುನ್ನ, ಎಂದರೆ 1320ರ ಸುಮಾರಿಗೆ ನೆರೆಯ ಕಂಪಲಿಯಲ್ಲಿ ರಾಜ್ಯವಾಳುತ್ತಿದ್ದ ಕಂಪಿಲ ಹಾಗೂ ಕುಮಾರರಾಮ ಇವರನ್ನು ಪ್ರಸ್ತಾಪಿಸತಕ್ಕುದು. ದಿಲ್ಲಿಯ ಮಲಿಕ್‌ಕಾಫರ್‌ನ ದಾಳಿಯನ್ನು ಬಲವಾಗಿ ಎದುರಿಸಿದ ಶಕ್ತಿಶಾಲಿಗಳಿವರು. ಅವರ ಈ ಯಶಸ್ಸಿಗೆ ನದೀ ಮಾರ್ಗದ ಸೂಕ್ತ ಬಳಕೆ ತುಸು ಮಟ್ಟಿಗೆ ಕಾರಣವಾಯಿತು.

ವಿಜಯನಗರ ಸಾಮ್ರಾಜ್ಯವು ಜನ್ಮ ತಾಳಿದ್ದೇ ತುಂಗಭದ್ರೆಯ ಆಸರೆಯಲ್ಲಿ ಮತ್ತು ಕೊನೆವರೆಗೆ ಅದೊಂದೇ ಅವರ ರಾಜಧಾನಿಯಾಗಿ ಉಳಿಯಿತು. ಆ ಹಿಂದಿನ ಹಲವಾರು ಸಣ್ಣ ದೊಡ್ಡ ರಾಜಮನೆತನದವರು ತಮ್ಮ ರಾಜಧಾನಿಯ ಸ್ಥಳವನ್ನು ಬದಲಿಸಿದ್ದರೆನ್ನುವುದನ್ನು ಗಮನಿಸಬೇಕು. ಅಲ್ಲದೆ ಬೇರೆ ರಾಜರಿಗೆ ನದಿಗಳ ಸಂಪರ್ಕ ಆಗೀಗೊಮ್ಮೆ ಎಂಬಂತಿದ್ದರೆ ವಿಜಯನಗರದವರಿಗೆ ದಿನನಿತ್ಯ ಅದರೊಡನೆ ಅವಿನಾಭಾವಿಯಾದ ಸಂಬಂಧ. ವೈರಿಗಳ ಹಠಾತ್ ದಾಳಿಯಿಂದ ರಕ್ಷಿಸಲು ಅದು ಪ್ರಕೃತಿದತ್ತ ಆಶ್ರಯವನ್ನಿತ್ತಿತು. ಆದರ ಆಸು ಪಾಸಿನ ಯುದ್ಧಗಳಲ್ಲಿ ವಿಜಯನಗರದವರೇ ಹೆಚ್ಚಾಗಿ ಗೆಲುವನ್ನು ಸಾಧಿಸಿದ್ದಾರೆ.

ಇತರ ಹಲವು ರೀತಿಯಲ್ಲಿಯೂ ಈ ನದಿಯು ಅವರಿಗೆ ವರದಾನವಾಗಿ ಪರಿಣಮಿಸಿದೆ. ವಿಶೇಷತಃ ನೀರಾವರಿ. ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ವಿಜಯನಗರದ ರಾಜರು ನೀರಿನ ಪ್ರಯೋಜನ ಮಾಡಿಕೊಂಡರು. ಕೆಲಕಡೆ ಬಂಡೆಗಲ್ಲುಗಳನ್ನು ನೀರೊಳಗೆ ಉರುಳಿಸಿ ನದೀ ನೀರು ಅಡ್ಡಲಾಗಿ ಹರಿಯುವಂತೆ ಮಾಡಿದ್ದುಂಟು. ಎರಡನೆಯ ಬುಕ್ಕನ ಕಾಲದಿಂದಲೇ ಕಾಲುವೆಗಳ ಉಲ್ಲೇಖ ಶಾಸನಗಳಲ್ಲಿ ದೊರೆಯುತ್ತದೆ. ತುರುತ್ತು ಎಂಬಲ್ಲಿಯ ಕಾಲುವೆ ಉಲ್ಲೇಖಗೊಂಡ ಮೊತ್ತ ಮೊದಲಿನದು (1399), ಪ್ರೌಢದೇವ ರಾಯನು (1424-1466) ಆಗಿನ ಕಾಲದಲ್ಲಿ ಬಹುದೊಡ್ಡದೆನಿಸಿದ ಅಣೆಕಟ್ಟನ್ನು ಕಟ್ಟಿ ಸುಮಾರು 15 ಮೈಲು ಉದ್ದದ ವಿಶಾಲವಾದ ಕಾಲುವೆಯೊಂದನ್ನು ನಿರ್ಮಿಸಿದನಂತೆ, ಕೃಷ್ಣದೇವ ರಾಯನ ಕಾಲದಲ್ಲಂತೂ ನೀರಾವರಿ ವ್ಯಾಪಕವಾಗಿದ್ದಿರಲು ಸಾಕು. ರಾಯರ ಕೆರೆ, ರಾಯರ ಕಾಲುವೆ ಎಂಬವು ಮನೆ ಮಾತಾಗಿದ್ದವು. ಆದರೆ ಈಚಿನ ಹೊಸಪೇಟೆ ಬಳಿಯ ಬೃಹತ್ ಅಣೆಕಟ್ಟಿನಿಂದಾಗಿ ಇಂಥ ಕೆಲವು ಮುಳುಗಿಹೋಗಿದೆ.

ತುಂಗಭದ್ರಾ ಪ್ರವಾಹದ ಉಪಯೋಗದ ಒಂದು ವಿಶಿಷ್ಟ ಉದಾಹರಣೆ ಇಲ್ಲಿದೆ. ಹೂವಿನ ಹಡಗಲಿ - ಎಂಬ ನದೀತೀರದ ಹೆಸರನ್ನು ಕೇಳಿದ್ದೇವೆ. ಹೂವಿಗೂ ಹಡಗಲಿಗೂ ಏನು ಸಂಬಂಧ? ಸಂಬಂಧ ಇದೆ. ಹಡಗಲಿ ಇಂದಿಗೂ ಹೂವಿನ ಫಸಲಿಗೆ ಪ್ರಸಿದ್ಧವಿದೆ. ವಿಜಯನಗರದ ಕಾಲಕ್ಕೆ ಬುಟ್ಟಿಗಳಲ್ಲಿ ಹೂವುಗಳನ್ನು ತುಂಬಿ ತುಂಬಿ ರಾಜಧಾನಿಗೆ ಸಾಗಿಸುತ್ತಿದ್ದರಂತೆ!

ಆದರೆ, ಆದರೆ! ಸಮಗ್ರ ದಕ್ಷಿಣ ಭಾರತವನ್ನೇ ಆಳುತ್ತಿದ್ದ ವಿಜಯನಗರದವರಿಗೂ ತುಂಗಭದ್ರೆಯು ಒಂದು ಗಡಿರೇಖೆಯಾಗಿಯೆ ಉಳಿಯಿತು. ಸುರುವಿಗೆ ಅದನ್ನು ದಾಟಿ ಪಶ್ಚಿಮದತ್ತ ಎಂದರೆ ಧಾರವಾಡ, ವಿಜಾಪುರಗಳತ್ತ ರಾಜ್ಯದ ಗಡಿಯನ್ನು ವಿಸ್ತರಿಸಿದ್ದರು. ಮೊದಲನೇ ಹರಿಹರ ಬಾದಾಮಿಯವರೆಗೂ ಸಾಗಿ ಹೋಗಿದ್ದ. ಆದರೆ ಆ ಸಮಯಕ್ಕೆ ಬಹುಮನಿ ಸುಲ್ತಾನರು ನೆಲೆಗೊಂಡದ್ದರಿಂದ ಆ ವಿಸ್ತರಣೆಗೆ ಅವಕಾಶ ಒದಗಲೇ ಇಲ್ಲ - ಕೊನೆವರೆಗೂ! ನದಿಯನ್ನೇನೊ ಆಗೀಗ ದಾಟಿಕೊಂಡು ಹೋದದ್ದುಂಟು; ಸುಲ್ತಾನರನ್ನು ಸೋಲಿಸಿದ್ದೂ ಹೌದು. ಆದರೆ ಮರಳಿ ತುಂಗಭದ್ರೆಯ ಗಡಿಗೇ ಅವರ ವಾಪಸಾತಿ. ನಾಡಿನ ಇಬ್ಭಾಗಕ್ಕೆ ಇದೂ ಕೂಡ ಪೂರಕವಾಯಿತು. ವಿಜಯನಗರ ಸಾಮ್ರಾಜ್ಯ ಅಳಿದ ಮೇಲೆಯೂ ಪೆನುಗೊಂಡೆಯ ರಾಜರು ಹಂಪಿಯ, ತುಂಗಭದ್ರೆಯ ಸಂಪರ್ಕವನ್ನು ಉಳಿಸಿಕೊಂಡಿದ್ದರು. ಆ ನದೀ ತೀರದಲ್ಲಿ ಒಂದು ಉದ್ಯಾನವನ್ನು ನಿರ್ಮಿಸಿದ್ದರ, ದೇವಾಲಯಗಳಿಗೆ ದತ್ತಿ-ದಾನ ಕೊಟ್ಟಿದ್ದರ ಉಲ್ಲೇಖಗಳು ದೊರೆಯುತ್ತಿವೆ.

ಹದಿನೆಂಟನೆಯ ಶತಮಾನದಲ್ಲಿ

ಈ ಶತಮಾನದ ಉತ್ತರಾರ್ಧದಲ್ಲಿಯೆ ಹೈದರ್-ಟೀಪ್ಪೂ, ಮರಾಠ, ನಿಜಾಮ ಹಾಗೂ ಬ್ರಿಟಿಷರ ಹೋರಾಟ ನಡೆದದ್ದು. ಮೋಜೆಂದರೆ ಹೈದರ್ ಮತ್ತು ಟೀಪ್ಪೂ ಇವರು ತುಂಗಭದ್ರೆಯು ಒಂದು ಗಡಿ ಎಂದು ಲೆಕ್ಕಕ್ಕೆ ಹಿಡಿಯದೇ, ಬೇಕು ಬೇಕೆಂದಾಗ ದಾಟಿ ಹೋಗಿದ್ದಾರೆ! ಹೈದರನು ರಾಜ್ಯಸೂತ್ರ ವಹಿಸಿದ ಮರುವರ್ಷವೇ (1763) ನದಿಯಾಚೆಗಿನ ಬಂಕಾಪೂರ, ಧಾರವಾಡ ಕೋಟೆಗಳನ್ನು ವಶಪಡಿಸಿಕೊಂಡನಲ್ಲದೆ, ಮೇಲ್ಗಡೆ ಕೃಷ್ಣಾ- ತುಂಗಭದ್ರಾ ನಡುವಿನ ಸೀಮೆಗೂ ಲಗ್ಗೆ ಇಟ್ಟ.

> **ಮಿತಿ**
>
> ಕನ್ನಡಿ ಮುಂದಿನ
> ಯುವತಿ
> ಮೈಕು ಮುಂದಿನ
> ಸಾಹಿತಿ
> ಗೆ
> ಇರದು
> ಸಮಯದ ಮಿತಿ
>
> – ಎಚ್.ಎರಿಸ್ವಾಮಿ

ಪೇಶ್ವೆಯವರೂ ಅಷ್ಟೇ. ಇದೇ ಸುಮಾರಿಗೆ ಪೇಶ್ವೆ ಮಾಧವರಾಯನು ಬೇರೊಂದು ದಿಕ್ಕಿನಿಂದ ಕರ್ನಾಟಕದ ಮೇಲೆ ಮೂರು ಬಾರಿ ದಂಡಯಾತ್ರೆ ಕೈಕೊಂಡನು (1764, 1769, 1771). ಆಗ ಮರಾಠರು ಬೆಂಗಳೂರು, ಶ್ರೀರಂಗಪಟ್ಟಣದವರೆಗೂ ನುಗ್ಗಿದರು. ಯಥಾಪ್ರಕಾರ ಆ ಪ್ರದೇಶಗಳನ್ನು ಆಳುವ ಉಸಾಬರಿಗೆ ಹೋಗಲಿಲ್ಲ. ಮರಾಠರು ಈ ಮಧ್ಯೆ ಹೈದರ್ ಗೆದ್ದುಕೊಂಡಿದ್ದ ಹೆಚ್ಚಿನ ಪ್ರದೇಶವನ್ನು ಮರಳಿ ಪಡೆದಿದ್ದರು. ನಿಜಾಮನೂ ಕ್ರಮೇಣ ಮುನ್ನುಗ್ಗುತ್ತಲಿದ್ದ. ಇಬ್ಬರೂ ಸೇರಿ, ಟೀಪೂವನ್ನು ಸದೆಬಡೆಯುವ ಸನ್ನಾಹದಲ್ಲಿದ್ದರು. ಆಗ ಟೀಪೂಸುಲ್ತಾನನು ಕೈಗೊಂಡ ದಂಡಯಾತ್ರೆ ಅತ್ಯಂತ ಸಾಹಸಪೂರ್ಣವಾದದ್ದು (1786). ಅವನು ಇನ್ನು ತಮ್ಮ ಮೇಲೆ ಎರಗುವನೆಂದು ಕಾಯ್ದಿದ್ದಾಗ ಟೀಪೂ ನದಿಯ ಪೂರ್ವ ದಿಕ್ಕಿನ ದಂಡಗುಂಟ ಮೇಲಕ್ಕೆ ಸಾಗಿ ಆದವಾನಿಯನ್ನು ಮುತ್ತಿದನು. ಅನಂತರ ಕಾಂಚನಗಡಕ್ಕೆ ಬಂದನು. ಅದಾದರೂ ತುಂಗಭದ್ರಾ ತೀರದ ಊರೇ. ಅಲ್ಲಿಯ ಪಾಳೆಯಗಾರ್ತಿ ತುಂಗಮ್ಮ ಎಂಬಾಕೆ ನದಿಯನ್ನು ದಾಟಿ ಪಾರಾಗಿ ಮರಾಠರನ್ನು ಸೇರಿಕೊಂಡಳು.

ಟೀಪೂವಿನ ಮುಂದಿನ ಗುರಿ ಹೊಸಪೇಟೆ. ಆ ದಿಕ್ಕಿನಿಂದ ಧಾರವಾಡ ಜಿಲ್ಲೆಗೆ ನುಗ್ಗುವ ಮಿಂಚಿನ ವಿಚಾರ ಅವನದು. ಅದು ಜುಲೈ ತಿಂಗಳು. ತುಂಗಭದ್ರೆ ತುಂಬಿ ರಭಸದಿಂದ ಹರಿಯುವ ಕಾಲವದು. ಆಗ ಟೀಪೂ ಸಾವಿರಾರು ಹರಗೋಲುಗಳನ್ನು ಬಳಸಿ, ರಾತ್ರೋರಾತ್ರಿ ತನ್ನ ಸಮಸ್ತ ಸೈನ್ಯವನ್ನು ದಾಟಿಸಿದನಂತೆ. "A remarkable feat indeed' ಎಂದೊಬ್ಬ ಇತಿಹಾಸಕಾರನು ಹೊಗಳಿದ್ದಾನೆ. ತುಂಗಭದ್ರಾ

ನದಿಯೇ ಯುದ್ಧದಲ್ಲಿ ಪಾಲ್ಗೊಂಡಿತೇನೊ ಎಂಬಷ್ಟು ಸಕ್ರಿಯ ಪಾತ್ರ ಆದರದು!

ಪೇಶ್ವೆಯವರ ಆಗಿನ ದಾಖಲೆಗಳಲ್ಲಿಯೂ (1662-1692) ಈ ನದಿಯ ಪ್ರಸ್ತಾಪ ಬಂದೇಬರುತ್ತದೆ. ದಿ.27.2.1762ರ ಒಂದು ಪತ್ರದ ಉಲ್ಲೇಖವಿದು:

''ಶ್ರೀಮಂತ (ಅಂದರೆ ಪೇಶ್ವೆ) ತುಂಗಭದ್ರಾ ತೀರಾ ಪರ್ಯಂತ ಜಾವೂನ ಕರ್ನಾಟಕ ಪ್ರಾಂತೇ ದಬಾವ ಬಸವೂನ ಖಂಡಣೇ ತ್ಯಾಪ್ರಾಂತಾತ್ ಕರಾವೀ. ತುಂಗಭದ್ರಾ ತೀರಾ ಪುಢೇ ನ ಜಾವೇ.''

1792ರಲ್ಲಿ ಮೂರನೆಯ ಮೈಸೂರು ಯುದ್ಧ ಜರುಗಿ ಬ್ರಿಟಿಷರು ವಿಜಯಿಗಳಾದರಷ್ಟೇ. ಸೋತು ಹೋದ ಟೀಪೂ ತನ್ನ ಮಕ್ಕಳನ್ನೇ ಅಡವಿಟ್ಟ ಪ್ರಸಂಗ ಏನೆಲ್ಲ ನಡೆದು ಹೋಯಿತಲ್ಲವೆ. ಆಗಿನ ಒಪ್ಪಂದದ ಮಹತ್ತರ ಪರಿಣಾಮವೆಂದರೆ ಅವನ ರಾಜ್ಯದ ವ್ಯಾಪ್ತಿ ಈಗಿನ ಮೈಸೂರು ಸೀಮೆಗೆ ಸೀಮಿತವಾದದ್ದು. ಹೇಗೆ ಉತ್ತರ ಕರ್ನಾಟಕ ಎಂಬ ಅಭಿಧಾನವು ನೆಲೆಗೊಂಡಿತೋ ಹಾಗೆಯೇ ಮೈಸೂರು ಸೀಮೆ ಎನ್ನುವುದು ಸ್ಥಿರಗೊಂಡದ್ದು ಆ ವರ್ಷದಿಂದ ಎನ್ನಬೇಕು.

ಅನಂತರ ಯಾವ ರಾಜರೇ ಆಗಲಿ ತುಂಗಭದ್ರೆಯನ್ನು ದಾಟಿ ಆಚೆಯ ಇಲ್ಲವೆ ಈಚೆಯ ಪ್ರದೇಶವನ್ನು ಗೆದ್ದುಕೊಳ್ಳಬೇಕೆನ್ನುವ ಪ್ರಮೇಯ ನಿಂತುಹೋಯಿತು. ಅರ್ಥಾತ್ ನಾಡಿನ ಸಾಂಸ್ಕೃತಿಕ ವಿಭಜನೆಗೆ ಅಧಿಕೃತ ಮುದ್ರೆ ಬಿದ್ದಿತು!

ಆ ಮುಂದೆ ಬ್ರಿಟಿಷರ ಅಧಿಕಾರಾವಧಿಯಲ್ಲಿ (1800-1942) ತುಂಗಭದ್ರೆಯು ಧಾರವಾಡ-ಚಿತ್ರದುರ್ಗ, ರಾಯಚೂರು-ಬಳ್ಳಾರಿ ಜಿಲ್ಲೆಗಳ ನಡುವೆ ಸೀಮಾರೇಖೆಯಾಯಿತಷ್ಟೆ. ಆದರಿಂದಾಗಿ ನದಿಯ ಪಶ್ಚಿಮಕ್ಕೆ ಮುಂಬಯಿ ಕರ್ನಾಟಕ ಹಾಗೂ 'ನಿಜಾಮ ಕರ್ನಾಟಕ' ಎಂಬ ಹೆಸರುಗಳು ಬಳಕೆಗೆ ಬರತೊಡಗಿದವು.

ಇತ್ತ 'ಮೈಸೂರ ಸೀಮೆ'ಯ ಪ್ರತ್ಯೇಕತೆಯು ಅಸ್ಪಷ್ಟವಾಗಿ ಆರಂಭವಾಗಿ, ಹೇಗೆ ರೂಪುಗೊಂಡಿತೆನ್ನುವುದನ್ನು ನೋಡೋಣ. ಒಡೆಯರ್ ಮನೆತನದ ಆದ್ಯ ಪುರುಷ ಯದುರಾಯನು ಕೇವಲ 30-40 ಹಳ್ಳಿಗಳ ಒಡೆಯನಾಗಿದ್ದ. ಮುಂದೆ ರಾಜ ಒಡೆಯರ್ ಕಂಠೀರವ ನರಸರಾಜ ಹಾಗೂ ಚಿಕ್ಕದೇವರಾಯ ಇವರ ಕಾಲಕ್ಕೆ ಮೈಸೂರು ರಾಜ್ಯವು ವಿಸ್ತಾರ ಹೊಂದಿತು. ಆದಾಗ್ಯೂ ಕೆಳದಿ, ಚಿತ್ರದುರ್ಗ, ಬೆಂಗಳೂರು ಮೊದಲಾದ ತುದಿಯಲ್ಲಿರುವ ಪ್ರದೇಶಗಳು ಸೇರಿರಲಿಲ್ಲ. ಹಾಗೆ ಅವು ಸೇರಿ ಈಚಿನ ಮೈಸೂರು ಸಂಸ್ಥಾನವು ರೂಪುಗೊಂಡದ್ದು ಹೈದರ್-ಟೀಪೂಸುಲ್ತಾನರ ಕಾಲದಲ್ಲಿ.

ಗಮನಿಸಬೇಕಾದ ಒಂದು ವೈಶಿಷ್ಟ್ಯವೆಂದರೆ ಈ ಸಂಸ್ಥಾನದಲ್ಲಿ ಹಲವು ಶತಮಾನಗಳ ಕಾಲದಿಂದ ದಳವಾಯಿ, ಪಾಳೆಯಗಾರರೇ ಪ್ರಮುಖರಾಗಿ ಬಾಳಿದ್ದುದು. ಆಗ ಹೊರಗಿನ ವಿಶೇಷ ಸಂಪರ್ಕವಿಲ್ಲದೇ, ತನ್ನದೇ ಆದ ವಿಶಿಷ್ಟ ಜನಜೀವನ ರೂಪುಗೊಂಡಿತು. ಸಂಪರ್ಕ ಬರುವುದೇ ಆಗಿದ್ದರೆ, ಒಂದೇ ಭಾಷೆ ಹಾಗೂ ಸಮಾನ ಮತಧರ್ಮಗಳನ್ನು ಹೊಂದಿದ್ದ ನದಿಯ 'ಆಚೆ'ಯವರೊಂದಿಗೆ ಬರಬೇಕಿತ್ತು. ಹದಿಮೂರನೆಯ ಶತಮಾನದಿಂದಲೇ ಅದು ಹೇಗೆ ತಪ್ಪಿಹೋಯಿತೆಂಬುದನ್ನು ನೋಡಿದ್ದಾಗಿದೆ, ಮತ್ತೆ ಹೇಳಬೇಕೆನಿಸುವುದು! ತುಂಗಭದ್ರೆಯ ಅಡ್ಡ ಹರಿಯುವಿಕೆಯಿಂದಾಗಿ ಸಂಪರ್ಕ ಬಾರದೇ ಹೋಯಿತು.

ಆದರೆ ಅವಳೋ, ಬ್ರಿಟಿಷರ ಆಳ್ವಿಕೆಯಲ್ಲಿ ಇದಾವುದರ ಪರಿವೆ ಇಲ್ಲದೆ ನಿಶ್ಚಿಂತಳಾಗಿ ಹರಿದು ಬಂದಳು. ಒಂದೇ ಒಂದು ಮಹತ್ವದ ಘಟನೆ ಎಂದರೆ, ನಿಜಾಮ ಹಾಗೂ ಮದ್ರಾಸ್ ಸರಕಾರಗಳ ಸಂಯುಕ್ತ ಯೋಜನೆಯಾಗಿ ಈಗಿನ ಹೊಸಪೇಟೆಯ 'ಡ್ಯಾಮ್'ನ ಕೆಲಸ ನಡೆದದ್ದು. ಅದರ ಮುಕ್ಕಾಲು ಪಾಲು ಯೋಜನೆ ಮುಗಿಯುತ್ತ ಬಂದಾಗ 1953ರಲ್ಲಿ ಆಂಧ್ರ ಪ್ರಾಂತದ ನಿರ್ಮಾಣ ಹಾಗೂ ಅದರಲ್ಲಿ ಬಳ್ಳಾರಿ ಜಿಲ್ಲೆಯ ಸೇರ್ಪಡೆ ಇವು ಸಮಸ್ಯೆಗಳಾಗಿ ತಲೆದೋರಿದ್ದವು. ಕೊನೆಗೆ ಬಳ್ಳಾರಿ ಜಿಲ್ಲೆ ನಮ್ಮದೇ ಆಗಿ ಉಳಿಯಿತು. ಇದನ್ನು ನಿರ್ಣಯಿಸುವಲ್ಲಿ ತುಂಗಭದ್ರೆಯು ಕನ್ನಡಿಗರ ಜೀವಾಳದ ಪ್ರಶ್ನೆಯಾಗಿದ್ದುದೇ ಪ್ರಮುಖವಾಗಿದ್ದಿತೆನ್ನುವುದನ್ನು ಡಾ. ಎಚ್. ಎಸ್. ಗೋಪಾಲ ರಾವ್ ಅವರು ತಮ್ಮ 'ಕರ್ನಾಟಕ ಏಕೀಕರಣ ಇತಿಹಾಸ' ಪುಸ್ತಕದಲ್ಲಿ ವಿವರವಾಗಿ ತೋರಿಸಿದ್ದಾರೆ.



ಈ ರಾಷ್ಟ್ರದಲ್ಲಿ ಎಂದು ಭ್ರಷ್ಟಾಚಾರವಿಲ್ಲದ, ಪ್ರಾಮಾಣಿಕ, ದಕ್ಷ ಆಡಳಿತ ಬರುತ್ತದೋ, ಅಂದೇ ನಿನಗೆ ಶಾಪದಿಂದ ಮುಕ್ತಿ ಹೋಗು.....

ಈ ಏಕೀಕರಣ ಚಳವಳಿಯ ಕಾಲಕ್ಕೆ ಎಂದರೆ 1948ರಿಂದ 1956ರವರೆಗಿನ ಅವಧಿಯಲ್ಲಿ ಹಳೆಯ ಮೈಸೂರು ಸಂಸ್ಥಾನದವರು ಒಟ್ಟಿನಲ್ಲಿ ಏಕೀಕರಣದ ಕಟ್ಟಾ ವಿರೋಧಿಗಳಾಗಿದ್ದುದು ತಿಳಿದ ವಿಷಯ. ಉತ್ತರ ಕರ್ನಾಟಕದ ಜನ ಹಾಗೂ ಮುಂದಾಳುಗಳೆಲ್ಲರಿಗೂ ಸಮಗ್ರ ಕರ್ನಾಟಕದಲ್ಲಿ ಆಸಕ್ತಿ ಇದ್ದರೆ, ತುಂಗಭದ್ರೆಯ ಕೆಳಗಣ ಶೇ.95 ಜನರಿಗೆ, ನಾಯಕರಿಗೆ ಮನಸಾ ಬೇಡವಾಗಿತ್ತು. ಅಲ್ಲಿಯ ಲೇಖಕರು ಮಾತ್ರ ಬೆಂಬಲಿಸಿದ್ದರು. ಉತ್ತರ ಕರ್ನಾಟಕದ ಏಕೀಕರಣವಾದಿಗಳು ಅದೆಷ್ಟು ಸಮಜಾಯಿಸಿದರೂ ಮೈಸೂರಿಗರು ಒಪ್ಪದಿದ್ದಾಗ, ಅಲ್ಲಿಯ ಕೆಲವು ಉಗ್ರಗಾಮಿಗಳು ''ನಾವು ಸೇರುವುದು ಅವರಿಗೆ ಬೇಡವಾದರೆ, ನಮಗೂ ಅವರು ಬೇಡ! ನಮ್ಮ ಪರಸ್ಪರ ಸಂಪರ್ಕದ ಕೊಂಡಿಯೆಂದರೆ ಹರಿಹರದ ಬಳಿಯಲ್ಲಿ ಹರಿಯುವ ತುಂಗಭದ್ರೆಯ ಸೇತುವೆ ತಾನೇ, ಅದನ್ನು ಒಂದು ರಾತ್ರಿ ಸಿಡಿಮದ್ದಿನ ಸ್ಫೋಟದಿಂದ ಕೆಡವಿ ಬಿಡೋಣ!!'' ಎಂಬುದಾಗಿ ಯೋಚಿಸಿದ್ದರು ಕೂಡಾ. ಆದರೆ ಇತರ ಹಿರಿಯ ನಾಯಕರು ಅದಕ್ಕೆ ಎಳ್ಳಷ್ಟೂ ಆಸ್ಪದ ಕೊಡಲಿಲ್ಲ.

''ನೀವು ತುಂಗಭದ್ರೆಯ ಆಚೆಯವರು, ಸ್ವಾಮಿ'' ಎಂದು ಅನ್ನಿಸಿಕೊಂಡಿದ್ದ ನನಗೆ ಇತಿಹಾಸದ ಪುಟಗಳಲ್ಲಿ ಉತ್ತರ ದೊರೆಯಿತು. ಬ್ರಿಟಿಷರು ನಾಡನ್ನು ಹರಿದು ಹಂಚಿ-ಹಾಕಿದರು ಎಂದು ನಾವು ಸಾಮಾನ್ಯವಾಗಿ ಹೇಳುವುದುಂಟು. ಆದರೆ ಅದು ಅರ್ಧಸತ್ಯ ಮಾತ್ರ. ಕಳೆದ ಎಂಟುನೂರು ವರ್ಷಗಳಿಂದ ಈ ಸಾಂಸ್ಕೃತಿಕ ಬಿರುಕು ಆಗುತ್ತಲೇ ಇದ್ದಿತೆಂಬುದನ್ನು ನೋಡಿದ್ದೇವೆ.

ಏಕೀಕರಣ ಆದ ಮೇಲೂ ಅದು ಅಳಿಸದೇ ಹೋದುದರ ಇನ್ನೊಂದು ಕಾರಣ ನಮ್ಮ ರಾಜಧಾನಿಯು ನಾಡಿನ ತೀರ ದಕ್ಷಿಣದ ಒಂದು ತುದಿಯಲ್ಲಿದ್ದುದು. ಅದೇ ಏಕೀಕೃತ ಕರ್ನಾಟಕದ ರಾಜಧಾನಿಯ ಭೌಗೋಳಿಕ ಮಧ್ಯದ ದಾವಣಗೇರಿಯಲ್ಲಾಗಲೀ, ಹುಬ್ಬಳ್ಳಿ, ಧಾರವಾಡ ಮಧ್ಯದಲ್ಲಿಯಾಗಲೀ ಇದ್ದಿದ್ದರೆ ಕನ್ನಡಿಗರ ಭಾವನಾತ್ಮಕ ಏಕೀಕರಣವು ಇಪ್ಪತ್ತನೆಯ ಶತಮಾನಾಂತ್ಯದಲ್ಲಿಯೇ ಕೈಗೂಡುತ್ತಿತ್ತು. ಇದು ನನ್ನ ಪ್ರಾಮಾಣಿಕವಾದ ಹಾಗೂ ಸ್ಪಷ್ಟವಾದ ಅನಿಸಿಕೆ. ■

ಏಡ್ಸ್: ವ್ಯಕ್ತಿ ಮತ್ತು ಕುಟುಂಬದವರ ಮಾನಸಿಕ ಸಮಸ್ಯೆಗಳು

■ ಡಾ. ಸಿ. ಆರ್. ಚಂದ್ರಶೇಖರ್
ನಿಮ್ಹಾನ್ಸ್
ಹೊಸೂರು ರಸ್ತೆ, ಬೆಂಗಳೂರು-29

ಸ್ವಲ್ಪ ಅಜಾಗರೂಕರಾದರೆ, ಸ್ವಯಂಕೃತಾಪರಾಧವದಿಂದ, ಈ ಮಾರಕ ರೋಗ ತಮಗೆ ಬರುತ್ತದೆ ಎಂದು ಜನರಿಗೆ ಗೊತ್ತಾಗಿದೆ. ಈ ಸೋಂಕು ಮತ್ತು ರೋಗದ ಪರಿಣಾಮವಾಗಿ ಜನರ ಮನಸ್ಸು ಹೇಗೆ ಪ್ರತಿಕ್ರಿಯಿಸುತ್ತದೆ. ಈ ಸೋಂಕಿನಿಂದ ಬರಬಹುದಾದ ಮಾನಸಿಕ ಸಮಸ್ಯೆ - ರೋಗಗಳಾವುವು ನೋಡೋಣ.

ಎಚ್‌ಐವಿ ಸೋಂಕು ಮತ್ತು ಏಡ್ಸ್ ರೋಗ ಇಂದು ಭಯೋತ್ಪಾದಕ ವಿಷಯಗಳಾಗಿವೆ. ಏಡ್ಸ್ ರೋಗಕ್ಕೆ ಮದ್ದಿಲ್ಲ. ಅದು ಬಂದರೆ ಸಾವು ಖಚಿತ ಎಚ್ಚರಿಕೆಯಿಂದಿರಿ. ಹೊಸಬರೊಂದಿಗೆ, ವೇಶ್ಯೆಯರೊಂದಿಗೆ ಲೈಂಗಿಕ ಸಂಪರ್ಕ ಮಾಡಬೇಡಿ. ದುಡ್ಡಿಗಾಗಿ ರಕ್ತ ಮಾರಿಕೊಳ್ಳುವವರ ರಕ್ತವನ್ನು ಪಡೆಯಬೇಡಿ. ಸರಿಯಾಗಿ ಸ್ವಚ್ಛಮಾಡದ, ಸಂಸ್ಕರಿಸದ ಸೂಜಿಯಿಂದ ಇಂಜೆಕ್ಷನ್ ಪಡೆಯಬೇಡಿ. ಎಚ್‌ಐವಿ ಪರೀಕ್ಷೆ ಮಾಡದೆ ಇತರರಿಂದ ಅಂಗದಾನ ಪಡೆಯಬೇಡಿ ಎಂದು ಪ್ರತಿನಿತ್ಯ ಸಮೂಹ ಮಾಧ್ಯಮಗಳು ಹೇಳುವುದನ್ನು ಜನ ಕೇಳುತ್ತಿದ್ದಾರೆ. ಸ್ವಲ್ಪ ಅಜಾಗರೂಕರಾದರೆ, ಸ್ವಯಂಕೃತಾಪರಾಧವದಿಂದ, ಈ ಮಾರಕ ರೋಗ ತಮಗೆ ಬರುತ್ತದೆ ಎಂದು ಜನರಿಗೆ ಗೊತ್ತಾಗಿದೆ. ಈ ಸೋಂಕು ಮತ್ತು ರೋಗದ ಪರಿಣಾಮವಾಗಿ ಜನರ ಮನಸ್ಸು ಹೇಗೆ ಪ್ರತಿಕ್ರಿಯಿಸುತ್ತದೆ. ಈ ಸೋಂಕಿನಿಂದ ಬರಬಹುದಾದ ಮಾನಸಿಕ ಸಮಸ್ಯೆ - ರೋಗಗಳಾವುವು ನೋಡೋಣ.

ಏಡ್ಸ್ ನ್ಯೂರೋಸಿಸ್

'ಸರ್, ನಾನು ತುಂಬಾ ಪ್ರವಾಸ ಮಾಡುತ್ತಿರುತ್ತೇನೆ. ಹೊಸ ಸ್ಥಳ, ಹೊಸ ನೀರು, ಆಗಾಗ್ಗೆ ಕೆಮ್ಮು, ಜ್ವರ, ಗಂಟಲನೋವು, ನೆಗಡಿ ಬರುತ್ತಲೇ ಇರುತ್ತವೆ. ಸಣ್ಣಪುಟ್ಟ ಊರುಗಳಲ್ಲಿ ಡಾಕ್ಟರಿಂದ ಇಂಜೆಕ್ಷನ್ ತೆಗೆದುಕೊಂಡಿದ್ದೇನೆ ನನಗೆ ಏಡ್ಸ್ ಬಂದಿರಬಹುದೇ?' ರಾಜಣ್ಣನ ಪ್ರಶ್ನೆ.

'ಡಾಕ್ಟರೇ ನನಗೆ ತುಂಬಾ ಭಯವಾಗಿದೆ. ಮೊನ್ನೆ ರಾತ್ರಿ, ಸಿನಿಮಾ ನೋಡಿಕೊಂಡು ಮನೆಗೆ ಹೋಗುತ್ತಿದ್ದೆ. ಲಕ್ಷಣವಾಗಿದ್ದ ಒಬ್ಬ ಯುವತಿ ನನ್ನ ಹಿಂದೆ ಬಂದು, ತಾನು ಈ ಊರಿಗೆ ಹೊಸಬಳು, ಪರ್ಸ್ ಕಳೆದುಕೊಂಡಿದ್ದೇನೆ. ಶಿವಮೊಗ್ಗಾಕ್ಕೆ ಹೋಗಬೇಕು. ಬಸ್ ಛಾರ್ಜಿಗೆ ಸಹಾಯ ಮಾಡಿ ಎಂದಳು. ಐದು ಹತ್ತು ನಿಮಿಷದಲ್ಲೇ ನನ್ನ ಸ್ನೇಹ ಮಾಡಿದಳು. ಪ್ರಚೋದಾತ್ಮಕವಾಗಿ ನಡೆದುಕೊಂಡಳು. ಸಿನಿಮಾದ ಪ್ರಭಾವ, ಅವಳ ಹಾವ ಭಾವ, ನಾನು ಮರುಳಾದೆ. ಅವಳ ದೇಹ ಸಂಪರ್ಕ ಮಾಡಿದೆ. ಈಗ ನನ್ನನ್ನು ಭಯ ಆವರಿಸಿಕೊಂಡಿದೆ. ಅವಳಿಂದ ನನಗೆ ಏಡ್ಸ್ ಸೋಂಕು ಬಂದಿರಬಹುದೇ. ರಕ್ತ ಪರೀಕ್ಷೆ ಮಾಡಿಸಲು ಭಯ. ಎಲ್ಲಿ ಪಾಸಿಟಿವ್ ಎಂದು ಬಂದು ಬಿಡುವುದೋ ಎಂಬ ದಿಗಿಲು. ಪ್ರತಿಕ್ಷಣ ನನ್ನನ್ನು ನಾನು ಶಪಿಸಿಕೊಳ್ಳುತ್ತಿದ್ದೇನೆ. ನನಗೆ ಏಡ್ಸ್ ಬಂದೇ ಬಿಡುತ್ತದಾ?' ವಿನೋದನ ಪ್ರಶ್ನೆ.

'ನಿನ್ನೆ ಅಡ್ಮಿಟ್ ಮಾಡಿದೆವಲ್ಲ. ವೆಂಕಟೇಶ ಅಲ್ಲವೇ ಪೇಷಂಟ್‌ನ ಹೆಸರು ಎಲ್ರೀ ಅವನು?' ವೈದ್ಯರು ಪ್ರಶ್ನಿಸಿದರು.

'ನಾನೂ ಅವನನ್ನು ಹುಡುಕುತ್ತಿದ್ದೇನೆ ಸಾರ್. ಪರೀಕ್ಷೆಗಾಗಿ ರಕ್ತ ಡ್ರಾ ಮಾಡಬೇಕು ಎಂದರೆ ಬೇಡ ಎಂದು ಹೇಳಿ ಎಲ್ಲೋ ಹೊರಟು ಹೋಗಿದ್ದಾನೆ. ನಿನ್ನೆ ಇನ್ನೊಂದು ಪೇಷಂಟಿಗೆ ರಕ್ತ ಡ್ರಾ ಮಾಡುತ್ತಿದ್ದೆ. 'ಏನಕ್ಕೆ' ಎಂದು ಕೇಳಿದ. 'ಇವನು ವೇಶ್ಯೆಯರ ಸಂಪರ್ಕ ಮಾಡಿದ್ದಾನೆ. ಏಡ್ಸ್ ಸೋಂಕು ಇರಬಹುದೆಂಬ ಅನುಮಾನ. ಸಿಫಿಲಿಸ್‌ನಂತಹ ಕಾಯಿಲೆಯೂ ಇರಬಹುದು. ಪರೀಕ್ಷೆ ಮಾಡುತ್ತಿದ್ದೇವೆ' ಎಂದೆ. 'ನನಗೂ ಮಾಡುತ್ತೀರಾ' ಎಂದ. 'ನಿನ್ನ ಬಗ್ಗೆ ಡಾಕ್ಟರು ಏನೂ ಹೇಳಿಲ್ಲ. ಹೇಳಿದರೆ ರಕ್ತ ತೆಗೆಯುತ್ತೇವೆ' ಎಂದೆ. ಇದುವರೆಗೆ ನಾನು ಮೂರು ನಾಲ್ಕು ಹೆಂಗಸರೊಂದಿಗೆ ದೈಹಿಕ ಸಂಬಂಧ ಮಾಡಿದ್ದೇನೆ. ರೇಡಿಯೋ ಪೇಪರ್‌ಗಳಲ್ಲಿ ಹೇಳುವ ಯಾವ ಏಡ್ಸ್ ರೋಗಲಕ್ಷಣಗಳು ನನ್ನಲ್ಲಿಲ್ಲ. ದೇಹದಲ್ಲಿ ಏಡ್ಸ್ ಇದ್ದರೆ ಕಾಯಿಲೆಯ ಲಕ್ಷಣ ಇರಲೇ ಬೇಕಲ್ಲವೇ ಎಂದ. ನಾನು ಹಾಗೇನಿಲ್ಲ ದೇಹದಲ್ಲಿ ಈ ರೋಗಾಣುಗಳು ಇದ್ದರೂ, ವ್ಯಕ್ತಿ ಯಾವುದೇ ರೋಗಲಕ್ಷಣ ಇಲ್ಲದೆ ಇರಬಲ್ಲ ಎಂದೆ. ಸ್ವಲ್ಪ ಹೊತ್ತಿನ ಮೇಲೆ ಹೊರಗಡೆ ಹೋದವನು ಬಂದೇ ಇಲ್ಲ ಸಾರ್' ಎಂದಳು ನರ್ಸ್ ಶ್ವೇತಾ.

ಇವು ಏಡ್ಸ್ ತನಗೆ ಇರಬಹುದೆಂಬ ಅನುಮಾನ ಬಂದ ವ್ಯಕ್ತಿಗಳ ಮಾನಸಿಕ ಪ್ರತಿಕ್ರಿಯೆಗಳು.

Worried Well:

ಎಚ್.ಐ.ವಿ. ಸೋಂಕು ಬರಬಹುದಾದಂತಹ ಜೀವನ ಶೈಲಿಯನ್ನು ರೂಢಿಸಿಕೊಂಡವರಲ್ಲಿ ಕೆಲವರು, ತಮ್ಮ ರಕ್ತಪರೀಕ್ಷೆ ಮಾಡಿಸಿಕೊಂಡು ಹೆಚ್‌ಐವಿ ಸೋಂಕು ಇಲ್ಲ ಎಂದು ಕಂಡುಕೊಂಡರೂ, ಏಡ್ಸ್‌ನ ಭಯದಿಂದ ಮುಕ್ತರಾಗುವುದೇ ಇಲ್ಲ. ಸಲಿಂಗ ಕಾಮಿಗಳು, ವೇಶ್ಯೆಯರೊಡನೆ ಸಂಪರ್ಕ ಮಾಡಿದವರು, ರಕ್ತವನ್ನು ಅಪರಿಚಿತ/ವೃತ್ತಿ ದಾನಿಗಳಿಂದ ಪಡೆದವರು ಈ ಅನಗತ್ಯ ಭಯಕ್ಕೆ ಒಳಗಾಗುತ್ತಾರೆ. ಸುಸ್ತು, ಆಯಾಸ, ತೂಕವಿಳಿತ, ಬೇಸರ, ದುಃಖ, ಆತಂಕಗಳಿಂದ ಬಳಲುತ್ತಾ ಪದೇ ಪದೇ ವೈದ್ಯರನ್ನು ಕಾಣುತ್ತಿರುತ್ತಾರೆ. 'ನನಗೆ ಏಡ್ಸ್ ಇಲ್ಲ ತಾನೇ' ಎಂದು ಕೇಳುತ್ತಿರುತ್ತಾರೆ. ಹಿಂದೆ ಮಾಡಲ್ಪಟ್ಟ ರಕ್ತ ಪರೀಕ್ಷೆಯ ವಿಶ್ವಾಸಾರ್ಹತೆಯ ಬಗ್ಗೆ ಸಂದೇಹ ವ್ಯಕ್ತಪಡಿಸುತ್ತಿರುತ್ತಾರೆ. ಇವರನ್ನು Worried well (ಚಿಂತಾಕ್ರಾಂತರಾದ ಆರೋಗ್ಯವಂತರು!) ಎಂದು ಗುರುತಿಸಲಾಗುತ್ತದೆ.

ವೈದ್ಯರು, ನರ್ಸ್‌ಗಳು ಮತ್ತು ಆಪ್ತ ಸಮಾಲೋಚಕರು ಸಹನೆ ಕಳೆದುಕೊಳ್ಳದೆ, ಇವರಿಗೆ

ಸಮಾಧಾನ ಮತ್ತು ಸಾಂತ್ವನ ಹೇಳಬೇಕಾಗುತ್ತದೆ. ಹೆಚ್.ಐ.ವಿ. ಸೋಂಕು ನಿಮಗಿಲ್ಲ ಎಂದು ಮನದಟ್ಟು ಮಾಡಬೇಕಾಗುತ್ತದೆ. ಮುಂದಕ್ಕೆ ಎಚ್.ಐ.ವಿ. ಸೋಂಕು ಬರಬಹುದಾದಂತಹ ಯಾವುದೇ ಹೈರಿಸ್ಕ್ ಚಟುವಟಿಕೆಯನ್ನು ಮಾಡಬೇಡಿ ಎಂದು ಹೇಳಬೇಕಾಗುತ್ತದೆ. ಇದನ್ನು ರಕ್ತ ಪರೀಕ್ಷೆಗೆ ಮುಂಚೆ ಮತ್ತು ಆಮೇಲೆ ಮಾಡಬೇಕು. (Pre and Post test counselling)

ಏಡ್ಸ್ ಗೊತ್ತಾದಾಗ.........

ರಕ್ತ ಪರೀಕ್ಷೆಯಿಂದ ಎಚ್.ಐ.ವಿ. ಪಾಸಿಟಿವ್ ಎಂದು ಗೊತ್ತಾದ ವ್ಯಕ್ತಿ ಮತ್ತು ಮನೆಯವರು ತೀವ್ರವಾಗಿ ಪ್ರತಿಕ್ರಿಯಿಸುತ್ತಾರೆ. ಆದ್ದರಿಂದ ಸಾಕಷ್ಟು ಸಿದ್ಧತೆ ಮಾಡಿಕೊಂಡೇ ಈ ವಿಚಾರವನ್ನು ವೈದ್ಯರು- ವೈದ್ಯ ಸಿಬ್ಬಂದಿ, ವ್ಯಕ್ತಿ ಮತ್ತು ಮನೆಯವರಿಗೆ ತಿಳಿಸಬೇಕಾಗುತ್ತದೆ. ಗೋಪ್ಯತೆಯನ್ನೂ ಕಾಪಾಡಬೇಕಾಗುತ್ತದೆ. ವ್ಯಕ್ತಿಯ ಪ್ರತಿಕ್ರಿಯೆಗಳನ್ನು ಹಲವು ಹಂತಗಳಲ್ಲಿ ಗುರುತಿಸಬಹುದು.

ಆಘಾತ: ತನಗೆ ಎಚ್‌ಐವಿ ಸೋಂಕಾಗಿದೆ ಎಂದು ತಿಳಿದ ವ್ಯಕ್ತಿ ಮಾನಸಿಕ ಆಘಾತಕ್ಕೆ ಒಳಗಾಗಬಹುದು. ಗರ ಬಡಿದವನಂತೆ ಕೂರಬಹುದು. ಯಾವ ಪ್ರತಿಕ್ರಿಯೆಯನ್ನೂ ತೋರಿಸದೇ ನಿಷ್ಕ್ರಿಯನಾಗಬಹುದು. ಸ್ವಲ್ಪ ಕಾಲ ತನ್ನ ಬೇಕು ಬೇಡಗಳನ್ನು ಗಮನಿಸದೇ, ನಿಶ್ಚಲನಾಗಿ ಕೂಡಬಹುದು.

ನಿರಾಕರಣೆ (Denial) : ವ್ಯಕ್ತಿ ರಿಪೋರ್ಟನ್ನು ಒಪ್ಪದಿರಬಹುದು. 'ಇಲ್ಲ ಡಾಕ್ಟರೇ, ನಾನು ಇದನ್ನು ನಂಬುವುದಿಲ್ಲ. ಸರಿಯಾಗಿ ಪರೀಕ್ಷಿಸಿದಿರಾ? ಇದು ನನ್ನ ರಿಪೋರ್ಟೋ ಅಥವಾ ಬೇರೆಯವರದೋ. ನನಗೆ ಏಡ್ಸ್ ಇಲ್ಲ. ನೀವು ಇನ್ನೊಮ್ಮೆ ಚೆಕ್ ಮಾಡಿ' ಎನ್ನಬಹುದು.

ಭಯ : ವ್ಯಕ್ತಿ ಭಯಭೀತನಾಗಿ ನಡುಗಿಹೋಗಬಹುದು. ಆತಂಕದ ತೀವ್ರ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಹೃದಯ ಮತ್ತು ನಾಡಿ ಬಡಿತ ಏರುತ್ತವೆ. ರಕ್ತದೊತ್ತಡ ಹೆಚ್ಚುತ್ತದೆ. ಬೆವರು ಸುರಿಯುತ್ತದೆ. ಕೈಕಾಲುಗಳು ಅದುರುತ್ತವೆ. ಬಾಯಿ ಒಣಗಿ, ಆತನಿಗೆ ಮಾತನಾಡಲು ಆಗುವುದಿಲ್ಲ. ಊಟ ಸೇರುವುದಿಲ್ಲ. ನಿದ್ರೆ ಬರುವುದಿಲ್ಲ ಆತ ಚಡಪಡಿಸಬಹುದು. ತಾನು ಸತ್ತು ಹೋಗ

ಎಚ್‌ಐವಿ ಸೋಂಕಿನಿಂದ ಬರುವ ಮಾನಸಿಕ ರೋಗಗಳು

ಎಚ್‌ಐವಿ ವೈರಾಣು ಮಿದುಳಿನ ನರ ಕೋಶಗಳಿಗೆ ಹಾನಿಯುಂಟು ಮಾಡತೊಡಗುತ್ತದೆ. ಪ್ರಾರಂಭದಲ್ಲಿ ಇದರ ಪರಿಣಾಮವಾಗಿ ವ್ಯಕ್ತಿಯ ಬೌದ್ಧಿಕ ಚಟುವಟಿಕೆಗಳಲ್ಲಿ ಹಿಂಜರಿತ ಕಂಡು ಬರುತ್ತದೆ. ಅವನ ಏಕಾಗ್ರತೆ ತಗ್ಗುತ್ತದೆ. ಸ್ವಲ್ಪ ಬೌದ್ಧಿಕ ಚಟುವಟಿಕೆ ಮಾಡಿದರೂ, ಆಯಾಸವಾಗುತ್ತದೆ. ಚಿಂತನೆ, ಲೆಕ್ಕಾಚಾರ, ತೀರ್ಮಾನ ಕೈ ಗೊಳ್ಳುವುದು, ವಿಶ್ಲೇಷಣೆಯಂತಹ ಮಾನಸಿಕ ಕ್ರಿಯೆಗಳು ಕಷ್ಟದಾಯಕವಾಗುತ್ತವೆ. ವ್ಯಕ್ತಿಯ ಆಲೋಚನೆ, ಮಾತು, ಪ್ರತಿಕ್ರಿಯೆಗಳು ಚುರುಕಾಗಿರುವುದಿಲ್ಲ. ಹೊಸ ಮಾಹಿತಿಯನ್ನು ಅರ್ಥ ಮಾಡಿಕೊಳ್ಳುವುದು, ನೆನಪಿನಲ್ಲಿಟ್ಟುಕೊಳ್ಳುವುದು ಕಷ್ಟವಾಗುತ್ತದೆ. ಕ್ಲಿಷ್ಟ ಸಮಸ್ಯೆಗಳ ವಿಶ್ಲೇಷಣೆ ಮತ್ತು ಅವುಗಳಿಗೆ ಪರಿಹಾರ ಹುಡುಕುವುದು ತೊಡಕಿನದಾಗುತ್ತದೆ. ಸ್ಮರಣ ಶಕ್ತಿ ಕುಂದತೊಡಗುತ್ತದೆ. ಈ ಹಂತದಲ್ಲಿ ಮಿದುಳಿನ ಸ್ಕ್ಯಾನಿಂಗ್ ಅಥವಾ ಎಂ.ಆರ್.ಐ. ಚಿತ್ರದಲ್ಲಿ ಮಿದುಳಿನ ಸವೆತ ಗಮನಾರ್ಹ ಮಟ್ಟದಲ್ಲಿರುವುದಿಲ್ಲ. ಆದ್ದರಿಂದ ಈ ಸ್ಥಿತಿಯನ್ನು ಅಲ್ಪಮಟ್ಟದ ನರ ಬೌದ್ಧಿಕ ನ್ಯೂನತೆಗಳ ಸ್ಥಿತಿ ಎಂದು (MND -Mild Neuro Cognitive Dificit Disorder) ಕರೆಯಲಾಗಿದೆ.

ಏಡ್ಸ್ ಡೆಮೆನ್ಷಿಯ (Aids Dementia)

ಈ ಹಂತದಲ್ಲಿ ಮಿದುಳು ನಶಿಸಿಹೋಗಿರುತ್ತದೆ. ಸ್ಕ್ಯಾನ್ ಮತ್ತು ಎಂ.ಆರ್.ಐ.ನಲ್ಲಿ, ಮಿದುಳಿನ ವಸ್ತು ಸಾಕಷ್ಟು ನಾಶವಾಗಿರುವುದು ಕಂಡು ಬರುತ್ತದೆ. ವಿಪರೀತ ಮರೆವು ಕೌಶಲ್ಯಗಳ ನಷ್ಟ, ವ್ಯಕ್ತಿಯ ಸಾಮಾನ್ಯ ಆಲೋಚನೆ, ವಿಶ್ಲೇಷಣೆ, ನಿರ್ಧಾರ ಕೈಗೊಳ್ಳುವ ಶಕ್ತಿಯೂ ಕುಂದಿರುತ್ತದೆ. ವ್ಯಕ್ತಿ ಪರಾವಲಂಬಿಯಾಗುತ್ತಾನೆ. ಕೆಲಸ ಮಾಡುವುದಿರಲಿ, ತನ್ನ ದೈನಂದಿನ ಬೇಕು ಬೇಡಗಳನ್ನು ಗಮನಿಸಲಾರ. ತಾನು ಎಲ್ಲಿದ್ದೇನೆ. ವೇಳೆ ಎಷ್ಟು, ತನ್ನ ಸುತ್ತಮುತ್ತ ಯಾರಿದ್ದಾರೆ ಎಂದು ಆತ ಗುರುತಿಸಲಾರ. ತನ್ನ ಮನೆಯವರ, ಆಪ್ತೇಷ್ಟರ ಗುರುತೂ ಅವನಿಗಿರುವುದಿಲ್ಲ. ದೈಹಿಕ ಸ್ವಚ್ಛತೆ ಕಡೆ ಕೂಡ ಗಮನ ಇರುವುದಿಲ್ಲ. ಹಾಸಿಗೆ ಬಟ್ಟೆಯಲ್ಲೇ ಮಲಮೂತ್ರ ಮಾಡಿಕೊಳ್ಳಬಹುದು. ಕಡೆಗೆ ಹಾಸಿಗೆ ಹಿಡಿದು ಮಲಗುತ್ತಾನೆ.

ಸನ್ನಿ - ಡೆಲಿರಿಯಂ

ಸೋಂಕು ಹೆಚ್ಚಾದಾಗ, ಮಿದುಳಿನ ಮೇಲೆ ಪರಿಣಾಮ ಬೀರಿ ಅಥವಾ ಇತರ ಅವಕಾಶವಾದಿ ರೋಗಾಣುಗಳ ಸೋಂಕಿನಿಂದ, ವ್ಯಕ್ತಿಗೆ 'ಸನ್ನಿ' ಹಿಡಿಯಬಹುದು ಮಾನಸಿಕ ಗೊಂದಲ, ಭ್ರಮೆ ಭಯಗಳಿಂದ ಆವೃತನಾಗಿ ನರಳಬಹುದು. ತನಗೆ ಇತರರಿಗೆ ಅಪಾಯಕಾರಿಯಾಗಬಹುದು.

ತೀವ್ರ ಖಿನ್ನತೆರೋಗ (Major Depression)

ಮಿದುಳಿನಲ್ಲಿ ಡೋಪಮಿನ್ ಸೆರೋಟೋನಿನ್ ನರವಾಹಕ ವಸ್ತುಗಳು ಕಡಿಮೆಯಾಗಿ, ವ್ಯಕ್ತಿ ತೀವ್ರ ಬಗೆಯ ಖಿನ್ನತೆ ರೋಗಕ್ಕೆ ತುತ್ತಾಗುತ್ತಾನೆ. ಬೇಸರ ದುಃಖ, ಅನಾಸಕ್ತಿ, ನಿರಾಶೆ, ಅಸಹಾಯಕತೆ, ಪಾಪಪ್ರಜ್ಞೆ, ನಿದ್ರೆ -ಆಹಾರ ಸೇವನೆಯು ಅಸ್ತವ್ಯಸ್ತವಾಗುವುದು, ಆತ್ಮಹತ್ಯಾ ಯೋಚನೆ ಪ್ರಯತ್ನ, ಭ್ರಮೆಗಳು ಆತನನ್ನು ಆವರಿಸುತ್ತವೆ. ಈ ಖಿನ್ನತೆ ದೀರ್ಘಕಾಲ ಉಳಿಯಬಹುದು.

ಚಿತ್ತವಿಕಲತೆ - Psychosis

ಬುದ್ಧಿ ಭ್ರಮಣೆಯ ಲಕ್ಷಣಗಳು ಏಡ್ಸ್ ರೋಗಿಯನ್ನು ಆವರಿಸಬಹುದು. ಶೂನ್ಯದಲ್ಲಿ ಧ್ವನಿಗಳು ಕೇಳಿಸುವುದು. ದೃಶ್ಯಗಳು ಕಾಣಿಸಿಕೊಳ್ಳುವುದು. ತಪ್ಪು ನಂಬಿಕೆ, ಭಯಗಳು, ಅಸಂಬದ್ಧ ಮಾತು, ವರ್ತನೆ, ವಿಕಾರ ಭಾವನೆಗಳು, ತನ್ನ ಬೇಕು ಬೇಡಗಳ ಬಗ್ಗೆ ನಿರ್ಲಕ್ಷ್ಯ ಚಿತ್ತವಿಕಲತೆಯ ಪ್ರಮುಖ ಲಕ್ಷಣಗಳು.

ಮದ್ಯ-ಮಾದಕ ವಸ್ತುಗಳ ಚಟ

ಏಡ್ಸ್ ರೋಗದ ಪ್ರತಿಫಲವಾಗಿ, ಭಯ ಅವಮಾನ ದುಃಖಗಳನ್ನು ಮರೆಯಲು ವ್ಯಕ್ತಿ ಹೆಚ್ಚೆಚ್ಚು ಮದ್ಯಪಾನ, ಮಾದಕವಸ್ತುಗಳ ಸೇವನೆಗೆ ತೊಡಗಿ ಕಡೆಗೆ, ಈ ವಸ್ತುಗಳ ಚಟಕ್ಕೆ ಒಳಗಾಗಬಹುದು.

ಹೀಗೆ ಏಡ್ಸ್ ನೇರವಾಗಿ ಮತ್ತು ಪರೋಕ್ಷವಾಗಿ ವ್ಯಕ್ತಿಗೆ ಮತ್ತು ಮನೆಯವರಿಗೆ ಮಾನಸಿಕ ಸಮಸ್ಯೆಗಳನ್ನು ಹಾಗು ಮಾನಸಿಕ ರೋಗಗಳನ್ನು ತರುತ್ತದೆ. ಹೆಚ್ಚಿನವು ನಿವಾರಣೀಯ.

ಬಹುದೆಂಬ ದಿಗಿಲು ಕಾಡುತ್ತದೆ. ತನ್ನನ್ನು ತನ್ನ ಮನೆಯವರು, ಬಂಧುಮಿತ್ರರು ಮತ್ತು ಇಡೀ ಸಮಾಜ ತಿರಸ್ಕರಿಸುತ್ತದೆ, ಹೀನಾಯವಾಗಿ ಕಾಣುತ್ತದೆ, ಇನ್ನೇನು ಗತಿ ಎಂದು ಹೆದರುತ್ತಾನೆ.

ತೀವ್ರ ಖಿನ್ನತೆ : ವಸ್ತು ಸ್ಥಿತಿಯನ್ನು ಅರ್ಥ ಮಾಡಿಕೊಂಡ ವ್ಯಕ್ತಿ ಖಿನ್ನನಾಗುತ್ತಾನೆ. ಅಳುತ್ತಾನೆ. ತಪ್ಪಿತಸ್ಥ ಭಾವನೆಯಿಂದ ನರಳುತ್ತಾನೆ. ತಾನು ಪಾಪಿ, ಕೆಟ್ಟ ಮನುಷ್ಯ ತನಗೆ ಬದುಕಿರಲು ಅರ್ಹತೆ ಇಲ್ಲ ಎಂಬ ತೀರ್ಮಾನಕ್ಕೆ ಬರುತ್ತಾನೆ. ಅಸಹಾಯಕತೆ, ನಿರಾಶೆಗಳು ಅವನನ್ನು ಮುತ್ತುತ್ತವೆ. ನನ್ನನ್ನು ಬದುಕಿಸಲು, ಈ ವ್ಯಾಧಿಯಿಂದ ಮುಕ್ತನನ್ನಾಗಿ ಮಾಡಲು ಸಾಧ್ಯವಿಲ್ಲವೇ ಎಂದು ಹಲುಬುತ್ತಾನೆ. ಮನೆಯವರಿಂದ, ಪರಿಚಿತ ಸ್ಥಳದಿಂದ ಎಲ್ಲಾದರೂ ದೂರ, ಮುಖ ಮರೆಸಿಕೊಂಡು ಹೋಗಲು ನಿರ್ಧರಿಸುತ್ತಾನೆ. ಆತ್ಮಹತ್ಯೆ ತನಗೆ ಉಳಿದಿರುವ ಏಕೈಕ ಪರಿಹಾರ ಎಂದು ತಿಳಿಯುತ್ತಾನೆ. ಎಚ್‌ಐವಿ ಸೋಂಕು ಇರುವವರಲ್ಲಿ, ಆತ್ಮಹತ್ಯೆ ಮಾಡಿಕೊಳ್ಳುವ ಅಪಾಯ, ಜನ ಸಾಮಾನ್ಯರಿಗೆ ಹೋಲಿಸಿದರೆ 30 ಪಟ್ಟು ಹೆಚ್ಚು ಎಂದು ವರದಿಯಾಗಿದೆ.

ಖಿನ್ನತೆಯಿಂದ, ವ್ಯಕ್ತಿ ಊಟ ನಿದ್ರೆಯನ್ನು ವರ್ಜಿಸಬಹುದು. ಉಪವಾಸವಿದ್ದು, ನಿಷ್ಕ್ರಿಯನಾಗಿ ಕೂರಬಹುದು. ಯಾವುದೇ ಚಟುವಟಿಕೆಯಲ್ಲಿ, ಖುಷಿ ತರುವ ಚಟುವಟಿಕೆಯಲ್ಲೂ ಆಸಕ್ತಿಯನ್ನು ಕಳೆದುಕೊಳ್ಳಬಹುದು. ನನ್ನನ್ನು ಸಾಯಿಸಿ, ವಿಷ ಕೊಡಿ ಎಂದು ವೈದ್ಯರನ್ನು ಮತ್ತು ಮನೆಯವರನ್ನು ಅಂಗಲಾಚಿ ಕೇಳಬಹುದು. ದುಃಖ ಮರೆಯಲು ಮದ್ಯಪಾನ, ಮಾದಕ ವಸ್ತುಗಳ ಸೇವನೆಯಲ್ಲಿ ತೊಡಗಬಹುದು. ವಿಪರೀತ ದೈಹಿಕ ನೋವುಗಳಿಂದ, ಸುಸ್ತು, ದಣಿವುಗಳಿಂದ ಬಳಲಬಹುದು.

ಕೋಪ, ರೋಷ : ತನ್ನ ತಪ್ಪಿಲ್ಲದೆ, ಎಚ್.ಐ.ವಿ.ಸೋಂಕಿಗೆ ಒಳಗಾದ ವ್ಯಕ್ತಿ (ಉದಾ. ಇಂಜೆಕ್ಷನ್, ರಕ್ತ ಪೂರಣೆ, ಅಂಗ ಕಸಿಯಿಂದ ಸೋಂಕು ತಗುಲಿದವರು) ಅಗಾಧ ಕೋಪವನ್ನು ಪ್ರಕಟಿಸಬಹುದು. ತನಗೆ ಇಂಜೆಕ್ಷನ್ ಕೊಟ್ಟ ವೈದ್ಯರು, ಆಸ್ಪತ್ರೆ, ರಕ್ತದಾನ ಮಾಡಿದ ವ್ಯಕ್ತಿಗಳ ಮೇಲೆ, ರಕ್ತಪೂರಣೆ, ಅಂಗ ಕಸಿ ಮಾಡಿದ ವೈದ್ಯ ಸಿಬ್ಬಂದಿಯ ಮೇಲೆ ಕುಪಿತನಾಗಬಹುದು. ಇಡೀ ಸಮಾಜವನ್ನು ದ್ವೇಷಿಸತೊಡಗಬಹುದು. ನನಗೆ ಏಡ್ಸ್ ರೋಗವನ್ನಿತ್ತ ಜಗತ್ತಿಗೆ, ನಾನೂ ಅದನ್ನೇ ಬಳುವಳಿಯಾಗಿ ಕೊಡುತ್ತೇನೆ ಎಂದು ನಿರ್ಧರಿಸಿ, ಎಚ್.ಐ.ವಿ. ಸೋಂಕನ್ನು ಇತರರಿಗೆ ಅಂಟಿಸುವ ಕೆಲಸ, ಚಟುವಟಿಕೆಗಳಲ್ಲಿ ತೊಡಗಬಹುದು. ಉದಾಹರಣೆಗೆ: ಮುಕ್ತವಾಗಿ ಇತರರೊಂದಿಗೆ

> **ಎಚ್‌ಐವಿ ಸೋಂಕು ಮತ್ತು ಏಡ್ಸ್ ರೋಗ ಇಂದು ಭಯೋತ್ಪಾದಕ ವಿಷಯಗಳಾಗಿವೆ.**

ಲೈಂಗಿಕ ಸಂಪರ್ಕ, ಸಾರ್ವಜನಿಕ ಆಸ್ಪತ್ರೆಗಳಿಗೆ ಹೋಗಿ ಇಂಜೆಕ್ಷನ್ ತೆಗೆದುಕೊಳ್ಳುವುದು, ರಕ್ತದಾನ ಮಾಡುವುದು, ಮಲಿನವಾದ ಸೂಜಿಗಳನ್ನು ಇತರರ ಬಳಕೆಗೆ ಕೊಡುವುದು ಇತ್ಯಾದಿ. ಕೆಲವು ನಗರಗಳಲ್ಲಿ ಸ್ಕೂಟರ್ ಸವಾರರಿಂದ ಲಿಫ್ಟ್ ಕೇಳಿ, ಪ್ರಯಾಣಿಸುವಾಗ ಅವರಿಗೆ ಏಡ್ಸ್ ವೈರಾಣು ವಿರುವ ರಕ್ತವನ್ನು ಚುಚ್ಚಿ ಪರಾರಿಯಾಗುವವರ ಬಗ್ಗೆ ವರದಿಗಳು ಬಂದಿದ್ದವು. ಇವು ನಿಜವೇ ಆಗಿದ್ದರೆ (ಹೆಚ್ಚಿನ ಪ್ರಕರಣಗಳಲ್ಲಿ ಇವು ಕಲ್ಪಿತ ವರದಿಗಳಾಗಿದ್ದುವು), ಆ ವ್ಯಕ್ತಿಗಳ ಈ ನಡವಳಿಕೆಗಳಿಗೆ 'ರೋಷ'ವೇ ಕಾರಣ.

ಹೀಗೆ ಭಯ, ಖಿನ್ನತೆ ಮತ್ತು ಕೋಪಗಳಂತಹ ನಕಾರಾತ್ಮಕ ಭಾವೋದ್ರೇಕಗಳಿಗೆ ವ್ಯಕ್ತಿಯು ಒಳಗಾಗಬಹುದು. ಅಂತೆಯೇ ಈ ವಿಚಾರವನ್ನು ಆತನ ತಂದೆ ತಾಯಿ ಅಥವಾ ಹೆಂಡತಿ ತಿಳಿದರೆ ಅವರಲ್ಲೂ ಈ ಬಗೆಯ ಪ್ರತಿಕ್ರಿಯೆಗಳು ಕಂಡುಬರುತ್ತವೆ. ಭಯದಿಂದ ಎಚ್‌ಐವಿ ಸೋಂಕಿರುವ ಮಗ ಅಥವಾ ಗಂಡನನ್ನು ಅಥವಾ ಹೆಂಡತಿಯನ್ನು ಅವರು ದೂರಮಾಡಬಹುದು. ಆತನನ್ನು ಆಕೆಯನ್ನು ಅಸ್ಪೃಶ್ಯನಂತೆ/ಳಂತೆ ಕಾಣಬಹುದು. ಮನೆಯೊಳಗೆ ಇಟ್ಟುಕೊಳ್ಳಲು ನಿರಾಕರಿಸಬಹುದು. 'ಬಟ್ಟೆ ಬರೆ, ನೇರ ಸ್ಪರ್ಶದಿಂದ ವೈರಾಣು ಹರಡುವುದಿಲ್ಲ, ಈ ರೋಗಿಯೊಂದಿಗೆ ನೀವು ವಾಸಿಸಲು ಯಾವ ಅಪಾಯವೂ ಇಲ್ಲ' ಎಂದು ವೈದ್ಯರು ಎಷ್ಟು ಪರಿಪರಿಯಾಗಿ ಹೇಳಿದರೂ, ಮನೆಯವರು ರೋಗಿಯನ್ನು ಆಸ್ಪತ್ರೆಗೆ ದಾಖಲು ಮಾಡಿ, ಅವನನ್ನು ನಮ್ಮಿಂದ ದೂರ ವಿರಿಸಿ ಎಂದು ಒತ್ತಾಯಮಾಡಬಹುದು. ಎಚ್–ಐವಿ ಸೋಂಕನ್ನು ಪಡೆದ ವ್ಯಕ್ತಿಯನ್ನು ಅವರು ಸಿಟ್ಟಿನಿಂದ ದ್ವೇಷಿಸಬಹುದು. 'ಎಲ್ಲಾದರೂ ಹೋಗಿ ಸಾಯಿ, ನಿನ್ನಿಂದ ನಮ್ಮ ಮನೆ ಮರ್ಯಾದೆ ನೆಮ್ಮದಿ ಹಾಳಾಯಿತು' ಎನ್ನಬಹುದು.

ಗಂಡ ಹೆಂಡತಿಯನ್ನೂ, ಹೆಂಡತಿ ಗಂಡನನ್ನೂ ಬಿಟ್ಟುಬಿಡಬಹುದು. ವಿಚ್ಛೇದನಕ್ಕೆ ಆಸೆಪಡಬಹುದು. ರೋಗಿಯ ಕುಟುಂಬದವರು ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗುವ ಭಯಕ್ಕೆ ತುತ್ತಾಗುತ್ತದೆ. ಇಡೀ ಕುಟುಂಬದ ಸಮತೋಲನ ತಪ್ಪಿ ಅದು ಬಿರುಗಾಳಿಗೆ ಸಿಕ್ಕ ದೋಣಿಯಂತಾಗಬಹುದು. ಇವರಿಗೆಲ್ಲ ಆಪ್ತ ಸಲಹೆ ಸಮಾಧಾನದ (Counselling) ಅಗತ್ಯವಿದೆ.

ಎಚ್‌ಐವಿ ಸೋಂಕಾದೊಡನೆ ಎಲ್ಲ ಮುಗಿಯಿತು, ಸಾವು ಯಾವುದೇ ಕ್ಷಣ ಬರಬಹುದು ಎಂಬ ಹೆದರಿಕೆಗೆ ನಾವು ನಮ್ಮ ಮನಸ್ಸಿನಲ್ಲಿ ಜಾಗ ಕೊಡಬಾರದು. ಎಚ್‌ಐವಿ ಸೋಂಕಾದ ಮೇಲೆ ವ್ಯಕ್ತಿ ಹಲವು ವರ್ಷಗಳ ಕಾಲ ಬದುಕುತ್ತಾನೆ. ಏಡ್ಸ್‌ರೋಗ ಕಾಲಿಟ್ಟ ಮೇಲೂ ಆತ ಹಲವು ವರ್ಷಗಳು ಬದುಕುಳಿಯುತ್ತಾನೆ. ಏಡ್ಸ್ ಎಂದರೆ ಯಮಲೋಕಕ್ಕೆ ಎಕ್ಸ್‌ಪ್ರೆಸ್ ಟಿಕೆಟ್ ಎಂದು ಜನ ತಿಳಿಯಬಾರದು.

ವೀರ್ಯ, ಯೋನಿರಸ ಮತ್ತು ರಕ್ತದ ಮೂಲಕವಲ್ಲದೆ, ಇನ್ನಾವ ರೀತಿಯಿಂದಲೂ, ರೋಗಾಣು, ರೋಗಿಯಿಂದ ಮತ್ತೊಬ್ಬರಿಗೆ ಹರಡುವುದಿಲ್ಲ. ಆದ್ದರಿಂದ ರೋಗಿಯ ವೀರ್ಯ, ಯೋನಿರಸ, ರಕ್ತ ತಮಗೆ ಸೋಂಕದಂತೆ ಇತರರು ಎಚ್ಚರ ವಹಿಸಿದರೆ ಸಾಕು. ವೈದ್ಯಕೀಯ ಸಲಹೆ ಚಿಕಿತ್ಸೆಯಿಂದ ಏಡ್ಸ್‌ರೋಗಿ ಪ್ರಾಣಾಪಾಯವಿಲ್ಲದೆ ದೀರ್ಘಕಾಲ ಬದುಕಬಲ್ಲ. ಕಛೇರಿಯಲ್ಲಿ ಹೊಲಗದ್ದೆಗಳಲ್ಲಿ, ಮನೆಯಲ್ಲಿ ಮತ್ತು ಎಲ್ಲೆಡೆ ತನ್ನ ಮಾಮೂಲು ಕೆಲಸ ಕರ್ತವ್ಯಗಳನ್ನು ನಿರ್ವಹಿಸಬಲ್ಲ. ಏಡ್ಸ್‌ನೊಂದಿಗೆ ಬದುಕುವುದು ಸಾಧ್ಯ ಎಂಬುದನ್ನು ಗಮನಿಸಬೇಕು. ಏಡ್ಸ್ ರೋಗಾಣುಗಳನ್ನು ಕೊಲ್ಲುವ ಔಷಧ, ಏಡ್ಸ್ ಬರದಂತೆ ತಡೆಯುವ ವ್ಯಾಕ್ಸೀನು ನಾಳೆ ಅಥವಾ ನಾಳಿದ್ದು ಬಂದೇ ಬರುತ್ತವೆ. ಈ ರೋಗದ ವಿರುದ್ಧದ ಹೋರಾಟಕ್ಕೆ ಜಯ ಖಂಡಿತ. ಆದ್ದರಿಂದ ಎಚ್‌ಐವಿ ಸೋಂಕು ಮತ್ತು ಏಡ್ಸ್ ಬಗ್ಗೆ ಭಯಬೇಡ ಈ ಸೋಂಕಿನಿಂದ ಬಳಲುವ ವ್ಯಕ್ತಿಗಳಿಗೆ ಎಲ್ಲರಂತೆ ಬಾಳುವ ಹಕ್ಕಿದೆ. ಉಪಯುಕ್ತರಾಗಿ ಬಾಳಲು ಸಾಧ್ಯವೂ ಇದೆ. ■

> ನಲ್ಲೆ
> ನನಗೊತ್ತು
> ನೀನೊಲ್ಲೆ ಈ
> ಚಿಲ್ಲರೆ ಬಿಲ್ಲೆ
> ಆದರೆ
> ನಮ್ಮಪ್ಪನಿಗೂ
> ಉಂಟಲ್ಲ ಒಂದು
> ಎಲ್ಲೆ
>
> – ಕೆ.ಮಹೇಶ

ವೈವಾಹಿಕ-ವರ್ಗೀಕೃತ ಜಾಹೀರಾತು

ವೈವಾಹಿಕ

ವಧು ಬೇಕು

ಆರ್ಯ ಈಡಿಗ ಜನಾಂಗಕ್ಕೆ ಸೇರಿದ ಸರ್ಕಾರಿ ಶಾಲೆಯ ಶಿಕ್ಷಕಿಯಾಗಿರುವ, 5 1/4 ಅಡಿ ಎತ್ತರವಿರುವ, ನೀರಿನ ಗೋತ್ರಕ್ಕೆ ಸೇರಿದ ಪದ್ಮಾವತಿ ಎಂಬ ಹೆಸರಿನ ಹುಡುಗಿಗೆ ವರ ಬೇಕಾಗಿದೆ. ಆ ಹುಡುಗ ಈಡಿಗ ಜನಾಂಗಕ್ಕೆ ಸೇರಿರಬೇಕು. ಪದವೀಧರ ನಾಗಿರಬೇಕು. ಒಳ್ಳೆಯ ಕೆಲಸದಲ್ಲಿರಬೇಕು. ಸಂಪರ್ಕಿಸಿ:

ಜಾಹೀರಾತು ಸಂಖ್ಯೆ: 0017. C/o ಅಂಕುರ ಪ್ರಕಾಶನ, 473, ವಾಟರ್ ಟ್ಯಾಂಕ್ ಬಸ್‌ಸ್ಟಾಪ್ ಬಳಿ, ಬಸವೇಶ್ವರ ನಗರ ಮೈನ್‌ರೋಡ್, ಬೆಂಗಳೂರು-79

ವೈವಾಹಿಕ

ವಧು ಬೇಕು

ವಕ್ಕಲಿಗ ಜನಾಂಗಕ್ಕೆ (ಗೌಡ) ಸೇರಿದ ಸ್ವಂತ ಬಿಸಿನೆಸ್ ಮಾಡುತ್ತಿರುವ ವರನಿಗೆ (ಎತ್ತರ 5'.3", 35 ವರ್ಷ) ಸ್ವಜಾತಿಯ, ಗೌಡ ಉಪಪಂಗಡಕ್ಕೆ ಸೇರಿರುವ ವಧು ಬೇಕಾಗಿದೆ.

ಸಂಪರ್ಕಿಸಿ:

ಜಾಹೀರಾತು ಸಂಖ್ಯೆ: 0018. C/o ಅಂಕುರ ಪ್ರಕಾಶನ, 473, ವಾಟರ್ ಟ್ಯಾಂಕ್ ಬಸ್‌ಸ್ಟಾಪ್ ಬಳಿ, ಬಸವೇಶ್ವರ ನಗರ ಮೈನ್‌ರೋಡ್, ಬೆಂಗಳೂರು-79

ವೈವಾಹಿಕ

ವಧು ಬೇಕಾಗಿದೆ

ಬಲಿಜಿಗ ಜನಾಂಗಕ್ಕೆ ಸೇರಿದ ಕೇಂದ್ರ ಸರ್ಕಾರಿ ನೌಕರಿಯಲ್ಲಿರುವ ವರನಿಗೆ (ವೇತನ 8 ಸಾವಿರ, 5'.1". ವಯಸ್ಸು 32 ವರ್ಷ) ಸ್ವಜಾತಿಯ ಪದವೀಧರೆ ವಧು ಬೇಕಾಗಿದೆ. ಕೆಲಸದಲ್ಲಿರುವವರಿಗೆ ಆದ್ಯತೆ.

ಸಂಪರ್ಕಿಸಿ:

ಜಾಹೀರಾತು ಸಂಖ್ಯೆ: 0019. C/o ಅಂಕುರ ಪ್ರಕಾಶನ, 473, ವಾಟರ್ ಟ್ಯಾಂಕ್ ಬಸ್‌ಸ್ಟಾಪ್ ಬಳಿ, ಬಸವೇಶ್ವರ ನಗರ ಮೈನ್‌ರೋಡ್, ಬೆಂಗಳೂರು-79

ವೈವಾಹಿಕ

ವಧು ಬೇಕಾಗಿದೆ

ಕುರುಬ ಜನಾಂಗಕಕ್ಕೆ ಸೇರಿದ ಪದವೀಧರೆ ವಧುವಿಗೆ (ಎತ್ತರ 4'.9". 26 ವರ್ಷ, ಎಣ್ಣೆಗೆಂಪು ಬಣ್ಣ) ಸರ್ಕಾರಿ ಅಥವಾ ಸ್ವಂತ ಬಿಸ್‌ನೆಸ್ ಹೊಂದಿರುವ ವರ ಬೇಕಾಗಿದೆ. ಬೆಂಗಳೂರಿನವರಿಗೆ ಆದ್ಯತೆ.

ಸಂಪರ್ಕಿಸಿ:

ಜಾಹೀರಾತು ಸಂಖ್ಯೆ: 0020. C/o ಅಂಕುರ ಪ್ರಕಾಶನ, 473, ವಾಟರ್ ಟ್ಯಾಂಕ್ ಬಸ್‌ಸ್ಟಾಪ್ ಬಳಿ, ಬಸವೇಶ್ವರ ನಗರ ಮೈನ್‌ರೋಡ್, ಬೆಂಗಳೂರು-79

ಹೊಸ ವರ್ಷ

ನಿಮ್ಮೆಲ್ಲರಿಗೆ ಹೊಸ ವರ್ಷದ
ಶುಭಾಶಯಗಳು

ಎಚ್. ಎಂ.ಟಿ. ಸ್ವಾಮಿ
ಜಯ ಕನ್‌ಸ್ಟ್ರಕ್ಷನ್
8 ಬಿ, 18ನೇ ವಾರ್ಡ್
ನೆಹರೂ ಕಾಲನಿ
ಬಳ್ಳಾರಿ - 583 101
✆: 71012

ಗಡಿಯಾರಗಳು

ನವನವೀನ ಗಡಿಯಾರಗಳಿಗೆ
ಒಮ್ಮೆ ಭೇಟಿ ನೀಡಿ

R.V. TIME CENTRE
J.R. Shopping Complex
B.B. Road, Yelahanka
BANGALORE - 560 064

HMT & TITAN
Authorised
Sales & Service
Centre

ಶುಭ ಹಾರೈಕೆಗಳು

ಹರಪನಹಳ್ಳಿಯಲ್ಲಿ ಜರುಗಲಿರುವ ತರಳಬಾಳು ಹುಣ್ಣಿಮೆ ಮಹೋತ್ಸವಕ್ಕೆ ಹಾರ್ದಿಕ ಶುಭ ಹಾರೈಕೆಗಳು

-ಕೆ.ಎಂ. ಕೊಟ್ರಯ್ಯ
ಪುನಬಗಟ್ಟ

ಶುಭಾಶಯಗಳು

With best compliments from

GURUPRASAD CLINIC & LAB
Opposite shopping complex
Yelahanka New town
Bangalore -64
Ph.: 8462082

Skin Specialist and Physician
& Cordialogist available

ಬೇಕಾಗಿದ್ದಾರೆ

ಕರ್ನಾಟಕದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕನ್ನಡದ ಜನಪ್ರಿಯ ಪತ್ರಿಕೆಗೆ ಜಾಹೀರಾತು ಸಂಗ್ರಹಿಸಲು ಪ್ರತಿನಿಧಿಗಳು ಬೇಕಾಗಿದ್ದಾರೆ. ತಮ್ಮ ಸಾಮರ್ಥ್ಯಕ್ಕೆ ಅನುಸಾರವಾಗಿ ಪ್ರತಿ ತಿಂಗಳು ರೂ. 5000ಕ್ಕೂ ಹೆಚ್ಚು ಸಂಪಾದಿಸಬಹುದು. ಸ್ಥಳೀಯ ಸಂಘ, ಸಂಸ್ಥೆ, ಉದ್ಯಮಿ, ವ್ಯಾಪಾರಸ್ಥರೊಂದಿಗೆ ಹೆಚ್ಚಿನ ಸಂಪರ್ಕವಿರುವ ಪದವೀಧರರು ಅರ್ಜಿ ಸಲ್ಲಿಸಬಹುದು. ದಕ್ಷ ಮಹಿಳಾ ಅಭ್ಯರ್ಥಿಗಳಿಗೆ ಆದ್ಯತೆ. ಸಂಪರ್ಕಿಸಿ:

ಜಾಹೀರಾತು ಸಂಖ್ಯೆ: 0016. C/o ಅಂಕುರ ಪ್ರಕಾಶನ, 473, ವಾಟರ್ ಟ್ಯಾಂಕ್ ಬಸ್‌ಸ್ಟಾಪ್ ಬಳಿ, ಬಸವೇಶ್ವರ ನಗರ ಮೈನ್‌ರೋಡ್, ಬೆಂಗಳೂರು-79

ಉಚಿತ ಜಾಹೀರಾತು ಕೂಪನ್!

ಜಾಹೀರಾತು ನೀಡಲು ಹಣ ಕೊಡಬೇಕು ಎಂಬುದು ನಿಮಗೆಲ್ಲಾ ಗೊತ್ತಿರುವ ಸತ್ಯ. ಆದರೆ ಈಗ ನಿಮ್ಮ ಈ ನಂಬಿಕೆಯನ್ನೇ ಸುಳ್ಳು ಮಾಡುತ್ತಿದ್ದೇವೆ! ನೀವು ಒಂದು ಪೈಸೆಯನ್ನೂ ಖರ್ಚು ಮಾಡದೆ 'ಬದುಕು' ಮಾಸ ಪತ್ರಿಕೆಗೆ ವರ್ಗೀಕೃತ ಜಾಹೀರಾತು ನೀಡಬಹುದು.

ಜಾಹೀರಾತಿನ ವಿಷಯ

ಮದುವೆ, ಹುಟ್ಟುಹಬ್ಬ, ವಿದೇಶ ಪ್ರಯಾಣ, ಹಬ್ಬ, ಹೊಸವರ್ಷ, ವಿವಾಹ ವಾರ್ಷಿಕೋತ್ಸವ, ಪರೀಕ್ಷೆಯ ಯಶಸ್ಸು, ವ್ಯಾಪಾರದಲ್ಲಿ ಯಶಸ್ಸು, ಪ್ರಶಸ್ತಿ-ಪುರಸ್ಕಾರ.... ಹೀಗೆ ಯಾವುದೇ ಸಂದರ್ಭದಲ್ಲಿ ನೀವು ನಿಮ್ಮ ಆಪ್ತರಿಗೆ, ಗೆಳೆಯರಿಗೆ, ಸಂಬಂಧಿಕರಿಗೆ, ಪರಿಚಿತರಿಗೆ ಶುಭಾಶಯ ಕೋರಲು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಉಚಿತ ಜಾಹೀರಾತು ಕೂಪನ್‌ನ್ನು ವೈಯಕ್ತಿಕ ಜಾಹೀರಾತುಗಳಿಗೆ ಮಾತ್ರ ಉಪಯೋಗಿಸಿ. ವ್ಯಾಪಾರ, ವೈವಾಹಿಕ ವಿಷಯಗಳಿಗೆ ಈ ಉಚಿತ ಸೌಲಭ್ಯ ಲಭ್ಯವಿಲ್ಲ.

ಹೇಗೆ ಕಳಿಸುವುದು?

ಈ ಕೆಳಗಿನ ಕೂಪನ್‌ನಲ್ಲಿ ಜಾಹೀರಾತು ವಿಷಯವನ್ನು 20 ಶಬ್ದಗಳಿಗೆ ಮೀರದಂತೆ ಬರೆದು 'ಬದುಕು' ವಿಳಾಸಕ್ಕೆ ಕಳಿಸಿದರೆ ನಿಮ್ಮ ಕೆಲಸ ಮುಗಿಯಿತು.

ಮುಂದಿನ ತಿಂಗಳ ಸಂಚಿಕೆಯಲ್ಲಿ ನೀವು ನಿಮ್ಮ ಜಾಹೀರಾತನ್ನು ನೋಡಿ ಆನಂದಿಸಬಹುದು. ಜಾಹೀರಾತಿನ ವಿಷಯ ಕನ್ನಡ ಅಥವಾ ಇಂಗ್ಲಿಷ್‌ನಲ್ಲಿರಬಹುದು. ಹಾಂ! ನೆನಪಿಡಿ! ನಮ್ಮ ಕಚೇರಿಯನ್ನು ತಲುಪುವ ಮೊದಲ 50 ಜಾಹೀರಾತುಗಳಿಗೆ ಮಾತ್ರ ಈ ಅವಕಾಶ ಸಿಗುತ್ತದೆ. ಆದ್ದರಿಂದ ತಡ ಮಾಡದೆ ತಕ್ಷಣ ಕೂಪನ್ ಭರ್ತಿ ಮಾಡಿ ಇಂದೇ ಕಳಿಸಿಕೊಡಿ.

ಕೂಪನ್ ಕಳಿಸಬೇಕಾದ ವಿಳಾಸ

'ಬಿಸಿಲ ಬದುಕು' ಮಾಸಪತ್ರಿಕೆ, ಅಂಚೆಪೆಟ್ಟಿಗೆ: 7951, ಬಸವೇಶ್ವರನಗರ, ಬೆಂಗಳೂರು - 560 079.

ಉಚಿತ ಜಾಹೀರಾತು ಕೂಪನ್

ದಯವಿಟ್ಟು ಈ ಕೆಳಗಿನ ವರ್ಗೀಕೃತ ಜಾಹೀರಾತನ್ನು ಫೆಬ್ರವರಿ 99ರ 'ಬಿಸಿಲ ಬದುಕು' ಮಾಸಪತ್ರಿಕೆಯಲ್ಲಿ ಪ್ರಕಟಿಸಲು ಕೋರಿಕೆ.


ಜಾಹೀರಾತು ನೀಡುವವರ ಪೂರ್ಣ ವಿಳಾಸ..

....

....

ಪಿನ್‌ಕೋಡ್... ದೂರವಾಣಿ ಸಂಖ್ಯೆ...

ಜಾಹೀರಾತುದಾರರ ಸಹಿ



ಹೆಜ್ಜೆ -18

■ ಕೃಶಾಂಗ

ತೊಡುವ ಉಡುಗೆ ಹೇಗಿರಬೇಕು?

ಮಹಿಳೆಯರು ಮೊದಲು ಸೌಂದರ್ಯಕ್ಕೆ, ನಂತರ ಬುದ್ಧಿವಂತಿಕೆಗೆ ಒತ್ತು ನೀಡುತ್ತಾರೆ. ಏಕೆಂದರೆ ಅವರಿಗೆ ಗೊತ್ತು; ಸಾಮಾನ್ಯ ಪುರುಷರು ಯೋಚಿಸುವುದಕ್ಕಿಂತ ಮೊದಲು ದೃಷ್ಟಿಸುತ್ತಾರೆ.



ವ್ಯಕ್ತಿತ್ವ ಸುಧಾರಣೆಯತ್ತ ಗಮನವೀಯುವವರೆಲ್ಲರೂ ಎರಡು ವಿಷಯಗಳ ಮಹತ್ವ ತಿಳಿದಿರಬೇಕು. ಸೂಕ್ತ ಬಟ್ಟೆಗಳ ಆಯ್ಕೆ; ಅವುಗಳನ್ನು ಧರಿಸುವಿಕೆ.

ಸೂಕ್ತ ಬಟ್ಟೆಗಳನ್ನಾಯ್ದುಕೊಳ್ಳುವ ಬಗೆ ಹೇಗೆ? ಮಹಿಳೆಯರು ಮೊದಲು ಸೌಂದರ್ಯಕ್ಕೆ ನಂತರ ಬುದ್ಧಿವಂತಿಕೆಗೆ ಒತ್ತು ನೀಡುತ್ತಾರೆ. ಏಕೆಂದರೆ ಅವರಿಗೆ ಗೊತ್ತು; ಸಾಮಾನ್ಯ ಪುರುಷರು ಯೋಚಿಸುವುದಕ್ಕಿಂತ ಮೊದಲು ದೃಷ್ಟಿಸುತ್ತಾರೆ. ಇಲ್ಲಿವೆ ಕೆಲವು ಮಾರ್ಗದರ್ಶಕ ತತ್ವಗಳು.

ಬಟ್ಟೆಯನ್ನು ಆರಿಸುವಾಗ ನಿಮ್ಮ ಸಂಪೂರ್ಣ ಶರೀರದ ಬಗೆಗೆ ನೆನಪಿಸಿಕೊಳ್ಳಿ, ಕೇವಲ ಕಣ್ಣು ಉಗುರುಗಳಿಗೆ ಹೊಂದುವ ಬಟ್ಟೆ ಬೇಡ.

ಬಟ್ಟೆಗಳ ಬಣ್ಣಗಳನ್ನು ನಿರ್ಧರಿಸುವಾಗ ಎರಡು ವರ್ಗದ ಸಂಗತಿಗಳನ್ನು ನೆನಪಿನಲ್ಲಿಡಿ. ನಿಮ್ಮ ಮೈ, ಕಣ್ಣು, ಕೇಶಗಳ ವರ್ಣ, ನಿಮ್ಮ ವಯಸ್ಸು, ಪ್ರಚಲಿತ ಋತು, ಸಂದರ್ಭ.

ಪೋಷಾಕಿನ ಮಾದರಿ ಅಥವಾ ಕಲೆಗಾರಿಕೆಯನ್ನು ನಿಮ್ಮ ಮುಖ ಮತ್ತು ದೇಹದ ಆಕಾರಗಳಿಗೆ ಹೊಂದಿಸಿ.

ನೀವು ಧರಿಸುವ ಬಟ್ಟೆಗಳು ನಿಮ್ಮ ವ್ಯಕ್ತಿತ್ವವನ್ನು ಸ್ಫುಟಗೊಳಿಸಲು, ನಿಮ್ಮ ವೈಶಿಷ್ಟ್ಯಗಳನ್ನು ನಿರಾಯಸವಾಗಿ ಬಹಿರಂಗಪಡಿಸಲು ಶಕ್ತವಾಗಬೇಕು. ಈ ಉದ್ದೇಶವನ್ನು ಸಾಧಿಸಲು ನೀವು ಪೂರ್ವಾನುಭವದ ಮೂಲಕ ಸಂಪೂರ್ಣತೆಯೆಡೆಗೆ ಪ್ರಯಾಣಿಸಿ.

ಜೀವನವೆಂಬ ರಂಗಮಂಚದಲ್ಲಿ ನಾವೆಲ್ಲ ನಟರು ತಾನೇ? ಆದುದರಿಂದ ಬೇರೆಯವರಿಗೆ ಭ್ರಮೆ ಮೂಡಿಸಲು ನಾವು ಶಕ್ತರಾಗಬೇಕು. ಆ ಭ್ರಮೆಯೆಂದರೆ ತಾವು ಕಾಣುತ್ತಿರುವುದು ಸತ್ಯವೇ ಎಂಬುದು. ಸಾಧ್ಯವಿದ್ದಷ್ಟು ಸತ್ಯವನ್ನು ಸಹ್ಯವಾಗುವಂತೆ ತೋರ್ಪಡಿಸಬೇಕಾಗಬಹುದು. ಅಶ್ವತ್ಥಾಮನ ವಿಷಯದಲ್ಲಾದಂತೆ ಸತ್ಯದ ಕೆಲ ಭಾಗವನ್ನು ಆಚ್ಛಾದಿಸುವುದೂ ಅವಶ್ಯಕವಾಗಬಹುದು. ನೋಡಿ, ಬಟ್ಟೆಗಳ ಪಾತ್ರವೂ ಇದೇ! ಬಟ್ಟೆಗಳ ವಿಷಯದಲ್ಲಿ ಬಾಲಿಶ ಮನೋಭಾವ ಸಲ್ಲದು. ಅಂದರೆ ಈ ತರಹದ್ದು- ಒಬ್ಬ ತೊಯ್ದು ತೊಪ್ಪೆಯಾದ ಬಟ್ಟೆಯಲ್ಲೇ ಓಡಾಡುತ್ತಿದ್ದುದೇಕೆಂದು ಪ್ರಶ್ನಿಸಿದಾಗ ಆತ ನೀಡಿದ ಉತ್ತರ ಗೊತ್ತೇ? ''ನಾನು ಅತ್ಯಂತ ಶಿಸ್ತಿನ, ಕಟ್ಟುನಿಟ್ಟಿನ ವ್ಯಕ್ತಿ. ಆದುದರಿಂದ ತಜ್ಞರ ಸೂಚನೆಯನ್ನು ಅಕ್ಷರಶಃ ಪಾಲಿಸಿದ್ದೇನೆ''. ಸೂಚನೆ ಹೀಗಿದೆ. 'ತೊಳೆ ಮತ್ತು ಧರಿಸು'

ಸೃಷ್ಟಿಸಲ್ಪಟ್ಟ ಎಲ್ಲ ಮನುಷ್ಯರೂ ಒಂದೆ ಬಗೆಯ ಅವಯವಗಳನ್ನು ಹೊಂದಿದ್ದರೂ, ವಿಷಮತೆಗಳಿಗೆ ಇಲ್ಲಿ ಕೊರತೆಯಿಲ್ಲ. ನೈಸರ್ಗಿಕವಾಗಿ ಕೆಲವು ವಿಕಲತೆಗಳಿಗೂ, ಊನಗಳಿಗೂ ಒಳಗಾಗಿ ನಾವು ಕುರೂಪಿಗಳಾಗಿರಬಹುದು. ಆ ಕಾರಣ, ಇತರರ ಆಶ್ಚರ್ಯ, ಕುತೂಹಲಗಳಿಗೆ ಆಹಾರವಾಗಿರಲೂಬಹುದು. ಇನ್ನು ಹಲವರಲ್ಲಿ ನಿರ್ಲಕ್ಷ್ಯ, ದುರಭ್ಯಾಸಗಳ ಫಲವಾಗಿ ಅಥವಾ ಬೊಜ್ಜಿನ ಫಲವಾಗಿ ದೇಹದ ಸ್ವರೂಪವೇ ಅಪಹಾಸ್ಯಕರವಾಗಿರಬಹುದು. ಹಾಗಾದರೆ, ಇದಕ್ಕೆ ಉಪಾಯ? ಇದೆ! ಬಟ್ಟೆಗಳು ನಮ್ಮ ದೈಹಿಕ ಅಪರಿಪೂರ್ಣತೆಗೆ ಪರದೆ ಎಳೆದು ನಮ್ಮ ನಟನೆಯ ಕಾಯಕದಲ್ಲಿ ನೆರವಾಗುತ್ತವೆ. ಕೆಲ ವರ್ಷಗಳ ಹಿಂದೆ 'ಗುರುಶರ್ಟ್' ಎಂಬುದು ಹೇಗೆ ಈ ಕರ್ತವ್ಯ ಪೂರೈಸಿತೆಂಬುದು ನಿಮಗೆ ಗೊತ್ತಿದೆಯಲ್ಲವೇ?

ನಮ್ಮ ನಡುವೆ, ಸಂತೆಯಲ್ಲೂ ಎದ್ದು ಕಾಣುವ ಎತ್ತರದ ವ್ಯಕಿಗಳೂ, ಕಾಲುಗಳ ನಡುವೆ ಕರಗಿ ಹೋಗುವ ಕುಳ್ಳರೂ ಇದ್ದಾರೆ. ಹಾಗಾದರೆ ಅತಿ ಎತ್ತರ ವ್ಯಕ್ತಿ ಮತ್ತು ಅತಿ ಗಿಡ್ಡವಿರುವವ ಇಬ್ಬರೂ ಸರಾಸರಿ ಎತ್ತರದವರಂತೆ ಕಾಣುವುದೆಂತು? ಗಿಡ್ಡರೂ, ದಪ್ಪಶರೀರದವರೂ ಲಂಬರೇಖೆಗಳುಳ್ಳ, ಸೊಂಟದ ಭಾಗವನ್ನು ಗೌಣಗೊಳಿಸುವ ಬಟ್ಟೆಗಳನ್ನು ಧರಿಸಬೇಕು. ಅಡ್ಡಡ್ಡ ಗೆರೆಗಳು ಇರಲೇಬಾರದು. ಅವಿಭಾಜಿತ ಉದ್ದಗೆರೆಗಳು ಎತ್ತರ ಹೆಚ್ಚಿಸುವ, ದಪ್ಪ ಕಡಿಮೆಗೊಳಿಸುವ ದೃಕ್ ಭ್ರಮೆಯನ್ನು ಹುಟ್ಟಿಸುತ್ತವೆ. ಎತ್ತರದ ವ್ಯಕ್ತಿ ಅವಿಭಾಜಿತ ಸಮತಲ ರೇಖೆಗಳುಳ್ಳ ಪೋಷಾಕು ತೊಡಬೇಕು. ನೀವು ತೆಳುವಾದ ಉದ್ದಮುಖ ಮತ್ತು ದೀರ್ಘ ಕೊರಳಿನವರೇ? ಹಾಗಾದರೆ 'V' ಕೊರಳಿನ ಸಹವಾಸ ತ್ಯಜಿಸಿ. ಅಂಥ ಕೊರಳುಳ್ಳ ಬಟ್ಟೆಗಳು ಕಿರಿಕೊರಳಿನ, ದಪ್ಪನೆಯ ದುಂಡು ಮುಖದ ನಿಮ್ಮ ಗೆಳತಿಯ ಸಹಾಯಕ್ಕೆ ಬಂದಾವು.

ಹೀಗೊಂದು ಸುಂದರ ಸಾಯಂಕಾಲ ನೀವು

ವಾಯು ವಿಹಾರಕ್ಕೆ ಹೊರಟದ್ದೀರೆಂದು ಕಲ್ಪಿಸಿಕೊಳ್ಳಿ. ತುಸು ದೂರ ಹೋದೊಡನೆ ನಿಮ್ಮೆದುರು ಇಬ್ಬರು ಮಹಿಳೆಯರು ಕಾಣಿಸಿಕೊಳ್ಳುತ್ತಾರೆ. ಅವರಲ್ಲೊಬ್ಬಳ ಮುಖಭಾವ ಒರಟೊರಟಾಗಿದೆ. ಪುಷ್ಟಭುಜಗಳ ಮೇಲೆ ನಿಂತ ಅವಳ ಶಿರದಲ್ಲಿ ದೊಡ್ಡ ಮೂಗು, ಬೊಂಬಾಯಿ, ಅತಿ ವಿಶಾಲ ಕಣ್ಣುಗಳು ಒಡೆದು ಕಾಣುತ್ತಿವೆ! ಸೂಕ್ಷ್ಮ, ದಂತದ ಬೊಂಬೆಯಂತಹ ಅವಳ ಪಕ್ಕದಲ್ಲಿದ್ದವಳು ನೀಳ ದೇಹದ ತಿದ್ದಿ ತೀಡಿದ ಕಣ್ಣು ಮೂಗಿನವಳು. ಆದರೆ ಇಬ್ಬರೂ ಚೆನ್ನಾಗಿ ಕಾಣುತ್ತಿಲ್ಲ. ಏಕಿರಬಹುದು? ಮೊದಲನೆಯವಳು ಧರಿಸಬೇಕಾಗಿದ್ದ ಒರಟು ಬಟ್ಟೆಗಳು, ದೊಡ್ಡ ದೊಡ್ಡ ಆಕಾರದ ಆಭರಣಗಳನ್ನು ಎರಡನೆಯವಳು ಧರಿಸಿದ್ದಾಳೆ; ಸುಂದರ, ಸೂಕ್ಷ್ಮ ಅಂಚುಗಳುಳ್ಳ ರೇಶಿಮೆಯಂತಹ ಬಟ್ಟೆಗಳನ್ನು ಚಿಕ್ಕ ಆಕಾರದ ಆಭರಣಗಳೊಡನೆ ಮೊದನೆಯವಳು ಧರಿಸಿದ್ದಾಳೆ. ಇವುಗಳಿಂದಾಗಿ ಇಬ್ಬರೂ ಇದ್ದುದಕ್ಕಿಂತ ಕೆಟ್ಟದಾಗಿ ಕಾಣುತ್ತಿದ್ದಾರೆ.

ಅಂದರೆ, ಬಟ್ಟೆಗಳು ಸಾಧಿಸಬೇಕಾದ ಉದ್ದೇಶಗಳು ಮೂರು:

ನಿಮ್ಮ ದೇಹ ಮತ್ತು ಮುಖಭಾವಗಳ ಉತ್ತಮ ಲಕ್ಷಣಗಳಿಗೆ ಅವು ಒತ್ತುಕೊಡಬೇಕು.

ನಿಮ್ಮ ದೈಹಿಕ ಕೊರತೆಗಳನ್ನು ಮುಚ್ಚಿಡಬೇಕು ಇಲ್ಲವೆ ನಿಮಗನುಕೂಲವಾಗಿ ಪರಿವರ್ತಿಸಬೇಕು.

ನಿಮ್ಮ ದೈಹಿಕ ಅವಲಕ್ಷಣಗಳಿಂದ ಪರರಿಗಾಗುವ ದುಃಖ ಪೀಡೆಗಳನ್ನು ಅವು ನಿವಾರಿಸಲಾಗದಿದ್ದರೂ, ಮುಂದೂಡಬೇಕು.

ಮಂಥರೆಗೆ ಈ ಕೊನೆಯ ವಿಚಾರ ತಿಳಿದಿರಲಿಲ್ಲವೆಂದು ಕಾಣುತ್ತದೆ. ಅದರ ಕಾರಣವೇ ಅಲ್ಲವೇ, ಅವಳ ಗೂನು ಕಂಡಾಗಲೆಲ್ಲ ಅವಳ ಬಗೆಗೆ ವಿಚಿತ್ರ ತಳಮಳದ ಭಾವನೆಯುಂಟಾಗುವುದು. ಬೇರೆಯವರಿಗೆ ಉಂಟಾಗುವ ಈ ಮಾನಸಿಕ ವ್ಯಥೆಯಿಂದ ಅವರನ್ನು ರಕ್ಷಿಸುವುದಕ್ಕಾಗಿಯೇ ಸೂಕ್ತ ಬಟ್ಟೆಗಳನ್ನು ಧರಿಸುವುದು ನಮ್ಮ ಕರ್ತವ್ಯ. ತೋಳು ಕಳೆದುಕೊಂಡ ದುರ್ದೈವಿಗಳು ಉದ್ದ ತೋಳಿನ ಅಂಗಿಗಳನ್ನು ತೊಟ್ಟಿರುವುದನ್ನು ನೀವು ಕಂಡಿರುವಿರಲ್ಲವೇ?

ಬಟ್ಟೆಗಳಂತೆಯೇ ಬಟ್ಟೆಗಳ ವರ್ಣಗಳೂ ಸಹ ವ್ಯಕ್ತಿತ್ವ ಸುಧಾರಣೆಗೆ ನೆರವಾಗುತ್ತವೆ. ಈ ವರ್ಣಗಳು ಅಂಗಾಂಗ, ಕೇಶ ಮತ್ತು ಚರ್ಮ ವರ್ಣಗಳೊಡನೆ ಮಾತ್ರ ಹೊಂದಾಣಿಕೆಯಾಗುವುದು ಮುಖ್ಯವಲ್ಲ; ನಿಮ್ಮ ವ್ಯಕ್ತಿತ್ವಕ್ಕೂ ಅವು ಮೆರಗು ನೀಡಬೇಕು. ವರ್ಣ ಸಾಮರಸ್ಯವನ್ನು ವಿರುದ್ಧ ವರ್ಣಗಳ ಮೂಲಕ ಅಥವಾ ಪೂರಕ ವರ್ಣಗಳ ಮೂಲಕ ಸಾಧಿಸಬಹುದು. ನಿಮ್ಮ ಎತ್ತರ, ಆಕಾರಗಳ ಬಗೆಗೂ, ವರ್ಣಗಳನ್ನು ಸರಿಯಾಗಿ ಉಪಯೋಗಿಸುವುದರ ಮೂಲಕ, ಇತರರಿಗೆ ಭ್ರಮೆಯನ್ನುಂಟು ಮಾಡಬಹುದು.

ಮುಖ, ಕೂದಲು, ಕಣ್ಣುಗಳ ಸೌಂದರ್ಯ ವೃದ್ಧಿಯಲ್ಲಿ ವರ್ಣಗಳ ಪಾತ್ರ ಹಿರಿದಾದರೂ ಬಟ್ಟೆಗಳ ವರ್ಣಗಳನ್ನು ಆಯ್ಕೆ ಮಾಡುವಾಗ ಎರಡು ಸಮಸ್ಯೆಗಳುಂಟಾಗಬಹುದು. ಒಂದೇ ಬಣ್ಣದ ಬಟ್ಟೆ ತೊಡುವುದು ಪಿಟೀಲಿನಲ್ಲಿ ಒಂದೇ ಸಮನೆ ಒಂದೇ ಸ್ವರ ಕೇಳಿದಂತಾಗ–ಬಹುದು. ವಿವಿಧ ವರ್ಣಗಳ ಬಟ್ಟೆಗಳು ವರ್ಣ ಸಾಮರಸ್ಯ ಸಾಧನೆಯ ಸಮಸ್ಯೆಯನ್ನು ಒಡ್ಡಬಹುದು.

ಯಾವ ಬಣ್ಣದ ಬಟ್ಟೆಗಳನ್ನು ನಾವು ಇಷ್ಟಪಡುತ್ತೇವೆ? ನಾವು ಇಷ್ಟ ಪಡುವವರು ಮತ್ತು ನಾವು ಇಷ್ಟಪಡದವರು ನಮಗೆ ಈ ಸಂದರ್ಭದಲ್ಲಿ ನೆನಪಾಗುತ್ತಾರೆ. ಮೊದಲ ವರ್ಗದವರು ಬಯಸುವ ವರ್ಣಗಳು ನಮಗೂ ಇಷ್ಟ; ಎರಡನೆಯ ವರ್ಗದವರು ಇಷ್ಟಪಡುವ ವರ್ಣಗಳು ನಮಗೆ ಬೇಡವೇ ಬೇಡ. ಹಾಗಾದರೆ ಬಣ್ಣದ ಬಟ್ಟೆಗಳನ್ನು ತೊಡುವುದರ ಮೂಲ ಉದ್ದೇಶ ನಮ್ಮನ್ನು ನಮ್ಮ ಬಂಧು-ಮಿತ್ರರನ್ನು ಸಂತೋಷದಲ್ಲಿಡುವುದೆಂದಾಯಿತು. ವಸ್ತುಸ್ಥಿತಿ ಹೀಗಿದ್ದರೂ ಸಹ ಹಸಿರಿನಂಥ ಕೆಲ ಬಣ್ಣಗಳು ಸಾರ್ವತ್ರಿಕವಾಗಿ ಮನಸ್ಸುಗಳಿಗೆ ಹತ್ತಿರವಾಗಿರುವ ಸಂಭವವಿದೆ.

ತಮಗೆ ಬುದ್ಧಿತಿಳಿದಾಗಿನಿಂದ ಒಟ್ಟುಗೂಡಿಸಿಕೊಳ್ಳುತ್ತ ನಡೆಯುವ ಸಂಬಂಧಗಳು, ಅನುಭವಗಳ ಮೂಲಕ ವ್ಯಕ್ತಿಗಳು ಒಂದೇ ಬಣ್ಣಕ್ಕೆ ಬೇರೆ ಬೇರೆಯಾಗಿ, ಪ್ರತಿಕ್ರಿಯಿಸಬಹುದು. ಕೆಮ್ಮಣ್ಣವನ್ನೇ ತೆಗೆದುಕೊಳ್ಳಿ, ರಕ್ತವನ್ನು ಹೋಲುವ ಈ ಬಣ್ಣ ಕೆಲವರಿಗೆ ಭಯ, ಜುಗುಪ್ಸೆ ಹುಟ್ಟಿಸಬಹುದು. ನೀವು ದಿಟ್ಟಿಸಿನೋಡಿದಾಗ ನಿಮ್ಮ ಗೆಳತಿ ಕೆಂಪು ಕೆಂಪಾಗುವುದು ನೆನಪಾಗಿ ಕಚಗುಳಿ ಉಂಟಾಗುತ್ತಿದೆಯೇ? ಹಾಗಾದರೆ ಕೆಂಪು ನಿಮ್ಮ ಮೆಚ್ಚಿಗೆಯ ವರ್ಣವಾದೀತು! ಹೆದ್ದಾರಿಯ ಮೇಲೆ ಕಾಣುವ ಕೆಂಪು ವರ್ಣ ನಿಮ್ಮ ಗತಜೀವನದಲ್ಲಿ ನಡೆದ ರಸ್ತೆ ಅಪಘಾತದನುಭವ ಮರುಕಳಿಸುವಂತೆ ಮಾಡಿ ಖಿನ್ನತೆ ಆವರಿಸೀತು. ಕೆಂಪು ಕೆಲವರಲ್ಲಿ ಸಂತೋಷೋಲ್ಲಾಸಗಳ ಬುಗ್ಗೆಗೆ ಕಾರಣವಾದರೆ ಕಮ್ಯುನಿಷ್ಟರಿಗೆ ಅತೃಪ್ತಿ ಸೂಚಿಸುವ, ಆ ಅತೃಪ್ತಿಯನ್ನು ಕ್ರಾಂತಿಯ ಮೂಲಕ ತೊಡೆದು ಹಾಕುವ ಸಾಧನವಾಗಿ ತೋರೀತು. ಆದರೆ ಬಣ್ಣಗಳಿಗೆ ನಾವು ನೀಡುವ ಪ್ರತಿಕ್ರಿಯೆ ನಮ್ಮ ತಂದೆ ತಾಯಿಗಳಿಂದ ನಮ್ಮಲ್ಲಿ ಹರಿದು ಬಂದಿರುತ್ತದೆಯೆಂಬ ವಾದಕ್ಕೆ ಸಾಕಷ್ಟು ನಿರ್ಣಾಯಕ ಶಾಸ್ತ್ರೀಯ ಆಧಾರಗಳಿಲ್ಲವೆಂದು ಹೇಳಬಹುದು.


ವರ್ಣಗಳ ಉಪಯೋಗದ ಬಗೆಗೆ ಇನ್ನೊಂದು ಅಭಿಪ್ರಾಯವೂ ಇದೆ. ಪಲವರ ದೃಷ್ಟಿಯಲ್ಲಿ ವರ್ಣಗಳು ದೈಹಿಕ, ಮಾನಸಿಕ ಚಿಕಿತ್ಸೆಯಲ್ಲಿ ತಮ್ಮದೇ ಪಾತ್ರವಾಡಬಲ್ಲವು. ಅವು ಕಣ್ಣುಗಳ ಮೂಲಕ ದಣಿದ ನರಜಾಲ, ಮನಸ್ಸುಗಳನ್ನು ಸಂತೈಸಿ ಶಾಂತಿ ಸಮಾಧಾನ ತರಬಲ್ಲವು. ಇನ್ನು ಕೆಲವು ವರ್ಣಗಳು ದೇಹ, ಮನಸ್ಸುಗಳನ್ನು ಉದ್ರೇಕಿಸಿ ಕಾಡಬಹುದು.

ನೀವು ತೊಟ್ಟ ಬಟ್ಟೆಗಳ ಮೂಲಕ ನಿಮ್ಮ ಬಗೆಗೆ ತಿಳಿಯಬಹುದೇ? ಹೌದು. ಬಟ್ಟೆಗಳನ್ನು ಧರಿಸುವಾಗ ಸಂದರ್ಭವನ್ನು ಮರೆತೀರಿ, ಜೋಕೆ! ನಂತರ ನಗೆಪಾಟಲಿಗೀಡಾದೀರಿ. ಸಂಗೀತ ಸಭೆ, ಕಚೇರಿ ಕೆಲಸ, ಔತಣ ಕೂಟ, ಧಾರ್ಮಿಕ ಸಮಾರಂಭ ಸಮುದಾಯ ಸಹಭೋಜನ ಶ್ರದ್ಧಾಂಜಲಿ ಸಭೆ ಮನೆಯಲ್ಲಿರುವಿಕೆ ಮುಂತಾದ ಎಲ್ಲ ಸಂಧರ್ಭಗಳಿಗೂ ಒಂದೆ ಬಗೆಯ ಬಟ್ಟೆಯ ತೊಡುವಿಕೆ ಯೋಗ್ಯವಾದೀತೆ? ಯೋಚಿಸಿ. ದೈಹಿಕ ವ್ಯಾಯಾಮದ ತೊಡುಗೆಗಳಲ್ಲೇ ಆಪ್ತ ಸಹಾಯಕಿಯ ಕರ್ತವ್ಯ ನಿರ್ವಹಣೆಗಾಗಿ ಯುವತಿಯೊಬ್ಬಳು ಕಾರ್ಯಾಲಯಕ್ಕೆ ತೆರಳಿದರೆ ಅವಳ ಗೆಳತಿಯರ ಪ್ರತಿಕ್ರಿಯೆ ಹೇಗಿರಬಹುದು? ಸಂದರ್ಭೋಚಿತವಲ್ಲದ ಪೋಷಾಕು ನಿಮ್ಮ ವ್ಯಕ್ತಿತ್ವಕ್ಕೊಂದು ಕುಂದು.

ಸಾಂದರ್ಭಿಕತೆಗೆ ಹೊರತಾಗಿ, ಪೋಷಾಕುಗಳ ಆಯ್ಕೆಗೆ ಎರಡು ಮಾನದಂಡಗಳಿರಲಿ. ಒಂದು: ಯಾವ ವರ್ಗದ ಜನರೊಡನೆ ನೀವು ಸಂಪರ್ಕ ಸಾಧಿಸಲಿರುವಿರೋ ಅವರಿಗಿಂತ ತೀರ ಭಿನ್ನವಾಗಿ ಕಾಣಬಹುದಾದ ಪೋಷಾಕು ಅಂಗೀಕಾರಾರ್ಹವಲ್ಲ. ಎರಡು: ನಿಮ್ಮ ಪೋಷಾಕುಗಳ ಬೆಲೆ ನಿಮ್ಮ ಆರ್ಥಿಕ ಸ್ಥಿತಿಗಿಂತ ತೀರ ಕೆಳಗೆ ಅಥವಾ ಮೇಲಕ್ಕೆ ಇರದಿರಲಿ. ಈ ವಿಷಯದಲ್ಲಿಯ ಅಜಾಗ್ರತೆ ನಿಮ್ಮ ಬುದ್ಧಿಮತ್ತೆಯ ನಿಜವಾದ ಪಾತಳಿಗೆ ಕನ್ನಡಿ ಹಿಡಿದೀತು, ನಿಮಗೇ ತಿಳಿಯದಂತೆ.

ಒಟ್ಟಿನಲ್ಲಿ ನಾವು ಧರಿಸುವ ಬಟ್ಟೆಗಳು ನಮ್ಮ ನೆರೆಹೊರೆಯವರಿಗೆ ತಮ್ಮ ಬಟ್ಟೆಗಳ ಬಗೆಗೆ ಚಿಂತಿಸುವಂತೆ ಮಾಡಬಾರದು. ಹೀಗಾದಾಗ ನಮ್ಮ ನಡತೆಯ ಬಗೆಗೆ ಇತರರು ಸಂಶಯ ತಾಳುವಂತಾಗುತ್ತದೆ. ನಮ್ಮ ವ್ಯವಹಾರ ಜ್ಞಾನದಲ್ಲಿಯ ಕೊರತೆಯೂ ಬಯಲಾಗುತ್ತದೆ. ಬಟ್ಟೆಗಳ ಮೂಲಕ ನಮ್ಮ ಸದ್ಯದ ಆರ್ಥಿಕ ಸ್ಥಿತಿಯನ್ನು ಮುಚ್ಚಿಡುವ ಪ್ರಯತ್ನ ಸಾಹಸವಲ್ಲ; ಮೂರ್ಖತನ. ಏಕೆಂದರೆ ನಾವು ಸಾಮಾಜಿಕವಾಗಿ ಪರಿಣಾಮರಹಿತರಾಗುತ್ತೇವಷ್ಟೇ ಅಲ್ಲ, ಸಮಾಜವು ನಮ್ಮನ್ನು ಕುರಿತು ಹೊಂದಬಹುದಾದ ಸದಭಿಪ್ರಾಯದಿಂದಲೂ ವಂಚಿತರಾಗುತ್ತೇವೆ. ■

1983ರಲ್ಲಿ ವಿಶ್ವದ ಕಳಪೆ ತಂಡವಾಗಿದ್ದ ಭಾರತ ಎಲ್ಲರನ್ನು ಮೂಕವಿಸ್ಮಿತರನ್ನಾಗಿಸಿ ಲಾರ್ಡ್ಸ್ ಮೈದಾನದಲ್ಲಿ ವಿಶ್ವಕಪ್ ಎತ್ತಿ ಹಿಡಿದಿತ್ತು. ಈ ಬಾರಿಯೂ ಇದೇ ಕ್ರೀಡಾಂಗಣ ಅಂತಿಮ ಪಂದ್ಯಕ್ಕೆ ಸಜ್ಜಾಗಿದೆ. ಭಾರತ ಮತ್ತೊಮ್ಮೆ 1983ರ ಸಂಭ್ರಮದ ದಿನಗಳನ್ನು ನೆನಪಿಸುವಂತೆ ಮಾಡಿ, ಶತಮಾನದ ಕಡೆಯ ವಿಶ್ವಕಪ್ ತನ್ನದಾಗಿಸಿಕೊಳ್ಳಲಿ ಎಂಬುದೇ ಕ್ರೀಡಾಭಿಮಾನಿಗಳ ಹಾರೈಕೆಯಾಗಿದೆ.



1983ರ ಸಂತಸ ಮರುಕಳಿಸೀತೆ?

1998 ಭಾರತೀಯ ಕ್ರಿಕೆಟ್‌ನ ಬೆಳವಣಿಗೆಯ ದೃಷ್ಟಿಯಿಂದ ಆಶಾದಾಯಕ ವರ್ಷ ಎಂಬುದರಲ್ಲಿ ಎರಡು ಮಾತಿಲ್ಲ. 1997ರಲ್ಲಿ ತನ್ನ ಪ್ರತಿಷ್ಠೆಗೆ ಭಂಗ ತಂದುಕೊಂಡು ಮಕಾಂಗಿದ್ದ ಭಾರತ ಈ ವರ್ಷ ತನ್ನೆಲ್ಲ ನಿರಾಶೆಗಳನ್ನು ಕೊಡವಿ ಹೊಸತನವೊಂದನ್ನು ಮೈಗೂಡಿಸಿಕೊಂಡು ಚೇತೋಹಾರಿ ಬೆಳವಣಿಗೆ ಕಂಡದ್ದು ಮಾತ್ರ ಕಠೋರ ಸತ್ಯ.

ಮಹಮದ್ ಅಜರುದ್ದೀನ್ ನಾಯಕತ್ವದ 2ನೆಯ ಇನ್ನಿಂಗ್ಸ್‌ನ ಆರಂಭದೊಂದಿಗೆ ಭಾರತ ವಿಜಯದ ಅಭಿಯಾನವೂ ಪ್ರಾರಂಭವಾಯಿತು. ಢಾಕಾ ಇಂಡಿಪೆಂಡೆನ್ಸ್ ಕಪ್, ಶಾರ್ಜಾ ಕೊಕೊ ಕೋಲಾ ಕಪ್, ಕೀನ್ಯಾ ಬಾಂಗ್ಲಾಗಳನ್ನೊಳಗೊಂಡು ಏರ್ಪಡಿಸಿದ್ದ ತ್ರಿರಾಷ್ಟ್ರ ಟೂರ್ನಿ, ಲಂಕಾ ಇಂಡಿಪೆಂಡೆನ್ಸ್ ಕಪ್, ಜಿಂಬಾಬ್ವೆ ವಿರುದ್ಧದ ಒಂದು ದಿನದ ಪಂದ್ಯಗಳ ಸರಣಿ ಹಾಗು ಶಾರ್ಜಾದಲ್ಲಿನ ಚಾಂಪಿಯನ್ಸ್ ಟ್ರೋಫಿಗಳು ಮತ್ತು ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಸರಣಿಯನ್ನು ಜಯಿಸಿದ್ದು ನಮ್ಮವರ ಬಲಿಷ್ಠತೆಯ ದ್ಯೋತಕ. ಭಾರತ ತಂಡ ಈ ವರ್ಷ ಕಂಡ ಸೋಲುಗಳೆಂದರೆ ಪೆಪ್ಸಿಕಪ್, ಸಹರಾ ಕಪ್, ಜಿಂಬಾಬ್ವೆ ವಿರುದ್ಧದ ಟೆಸ್ಟ್ ಸರಣಿ ಹಾಗು ಢಾಕಾದಲ್ಲಿನ ವಿಲ್ಸ್ ಕಪ್. ಆದರೆ ಸೋಲುಗಳಿಂದ ನಿರಾಶೆಗೊಳಗಾಗದೆ ಆಡಿದ ಭಾರತ 1998ರಲ್ಲಿ ವಿಶ್ವಕ್ರಿಕೆಟ್‌ನಲ್ಲಿ ತನ್ನತನವನ್ನು ತೋರ್ಪಡಿಸಿದೆ.

ಭಾರತ 1998ರಲ್ಲಿ ತನ್ನ ಗೆಲುವುಗಳಿಗಿಂತಲೂ ಹೆಚ್ಚಾಗಿ ದಾಖಲೆಗಳನ್ನು ಮಾಡಿತೆಂಬುದರಲ್ಲಿ ಸಂದೇಹಗಳಿಲ್ಲ. ಅಜಿತ್ ಅಗರ್ಕರ್‌ನಂತಹ ಪ್ರತಿಭಾವಂತನ ಸೇರ್ಪಡೆ, ಸಚಿನ್-ಗಂಗೂಲಿಯ ಮೊದಲ ವಿಕೆಟ್‌ಗೆ ದಾಖಲೆಯ ಜೊತೆಯಾಟ, ಅಜಿತ್ ಅಗರ್ಕರ್‌ರ ವಿಶ್ವದಾಖಲೆಯ ವಿಕೆಟ್ ಗಳಿಕೆ, ಸಚಿನ್ ತೆಂಡೂಲ್ಕರ್ ಶತಕ ದಾಖಲೆ ಮಾಡಿದ್ದಲ್ಲದೆ ಕ್ಯಾಲೆಂಡರ್ ವರ್ಷವೊಂದರಲ್ಲಿ ಅತ್ಯಧಿಕ ರನ್ ಸೇರಿಸಿದ್ದು, ಅಜರುದ್ದೀನ್ ಏಕದಿನ ಪಂದ್ಯಗಳಲ್ಲಿ ಅತಿಹೆಚ್ಚು ರನ್‌ಗಳಿಸಿ ವಿಶ್ವ ದಾಖಲೆ ನಿರ್ಮಿಸಿದ್ದು, ಹೀಗೆ ಭಾರತೀಯ ಕ್ರಿಕೆಟಿಗರ ಅನೇಕ ಸಾಧನೆಗಳು ಚರಿತ್ರೆಯ ಪುಟ ಸೇರಿದವು.

ಇದೀಗ 1999ರ ನೂತನ ವರ್ಷದ ಕ್ರಿಕೆಟ್ ಚಟುವಟಿಕೆಗಳು ಭಾರತದ ಎದುರಿನ ಸವಾಲುಗಳಾಗಿವೆ. ಸದ್ಯ ನ್ಯೂಜಿಲ್ಯಾಂಡ್ ಪ್ರವಾಸದಲ್ಲಿರುವ ಭಾರತ ಆ ಪ್ರವಾಸದ ನಂತರ ಸ್ವದೇಶದಲ್ಲಿ ಪಾಕಿಸ್ತಾನದ ವಿರುದ್ಧ ಟೆಸ್ಟ್ ಹಾಗು ಏಕದಿನ ಸರಣಿಗಳನ್ನಾಡಲಿದೆ. ಆ ಬಳಿಕ ಶಾರ್ಜಾದಲ್ಲಿ ನಡೆಯುವ ನಾಲ್ಕು ರಾಷ್ಟ್ರಗಳ ಟೂರ್ನಿಯಲ್ಲಿ ಪಾಲ್ಗೊಳ್ಳಲಿದೆ. ಇದಾದ ನಂತರ ಪ್ರತಿಷ್ಠಿತ ವಿಶ್ವಕಪ್ ಆಡಲಿಕ್ಕಾಗಿ ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸಲಿದೆ.

ಸಚಿನ್-ಸೌರವ್‌ರವರ ಅಬ್ಬರದ ಆರಂಭಿಕ ಜೋಡಿ, ಜಡೇಜಾ -ರಾಬಿನ್ ಸಿಂಗ್‌ರ ಉಪಯುಕ್ತ ಮಧ್ಯಮ ಕ್ರಮಾಂಕದ ಬ್ಯಾಟಿಂಗ್, ಅಗರ್ಕರ್‌ರ ಆಲ್‌ರೌಂಡ್ ಆಟ, ಅನಿಲ್ ಕುಂಬ್ಳೆಯ ಸ್ಪಿನ್ ಮೋಡಿ, ಶ್ರೀನಾಥ್‌ರ ದೈತ್ಯ

ವೇಗದ ಬೌಲಿಂಗ್ ಎಲ್ಲವನ್ನೂ ಹೊಂದಿರುವ ಭಾರತ ವಿಶ್ವದ ಎಲ್ಲ ತಂಡಗಳಿಗೂ ಸವಾಲಾಗಬಲ್ಲದು. ಆದಾಗ್ಯೂ ಕೆಲವೊಮ್ಮೆ ನ್ಯೂನತೆಗಳಿಂದ ಹೊರಬರಲು ಸಾಧ್ಯವಾಗುತ್ತಿಲ್ಲ. ಸಚಿನ್‌ರ ಮೇಲಿನ ಅತಿಯಾದ ಅವಲಂಬನೆ, ಕಳಪೆ ಫೀಲ್ಡಿಂಗ್ ಹಾಗು ವಿಕೆಟ್ ನಡುವಣ ಓಟಗಳಲ್ಲಿ ಭಾರತ ಸುಧಾರಣೆ ಕಂಡುಕೊಂಡರೆ ತಂಡದ ಮೆರಗು ಮತ್ತಷ್ಟು ಹೆಚ್ಚುವಲ್ಲಿ ಸಂಶಯವಿಲ್ಲ.

ಮುಂಬರುವ ವಿಶ್ವಕಪ್‌ಗೂ ಬಹುತೇಕ ಮಹಮದ್ ಅಜರುದ್ದೀನ್ ನಾಯಕರಾಗಿರುವುದು ಖಚಿತ. ಇವರ ನಾಯಕತ್ವವು ಭಾರತಕ್ಕೆ ವರದಾನವಾಗಿದೆ. ಯುವ ಆಟಗಾರರನ್ನು ಹುರಿದುಂಬಿಸುವ ಅವರ ಪ್ರಯತ್ನ ಜಯದ ಹಾದಿಯನ್ನು ಮತ್ತಷ್ಟು ಸುಗಮಗೊಳಿಸುತ್ತಿದೆ. 1992 ಹಾಗು 1996ರ ವಿಶ್ವಕಪ್‌ಗಳೆರಡಕ್ಕೂ ಅಜರ್ ನಾಯಕರಾಗಿದ್ದರು. 92ರ ವಿಶ್ವಕಪ್‌ನಲ್ಲಿ ಲೀಗ್ ಹಂತದಲ್ಲೇ ಹೊರಬಿದ್ದರೆ 96ರ ವಿಶ್ವಕಪ್‌ನಲ್ಲಿ ಸೆಮಿಫೈನಲ್ಸ್‌ವರೆಗೆ ತಲುಪಿ ಅಜರ್‌ರ ನೆಚ್ಚಿನ ಮೈದಾನ ಈಡನ್‌ಗಾರ್ಡನ್ಸ್‌ನಲ್ಲಿ ಭಾರತ ಸೋಲುವುದರೊಂದಿಗೆ ರಾಷ್ಟ್ರದ ಕ್ರೀಡಾಭಿಮಾನಿಗಳಿಗೆ ಮಸಿ ಬಳಿಯುವ ಘಟನೆಗಳು ಎದುರಾಗಿದ್ದವು. ಇವೆಲ್ಲವನ್ನು ಮರೆತು ಅಜರ್ ಈ ಬಾರಿ ದೇಶಕ್ಕೆ ವಿಶ್ವಕಪ್ ಕಿರೀಟ ತೊಡಿಸಿದರೆ ಅದು ಅವರ ದೀರ್ಘಕಾಲದ ಕ್ರಿಕೆಟ್ ಬದುಕಿಗೊಂದು ವರ್ಣರಂಜಿತ ಅಧ್ಯಾಯ ಇದ್ದಂತೆ.

1983ರಲ್ಲಿ ವಿಶ್ವದ ಕಳಪೆ ತಂಡವಾಗಿದ್ದ ಭಾರತ ಎಲ್ಲರನ್ನು ಮೂಕವಿಸ್ಮಿತರನ್ನಾಗಿಸಿ ಲಾರ್ಡ್ಸ್ ಮೈದಾನದಲ್ಲಿ ವಿಶ್ವಕಪ್ ಎತ್ತಿ ಹಿಡಿದಿತ್ತು. ಈ ಬಾರಿಯೂ ಇದೇ ಕ್ರೀಡಾಂಗಣ ಅಂತಿಮ ಪಂದ್ಯಕ್ಕೆ ಸಜ್ಜಾಗಿದೆ. ಭಾರತ ಮತ್ತೊಮ್ಮೆ 1983ರ ಸಂಭ್ರಮದ ದಿನಗಳನ್ನು ನೆನಪಿಸುವಂತೆ ಮಾಡಿ, ಶತಮಾನದ ಕಡೆಯ ವಿಶ್ವಕಪ್ ತನ್ನದಾಗಿಸಿಕೊಳ್ಳಲಿ ಎಂಬುದೇ ಕ್ರೀಡಾಭಿಮಾನಿಗಳ ಹಾರೈಕೆಯಾಗಿದೆ.

■ ಗರ್ತಿಕೆರೆ ವಿ. ಪ್ರಕಾಶ್

ಕ್ರೀಡೆ ಬಗ್ಗೆ ತಿಳಿಯಿರಿ

■ ಶಂಕರಗೌಡ ವೈ. ಪಾಟೀಲ

1. ಒಲಿಂಪಿಕ್ ಕ್ರೀಡಾಕೂಟಗಳಲ್ಲಿ ಕೆನಡಾ ದೇಶವು ಮೊದಲ ಪದಕ ಗಳಿಸಿದ್ದು ಯಾವಾಗ?

2. ಅಲ್ ಆರ್ಟರ್‌ರವರು ಒಲಿಂಪಿಕ್ ಪಂದ್ಯಾವಳಿಯಲ್ಲಿ ಮಾಡಿದ ದಾಖಲೆಯೇನು?

3. 1916, 1940, 1944ರ ಒಲಿಂಪಿಕ್ ಪಂದ್ಯಾವಳಿಗಳು ನಡೆಯದಿರಲು ಕಾರಣವೇನು?

4. ಮಂತ್ರಿಯಾಗಿದ್ದ ಕಾರಣ 10 ವರ್ಷಗಳ ಕಾಲ ಬಾಕ್ಸಿಂಗ್ ಕಣದಿಂದ ದೂರವಿದ್ದು, ನಂತರ ಮತ್ತೆ ಕಣಕ್ಕಿಳಿದ ಬಾಕ್ಸಿಂಗ್ ಪಟು ಯಾರು?

5. ಫೆದರ್ ವೇಟ್‌ನ ಚಾಂಪಿಯನ್ ಎನಿಸಿದ ಪ್ರಥಮ ಸ್ಕಾಟ್ಸ್‌ಮನ್ ಯಾರು?

6. ವಿಶ್ವ ಅಮೇಚೂರ್ ಬಿಲಿಯರ್ಡ್ಸ್ ಪದಕವನ್ನು ಎರಡು ಬಾರಿ (1958 ಮತ್ತು 1964ರಲ್ಲಿ) ಪಡೆದ ಭಾರತೀಯ ಕ್ರೀಡಾಪಟು ಯಾರು?

7. ಇಂಗ್ಲೆಂಡಿನ ಮೊಟ್ಟ ಮೊದಲ ಸೈಕ್ಲಿಂಗ್ ಕ್ಲಬ್ ಯಾವುದು?

8. ಸ್ಟೀಪ್‌ಲೇಚಿಸ್ ರೇಸ್ ಯಾವುದಕ್ಕೆ ಸಂಬಂಧಿಸಿದೆ?

9. ದಿ ಗ್ರಾಂಡ್ ನ್ಯಾಷನಲ್ ಸ್ಟೀಪ್‌ಲಚೀಸ್ ವಿಶ್ವ ವಿಖ್ಯಾತವಾದುದು. ಇದನ್ನು ಮೊದಲಿಗೆ ಏನೆಂದು ಕರೆಯುತ್ತಿದ್ದರು?

10. 1992ರಲ್ಲಿ ಮನಿಲಾದಲ್ಲಿ ಜೂನ್ 7 ರಿಂದ 25ರ ನಡುವೆ ನಡೆದ ಚೆಸ್‌ನ ಪುರುಷ ಮತ್ತು ಮಹಿಳಾ ವಿಭಾಗದಲ್ಲಿ ಜಯಗಳಿಸಿದ ದೇಶಗಳಾವುವು?

11. ಹೆಜಾರ್ಡ್ಸ್ ಮತ್ತು ಕ್ಯಾನನ್ಸ್ ಎಂಬ ಪದಗಳು ಯಾವ ಕ್ರೀಡೆಯೊಂದಿಗೆ ಸಂಬಂಧ ಹೊಂದಿವೆ?

12. ಸ್ಟೋಕ್ ಮಾಂಡೆವಿಲ್ಲಿ ಗೇಮ್ಸ್ ಎಂದರೇನು?

13. ವಿಶ್ವದಲ್ಲೇ ಮೊದಲ ಬಾರಿಗೆ ಪ್ಯಾರಾಚೂಟ್‌ನಿಂದ ಹಾರಿದವರು ಯಾರು?

14. ಜುಡೋ ಆಟದಲ್ಲಿ ಶಿಯಾಜೋ ಎಂದರೇನು?

15. ಗಾಲ್ಫ್ ಮೈದಾನದಲ್ಲಿ ಎಷ್ಟು ರಂಧ್ರಗಳಿರುತ್ತವೆ?

16. 'ದಿ ಅಡ್ಮಿರಲ್ ಕಪ್' ಯಾವ ಕ್ರೀಡೆಗೆ ಸಂಬಂಧಿಸಿದೆ?

17. ಯಂಗ್ ಯೀ ಅವರು 1987ರಲ್ಲಿ ಯಾವ ಕ್ರೀಡೆಯಲ್ಲಿ ವಿಶ್ವ ಚಾಂಪಿಯನ್ ಆದರು?

18. ವಿಶ್ವದ ಮೊಟ್ಟಮೊದಲ ಯಾಚಿಂಗ್ ರೇಸ್ ನಡೆದಿದ್ದು ಯಾವಾಗ?


19. 'ಪಾಟ್ ಬ್ಲ್ಯಾಕ್' ಎಂಬ ಶಬ್ದವು ಯಾವ ಆಟದೊಂದಿಗೆ ಸಂಬಂಧ ಹೊಂದಿದೆ?

20. ಚಿಕಾಗೋದ ಜಾರ್ಜ್ ಹಾನ್‌ಕಾಕ್‌ರವರಿಂದ ಕಂಡುಹಿಡಿಯಲ್ಪಟ್ಟ ಕ್ರೀಡೆ ಯಾವುದು?

ಉತ್ತರಗಳು

1. 1904ರ ಸೇಂಟ್ ಲೂಯಿಸ್ ಒಲಿಂಪಿಕ್, 2. ಅವರು ಡಿಸ್ಕಸ್ ಥ್ರೋ ವಿಭಾಗದಲ್ಲಿ 1956-60ರ ವರೆಗೆ ಸತತವಾಗಿ ಚಿನ್ನದ ಪದಕ ಗಳಿಸಿದರು, 3. ವಿಶ್ವ ಸಮರದ ಕಾರಣದಿಂದಾಗಿ, 4. ಜಾರ್ಜ್ ಫೋರ್‌ಮನ್, 5. ಐಕ್‌ವೇರ್ (1880ರಲ್ಲಿ), 6. ವಿಲ್ಸನ್ ಜೋನ್ಸ್, 7. ದಿ ಲಿವರ್‌ಪೂಲ್ ವೆಲೋಸಿಪೇಡ್ ಕ್ಲಬ್, 1867ರಲ್ಲಿ ಸ್ಥಾಪಿಸಲ್ಪಟ್ಟಿತು, 8. ಕುದುರೆ ರೇಸ್‌ಗೆ, 9. ದಿ ಗ್ರಾಂಡ್ ಲಿವರ್‌ಪೂಲ್ ಸ್ಟೇಷಲ್ ಚೇಸ್, 10. ಪುರುಷರ ವಿಭಾಗದಲ್ಲಿ ರಶಿಯಾ ಮತ್ತು ಮಹಿಳಾ ವಿಭಾಗದಲ್ಲಿ ಜಾರ್ಜಿಯಾ, 11. ಬಿಲಿಯರ್ಡ್ಸ್, 12. ಪಾರ್ಶ್ವವಾಯು ಸೆಳೆತಕ್ಕೊಳಗಾದವರಿಗಾಗಿ ನಡೆಸುವ ಒಲಿಂಪಿಕ್ ಪಂದ್ಯವನ್ನು ಹೀಗೆ ಕರೆಯುತ್ತಾರೆ, 13. ಚೀನಾದ ಶನ್ ಚಕ್ರವರ್ತಿ, 14. ಸ್ಪರ್ಧಿಸುವ ಸ್ಥಳ, 15. 18 ರಂಧ್ರಗಳು, 16. ಯಾಚಿಂಗ್, 17. ಟೇಬಲ್ ಟೆನ್ನಿಸ್, 18. ಸೆಪ್ಟೆಂಬರ್ 1661, 19. ಸ್ನೂಕರ್, 20. ಸಾಫ್ಟ್‌ಬಾಲ್. ■

ಪದ ಬಂಧ 12



ಪದಬಂಧ 11 ರ ಸರಿಯುತ್ತರ

ಎಡದಿಂದ ಬಲಕ್ಕೆ:

1. ಡಿಶಂಬರ 4. ಆಡಂಬರ 6. ಮಾನ 8. ಬಸ್ತಿ 9. ಪತಿ 10. ನಸುಕು 12. ಕಿಡಿ 15. ತ್ರಿವರ್ಣ ಧ್ವಜ 18. ಹಾನಿ 19. ಣರಕಾ 21. ರಕ್ತ 22. ಯಮ 23. ಕರ 25. ಪರದೇಶ 26. ಸಗರಕ.

ಮೇಲಿನಿಂದ ಕೆಳಕ್ಕೆ :

2. ಶಂಕುಸ್ಥಾಪನೆ 3. ರಮಾ 4. ಆಸ್ತಿ 5. ಬಡಬಡಿಸು 7. ನರ್ತನ 8. ಬದುಕು 11. ಸುವರ್ಣಕಾರ 13. ಮಾಂತ್ರಿಕ 14. ಭಜನೆ 16. ಮಹಾಸಮರ 17. ಭಕ್ತಕುಂಬಾರ 19. ಣರಮ 20. ಕಾರ್ತಿಕ 22. ಯಶ 24. ರಸ.

ಎಡದಿಂದ ಬಲಕ್ಕೆ

1. ಗಲ್ಲು ಶಿಕ್ಷೆಯಾದವನಿಗೆ ಮತ್ತೆ ಬದುಕಲು ನೀಡಿದ ಅನುಮತಿ .... (4)
4. ರಾಜರು ವಾಸಿಸಲು ಕಟ್ಟಿಸಿಕೊಂಡ ಸುಂದರವಾದ ಗೃಹ .... (4)
6. ಮನಸ್ಸನ್ನು ಗೆದ್ದ ಸುಪುತ್ರ ತಿರುಗಿದ್ದಾನೆ .... (2)
8. ಗದ್ಧರಿಸುತ್ತ ಬರುವ ಆನೆ.. (2)
9. ಶಕ್ತವಂತರು ದಾನ ಮಾಡಿದ ನೆತ್ತರು .... (2)
10. ಅನುಮಾನಕ್ಕೆ ಆಸ್ಪದ ನೀಡಿದ ಆಕಾಶವಾಹನ .... (3)
12. ಗಾಡಿಗೆ ಅವಶ್ಯಕವಾಗಿ ಬೇಕಾದ ಚಕ್ರ ತಿರುಗಿದೆ .... (2)
15. ಹಳೆಯದನ್ನು ಮರೆಸಲು ಮತ್ತೆ ಬಂದ ನವ ಪರ್ವಕಾಲ .... (5)
18. ತರಾತುರಿಯಿಂದ ನಡೆದ ಚರ್ಚೆ .... (2)
19. ಮೂರು ಸಾಲುಗಳಲ್ಲಿ ಸಾಹಿತ್ಯ ರಚನೆಗೆ ಹೀಗೂ ಹೆಸರುಂಟು .... (3)
21. ಭವ ಭಾದೆಗಳಿಂದ ಮುಕ್ತಿ ಹೊಂದಿದ ಹೆಣ .... (2)
22. ಕಮಲಳು ತಂದು ಕೊಟ್ಟ ನೀರು .... (2)
23. ಸಿಹಿ ಮಾತುಗಳನ್ನಾಡಿ ಮಾಡಿಸಿಕೊಂಡ ದಸ್ತೂರ................. (2)
25. ಹತನಾದರೂ ಬಿಡದೇ ಸಾಧಿಸಿದ ವೈರತ್ವ......................... (4)
26. ಮಗನಲ್ಲಿ ತುಂಬಿಕೊಂಡ ಅತೀ ಅಹಂಕಾರ .... (4)

ಮೇಲಿನಿಂದ ಕೆಳಕ್ಕೆ

2. ಮದುವೆ ಮುಹೂರ್ತಕ್ಕೆ ಸಜ್ಜಾಗಿ ಕುಳಿತಿರುವ ಮದುಮಕ್ಕಳು .... (5)
3. ನನಗರಿವಿಲ್ಲದಂತೆ ಕಳೆದು ಕೊಂಡ ಆಭರಣ .... (2)
4. ಅಜಗಜಾಂತರದಿಂದ ನೆಲಕ್ಕೆ ಜಿಗಿದ ಆಡು .... (2)
5. ಮರ ಹತ್ತಿ ನೋಡಿದಾಗ ಕಂಡ ಉಸುಕಿನ ಪ್ರದೇಶ .... (5)
7. ಅರ್ಜಿಯೊಂದಿಗೆ ಮಾಡಿಕೊಂಡ ಬಿನ್ನಹ............................ (3)
8. ಸಕಲರ ಗಮನ ಸೆಳೆದ ಆಕಾಶ. .... (3)
11. ಮಾಪದ ನಡುವೆ ಮೂಡಿ ಬಂದ ಮನುಷ್ಯಾಕೃತಿ .... (5)
13. ಕೊನೆಗೆ ನದಿಯನ್ನು ಕೂಡಿಸಿಕೊಂಡ ಪ್ರೇಕ್ಷಣೆಯ ಸ್ಥಳ ಬಿಜಾಪುರ ಜಿಲ್ಲೆಯಲ್ಲಿದೆ. .... (3)
14. ದವಾಖಾನೆಯಲ್ಲಿ ರೋಗಿಗೆ ಕುಡಿಯಲು ಕೊಟ್ಟ ಮದ್ದು. .... (3)
16. ಚುನಾವಣೆಯಲ್ಲಿ ಅಪಹರಿಸಿದ ಓಟಿನ ಡಬ್ಬಿ...................... (5)
17. ಸುಖ ಸಂಪತ್ತಿನಿಂದ ಮುಗಿದು ಹೋದ ಬಂಗಾರದ ಕಾಲ........ (5)
19. ತ್ರಿಲೋಕ ಸಂಚಾರಿ ಶಿವನ ಕೈಯಲ್ಲಿರುವ ಆಯುಧ .... (3)
20. ಮದಿಸಿದ ಆನೆಗೆ ಪಳಗಿಸಲು ಬೇಕಾದ ದಿನ .... (3)
22. ಅಂಜನ ಹಚ್ಚಿ ಸಂಪತ್ತು ನೋಡಲು ಹೋದ ಪ್ರಜೆಗಳು.......... (2)
24. ಮಹಿಮರು ತಪ್ಪಸ್ಸಿಗೆ ಕುಳಿತ ಜಾಗದಲ್ಲಿ ಅತೀಯಾಗಿ ತುಂಬಿಕೊಂಡ ಮಂಜು .... (2)

■ ಜವಳಿ ವೀರಣ್ಣ

(ಉತ್ತರ : ಮುಂದಿನ ಸಂಚಿಕೆಯಲ್ಲಿ)

ನೀವು ಕಥೆಗಾರರಾಗಬೇಕೆ?..................

ನಿಮಗೂ ಕಥೆಗಾರರಾಗಬೇಕೆಂಬ ಆಸೆ ಇರಬಹುದಲ್ಲವೆ? ನಿಮ್ಮಂತಹ ಚಿಗುರು ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲಿಕ್ಕಾಗಿಯೇ ಈ ಅಂಕಣ ಮೀಸಲು. ನೀವು ಮಾಡಬೇಕಾದುದಿಷ್ಟೇ; ಈ ಕೆಳಗೆ ನಾವೊಂದು ಕಥೆ ನೀಡಿದ್ದೇವೆ. ಆದರೆ ಅದು ಅಪೂರ್ಣ. ಅದನ್ನು ಪೂರ್ಣಗೊಳಿಸಬೇಕಾದವರು ನೀವೇ!

ಅಪೂರ್ಣ ಕತೆ

ಶಿವಪುರದ ಶಾಲೆಯಲ್ಲಿ ಓದುತ್ತಿದ್ದ ನಂದಿನಿ ತುಂಬಾ ಬುದ್ಧಿವಂತ ಹುಡುಗಿಯಾಗಿದ್ದಳು. ಬಾಲ್ಯದಿಂದಲೇ ಪಾಠದ ಜೊತೆಗೆ, ಪಠ್ಯೇತರ ಚಟುವಟಿಕೆಗಳಲ್ಲಿಯೂ ಆಸಕ್ತಿಯನ್ನು ಹೊಂದಿದ್ದಳು. ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆ, ನೀತಿಕಥೆಗಳನ್ನು ಬಿಡುವಿನ ವೇಳೆಯಲ್ಲಿ ಓದುತ್ತಿದ್ದಳು. ಶಾಲೆಯಲ್ಲಿ ಸಹಪಾಠಿಗಳು, ಗುರುಗಳು ಇವಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುತ್ತಿದ್ದರು.

ತಂದೆ ತಾಯಿಯರ ಏಕೈಕ ಮಗಳಾಗಿದ್ದ ನಂದಿನಿ ಮುಂದೆ ಚೆನ್ನಾಗಿ ಓದಿ ಸಮಾಜದಲ್ಲಿ ಉನ್ನತ ವ್ಯಕ್ತಿಯಾಗಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿದ್ದಳು. ಮನೆಯಲ್ಲಿ ತಂದೆ ತಾಯಿಗಳು ಅವಳನ್ನು ಪ್ರೋತ್ಸಾಹಿಸಿ ಎಲ್ಲಾ ರೀತಿಯ ಸೌಕರ್ಯವನ್ನು ಕಲ್ಪಿಸಿಕೊಟ್ಟಿದ್ದರು. ಮನಸ್ಸಿನಲ್ಲಿ ತನ್ನದೇ ಆದ ಗುರಿಯನ್ನು ಹೊಂದಿದ್ದ ನಂದಿನಿ ಅದನ್ನು ಬಹಿರಂಗವಾಗಿ ಯಾರ ಹತ್ತಿರವೂ ಹೇಳಿಕೊಳ್ಳುತ್ತಿರಲಿಲ್ಲ. ತನ್ನ ಗುರಿಯನ್ನು ಮುಟ್ಟಲೇಬೇಕೆಂದು ಛಲದಿಂದ ಓದುತ್ತಿದ್ದಳು.

ಸೂಚನೆಗಳು :

- ಹತ್ತನೆಯ ತರಗತಿಯವರೆಗಿನ ವಿದ್ಯಾರ್ಥಿಗಳು ಮಾತ್ರ ಈ ಕಥೆಯನ್ನು ಪೂರ್ಣಗೊಳಿಸಿ ಕಳುಹಿಸಲು ಅರ್ಹರು.
- ನಿಮ್ಮ ಬರವಣಿಗೆ ಅರ್ಧ ಫೂಲ್‌ಸ್ಕೇಪ್ ಹಾಳೆ ಮೀರದಿರಲಿ.
- ಆ ಹಾಳೆಯ ಹಿಂಬದಿಯಲ್ಲಿ 'ಕಿಲ ಕಿಲ ಕೂಪನ್' ಅಂಟಿಸಿರಬೇಕು.
- ಮುಂದಿನ ಸಂಚಿಕೆಯಲ್ಲಿ ಫಲಿತಾಂಶ.
- ನಿಮ್ಮ ಬರವಣಿಗೆ ನಮಗೆ ತಲುಪಲು ಅಂತಿಮ ದಿನಾಂಕ 15. 1. 1999

ಕಿಲ ಕಿಲ ಕೂಪನ್ - (ಜನೆವರಿ 99)

ಹೆಸರು...

ತರಗತಿ............................ ವಯಸ್ಸು...................

ತಂದೆ...

ತಾಯಿ..

ವಿಳಾಸ...

....

....

....

ನಮ್ಮೂರು

ಬಾರಯ್ಯ ನಮ್ಮೂರಿಗೆ
ಪ್ರಕೃತಿ ಸಿರಿಯ ತಾಣಕೆ
ಹಸಿರು ಹೊನ್ನಿನ ನಾಡಿಗೆ
ನಂದನದ ನೆಲೆ ಬೀಡಿಗೆ.

ಸೂರ್ಯ ಮತ್ತೆ ಮರಳಿದೆ
ನಗುವಿನ ಮೊಗವು ಅರಳಿದೆ
ಹಕ್ಕಿಗಳಿಂಚರವು ಕೆರಳಿದೆ
ಶ್ರಾವಣ ಸುಗ್ಗಿಯ ಸಿರಿ ತುಂಬಿದೆ.

ದನಗಳ ಕೂಗಾಟವು
ನದಿಗಳ ಹರಿದಾಟವು
ಜನರ ಓಡಾಟವು.

ಮನವು ಮುಗಿಲ ಸೇರಿದೆ
ಗಿಡದಿ ಹೂವು ಅರಳಿದೆ
ದುಗುಡವೆಲ್ಲ ಕಳೆದಿದೆ
ಶಾಂತಿಯದುವೆ ನೆಲಸಿದೆ.

ಅರಸಿ ಬರುವ ತಾಣವು
ನನ್ನ ನೆಲವು ಪಾವನವು

ನಗೆಯಲ್ಲಿ ನಲಿವು
ಒಂದಾಗಿರುವೆವು ನಾವು
ಬಾರಯ್ಯ ನಮ್ಮೂರಿಗೆ
ಪ್ರಕೃತಿಸಿರಿಯ ತಾಣಕೆ.

–ಕವಿತಾ,
ಕುಮಟಾ

ಕಳೆದ ತಿಂಗಳ ಅಪೂರ್ಣ ಕಥೆಯ ಮುಕ್ತಾಯ

1

ಕಿಟ್ಟು ಬಿದ್ದ ತಕ್ಷಣ ಧೈರ್ಯದಿಂದ ಬಾವಿಯ ಚಪ್ಪಡಿಯನ್ನು ಹಿಡಿದು ಕಷ್ಟಪಟ್ಟು ಮೇಲೆ ಬಂದನು. ಅವನ ಸಹಪಾಠಿಯರೆಲ್ಲರೂ ಕಿಟ್ಟುವಿನ ಬಳಿಗೆ ಬಂದು ಈತನ ಧೈರ್ಯವನ್ನು ಮೆಚ್ಚಿದರು. ಪುಟ್ಟುವಿನ ಸಂತೋಷಕ್ಕೆ ಪಾರವೇ ಇರಲಿಲ್ಲ. ಪ್ರವಾಸ ಮುಗಿಸಿ ಎಂದಿನಂತೆ ಶಾಲೆಗೆ ಹೊರಟ ಇವರಿಬ್ಬರು, ಹೆಚ್ಚಿನ ವಿದ್ಯಾಭ್ಯಾಸ ಮಾಡಿದ ನಂತರ ಉನ್ನತ ಅಧಿಕಾರಿಗಳಾಗಿ ಬಡ ಜನತೆಯ ಸೇವೆ ಮಾಡಿದರು.

-ನ.ಲ. ವರದರಾಜು ತುಂಗಾ, ಚನ್ನಪಟ್ಟಣ

2

ಕಿಟ್ಟು ಹತ್ತಿರದ ಬಾವಿಗೆ ನೀರು ತರಲು ಹೋದಾಗ ಕಾಲು ಜಾರಿ ಬಾವಿಯಲ್ಲಿ ಬಿದ್ದನು. ಅಲ್ಲಿದ್ದ ಹುಡುಗರೆಲ್ಲಾ ಬದುಕಿಸಿ ಎಂದರೆ ಹೊರತು ಯಾರೂ ಬದುಕಿಸಲು ಪ್ರಯತ್ನಿಸಲಿಲ್ಲ. ಆಗ ಪಕ್ಕದಲ್ಲೇ ಇದ್ದ ಪುಟ್ಟು ಧೈರ್ಯದಿಂದ ಬಾವಿಯೊಳಗೆ ಜಿಗಿದು ಕಿಟ್ಟುವನ್ನು ಹೊರಗಡೆ ತಂದು ಹೊಟ್ಟೆಯಲ್ಲಿದ್ದ ನೀರನ್ನು ತೆಗೆದು ಅವನನ್ನು ಬದುಕಿಸಿದನು. ಹೀಗೆ ಅವರಿಬ್ಬರ ಗೆಳೆತನ ತುಂಬಾ ಗಟ್ಟಿಯಾಗಿ ಬೆಳೆಯಿತು. ಮುಂದೆ ಇವರು ವಿದ್ಯಾಭ್ಯಾಸ ಮುಗಿಸಿ ತಮ್ಮ ಹಿಂದಿನ ಕನಸಿನಂತೆ ಸಮಾಜ ಸುಧಾರಕರಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಿ ಮುಂದಿನ ಪೀಳಿಗೆಗೆ ನಾಂದಿನಾದರು.

-ಕಿರಣ್‌ಕುಮಾರ ಚಲವಾ, ಬೀದರ್

3

ಕಿಟ್ಟು ಕಾಲು ಜಾರಿ ಬಿದ್ದ ಕೂಡಲೇ ಕಿರುಚಿಕೊಂಡ. ಅವನು ಕೂಗುವುದನ್ನು ಕೇಳಿ ಸಹಪಾಠಿಗಳೆಲ್ಲ ಓಡಿ ಬಂದರು. ಅವನ ಗೆಳೆಯ ಪುಟ್ಟುವಿಗೆ ಈಜು ಬರುತ್ತಿದ್ದುದರಿಂದ ತಕ್ಷಣ ಬಾವಿಗೆ ಹಾರಿ ಗೆಳೆಯನನ್ನು ಮೇಲಕ್ಕೆ ಎತ್ತಿಕೊಂಡು ಬಂದನು. ಗುರುಗಳು ಹಾಗು ಸಹಪಾಠಿಗಳು ಪುಟ್ಟು, ಕಿಟ್ಟುವನ್ನು ಬದುಕಿಸಿದ್ದು ನೋಡಿ ಸಂತಸ ಪಟ್ಟರು. ನಂತರ ಎಲ್ಲರೂ ಪ್ರವಾಸ ಮುಗಿಸಿಕೊಂಡು ಊರಿಗೆ ಹಿಂದಿರುಗಿದರು. ಪುಟ್ಟುವಿನ ಸಾಹಸದ ಕಥೆಯನ್ನು ಎಲ್ಲರಿಗೂ ಹೇಳಿದರು. ಗುರುಗಳು ಶಾಲೆಯ ವಾರ್ಷಿಕೋತ್ಸವದಂದು ಪುಟ್ಟುವಿಗೆ ಬಹುಮಾನ ನೀಡಿದರು.

-ಯು.ಬಿ. ಸಿದ್ಧಾರ್ಥ, ಬೆಂಗಳೂರು

4

ಬಾವಿ ಹೆಚ್ಚಾಗಿ ಆಳವಿರಲಿಲ್ಲವಾದ್ದರಿಂದ ಸುಲಭವಾಗಿ ಮೇಲೆ ಬಂದನು. ಆದರೆ ಅವನ ಪಕ್ಕದಲ್ಲಿ ಗುರುಗಳು ಮತ್ತು ಅವನ ಸಹಪಾಠಿ ಇರುವುದಿಲ್ಲವಾದ್ದರಿಂದ ತಾನು ಕಂಡಿದ್ದ ಬಾಲ್ಯದ ಕನಸು ನುಚ್ಚು ನುರಾಯ್ತು ಎಂದು ಚಿಂತಿಸುತ್ತ ಹಾದಿಯ ಪಕ್ಕದಲ್ಲಿರುವ ಒಂದು ಮನೆಗೆ ಹೋದನು. ಅಲ್ಲಿಯೇ ವಾಸಮಾಡಲು ಪ್ರಾರಂಭಿಸಿದನು. ಅವರು ಬಡವರಾಗಿದ್ದರೂ ಸಹ ಇವನಿಗೆ ವಿದ್ಯೆ ಕಲಿಸಬೇಕೆಂಬ ಆಸೆ ಇತ್ತು. ಆದರೆ ಇವರ ಸ್ಥಿತಿಕಂಡ ಕಿಟ್ಟುವಿಗೆ ಓದಲು ಮನಸ್ಸಿರಲಿಲ್ಲ. ಆದರೂ ಇವರ ಒತ್ತಾಯದ ಮೇರೆಗೆ ಡಾಕ್ಟರ್ ಪದವಿ ಗಳಿಸಿ ವೈದ್ಯರಿಲ್ಲದ ಆ ಊರಿನಲ್ಲಿ ಡಾಕ್ಟರ್ ಆಗಿ ಜನರ ಸೇವೆ ಮಾಡಿದನು.

- ಶ್ರೀಲತಾ ಆರ್., ಸೊಪ್ಪಿನಮಲ್ಲೆ

5

ಕಿಟ್ಟು ಬಾವಿಯಲ್ಲಿ ನೀರು ತರುವುದು ಬಹಳ ತಡವಾದಾಗ, ಪುಟ್ಟು ಗಾಬರಿಗೊಂಡು ಬಾವಿಯ ಕಡೆಗೆ ನಡೆದನು. ಕಿಟ್ಟು ರಕ್ಷಣೆಗಾಗಿ, ಕೂಗಾಡುತ್ತಿದ್ದ. ಅದನ್ನು ಕೇಳಿದೊಡನೆಯೇ ಪುಟ್ಟು ತನ್ನ ಪ್ರಾಣವನ್ನು ಲೆಕ್ಕಿಸದೇ ಕಿಟ್ಟುವನ್ನು ಪ್ರಾಣಾಪಾಯದಿಂದ ಕಾಪಾಡಿದ. ಪ್ರವಾಸ ಮುಗಿಸಿ ತಮ್ಮ ಊರಿಗೆ ಮರಳಿ ಬಂದರು. ಕಿಟ್ಟು ತಮ್ಮ ಮನೆಯಲ್ಲಿ ಮತ್ತು ಊರಿನಲ್ಲಿ ನಡೆದ ಘಟನೆಯನ್ನು ಮತ್ತು ಪುಟ್ಟುವಿನ ಉಪಕಾರವನ್ನು ಹೇಳಿದ. ಊರಿನಲ್ಲಿ ಎಲ್ಲರೂ ಪುಟ್ಟುವಿನ ಕೆಲಸವನ್ನು ಹೊಗಳಿದರಲ್ಲದೇ, ಕಿಟ್ಟು ಮತ್ತು ಪುಟ್ಟುವಿನ ಗೆಳೆತನವನ್ನು ಕೊಂಡಾಡಿದರು. ಮುಂದೆ ದೊಡ್ಡವರಾದ ಮೇಲೆ ಕಿಟ್ಟು ಮತ್ತು ಪುಟ್ಟು ತಮ್ಮ ಆದರ್ಶ ವ್ಯಕ್ತಿಗಳಾದ ಸ್ವಾಮಿ ವಿವೇಕಾನಂದ ಮತ್ತು ರಾಮಕೃಷ್ಣ ಪರಮಹಂಸರಂತೆ ತಮ್ಮ ಹಳ್ಳಿಯಲ್ಲಿ ಅನೇಕ ಪರೋಪಕಾರಿ ಕೆಲಸ ಮಾಡಿದರು.

-ಪ್ರಕಾಶ ಶಿ. ಗುಂಡಳ್ಳಿ, ಹೂವಿನ ಹಿಪ್ಪರಗಿ

6

ಕಿಟ್ಟು ಬರಲಿಲ್ಲವೆಂದು ಕಳವಳಗೊಂಡ ಪುಟ್ಟು ಗಾಬರಿಯಿಂದ ಬಾವಿಯಲ್ಲಿ ನೋಡಿದನು. ಕಿಟ್ಟು ಬಿದ್ದಿರುವುದನ್ನು ನೋಡಿ ಬಾವಿಯಲ್ಲಿ ಈಜಿ ಅವನನ್ನು ದಡಕ್ಕೆ ಎತ್ತಿಕೊಂಡು ಬಂದನು. ನಂತರ ಅವನನ್ನು ಆಸ್ಪತ್ರೆಗೆ ಸೇರಿಸಿದನು. ಕಿಟ್ಟು ಪ್ರಾಣಾಪಾಯದಿಂದ ಪಾರಾದನು. ಪುಟ್ಟುವಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ ನಾವಿಬ್ಬರೂ ಒಳ್ಳೆಯ, ಪ್ರಾಣಕ್ಕೆ ಪ್ರಾಣ ಕೊಡುವ ಸ್ನೇಹಿತರಾಗಿರೋಣ ಎಂದನು. ಪುಟ್ಟು ಗುರುಗಳ ಪ್ರಶಂಸೆಗೆ ಪಾತ್ರನಾದನು. ಅವನಿಗೆ ರಾಷ್ಟ್ರಪತಿಯಿಂದ ಸನ್ಮಾನ ದೊರೆಯಿತು.

-ಅಡಿವಪ್ಪ ಎಲ್.ಕವಿತಾಳ
ತಾವರಗೇರಾ

7

ಬಿದ್ದ ನಂತರ ಕಾಪಾಡಿ ಕಾಪಾಡಿ ಎಂದು ಕಿರುಚಿ ಕೊಂಡನು. ಆ ಧ್ವನಿಯನ್ನು ಕೇಳಿದ ಪುಟ್ಟು ಏನಿದು ನನ್ನ ಸ್ನೇಹಿತನಾದ ಕಿಟ್ಟುವಿನ ಧ್ವನಿಯಾಗಿದೆಯಲ್ಲ ಎಂದು ಧಾವಿಸುತ್ತ ಬಂದು ನೋಡಿದರೆ ಕಿಟ್ಟು ಪ್ರಾಣಕ್ಕೆ ಅಪಾಯ ಎದುರಾಗಿತ್ತು. ಸಹಪಾಠಿಯಾದವನಿಗೆ ಈಜು ಬರುತ್ತಿತ್ತು. ಅವನು ಬಾವಿಗೆ ಜಿದ್ದು ಕಿಟ್ಟುನನ್ನು ಮೇಲಕ್ಕೆ ತಂದನು. ಇಬ್ಬರು ಪ್ರಾಣಕ್ಕೆ ಪ್ರಾಣ ಸ್ನೇಹಿತರಾಗಿದ್ದರು. ಅವರು ದೊಡ್ಡವರಾದ ಮೇಲೆ ವಿವೇಕಾನಂದ ಪರಮಹಂಸರಂತೆ ಸಮಾಜ ಸುಧಾರಣೆಯನ್ನು ಮಾಡಿದರು.

- ಎ. ಗಿರೀಶ್, ಬೆಂಗಳೂರು

8

ಸ್ವಲ್ಪ ಹೊತ್ತು ನೋಡಿ, ನೀರು ತರಲು ಹೋದ ಕಿಟ್ಟು ಮರಳಿ ಬಾರದಿದ್ದಾಗ ಗಾಬರಿಗೊಂಡ ವಿದ್ಯಾರ್ಥಿಗಳು ಬಾವಿಯ ಹತ್ತಿರ ಬಂದು ನೋಡಿದರು. ಕಿಟ್ಟು ಶವವಾಗಿ ನೀರಲ್ಲಿ ತೇಲಾಡುತ್ತಿದ್ದ. ಎಲ್ಲರ ಬಾಯಾರಿತು. ಈ ಅನಿರೀಕ್ಷಿತ ಘಟನೆಯಿಂದ ಪುಟ್ಟು ಮತ್ತು ಗೆಳೆಯರು ಬಹಳ ದುಃಖಿತರಾದರು. ಸಹಪಾಠಿಗಳ ಸಾಂತ್ವನದಿಂದ ಪುಟ್ಟು ಮತ್ತೆ ಚೇತರಿಸಿಕೊಂಡು ಮುಂದಿನ ಕಾರ್ಯಕ್ಕೆ ಸಿದ್ಧನಾದನು.

ಕಿಟ್ಟು ಪುಟ್ಟು ಒಂದೇ ನಾಣ್ಯದ ಎರಡು ಮುಖಗಳಂತಿದ್ದರು. ವಿವೇಕಾನಂದರು ಗುರುವಿನ ವಿಯೋಗದಿಂದ ದುಃಖಿತರಾದಂತೆ ಗೆಳೆಯನನ್ನು ಕಳೆದುಕೊಂಡ ಪುಟ್ಟು ದುಃಖಿಸಿದ. ಜೀವದ ಗೆಳೆಯನ ಕನಸಾದ ಬಡವರಿಗೆ ಸೇವಾ ಸಂಸ್ಥೆ ಸ್ಥಾಪಿಸುವ ಒಂದು ಮಹತ್ಕಾರ್ಯ ಈಡೇರಿಸುವ ಭಾರ ಪುಟ್ಟುವಿನ ಮೇಲಿತ್ತು. ಆ ದಿಸೆಯಲ್ಲಿ ಕಿಟ್ಟುವಿನ ಆಸೆ ಈಡೇರಿಸಲು ಪುಟ್ಟು ಪಣತೊಟ್ಟು ಕಾರ್ಯ ಪ್ರವೃತ್ತನಾದನು.

-ಪ್ರಭು ಶಂ. ಕಮತಗಿ, ಬಾಗಲಕೋಟೆ

9

ಕಿಟ್ಟು ಬಾವಿಯಲ್ಲಿ ಬಿದ್ದುದ್ದನ್ನು ತಿಳಿದ ಕೂಡಲೇ ಪುಟ್ಟು ಓಡಿ ಬಂದನು. ಬಾವಿಯಲ್ಲಿ ಈಜಿ ಕಿಟ್ಟು ಮೇಲೆ ಬರಲು ಆಸರೆಯಾದನು. ಕಿಟ್ಟು ಬಾವಿಯಿಂದ ಮೇಲೆ ಬಂದ ಬಳಿಕ ಗುರುಗಳು ಅವನಿಗೆ ಶಹಭಾಷ್ ಎಂದರು. ಗುರುಗಳು ಗೆಳೆಯರೆಂದರೆ ಹೀಗಿರಬೇಕು ಎಂದರು. ಅವರು ಪ್ರವಾಸ ಮುಗಿಸಿ ಊರಿಗೆ ಬಂದರು. ಅವರಿಬ್ಬರೂ ಓದಿ ಜಾಣರಾದರು. ಮುಂದೆ ಕಿಟ್ಟು ಪುಟ್ಟು ಸಮಾಜ ಸೇವೆಯಲ್ಲಿ ತೊಡಗಿದರು. ಬಡವರಿಗೆ ಸಹಾಯ ಮಾಡಲು ಯೋಜನೆಯನ್ನು ಪ್ರಾರಂಭಿಸಿದರು. ಬಡವ ಬಲ್ಲಿದ ಎಂಬ ಭಾವನೆಯನ್ನು ಹೋಗಲಾಡಿಸಿ ಎಲ್ಲರೂ ಒಂದೇ ಎಂಬ ಮನೋಭಾವವನ್ನು ಜನರಲ್ಲಿ ಮೂಡಿಸಿದರು.

- ಪ್ರವೀಣ ರಾ. ಅಳಲಗೇರಿ, ಹಾವೇರಿ

ತಾರಾ ಬದುಕು




ಭಾರಿ ಭರವಸೆ

ರೆಬೆಲ್‌ಸ್ಟಾರ್ ಅಂಬರೀಶ್ ಕಲಾವಿದರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಅವರ ನೇತೃತ್ವದಲ್ಲಿ ಅನೇಕ ಕನ್ನಡ ಕಲಾವಿದರು ಭಾರಿ ಭರವಸೆಯನ್ನು ಇಟ್ಟಿದ್ದರು. ಅಂಬರೀಶ್ ಸ್ವಂತ ವ್ಯಕ್ತಿತ್ವ ಉಳ್ಳವರು. ಪ್ರಸ್ತುತ ರಾಜಕೀಯ ಬೆಂಬಲವಿರುವವರು. ಮುಖ್ಯವಾಗಿ ಬೇರೆಯವರ ಕಷ್ಟ ಸುಖ ಅರ್ಥಮಾಡಿಕೊಳ್ಳುವ ಮನೋಭಾವ ದವರು ಎಂದೆಲ್ಲಾ ಅನೇಕ ಕಲಾವಿದರು ಅವರ ಬಗ್ಗೆ ತಿಳಿದುಕೊಂಡಿದ್ದೆ ಈ ಭರವಸೆಗೆ ಬಲವಾದ ಕಾರಣ. ಆದರೆ ಕಲಾವಿದರ ಸ್ಥಿತಿ ಬಗ್ಗೆ ಅಂಬರೀಶ್ ಎಷ್ಟು ಸ್ಪಂದಿಸಿದ್ದಾರೆ? ಒಂದೆರಡು ನಿರ್ಮಾಪಕರು ಪರಭಾಷ ಕಲಾವಿದರನ್ನು ಬಳಸಿ ಚಿತ್ರ ನಿರ್ಮಿಸಲು ಹೊರಟಾಗ, ಆ ನಿರ್ಮಾಪಕರಿಗೆ ಅಂಬರೀಶ್ ಛೀಮಾರಿ ಹಾಕಿದ್ದು ಸ್ವಾಗತಾರ್ಹ. ಆದರೆ ಅದು ಫಲ ನೀಡಿದೆಯೆ? ಅಂಬರೀಶ್‌ರಂತಹ ವ್ಯಕ್ತಿತ್ವವುಳ್ಳವರು ಮತ್ತಷ್ಟು ಆಳವಾಗಿ ಕೆಲಸ ಮಾಡಿದರೆ ನಮ್ಮ ಕಲಾವಿದರ ಸ್ಥಿತಿ ಸ್ವಲ್ಪವಾದರೂ ಉತ್ತಮ ಗೊಳ್ಳಬಹುದೇನೊ.

ಪುನೀತ್ ಪುನರಾಗಮನ

ಸರಿಸಾಟಿಯಿಲ್ಲದ, ಈಗ ಅಭಿನಯ ಕಡಿಮೆ ಮಾಡಿದರೂ ಅದೇ ಜನಪ್ರಿಯತೆಯಲ್ಲಿರುವ ಡಾ.ರಾಜ್‌ಕುಮಾರ್ ಅವರ ತೃತೀಯ ಪುತ್ರ ಪುನೀತ್ ರಾಜ್‌ಕುಮಾರ್ ಈ ವರುಷ ಕನ್ನಡ ಬೆಳ್ಳಿತೆರೆಗೆ ಎರಡನೇ ಬಾರಿ ಪ್ರವೇಶಿಸಲಿದ್ದಾರೆ. ಮೊದಲ ಬಾರಿಗೆ ಬಾಲನಟನಾಗಿ ಭಾಗ್ಯವಂತ, ಚಲಿಸುವ ಮೋಡಗಳು, ವಸಂತ ಗೀತಾ, ಎರಡು ನಕ್ಷತ್ರಗಳು, ಹೊಸಬೆಳಕು, ಪರಶುರಾಮ್ ಹಾಗೂ ಬೆಟ್ಟದ ಹೂವು ಚಿತ್ರಗಳಲ್ಲಿ ಅಭಿನಯಿಸಿ ಕನ್ನಡ ಬೆಳ್ಳಿತೆರೆಗೆ ಪ್ರವೇಶಿಸಿದ್ದರು. ಈ ಬಾರಿ ಪೂರ್ಣ ಪ್ರಮಾಣದ ನಾಯಕನಾಗಿ ಅವರು ಪ್ರವೇಶಿಸು ತ್ತಿದ್ದಾರೆ. ಈಗಾಗಲೇ ಚಿತ್ರ ಆರಂಭಿಸಲು ಅವರ ಸ್ವಂತ ನಿರ್ಮಾಣ ಸಂಸ್ಥೆ ಚಟುವಟಿಕೆ ನಡೆಸುತ್ತಿದೆ. ಮಾಮೂಲಿತನದಿಂದ ಜಿಡ್ಡುಗಟ್ಟಿದ ಕನ್ನಡ ಚಿತ್ರರಂಗಕ್ಕೆ ಹೊಸತನ ನೀಡುವುದು ಈ ಪ್ರಯತ್ನದ ಮತ್ತೊಂದು ಅಂಶವೂ ಹೌದು. ಪೂರ್ಣ ಪ್ರಮಾಣದ ನಾಯಕನಾಗಿ ನಟಸಲಿರುವ ಪುನೀತ್ ರಾಜ್‌ಕುಮಾರ್ ಚಿತ್ರಕ್ಕೆ 'ಹೂವು' ಎಂಬ ಎರಡಕ್ಷರದ ಹೆಸರು ನಾಮಕರಣಗೊಳ್ಳುವ ನಿರೀಕ್ಷೆಯಿದೆ. ಈ ಹೂವು ಅರಳಿಸುವ ಆತುರ ಕನ್ನಡದ ಹಲವು ನಿರ್ದೇಶಕರ ಅಂತರಂಗದಲ್ಲಿದೆ. ಯಾರ ಪಾಲಿಗೆ ಈ ಹೊಣೆ ಬರುವುದೊ



ರವಿಚಂದ್ರನ್ ಹ್ಯಾಟ್ರಿಕ್

1998ರ ಮೊದಲ ಚಿತ್ರ ಯಾರೇ ನೀನು ಚೆಲುವೆ, ಮಾಂಗಲ್ಯ ತಂತುನಾನೇನ ನಂತರ ಈಗ ಯಶಸ್ವಿ ಹೆಜ್ಜೆ ಇಡುತ್ತಿರುವ ಪ್ರೀತ್ಸೋದ್ ತಪ್ಪಾ? ಈ ಮೂರು ಭಾರಿ ಯಶಸ್ವಿ ಚಿತ್ರಗಳ ಮೂಲಕ ಹ್ಯಾಟ್ರಿಕ್ ಹೀರೋ ಬಿರುದು ಈಗ ರವಿಚಂದ್ರನ್ ಹೆಸರಿಗೂ ಸೇರಲಿದೆ. ಕನ್ನಡ ಚಲನಚಿತ್ರರಂಗದಲ್ಲಿ ಆರಂಭದ ಮೂರು ಹಿಟ್ ಚಿತ್ರಗಳ ನಾಯಕನಾಗಿದ್ದ ಶಿವರಾಜ್‌ಕುಮಾರ್ ಬಹಳ ವರುಷಗಳ ಹಿಂದೆ ಈ ಹ್ಯಾಟ್ರೀಕ್ ಹೀರೊ ಬಿರುದು ಪಡೆದಿದ್ದರು. ಅನಂತರ ಯಾವುದೇ ಕನ್ನಡ ತಾರೆಯೂ ಈ ಗೆಲುವಿನ ಹ್ಯಾಟ್ರಿಕ್ ಬಿರುದು ಪಡೆಯಲು ಸಾಧ್ಯವಾಗಲಿಲ್ಲ. ರವಿಚಂದ್ರನ್ ಬಗ್ಗೆ ಹೇಳುವುದಾದರೆ ಸಾಲಾಗಿ ಅವರ ಎರಡು ಚಿತ್ರಗಳು ಯಶಸ್ವಿಯಾದರೂ ಮೂರನೇ ಚಿತ್ರ ಸೋಲುವುದು ಖಾಯಂ ಆಗಿತ್ತು. ಚಿತ್ರ ಸಾಲಾಗಿ ಯಶಸ್ವಿಯಾದರೆ ತಾನೆ ಹ್ಯಾಟ್ರಿಕ್ ಪಡೆಯಲು ಸಾಧ್ಯ? ಈಗ ರವಿಚಂದ್ರನ್‌ರಿಂದ ಇದು ಸಾಧ್ಯವಾಗಿದೆ. ಈ ಹ್ಯಾಟ್ರಿಕ್ ನಿಂತ ನೀರಾಗದೆ 99ರಲ್ಲಿಯೂ ಮುಂದುವರಿದೀತೆ?

ಎಂಬುದು ಸದ್ಯದಲ್ಲೆ ತಿಳಿಯಲಿದೆ.

ಶ್ರೀನಿವಾಸ್‌ಮೂರ್ತಿ ಆಸಕ್ತಿ

ಶ್ರೀನಿವಾಸ್‌ಮೂರ್ತಿಯವರು ಬನಶಂಕರಿಯ ಮೂರನೆಯ ಹಂತದಲ್ಲಿರುವ ತಮ್ಮ ಹೊಸ ಮನೆಯ ಕೆಲಸವನ್ನು ಯಶಸ್ವಿಯಾಗಿ ಮುಗಿಸಿರುವ ಗುಂಗಿನಲ್ಲಿದ್ದಾರೆ. ಅಚ್ಚ ಕನ್ನಡ ಚಿತ್ರಗಳಲ್ಲಿ ಮಾತ್ರ ಅಭಿನಯಿಸಿದ ಅವರ ಸಾಧನೆಗೆ ಅಷ್ಟಾಗಿ ಬೆಳಕು ಬೀಳಲಿಲ್ಲವಾದರೂ ಕತ್ತಲಲ್ಲಿ ಆ ಸಾಧನೆ ಗುರುತಿಸಬಹುದು. ಆಗಿನ ಚಿಕ್ಕಮಗಳೂರು ಸಿನಿ ಸಂಸ್ಥೆ ಬಳಗದ 'ಪರಾಜಿತ' ಬಿಟ್ಟರೆ 'ಜೋಡಿ ಜೀವ' ಎಂಬ ಬೇರೊಂದು ಚಿತ್ರದಲ್ಲೂ ಅವರು ಮಾಡಿರುವ ಪಾತ್ರ ಸ್ವಲ್ಪ ಕೇಂದ್ರ ಬಿಂದುವಿಗೆ ಹತ್ತಿರವಾಗಿದೆ. ಇವೆರಡು ಬಿಟ್ಟರೆ ಉಳಿದಂತೆ ಅವರು ಪೋಷಕ ಕಲಾವಿದ ಎಂಬ ಸ್ಥಾನದಲ್ಲೇ ಉಳಿದವರು. ಜೈ ಜಗದೀಶ್ ಜತೆ ಸೇರಿ ಒಂದೆರಡು ಚಿತ್ರ ನಿರ್ಮಿಸಿ ಅನಿವಾರ್ಯ ಕಾರಣಗಳಿಂದ ಅವರಿಂದ ದೂರವಾಗಿ ಉಳಿದ ಶ್ರೀನಿವಾಸಮೂರ್ತಿ ಇಷ್ಟರಲ್ಲೆ ಕನ್ನಡ ಚಿತ್ರ–ವೊಂದನ್ನು ನಿರ್ಮಿಸುವ ಬಗ್ಗೆ ಆಸಕ್ತಿ ತೋರಿಸುತ್ತಿದ್ದಾರೆ.

■ ಕೆ. ದೇವರಾಯ್‌ಪ್ರಭು

ಉಪೇಂದ್ರ ಪ್ರೇಕ್ಷಕ ಪ್ರಶ್ನಿಸದ ಹೆಸರು



• ಶ್ ಎಂಬ ಚಿತ್ರದಿಂದ ಒಂದಕ್ಷರದ ಯುಗ ಆರಂಭಕ್ಕೆ ಕಾರಣರಾದ ನಿರ್ದೇಶಕ ಉಪೇಂದ್ರ, ಓಂ ಚಿತ್ರದ ಮೂಲಕ ಭೂಗತ ಜಗತ್ತಿಗೆ ವ್ಯಕ್ತಿ ಹೇಗೆ ಬಲಿಪಶುವಾಗುತ್ತಾನೆಂದು ಸಾದರಪಡಿಸಿದ ಉಪೇಂದ್ರ, ಇತ್ತೀಚಿನ ಸುಪರ್ ಬಂಪರ್ ಹಿಟ್ 'ಎ' ಚಿತ್ರದ ನಾಯಕ ನಿರ್ದೇಶಕ ಉಪೇಂದ್ರ. ಇವುಗಳಿಂದ ಉಪೇಂದ್ರ ಎಂಬ ಹೆಸರು ಕನ್ನಡ ಚಲನಚಿತ್ರ ಪ್ರೇಕ್ಷಕನಿಗೆ ಬಹಳ ಹತ್ತಿರವಾಗಿದೆ. ಕೇವಲ ಚಿತ್ರ ನಿರ್ದೇಶಿಸಿದಾಗಲೂ ಪ್ರೇಕ್ಷಕ ಇವರ ಚಿತ್ರಗಳಿಗೆ ಸೈ ಎಂದಿದ್ದಾನೆ. ಮೊದಲ ಬಾರಿಗೆ ಪೂರ್ಣ ಪ್ರಮಾಣದ ನಾಯಕನಾಗಿ ಅಭಿನಯಿಸಿದ 'ಎ' ಚಿತ್ರದ ಅಭೂತಪೂರ್ವ ಯಶಸ್ವಿನಿಂದ ಅವರು ನಾಯಕ ನಟನಾಗಿಯೂ ವಿಜಯಿಯಾಗಿದ್ದಾರೆ. ಅಂದರೆ ಉಪೇಂದ್ರ ಅಲ್ಲಿಯೂ ಸಲ್ಲಿದ್ದಾರೆ. ಆರಂಭದ ಚಿತ್ರ ತರ್ಲೆ ನನ್ಮಗ, ಅಂತ ಚಿತ್ರದ ಎರಡನೇ ಭಾಗ ಆಪರೇಷನ್ ಅಂತ. ರಾಘವೇಂದ್ರ ರಾಜ್‌ಕುಮಾರ್ ಅಭಿನಯದ ಸ್ವಸ್ತಿಕ್, ಈ ಮೂರು ಚಿತ್ರಗಳನ್ನೂ ಉಪೇಂದ್ರ ನಿರ್ದೇಶಿಸಿದರೂ ಅವು ಗುರುತಿಸುವಂತಹ ಸಾಧನೆ ಮಾಡಲಿಲ್ಲ ನಿಜ. ಅಂಗೈಯಲ್ಲಿರುವ ಐದು ಬೆರಳುಗಳು ಒಂದೇ ರೀತಿ ಇರುವುದಿಲ್ಲವಲ್ಲ? ಒಂದುಮಾತು ಹೇಳಬೇಕೆಂದರೆ ಉಪೇಂದ್ರ ಈಗ ಕನ್ನಡ ಪ್ರೇಕ್ಷಕ ಪ್ರಶ್ನಿಸದ ಹೆಸರು. ಕಾರಣ ಅವನ ಚಿತ್ರದಲ್ಲಿರುವ ಹೊಸತನ ಲವಲವಿಕೆ ಇತ್ಯಾದಿ.


ಅರೆ, ಇವರನ್ನ ಕೆಲವು ಘಂಟೆಗಳ
ಹಿಂದೆ ಭಿನ್ನಮತೀಯರ ಸಭೆಯಲ್ಲಿ
ಸಕ್ರಿಯವಾಗಿ ಭಾಗವಹಿಸಿದ್ದನ್ನ ನೋಡಿದ್ದೇನೆ!!.....
ನಿಷ್ಠಾವಂತರ ಸಭೆ
[ವಿ]ಭಿನ್ನಮತ..
ಇಷ್ಟಕ್ಕೆ ಸಾಕು ಮಾಡಿ
ಸಾರ್. ಇವ್ರು ಭಿನ್ನಮ
-ತೀಯರ ಭೋಜನ
-ಕೂಟದಲ್ಲಿ ಭಾಗವಹಿ
-ಸಬೇಕಲ್ಲ.....
ಇಂದು ದಳ ಶಾಸಕರಿಗೆ
ಪಟೇಲ್ ಭೋಜನಕೂಟ
ಬೆಂಗಳೂರು, ನಂ. 9- ಮಂಗಳವಾರ
ವಿಧಾನಸಭೆಯಲ್ಲಿ ಅವಿಶ್ವಾಸ ನಿರ್ಣಯದ
ಮೇಲೆ ಮತದಾನ ನಡೆದ ನಂತರ ಜನತಾದ
ಆದ ಆಂತರಿಕ ಕಲಹ ಸ್ಪಷ್ಟ.
ಕೊಳ್ಳಲಿದೆ.
ಮು
ಇವರು ತಮ್ಮ ರಾಜಕೀಯ
ಜೀವಮಾನವೆಲ್ಲ ಭಿನ್ನಮತದಲ್ಲೇ
ಕಳೆದರಂತೆ...
ಗೋವರ ಯಲ್ಲಪ್ಪ


BISILA BADUKU Kannada Monthly JANUARY 1999 RNI No. 67406 / 97 Regd. BGW / 394

You Are the Centre of Our Universe



Since inception, we have had only one aim-to make cardiac care accessible and affordable. Everything we do, be it our Free Out-Patient Consultations or Free Heart Camps, we make sure it benefits the man on the street.

With 450 beds, we are the only hospital in the State offering electrophysiology service. The only hospital with the planned capacity to perform 25 cardiac operations and 60 cardiac cath. procedures everyday, besides the largest number of coronary bypass operations. In the first fifteen months of inception, we had carried out over 3000 cardiac catheterisation and 2000 cardiac surgical procedures. Ever since, setting new records has become a matter of course.



But to us, what matters more is that we have been able to help someone in need. Ease some of the pain. Wipe away a tear.

May be even return to a little girl, her father.

MANIPAL HEART FOUNDATION, BANGALORE

The Hospital With A Heart.

98, Rustum Bagh, Airport Road, Bangalore - 560 017 Ph: 5287749/50/51

ADSYNDICATE - MANIPAL